ಶನಿವಾರ, ಅಕ್ಟೋಬರ್ 16, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹನುಮಂತನ ವೇಷ

ದಸರಾ ಅಂಗವಾಗಿ ಅಮೃತಸರದಲ್ಲಿ ಶುಕ್ರವಾರ ನಡೆದ ಮೆರವಣಿಗೆಯಲ್ಲಿ ಕಲಾವಿದರೊಬ್ಬರು ಹನುಮಂತನ ವೇಷ ಧರಿಸಿ ಗಮನ ಸೆಳೆದರು



ಶನಿವಾರ, ಅಕ್ಟೋಬರ್ 16, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪೂಜೆ
ವಿಜಯದಶಮಿ ಅಂಗವಾಗಿ ಹೈದರಾಬಾದ್‌ನಲ್ಲಿ ಶುಕ್ರವಾರ ಭಕ್ತರು ದುರ್ಗಾದೇವಿಯ ವಿಗ್ರಹ ವಿಸರ್ಜನೆಗೂ ಮುನ್ನ ಪೂಜೆ ಸಲ್ಲಿಸಿದರು

ಶನಿವಾರ ● ಅಕ್ಟೋಬರ್ 16, 2021 ಪ್ರಜಾವಾಣಿ

ರಾಜಧಾನಿಯಲ್ಲಿ ಮಳೆ ಅಬ್ಬರ ● ಕೆಲವೆಡೆ ಮನೆಗಳಿಗೆ ನುಗ್ಗಿದ ನೀರು ● ಹೊಳೆಯಂತಾದ ರಸ್ತೆ, ಮೈದಾನಗಳು

ಮೂರೇ ಗಂಟೆಯಲ್ಲಿ 9 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಗುರುವಾರ ತಡರಾತ್ರಿ ಮೂರೇ ಗಂಟೆಯಲ್ಲಿ ಗರಿಷ್ಠ 9.10 ಸೆಂ.ಮೀ ಮಳೆ ದಾಖಲಾಗಿದೆ.

ತಡರಾತ್ರಿ ಸುರಿದ ಮಳೆಯಿಂದಾಗಿ ನಗರದ ಕಾಲುವೆಗಳು, ಪ್ರಮುಖ ರಸ್ತೆಗಳು ಹಾಗೂ ಕೆಲ ಮೈದಾನಗಳು ಹೊಳೆಯಂತಾಗಿದ್ದವು. ಕೆಲವೆಡೆ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳು ತೊಂದರೆ ಅನುಭವಿಸುವಂತಾಯಿತು.

ದಸರಾ ಹಬ್ಬದ ಸಂಭ್ರಮ ಆಚರಿಸಿದ್ದ ಜನ, ರಾತ್ರಿ ನಿದ್ದೆಗೆ ಜಾರಿದ್ದರು. ತಡರಾತ್ರಿ 2 ಗಂಟೆ ಸುಮಾರಿಗೆ ಧಾರಾಕಾರವಾಗಿ ಸುರಿಯಲಾರಂಭಿಸಿದ್ದ ಮಳೆಯ ಸದ್ದು, ನಿದ್ದೆಯಲ್ಲಿದ್ದವರನ್ನು ಬಡಿದೆಬ್ಬಿಸಿತು. ನಂತರ, ಮೂರು ಗಂಟೆ ನಿರಂತರವಾಗಿ ಮಳೆ ಸುರಿಯಿತು.

ದಾಸರಹಳ್ಳಿ ಕ್ಷೇತ್ರದ ಚೊಕ್ಕಸಂದ್ರ, ಬಿಟಿಎಸ್ ಬಡಾವಣೆ, ರಾಯಲ್ ಬಡಾವಣೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮೇಲೆಯೇ ನೀರು ಧಾರಾಕಾರವಾಗಿ ಹರಿಯಿತು. ಅಲ್ಲಲ್ಲ ಮನೆಗಳಿಗೆ ನೀರು ನುಗ್ಗಿತ್ತು. ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲೇ ಮುಳುಗಿದ್ದವು. ಪೀಠೋಪಕರಣಗಳು ನೀರಿನಲ್ಲಿ ತೇಲುತ್ತಿದ್ದವು. ಕೆಲ ಪೀಠೋಪಕರಣಗಳು, ನೀರಿನೊಂದಿಗೆ ತೇಲಿಕೊಂಡು ಹೋದವು.

ಕಾಲುವೆ ತ್ಯಾಜ್ಯವೆಲ್ಲ ನೀರಿನ ಜೊತೆಯಲ್ಲಿ ಹರಿದು ಮನೆಯೊಳಗೆ ಸೇರಿತ್ತು. ಇದರಿಂದಾಗಿ ಮನೆಯಲ್ಲಿ ದುರ್ವಾಸನೆ ಬರುತ್ತಿತ್ತು. ಮೂಗು ಮುಚ್ಚಿಕೊಂಡೇ ನಿವಾಸಿಗಳು, ಶುಕ್ರವಾರ ಇಡೀ ದಿನ ಮನೆಯೊಳಗಿನ ನೀರು ತೆರವು ಮಾಡಿದರು.

‘ರಾಜಕಾಲುವೆ ಕಾಮಗಾರಿ ನಡೆಯುತ್ತಿತ್ತು, ಅಲ್ಲಲ್ಲ ನೀರು ಹರಿಯುವಿಕೆಗೆ ತಡೆಯೊಡ್ಡಲಾಗಿದೆ. ಇದೇ ಕಾರಣಕ್ಕೆ ನೀರು ವಸತಿ ಪ್ರದೇಶದತ್ತ ಹರಿದು ಮನೆಗಳಿಗೆ ನುಗ್ಗುತ್ತಿದೆ. ಜೋರು ಮಳೆ ಬಂದರೆ, ಮನೆಯೊಳಗೆ ನೀರು ನುಗ್ಗುವ ಭಯ ಕಾಡುತ್ತಿದೆ. ನೆಮ್ಮದಿಯಿಂದ ನಿದ್ದೆ ಮಾಡಲು ಆಗುತ್ತಿಲ್ಲ. ಹಬ್ಬದ ದಿನವೇ ಮನೆಯಲ್ಲೆಲ್ಲ ನೀರು ನಿಂತಿದ್ದು ನೋಡಿ ಕಣ್ಣೀರಿಟ್ಟೆವು’ ಎಂದು ಬಿಟಿಎಸ್ ಬಡಾವಣೆ ನಿವಾಸಿಗಳು ಹೇಳಿದರು.

ದೊಮ್ಮಲೂರು ವಾರ್ಡ್‌ನ ಅಮರ್ ಜ್ಯೋತಿ ಬಡಾವಣೆಯ 4ನೇ ಮುಖ್ಯರಸ್ತೆಯಲ್ಲೂ ನಾಲ್ಕು ಅಡಿಯಷ್ಟು ನೀರು ಹರಿಯಿತು. ಅಕ್ಕ-ಪಕ್ಕದ ಮನೆಗಳ ಅಂಗಳಕ್ಕೂ ನೀರು ನುಗ್ಗಿತ್ತು. ಅಗತ್ಯ ವಸ್ತುಗಳ ಖರೀದಿ ಹಾಗೂ ಇತರೆ ಕೆಲಸಕ್ಕಾಗಿ ಮನೆಯಿಂದ ಹೊರಗೆ ಹೋಗುವವರು, ಹರಿಯುವ ನೀರಿನಲ್ಲೇ ಸಂಚರಿಸಬೇಕಾಯಿತು.

ಮಹದೇವಪುರ ವಾರ್ಡ್‌ನ ಬೆನ್ನಿಗಾನಹಳ್ಳಿ ಪೈ ಬಡಾವಣೆಯಲ್ಲಿ ರೈಲ್ವೆ ಕಾಮಗಾರಿ ನಡೆಯುತ್ತಿದೆ. ಇದರಿಂದ ರಾಜಕಾಲುವೆ ಮುಚ್ಚಿ ಹೋಗಿದ್ದು, ಕಾಲುವೆಯಲ್ಲಿ ಹರಿದು ಹೋಗಬೇಕಿದ್ದ ನೀರು ರಸ್ತೆಯಲ್ಲಿ ಹರಿದು ಮನೆಗಳಿಗೆ ನುಗ್ಗಿತ್ತು. ಸ್ಥಳೀಯರು ತೊಂದರೆ ಅನುಭವಿಸಿದರು.

ಜಕ್ಕೂರು, ರಾಜಾಜಿನಗರ ಸುತ್ತಮುತ್ತ ಭಾರಿ ಮಳೆ: ನಗರದ ಜಕ್ಕೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ 9.10 ಸೆಂ. ಮೀ ಮಳೆಯಾಗಿದೆ. ಇದು, ನಗರದ ಗರಿಷ್ಠ ಮಳೆ ಪ್ರಮಾಣವಾಗಿದೆ.

ರಾಜಾಜಿನಗರ, ಬಸವೇಶ್ವರನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಗುರುವಾರ ತಡರಾತ್ರಿ 8.55 ಸೆಂ.ಮೀ ಮಳೆ ಆಗಿದೆ. ಈ ಪ್ರದೇಶಗಳಲ್ಲಿ ಕೆಲ ರಸ್ತೆಗಳು ಹಾಗೂ ಮೈದಾನಗಳಲ್ಲಿ ನೀರು ನಿಂತಿದ್ದು ಶುಕ್ರವಾರ ಬೆಳಿಗ್ಗೆ ಕಂಡುಬಂತು.

ಬೆಳಿಗ್ಗೆ ಎದ್ದು ನಿತ್ಯದ ಕೆಲಸಕ್ಕಾಗಿ ಮನೆಯಿಂದ ವಾಹನ ಸಮೇತ ಹೊರಗೆ ಬಂದಿದ್ದ ಜನ, ರಸ್ತೆಯಲ್ಲಿ ಹರಿಯುವ ನೀರಿನಲ್ಲೇ ಸಂಚರಿಸಿದರು. ಹಲವೆಡೆ, ಮರದ ಕೊಂಬೆಗಳು ಬಿದ್ದಿದ್ದವು. ಸ್ಥಳೀಯರೇ ಅವುಗಳನ್ನು ತೆರವು ಮಾಡಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಮೆಜೆಸ್ಟಿಕ್, ಗಾಂಧಿನಗರ, ಕಾಟನ್‌ಪೇಟೆ, ಚಿಕ್ಕಪೇಟೆ, ಚಾಮರಾಜಪೇಟೆ, ಬಸವನಗುಡಿ, ಹನುಮಂತನಗರ, ಗಿರಿನಗರ, ಹೊಸಕೆರೆಹಳ್ಳಿ, ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ, ದೀಪಾಂಜಲಿನಗರ, ವಿಜಯನಗರ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ಹೆಬ್ಬಾಳ, ವಸಂತನಗರ, ಶಿವಾಜಿನಗರ, ಆರ್‌.ಟಿ.ನಗರ, ಸಂಜಯನಗರ, ಜೆ.ಸಿ.ನಗರ, ಶೇಷಾದ್ರಿಪುರ, ವಿಲ್ಸನ್ ಗಾರ್ಡನ್, ಶಾಂತಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ, ವೈಟ್‌ಫೀಲ್ಡ್, ಬೆಳ್ಳಂದೂರು, ವಿದ್ಯಾರಣ್ಯಪುರ, ಯಲಹಂಕ, ಮಹದೇವಪುರ, ಕೆ.ಆರ್. ಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಸಾಧಾರಣ ಮಳೆ ಆಯಿತು.



ನಾಗರಬಾವಿ ಬಳಿಯ ಹೊರವರ್ತುಲ ರಸ್ತೆಯಲ್ಲಿ ನೀರು ಹರಿದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಬ್ಯಾಟರಾಯನಪುರ ಸಂಚಾರ ಠಾಣೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಾಗಯ್ಯ ಮತ್ತು ಹೆಡ್ ಕಾನ್‌ಸ್ಟೆಬಲ್ ಮಹೇಶ್ ಅವರು ನೀರು ತೆರವುಗೊಳಿಸಿ, ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು – ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್



ಮಹದೇವಪುರ ವಾರ್ಡ್‌ನ ಬೆನ್ನಿಗಾನಹಳ್ಳಿ ಪೈ ಬಡಾವಣೆಯಲ್ಲಿ ಕಾಮಗಾರಿಯಿಂದ ರಾಜಕಾಲುವೆ ಮುಚ್ಚಿ ಹೋಗಿದ್ದು, ಮಳೆ ನೀರು ರಸ್ತೆಯಲ್ಲೇ ಹರಿದು ಮನೆಗಳಿಗೆ ನುಗ್ಗಿತ್ತು – ಪ್ರಜಾವಾಣಿ ಚಿತ್ರ

ಶುಕ್ರವಾರವೂ ಮಳೆ ಅಬ್ಬರ

ನಗರದಲ್ಲಿ ಶುಕ್ರವಾರ ಬೆಳಿಗ್ಗೆ ಮಳೆ ಬಿಡುವು ನೀಡಿತ್ತು. ಸ್ವಲ್ಪ ಬಿಸಿಲು ಕಾಣಿಸಿಕೊಂಡರೂ ಮೋಡ ಕವಿದ ವಾತಾವರಣವೇ ಹೆಚ್ಚಿತ್ತು. ರಾತ್ರಿಯಾಗುತ್ತಿದ್ದಂತೆ ಶುರುವಾರ ಮಳೆ, ಧಾರಾಕಾರವಾಗಿ ಸುರಿಯಿತು.

ನಗರದ ಬಹುತೇಕ ಕಡೆ ಶುಕ್ರವಾರ ರಾತ್ರಿ ಮಳೆ ಆಯಿತು. ಹಬ್ಬದ ಸಂಭ್ರಮದಲ್ಲಿದ್ದವರು, ಮಾರುಕಟ್ಟೆ ಹಾಗೂ ದೇವಸ್ಥಾನಗಳಿಗೆ ಬಂದಿದ್ದರು. ಅವರೆಲ್ಲ ಮಳೆಯಲ್ಲಿ ಸಿಲುಕಿದ್ದರು. ಮಳೆ ಸುರಿವ ವೇಳೆಯಲ್ಲಿ ಬಹುತೇಕರು, ರಸ್ತೆ ಅಕ್ಕ-ಪಕ್ಕದ ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು. ಸುರಿದ ಮಳೆಯಲ್ಲೇ ಕೆಲವರು ಕೊಡೆ ಸಹಾಯದಿಂದ ಸಂಚರಿಸಿದರು.



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕರ ಸಮಸ್ಯೆಯನ್ನು ಮುಖ್ಯ ಆಯುಕ್ತ ಗೌರವ್ ಗುಪ್ತ ಆಲಿಸಿದರು. ಶಾಸಕ ಆರ್‌.ಮಂಜುನಾಥ್ ಇದ್ದರು

ದಾಸರಹಳ್ಳಿ ಸಮಸ್ಯೆ ಪರಿಶೀಲಿಸಿದ ಮುಖ್ಯ ಆಯುಕ್ತ

ಬೆಂಗಳೂರು: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದ ಆಗಿರುವ ಅನಾಹುತಗಳ ಬಗ್ಗೆ ಶಾಸಕ ಆರ್. ಮಂಜುನಾಥ್ ಅವರ ಜೊತೆಗೂಡಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶುಕ್ರವಾರ ಪರಿಶೀಲನೆ ನಡೆಸಿದರು.

ಚೊಕ್ಕಸಂದ್ರ ಕೆರೆ ಸುತ್ತಮುತ್ತಲಿನ ರಾಜಕಾಲುವೆಗಳಲ್ಲಿ ಸರಾಗವಾಗಿ ನೀರು ಹರಿದು ಹೋಗಲು ಸಾಧ್ಯವಾಗದ ಕಾರಣ ಬಡಾವಣೆಗಳಿಗೆ ನೀರು ನುಗ್ಗುತ್ತಿದೆ. ರಾಜಕಾಲುವೆಗೆ ಕಸ ಕಡ್ಡಿ ಸೇರಿಕೊಂಡು ನೀರು ಮುಂದೆ ಹರಿಯಲು ಸಾಧ್ಯವಾಗದೆ ಸಮಸ್ಯೆಯಾಗಿದೆ ಎಂದು ಗೌರವ್ ಗುಪ್ತ ಹೇಳಿದರು.

ನೀರು ಸರಾಗವಾಗಿ ಹರಿದು ಹೋಗಲು ಇರುವ ತಡೆಗಳನ್ನು ಸರಿಪಡಿಸಬೇಕು. ಕಾಲುವೆ ಹೂಳನ್ನು ಆಗಾಗ ತೆಗೆಯಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಯಲ್ ಎನ್‌ಕ್ಲೇವ್ ಮತ್ತು ಬಿಟಿಎಸ್ ಬಡಾವಣೆಗೂ ಭೇಟಿ ನೀಡಿ ಪ್ರದೇಶಕ್ಕೆ ಭೇಟಿ ನೀಡಿ ಅವರು ಪರಿಶೀಲನೆ ನಡೆಸಿದರು. ರಾಯಲ್ ಎನ್‌ಕ್ಲೇವ್ ಬಡಾವಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಚಿನಲ್ಲಿದ್ದು, ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ವ್ಯವಸ್ಥೆ ಇಲ್ಲದೆ ಸಮಸ್ಯೆ ಉದ್ಭವಿಸುತ್ತಿದೆ. ತಾತ್ಕಾಲಿಕ ಚರಂಡಿ ನಿರ್ಮಿಸಿ ನೀರು ಹರಿದು ಹೋಗಲು ಅವಕಾಶ ಕಲ್ಪಿಸಬೇಕು ಎಂದು ಜಂಟಿ ಆಯುಕ್ತರಿಗೆ ನಿರ್ದೇಶನ ನೀಡಿದರು.

‘ಬಿಟಿಎಸ್ ಬಡಾವಣೆಯಲ್ಲಿ ಯೋಜನಾ ಬದ್ಧವಾಗಿ ಮನೆಗಳನ್ನು ನಿರ್ಮಿಸಿಲ್ಲ. ರಾಜಕಾಲುವೆ ಒತ್ತುವರಿ ಆಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ನಿಯಮ ಉಲ್ಲಂಘಿಸಿ ಮನೆಗಳನ್ನು ನಿರ್ಮಾಣ ಮಾಡಿರುವುದರಿಂದ ಸಮಸ್ಯೆಗಳು ಹೆಚ್ಚಾಗಿವೆ’ ಎಂದು ಸಾರ್ವಜನಿಕರು ದೂರಿದರು.

ಪರಿಶೀಲನೆ ನಡೆಸಿದ ಮುಖ್ಯ ಆಯುಕ್ತರು, ನೀರು ಹರಿಯಲು ಅಡ್ಡಿಯಾಗಿ ಯಾರೇ ತಡೆಗೋಡೆಗಳನ್ನು ನಿರ್ಮಿಸಿದ್ದರೂ ತೆರವುಗೊಳಿಸುವಂತೆ ಜಂಟಿ ಆಯುಕ್ತರಿಗೆ ಆದೇಶಿಸಿದರು.

ದಾಸರಹಳ್ಳಿ ವಲಯ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ ತುರ್ತು ಕಾಮಗಾರಿ ಆರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.



ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ



ನಗರದ ಸೇಂಟ್ ಮೇರೀಸ್ ಬಾಸಿಲಿಕಾ ಚರ್ಚ್ ರಸ್ತೆಯಲ್ಲಿ ಗುಂಡಿಗಳಲ್ಲಿ ಮಳೆ ನೀರು ನಿಂತುಕೊಂಡಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು – ಪ್ರಜಾವಾಣಿ ಚಿತ್ರ

16 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಅ.16 ಮತ್ತು 17ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ ಇದೆ. ಎರಡೂ ದಿನ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಮಳೆ ಪ್ರಮಾಣ ತಗ್ಗಿದ್ದು, ಮುಂದಿನ ಐದು ದಿನಗಳವರೆಗೆ ಮಳೆಯಾಗುವ ಯಾವುದೇ ಸೂಚನೆಗಳಿಲ್ಲ ಎಂದು ಇಲಾಖೆ ಮಾಹಿತಿ ನೀಡಿದೆ.

ಮಳೆ ಎಲ್ಲಿ, ಎಷ್ಟು?: ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ಶುಕ್ರವಾರ 5 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಸಿದ್ದಾಪುರ, ಬೆಂಗಳೂರು ನಗರ 4, ಮೈಸೂರು 3, ಹರಪನಹಳ್ಳಿ, ಭದ್ರಾವತಿ 2, ಪುತ್ತೂರು, ಚಿಕ್ಕಮಗಳೂರು, ಮದ್ದೂರು, ಭಾಗಮಂಡಲದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.





ನಗರದ ಬನಶಂಕರಿ ದೇವಸ್ಥಾನದಲ್ಲಿ ವಿಜಯದಶಮಿ ಹಬ್ಬದ ಪ್ರಯುಕ್ತ ಮಹಿಳೆಯರು ನಿಂಬೆಹಣ್ಣಿನ ದೀಪವನ್ನು ದೇವರಿಗೆ ಬೆಳಗಿದರು (ಎಡ ಚಿತ್ರ) ದುರ್ಗಾ ದೇವಿಯ ವಿಗ್ರಹ ವಿಸರ್ಜನೆಯ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು –ಪ್ರಜಾವಾಣಿ ಚಿತ್ರಗಳು

ಆಯುಧ ಪೂಜೆ, ವಿಜಯ ದಶಮಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ಕಾಯಿಲೆಯಿಂದ ತತ್ತರಿಸಿದ್ದ ಜನತೆಗೆ ಈ ಬಾರಿಯ ದಸರಾ ನವ ಉಲ್ಲಾಸ ಮೂಡಿಸಿತು.

ಧಾರ್ಮಿಕ ಮತ್ತು ಸಂಸ್ಕೃತಿಯ ಆಚರಣೆಯ ಸಮ್ಮಿಲನವಾದ ಈ ನಾಡ-ಹಬ್ಬವನ್ನು ಸಂಭ್ರಮದಿಂದ ಸರಳವಾಗಿ ಆಚರಿಸಿದರು. ಆಯುಧ ಪೂಜೆ ಮತ್ತು ವಿಜಯ ದಶಮಿಯನ್ನು ಜನತೆ ಸಂತಸದಿಂದ ಆಚರಿಸಿ ಸಂಭ್ರಮಿಸಿದರು. ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಿದರು.

ಬೆಂಗಾಲಿ ಸಮುದಾಯದ ಜನರು ನವರಾತ್ರಿ ಆಚರಣೆ ಸಂದರ್ಭದಲ್ಲಿ ಪ್ರತಿಷ್ಠಾಪಿಸಿದ್ದ ದುರ್ಗಾ ವಿಗ್ರಹಗಳ-ನ್ನು ಹಲಸೂರು ಕೆರೆಯಲ್ಲಿ ಶುಕ್ರವಾರ ವಿಸರ್ಜಿಸಿದರು. ಮೆರವಣಿಗೆಯಲ್ಲಿ ಸಾಗಿದ ಜನರು ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇಸ್ಕಾನ್‌ನಲ್ಲಿಯೂ ಶ್ರದ್ಧಾ-ಭಕ್ತಿಯಿಂದ ವಿಜಯದಶಮಿ ಆಚರಿಸಲಾಯಿತು. ಶ್ರೀ ಕೃಷ್ಣ ಬಲರಾಮ ದೇವರಿಗೆ ರಾಮ-ಲಕ್ಷ್ಮಣರ ಅಲಂಕಾರ ಮಾಡಲಾಗಿತ್ತು ಮತ್ತು ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಇಸ್ಕಾನ್ ಅಧ್ಯಕ್ಷರಾದ ಮಧುಪಂಡಿತ ದಾಸರು ವಿಜಯದಶಮಿ ಹಬ್ಬದ ಕುರಿತು ಪ್ರವಚನ ಮಾಡಿದರು. ಸಂಜೆ ಶ್ರೀರಾಮ ತಾರಕ ಯಜ್ಞ ಹಾಗೂ ಶ್ರೀ ರಾಮ ಕೀರ್ತನೆಗಳನ್ನು ಆಯೋಜಿಸ-ಲಾಗಿತ್ತು.

ಮಲ್ಲೇಶ್ವರದ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ‘ಸಾಗರ ಕನ್ಯೆ ಶ್ರೀವಾಸವಿ’ ಸೆಟ್ ಭಕ್ತಾದಿಗಳ ಗಮನ ಸೆಳೆಯುತ್ತಿದೆ. ರಾತ್ರಿವರೆಗೂ ಭಕ್ತಾದಿಗಳು ಉದ್ದನೇಯ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು.

ಆರ್‌.ಟಿ. ನಗರದಲ್ಲಿ ಸಿದ್ಧಾರ್ಥ ಸಾಂಸ್ಕೃತಿಕ ಪರಿಷತ್ ವತಿಯಿಂದ ದೇವಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಕಾರ್ಯಕ್ರ-ಮಗಳನ್ನು ಆಯೋಜಿಸಲಾಗಿತ್ತು.

ಹಬ್ಬದ ಸಂಭ್ರಮದಿಂದ ಮಾರುಕಟ್ಟೆ ಪ್ರದೇಶಗಳು ಸಹ ಕಳೆಗಟ್ಟಿದ್ದವು. ನಗರದ ಕೆ.ಆರ್.ಮಾರುಕಟ್ಟೆ, ಯಶವಂತಪುರ, ಮಲ್ಲೇಶ್ವರ ಮುಂತಾದ ಪ್ರದೇಶಗಳಲ್ಲಿ ಜನಜಂಗುಳಿ ಕಂಡು ಬಂತು.



ನಗರದಲ್ಲಿ ಶುಕ್ರವಾರ ಬೆಂಗಾಲಿ ಸಮುದಾಯದ ಜನರು ನವರಾತ್ರಿ ಆಚರಣೆ ಸಂದರ್ಭದಲ್ಲಿ ಪ್ರತಿಷ್ಠಾಪಿಸಿದ್ದ ದುರ್ಗಾ ದೇವಿ ವಿಗ್ರಹಗಳನ್ನು ಹಲಸೂರು ಕೆರೆಯಲ್ಲಿ ಬಿಬಿಎಂಪಿ ಸಿಬ್ಬಂದಿ ನೆರವಿನೊಂದಿಗೆ ವಿಸರ್ಜಿಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ.

ಅಂಬೇಡ್ಕರ್ ಗುಟ್ಟ: ದಸರಾ ಜಾತ್ರೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಕಾಡುಗೋಡಿ ವಾರ್ಡ್‌ನ ಅಂಬೇಡ್ಕರ್ ಗುಟ್ಟದಲ್ಲಿ ದಸರಾ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ದಸರಾ ಜಾತ್ರೆ ನೆರವೇರಿತು.

ಗ್ರಾಮದ ಹೆಬ್ಬಾಗಿಲ ಮೂಲಕ ತಮಟೆ ವಾದ್ಯ ಮತ್ತು ಕಳಶಗಳೊಂದಿಗೆ ಸುತ್ತಮುತ್ತಲಿನ ಗ್ರಾಮಗಳಿಂದ ಯಲ್ಲಮ್ಮ, ಸಪ್ಪಲಮ್ಮ, ಮಾರಮ್ಮ, ಮುನೇಶ್ವರ ಸ್ವಾಮಿ, ಬಸವೇಶ್ವರ ಸ್ವಾಮಿ, ಆಂಜನೇಯ ಸ್ವಾಮಿ, ಮಹಾಗಣಪತಿ ದೇವರುಗಳ ಪಲ್ಲಕ್ಕಿಗಳು ಮೆರವಣಿಗೆಯೊಂದಿಗೆ ದಸರಾ ಮೈದಾನಕ್ಕೆ ಬಂದವು.

ಪಟ್ಟಂದೂರು ಅಗ್ರಹಾರ, ನಲ್ಲೂರಹಳ್ಳಿ, ರಾಮಗೊಂಡನಹಳ್ಳಿ, ವೈಟ್‌ಫೀಲ್ಡ್, ಹಗದೂರು, ಗಾಂಧಿಪುರ, ಇಮ್ಮಡಿಹಳ್ಳಿ, ನಾಗೊಂಡಹಳ್ಳಿ, ಚನ್ನಸಂದ್ರ, ಕಾಡುಗೋಡಿ, ಬೆಳ್ತೂರು, ದಿನ್ನೂರು ಗ್ರಾಮಸ್ಥರು ಜಾತ್ರಾ ಮಹೋತ್ಸವದಲ್ಲಿ ನೆರೆದಿದ್ದರು.

ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಅರವಿಂದ ಲಿಂಬಾವಳಿ, ‘ಕೋವಿಡ್‌ನಿಂದ ಉತ್ಸವಗಳು ಕಡಿಮೆಯಾಗಿದ್ದವು. ಹಬ್ಬಗಳು ಈ ನೆಲದ ಸಾಂಸ್ಕೃತಿಕ ಚೌಕಟ್ಟು ಹೊಂದಿರುತ್ತವೆ. ಜಾತ್ರೆಗೆ 60ಕ್ಕೂ ಹೆಚ್ಚು ಗ್ರಾಮಗಳಿಂದ ಬಂದಿರುವ ದೇವರುಗಳನ್ನು ಭಕ್ತರು ಕಣ್ತುಂಬಿಕೊಳ್ಳಬೇಕು’ ಎಂದು ಹೇಳಿದರು.



ಅಂಬೇಡ್ಕರ್ ಗುಟ್ಟದ ದಸರಾ ಮೈದಾನಕ್ಕೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಪಲ್ಲಕ್ಕಿಗಳು

ಜೆಇಇ-ಅಡ್ವಾನ್ಸ್ಡ್: ವೀರೇಶ್‌ಗೆ 39ನೇ ರ್‍ಯಾಂಕ್

ಪ್ರಜಾವಾಣಿ ವಾರ್ತೆ



ವೀರೇಶ್



ಪ್ರಥಮ್



ಉದ್ಧವ್



ಪ್ರೇಮಾಂಕುರ್

ಬೆಂಗಳೂರು: ಭಾರತೀಯ ತಂತ್ರಜ್ಞಾನ ಸಂಸ್ಥೆಗಳ (ಐಐಟಿ) ಪ್ರವೇಶಕ್ಕಾಗಿ ನಡೆಸುವ ಜೆಇಇ-ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ರಾಜ್ಯದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ.

ನಗರದ ಉಲ್ಲಾಳದ ಆಕ್ಸ್‌ಫರ್ಡ್ ಇಂಡಿಪೆಂಡೆಂಟ್ ಪಿಯು ಕಾಲೇಜಿನ ವೀರೇಶ್ ಬಿ.ಪಾಟೀಲ ಮತ್ತು ಯಲಹಂಕದ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಸಿ. ಪ್ರೇಮಾಂಕುರ್ ಕ್ರಮವಾಗಿ 39 ಮತ್ತು 54ನೇ ರ್‍ಯಾಂಕ್ ಪಡೆದಿದ್ದಾರೆ. ಈ ಮೂಲಕ ರಾಜ್ಯಕ್ಕೆ ಕ್ರಮವಾಗಿ ಮೊದಲ ಮತ್ತು ಎರಡನೇ ರ್‍ಯಾಂಕ್ ಪಡೆದಿದ್ದಾರೆ. ಇಬ್ಬರು ಐಐಟಿ ಬಾಂಬೆಯಲ್ಲಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗೆ ಪ್ರವೇಶ ಪಡೆಯಲು ಬಯಸಿದ್ದಾರೆ.

ವೀರೇಶ್, ಕರ್ನಾಟಕ 'ಕೆ-ಸಿಇಟಿ'ಯ ಎಂಜಿನಿಯರಿಂಗ್ ವಿಭಾಗದಲ್ಲಿ 7ನೇ ರ್‍ಯಾಂಕ್ ಮತ್ತು 'ಕಾಮೆಡ್-ಕೆ'ನಲ್ಲಿ ಪ್ರಥಮ ರ್‍ಯಾಂಕ್, ಜೆಇಇ ಮೇನ್ಸ್‌ನಲ್ಲಿ 187ನೇ ರ್‍ಯಾಂಕ್ ಪಡೆದಿದ್ದರು. ಅಲೇನ್ ತರಬೇತಿ ಕೇಂದ್ರದಲ್ಲಿ ವೀರೇಶ್ ತರಬೇತಿ ಪಡೆದಿದ್ದರು.

304 ಅಂಕಗಳನ್ನು ಗಳಿಸಿರುವ ವೀರೇಶ್, ಮೊದಲ ಪೇಪರ್‌ನಲ್ಲಿನ ವಿಷಯಗಳಾದ ಭೌತವಿಜ್ಞಾನದಲ್ಲಿ 56, ರಸಾಯನ ವಿಜ್ಞಾನದಲ್ಲಿ 54, ಗಣಿತದಲ್ಲಿ 36 ಹಾಗೂ ಎರಡನೇ ಪೇಪರ್‌ನಲ್ಲಿನ ವಿಷಯಗಳಾದ ಭೌತ ವಿಜ್ಞಾನದಲ್ಲಿ 54, ರಸಾಯನ ವಿಜ್ಞಾನದಲ್ಲಿ 56 ಮತ್ತು ಗಣಿತದಲ್ಲಿ 48 ಅಂಕಗಳನ್ನು ಗಳಿಸಿದ್ದಾರೆ.

ಮೂಲತಃ ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನಲ್ಲಿ ಕಂದಗಲ್‌ನ-ವರಾದ ವೀರೇಶ್ ತಂದೆ–ತಾಯಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

‘ನಮ್ಮ ಪ್ರೋತ್ಸಾಹ ಸದಾ ಇತ್ತು. ಆದರೆ, ಆತನ ಸತತ ಪರಿಶ್ರಮದಿಂದ ಉತ್ತಮ ರ್‍ಯಾಂಕ್ ಬಂದಿದೆ' ಎಂದು ವೀರೇಶ್ ಅವರ ತಾಯಿ ರಾಜೇಶ್ವರಿ ತಿಳಿಸಿದ್ದಾರೆ. ‘ಪ್ರತಿ ದಿನ ಆರು ಗಂಟೆಗಳ ಕಾಲ ಓದುತ್ತಿದ್ದೆ. ಆದರೆ, ಒತ್ತಡದಿಂದ ಎಂದಿಗೂ ಓದಿಲ್ಲ. ಖುಷಿಯಿಂದ ಓದುತ್ತಿದ್ದೆ. 8ನೇ ತರಗತಿಯಿಂದಲೇ ಜೆಇಇಗೆ ಸಿದ್ಧತೆ ಆರಂಭಿಸಿದೆ. ಶಿಕ್ಷಕರು ಮತ್ತು ತಂದೆ–ತಾಯಿ ಮಾರ್ಗದರ್ಶನ ನೀಡಿದರು. ಅಲೇನ್‌ನಲ್ಲಿ ಪಡೆದ ತರಬೇತಿ ನೆರವಾಯಿತು’ ಎಂದು ವೀರೇಶ್ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರವೇಶ ಪಡೆದಿದ್ದರೂ ಐಐಟಿ ಬಾಂಬೆ ಅಥವಾ ದೆಹಲಿಯಲ್ಲಿ ಪ್ರವೇಶ ಪಡೆಯುವ ಇಚ್ಛೆಯನ್ನು ಪ್ರೇಮಾಂಕುರ್ ವ್ಯಕ್ತಪಡಿ-ಸಿದ್ದಾರೆ.

‘ನನಗೆ ಫಲಿತಾಂಶವು ತೃಪ್ತಿ ತಂದಿದೆ. ಐಐಟಿ ಬಾಂಬೆ ಅಥವಾ ದೆಹಲಿಯಲ್ಲಿ ಪ್ರವೇಶ ಪಡೆದು ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಮಾಡುವ ಬಯಕೆ ಹೊಂದಿದ್ದೇನೆ. ಶಿಕ್ಷಕರು, ಕುಟುಂಬದ ಸದಸ್ಯರು ಮತ್ತು ಸ್ನೇಹಿತರು ನನಗೆ ಪ್ರೋತ್ಸಾಹ ನೀಡಿದರು’ ಎಂದು ಪ್ರೇಮಾಂಕುರ್ ಹೇಳಿದ್ದಾರೆ.

‘ಅಲೇನ್’ನಲ್ಲಿ ತರಬೇತಿ ಪಡೆದಿದ್ದ ಆದ್ಯೋತ್ ಭಾರದ್ವಾಜ್ 144ನೇ ಮತ್ತು ಅನಿರುದ್ಧ 384ನೇ ರ್‍ಯಾಂಕ್ ಪಡೆದಿದ್ದಾರೆ.

ತಂದೆಯ ಕನಸು ಈಡೇರಿಕೆ: ಬೆಂಗಳೂರಿನ ಹೈಷಿತ್ ಬಿ.ಪಿ. ಅಖಿಲ ಭಾರತ ಮಟ್ಟದಲ್ಲಿ 392ನೇ ರ್‍ಯಾಂಕ್ ಪಡೆದಿದ್ದಾರೆ. ಹೈಷಿತ್ ಅವರ ತಂದೆ ಮೂತ್ರಪಿಂಡ ತಜ್ಞ ಡಾ. ಬಾಲಾಜಿ ಪ್ರಸಾದ್ ಅವರು ಕೋವಿಡ್–19 ನಿಂದಾಗಿ ಸಾವಿಗೀಡಾಗಿದ್ದಾರೆ. ತಂದೆಯ ಸಾವಿನ ಆಘಾತದಿಂದ ಚೇತರಿಸಿಕೊಂಡ ಹೈಷಿತ್, ಉತ್ತಮ ರ್‍ಯಾಂಕ್ ಪಡೆಯುವ ಮೂಲಕ ತಂದೆಯ ಕನಸನ್ನು ನನಸು ಮಾಡಿದ್ದಾರೆ.

ಎಫ್‌ಐಐಜೆಇಇಗೆ ಉತ್ತಮ ಫಲಿತಾಂಶ: ನಗರದ ಎಫ್‌ಐಐಟಿಜೆಇಇ ಕೇಂದ್ರದ ಹತ್ತು ವಿದ್ಯಾರ್ಥಿಗಳು ಅಗ್ರ ಒಂದು ಸಾವಿರ ಒಳಗೆ ಶ್ರೇಯಾಂಕ ಪಡೆದಿದ್ದಾರೆ.

ಅಖಿಲ ಭಾರತ ಮಟ್ಟದಲ್ಲಿ ಪ್ರಥಮ್ ಸಾಹು 131(ರಾಜ್ಯಕ್ಕೆ 3ನೇ ರ್‍ಯಾಂಕ್), ಉದ್ಧವ್ ವರ್ಮಾ 164 (ರಾಜ್ಯಕ್ಕೆ 6ನೇ ರ್‍ಯಾಂಕ್), ಹಾರ್ದಿಕ್ ಅಗರ್ವಾಲ್ 166 (ರಾಜ್ಯಕ್ಕೆ 7ನೇ ರ್‍ಯಾಂಕ್), ಮಿಹಿರ್ ದೇಶಪಾಂಡೆ 182 (ರಾಜ್ಯಕ್ಕೆ 8ನೇ ರ್‍ಯಾಂಕ್), ಲಕ್ಷವಂತ್ ಬಾಲಚಂದ್ರನ್ 188 (ರಾಜ್ಯಕ್ಕೆ 9ನೇ ರ್‍ಯಾಂಕ್) ಹಾಗೂ ಪ್ರಾಂಜಲ್ ಸಿಂಗ್ 216 (ರಾಜ್ಯಕ್ಕೆ 10ನೇ ರ್‍ಯಾಂಕ್) ಪಡೆದಿದ್ದಾರೆ.

‘ಉತ್ತರ ಕರ್ನಾಟಕದ ಭೂಕಂಪನಕ್ಕೆ ಭೂಗತ ಜಲಕಂಪನ ಕಾರಣ’

ಬೆಂಗಳೂರು (ಪಿಟಿಐ): ಉತ್ತರ ಕರ್ನಾಟಕದ ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಸಂಭವಿಸುತ್ತಿ-ರುವ ಸರಣಿ ಭೂಕಂಪನವು ಭೂಗತ ಜಲಕಂಪನ(hydro-seismicity) ಎಂಬ ವಿದ್ಯಮಾನಕ್ಕೆ ಸಂಬಂಧಿಸಿದೆ. ಇದು ಸಾಮಾನ್ಯವಾಗಿ ಮಳೆಗಾಲದ ನಂತರ ಸಂಭವಿಸುತ್ತದೆ ಎಂದು ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಎನ್‌ಜಿಆರ್‌ಐ)ನ ಪ್ರಾಥಮಿಕ ಅಧ್ಯಯನವು ಬಹಿರಂಗ-ಪಡಿಸಿದೆ.

‘ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳ ಕೆಲವು ಪ್ರದೇಶಗಳ-ಲ್ಲಿ ಕಂಡುಬರುತ್ತಿರುವ ಕಂಪನಗಳ ಬಗ್ಗೆ ವಿವರವಾದ ವಿಶ್ಲೇಷಣೆಯನ್ನು ನಡೆಸುವಂತೆ ನಾವು ಎನ್‌ಆರ್‌ಜಿಐಗೆ ಮನವಿ ಮಾಡಿದ್ದೆವು’ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಶುಕ್ರವಾರ ಪಿಟಿಐಗೆ ತಿಳಿಸಿದ್ದಾರೆ.

‘ಈ ಪ್ರಕೃತಿಯ ಸೂಕ್ಷ್ಮ ಕಂಪನಗಳು ಸಾಮಾನ್ಯವಾಗಿ ಮಳೆಗಾಲದ ನಂತರದ ಅವಧಿಯಲ್ಲಿ ಸಂಭವಿಸುತ್ತವೆ ಎಂದು ಅವರ ಪ್ರಾಥಮಿಕ ಅವಲೋಕನಗಳು ಸೂಚಿಸಿವೆ’ಎಂದು ರಾಜನ್ ಹೇಳಿದರು.

ಜನರ ಆಕ್ಷೇಪ: ಪರಿಶೀಲಿಸಿ ಕ್ರಮ ಪೊಲೀಸ್ ಆಯುಕ್ತರ ಸ್ಪಷ್ಟನೆ

ಬಜರಂಗದಳ ಕಾರ್ಯಕರ್ತರಿಗೆ ತ್ರಿಶೂಲ ದೀಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಯುಧಪೂಜೆಯ ಅಂಗವಾಗಿ ಗುರುವಾರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಬಜರಂಗದಳ ಕಾರ್ಯಕರ್ತರಿಗೆ ತ್ರಿಶೂಲ ದೀಕ್ಷೆ ನೀಡಲಾಗಿದ್ದು, ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಸಾರ್ವಜನಿಕವಾಗಿ ಆಯುಧ ಪ್ರದರ್ಶಿಸಿರುವುದನ್ನು ಗಂಭೀರವಾಗಿ ಪರಿಗಣಿಸುವಂತೆ ಒತ್ತಾಯ ಕೇಳಿ ಬಂದಿದೆ.

ನಗರದ ವಿಶ್ವ ಹಿಂದೂ ಪರಿಷತ್ ಕಚೇರಿ ‘ವಿಶ್ವ ಶ್ರೀ’ ಸೇರಿದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಹಲವೆಡೆ ಕಾರ್ಯಕರ್ತರಿಗೆ ತ್ರಿಶೂಲ ದೀಕ್ಷೆ ನೀಡಲಾಗಿದೆ. ಈ ಕಾರ್ಯಕ್ರಮದ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ವಿಶ್ವ ಹಿಂದೂ ಪರಿಷತ್‌ನ ವಿಭಾಗೀಯ ಕಾರ್ಯದರ್ಶಿ ಶರಣ್ ಪಂಪ್‌ವೆಲ್, ‘ನಾವು ಬಾಂಬ್, ಗ್ರೆನೇಡ್ ದೀಕ್ಷೆ ಕೊಟ್ಟಿಲ್ಲ. ತ್ರಿಶೂಲ ದೀಕ್ಷೆ ಕೊಟ್ಟಿದ್ದೇವೆ. ಪ್ರತಿವರ್ಷ ಬಜರಂಗ ದಳದ ಹೊಸ ಕಾರ್ಯಕರ್ತರಿಗೆ ಈ ದೀಕ್ಷೆ ನೀಡಲಾಗುತ್ತಿದೆ. ಎರಡು ವರ್ಷ ಕೋವಿಡ್–19 ನಿಂದಾಗಿ ಕಾರ್ಯಕ್ರಮ ನಡೆದಿರಲಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಕಾರ್ಯಕರ್ತರಲ್ಲಿ ಆತ್ಮಸ್ಥೈರ್ಯ ತುಂಬಲು ಸಾಂಕೇತಿಕವಾಗಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದು ಕಾನೂನಿಗೆ ವಿರುದ್ಧವಾಗಿಲ್ಲ’ ಎಂದು ಹೇಳಿದ್ದಾರೆ.

ಪರಿಶೀಲಿಸಿ ಕ್ರಮ: ‘ಮಂಗಳೂರು ನಗರ ಸೇರಿದಂತೆ ಜಿಲ್ಲೆ ಹಾಗೂ ಪಕ್ಕದ ಜಿಲ್ಲೆಯಲ್ಲಿ ಹಲವು ಕಡೆ ತ್ರಿಶೂಲ ದೀಕ್ಷೆಯ ಬಗ್ಗೆ ಮಾಹಿತಿ ದೊರೆತಿದೆ. ಈ ಬಗ್ಗೆ ಪರಿಶೀಲಿಸಲಾಗಿದ್ದು, ಪ್ರತಿ ವರ್ಷ ಆಯುಧ ಪೂಜೆಯ ಸಂದರ್ಭದಲ್ಲಿ ಸಾಂಕೇತಿಕವಾಗಿ ತ್ರಿಶೂಲ ದೀಕ್ಷೆ ಮಾಡುತ್ತಿರುವುದಾಗಿ ಆಯೋಜಕರು ತಿಳಿಸಿದ್ದಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಾನೂನಿಗೆ ವಿರುದ್ಧವಾಗಿದ್ದರೆ ಕ್ರಮ ಜರುಗಿಸಲಾಗುವುದು’ ಎಂದು ನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ತಿಳಿಸಿದ್ದಾರೆ.



ಆಯುಧ ಪೂಜೆಯ ಅಂಗವಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಬಜರಂಗದಳ ಕಾರ್ಯಕರ್ತರಿಗೆ ಗುರುವಾರ ತ್ರಿಶೂಲ ದೀಕ್ಷೆ ನೀಡಲಾಯಿತು

ಶನಿವಾರ, ಅಕ್ಟೋಬರ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 287 | ಪುಟ 18

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ದಪ್ಪ ಎಂದರೆ ಅವಮಾನ, ಟೀಕೆ ಸಹಿಸಿಕೊಳ್ಳಬೇಕು ಎಂಬ ಕಾಲ ಈಗಿಲ್ಲ. ಅಂಥವರಿಗೆ ಪ್ಲಸ್ ಸೈಝ್ ಉಡುಪುಗಳೂ ಮಾರುಕಟ್ಟೆಯಲ್ಲಿ ಸಿಗುತ್ತಿವೆ. ಇದು 'ಬಾಡಿ ಶೇಮಿಂಗ್' ಅನ್ನು ಕಡಿಮೆ ಮಾಡಲೂ ಕೊಡುಗೆ ನೀಡುತ್ತಿದೆ.



ಚರ್ಚೆ
ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮನಸ್ಥಿತಿಯಲ್ಲಿ ಬದಲಾವಣೆ ಆಗಿದೆಯೇ? 7

ಅಪಾಯದಲ್ಲಿವೆ 404 ಕಟ್ಟಡ! 8A

ಹಸಿವಿನ ಸೂಚ್ಯಂಕ: ಹಿನ್ನಡೆ ಕಂಡ ಭಾರತ 8A

ಐದು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಭಾಗಿ
'ಅರಮನೆಯೊಳಗಿನ ಜಂಬೂಸವಾರಿ' ಸಂಪನ್ನ 4

ಟೆಂಡರ್ ಷರತ್ತು ಮಾರ್ಪಾಡಿಗೆ ಸೂಚನೆ; ರಾಜ್ಯಕ್ಕೆ ಕೇಂದ್ರದ ನೋಟಿಸ್

ಉಕ್ಕು ಉದ್ಯಮಗಳಿಗೆ ಇನ್ನು ಗಣಿಗಳು 'ದೂರ'!

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬಳ್ಳಾರಿ: ಅದಿರು ಗಣಿಗಳನ್ನು ಉದ್ಯಮಗಳಿಗೆ ಮಾತ್ರ ಮೀಸಲಿಡುವ ರಾಜ್ಯದ ನಿಲುವಿಗೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿ ನೋಟಿಸ್ ಜಾರಿಗೊಳಿಸಿದ್ದು, 'ಇನ್ನು ಮುಂದೆ ಅದಿರು ಗಣಿಗಳನ್ನು ಉಕ್ಕು ಉದ್ಯಮಗಳಿಗೆ ಮೀಸಲಿಡಬಾರದು' ಎಂದು ಹೇಳಿದೆ.

ಕೇಂದ್ರದ ಸೂಚನೆಯಿಂದಾಗಿ ಗಣಿಗಳ ಇ– ಹರಾಜಿಗೆ ದಾರಿ ಮುಕ್ತವಾದಂತಾಗಿದ್ದು, ಅರ್ಹತೆ ಹೊಂದಿರುವ ಯಾವುದೇ ಕಂಪನಿ ಅಥವಾ ವ್ಯಕ್ತಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಕೇಂದ್ರ ಸರ್ಕಾರ ಕಳುಹಿಸಿರುವ ನೋಟಿಸ್ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮೆಸರ್ಸ್ ಶ್ರೀನಿವಾಸುಲು, ರಾಮಗಢ ಮೈನ್ಸ್ ಅಂಡ್ ಮಿನರಲ್ಸ್ ಪ್ರೈವೇಟ್ ಲಿ., ತಂಗವೇಲು ಅಂಡ್ ಅದರ್ಸ್, ಯೋಗೇಂದ್ರ ನಾಥ್ ಸಿಂಗ್, ಮತ್ತು ಅಲ್ಲಂ ವೀರಭದ್ರಪ್ಪ ಸೇರಿದಂತೆ ಐದು ಗಣಿ ಗುತ್ತಿಗೆಗಳ ಇ– ಹರಾಜಿಗೆ ರಾಜ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆ ಆಗಸ್ಟ್ 31ರಂದು ಆಹ್ವಾನಿಸಿರುವ ಟೆಂಡರ್, 'ಎಂಎಂಡಿಆರ್ (ಗಣಿ ಮತ್ತು ಖನಿಜ ಅಭಿವೃದ್ಧಿ ನಿಯಮಾವಳಿ) ಕಾಯ್ದೆಗೆ ವಿರುದ್ಧವಾಗಿದೆ' ಎಂದು ಕೇಂದ್ರ ಸರ್ಕಾರ ನೋಟಿಸ್‌ನಲ್ಲಿ ಹೇಳಿದೆ.

ಗಣಿ ಗುತ್ತಿಗೆ	ಪರವಾನಗಿ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರ್‌ನಲ್ಲಿ)	ಅಂದಾಜು ಅದಿರು ಲಭ್ಯತೆ (ದಶಲಕ್ಷ ಟನ್)
ಶ್ರೀನಿವಾಸುಲು	(ಎಂ.ಎಲ್ ಸಂಖ್ಯೆ 2631)	75.14	9.88
ರಾಮಗಢ ಮೈನ್ಸ್	(ಎಂ. ಎಲ್ ಸಂಖ್ಯೆ 2651)	24.04	2.137
ತಂಗವೇಲು ಅಂಡ್ ಅದರ್ಸ್	(ಎಂ.ಎಲ್ ಸಂಖ್ಯೆ 2585)	60.92	3.303
ಯೋಗೇಂದ್ರನಾಥ್ ಸಿಂಗ್	(ಎಂ.ಎಲ್ ಸಂಖ್ಯೆ 2186)	15.89	2.84
ಅಲ್ಲಂ ವೀರಭದ್ರಪ್ಪ	(ಎಂ.ಎಲ್ ಸಂಖ್ಯೆ 2436)	24.53	ಅದಿರು 3.645 ಮ್ಯಾಂಗನೀಸ್ 0.93

ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಾರ್ಯದರ್ಶಿಗೆ ಕೇಂದ್ರ ಗಣಿ ಸಚಿವಾಲಯ ಕಳುಹಿಸಿರುವ ನೋಟಿಸ್‌ನಲ್ಲಿ, ಐದು ಗಣಿ ಗುತ್ತಿಗೆಗಳ ಇ– ಹರಾಜು ಷರತ್ತುಗಳನ್ನು ಮಾರ್ಪಾಡು ಮಾಡಿ, ಹೊಸದಾಗಿ ಟೆಂಡರ್ ಪ್ರಕಟಣೆ ಹೊರಡಿಸುವಂತೆ ನಿರ್ದೇಶಿಸಿದೆ.

5ನೇ ಪುಟ ನೋಡಿ

ರಂಗಕರ್ಮಿ ಜಿ.ಕೆ. ಗೋವಿಂದರಾವ್ ಇನ್ನಿಲ್ಲ



ಹುಬ್ಬಳ್ಳಿ: ಚಿಂತಕ, ರಂಗಕರ್ಮಿ, ನಟ ಜಿ.ಕೆ. ಗೋವಿಂದರಾವ್ (84) ಅವರು ಇಲ್ಲಿನ ಗೋಲ್ಡನ್ ಟೌನ್ ಬಡಾವಣೆಯಲ್ಲಿರುವ ಅವರ ಪುತ್ರಿಯ ನಿವಾಸದಲ್ಲಿ ಶುಕ್ರವಾರ ಬೆಳಗಿನ ಜಾವ ನಿಧನರಾದರು.

5ನೇ ಪುಟ ನೋಡಿ

ಸಿಂಘು ಗಡಿ: ಪ್ರತಿಭಟನೆ ಸ್ಥಳದಲ್ಲಿ ವ್ಯಕ್ತಿಯ ಭೀಕರ ಹತ್ಯೆ

ಸಿಂಘು ಗಡಿ (ಪಿಟಿಐ): ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ಇಲ್ಲಿ ಪ್ರತಿಭಟನೆ ನಡೆಸುತ್ತಿರುವ ಸ್ಥಳದಲ್ಲಿ ದಲಿತ ವ್ಯಕ್ತಿಯೊಬ್ಬನನ್ನು ಗುರುವಾರ ರಾತ್ರಿ ಭೀಕರವಾಗಿ ಹತ್ಯೆ ಮಾಡಲಾಗಿದೆ. ವ್ಯಕ್ತಿಯ ಎಡಗೈ ಮತ್ತು ಬಲಗಾಲನ್ನು ಕತ್ತರಿಸಲಾಗಿದೆ. ಮೃತದೇಹ, ಕತ್ತರಿಸಿದ ಭಾಗಗಳನ್ನು ಪೊಲೀಸ್ ಬ್ಯಾರಿಕೇಡ್‌ಗೆ ನೇತು ಹಾಕಲಾಗಿದೆ.

ನಿಹಾಂಗ್ ಸರವಜಿತ್ ಸಿಂಗ್ ಎಂಬ ವ್ಯಕ್ತಿ ಪೊಲೀಸರಿಗೆ ಶುಕ್ರವಾರ ಸಂಜೆ ಶರಣಾಗಿದ್ದು, ಈ ಹತ್ಯೆ ತಾನೇ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಆತನನ್ನು ಶೀಘ್ರವೇ ನ್ಯಾಯಾಲಯದ ಎದುರು ಹಾಜರುಪಡಿಸುತ್ತೇವೆ ಎಂದು ಪೊಲೀಸರು ಹೇಳಿದ್ದಾರೆ.

ಶುಕ್ರವಾರ ಬೆಳಿಗ್ಗೆ 5ರ ವೇಳೆಗೆ ಇಲ್ಲಿನ ಕುಂಡ್ಲಿ ಪೊಲೀಸ್ ಠಾಣೆಗೆ ಮೃತದೇಹ ಪತ್ತೆಯಾಗಿರುವ ಬಗ್ಗೆ ಮಾಹಿತಿ ಬಂದಿದೆ. ಸ್ಥಳಕ್ಕೆ ತೆರಳಿದ ಪೊಲೀಸರನ್ನು ರೈತರು ತಡೆದಿದ್ದಾರೆ. ಆನಂತರ ಬಹಳ ಪ್ರಯಾಸಪಟ್ಟು ದೇಹವನ್ನು ಸೋನಿಪತ್ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು ಎಂದು ಹರಿಯಾಣ ಪೊಲೀಸರು ಮಾಹಿತಿ ನೀಡಿದ್ದಾರೆ.

8ನೇ ಪುಟ ನೋಡಿ

ಐಪಿಎಲ್‌ಗೆ ಚೆನ್ನೈ 'ಸೂಪರ್ ಕಿಂಗ್'

ದುಬೈ: ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶುಕ್ರವಾರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು. ಚೆನ್ನೈ ತಂಡಕ್ಕೆ ಇದು ನಾಲ್ಕನೇ ಪ್ರಶಸ್ತಿ.



ಫಫ್ ಡುಪ್ಲೆಸಿ
86 ರನ್
59 ಎಸೆತ
7 ಬೌಂಡರಿ
3 ಸಿಕ್ಸರ್

ಚೆನ್ನೈ
3ಕ್ಕೆ 192 (20 ಓವರ್‌ಗಳಲ್ಲಿ)

ಶಾರ್ದೂಲ್ ಠಾಕೂರ್
38ಕ್ಕೆ 3

ಕೋಲ್ಕತ್ತ ನೈಟ್ ರೈಡರ್ಸ್
9ಕ್ಕೆ 165 (20 ಓವರ್‌ಗಳಲ್ಲಿ)

ಫಲಿತಾಂಶ
ಚೆನ್ನೈ ಸೂಪರ್ ಕಿಂಗ್ಸ್‌ಗೆ 27 ರನ್‌ಗಳ ಜಯ


8B

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಜನಸಂಖ್ಯಾ ನೀತಿ ಪುನರ್ ರಚನೆ ಅಗತ್ಯ'



ನಾಗಪುರ (ಪಿಟಿಐ): ದೇಶದ ಜನಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚುತ್ತಿರುವುದಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಕಳವಳ ವ್ಯಕ್ತಪಡಿಸಿದ್ದಾರೆ. ಮುಂದಿನ 50 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ದೇಶದ ಜನಸಂಖ್ಯಾ ನೀತಿಯನ್ನು ಮರುಪರಿಶೀಲಿಸಿ, ಪುನರ್‌ರೂಪಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

'ದೇಗುಲ ನಿರ್ವಹಣೆ ಹಿಂದೂ ಭಕ್ತರಿಗೇ ಇರಲಿ'

ಹಿಂದೂ ದೇವಾಲಯಗಳ ನಿರ್ವಹಣೆಯ ಹಕ್ಕನ್ನು ಹಿಂದೂ ಭಕ್ತರಿಗೇ ವಹಿಸಬೇಕು ಹಾಗೂ ಆ ದೇವಾಲಯಗಳ ಸಂಪತ್ತನ್ನು ದೇವರ ಪೂಜೆಗೆ ಹಾಗೂ ಹಿಂದೂ ಸಮುದಾಯದ ಕಲ್ಯಾಣಕ್ಕಾಗಿಯೇ ಬಳಸಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು. ದೇಶದ ಕೆಲವು ದೇವಾಲಯಗಳ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, 'ಕೆಲವು ದೇವಾಲಯಗಳಲ್ಲಿ ನಿರ್ವಹಣೆಯ ವ್ಯವಸ್ಥೆಯೇ ಇಲ್ಲದಂತಾಗಿದ್ದು, ದೇವಸ್ಥಾನದ ಸ್ಥಿರ–ಚರ ಆಸ್ತಿಯ ದುರ್ಬಳಕೆ ಆಗಿರುವ ಪ್ರಕರಣಗಳೂ ಬೆಳಕಿಗೆ ಬಂದಿವೆ. ಹಿಂದೂ ದೇವಾಲಯಗಳ ಸಂಪತ್ತು ಹಿಂದೂಗಳಲ್ಲದ, ಹಿಂದೂ ದೇವರ ಬಗ್ಗೆ ನಂಬಿಕೆ ಇಲ್ಲದವರಿಗೂ ಬಳಕೆಯಾಗುತ್ತಿದೆ' ಎಂದರು.

4ನೇ ಪುಟ ನೋಡಿ

ಗಡಿಗಳಲ್ಲಿ ನಡೆಯುತ್ತಿರುವ ಅಕ್ರಮ ಒಳನುಸುಳುವಿಕೆ ನಿಗ್ರಹಿಸುವುದು ಹಾಗೂ ಅಂಥವರನ್ನು ಗುರುತಿಸುವುದಕ್ಕಾಗಿ ರಾಷ್ಟ್ರೀಯ ಪೌರತ್ವ ನೋಂದಣಿಯ (ಎನ್‌ಆರ್‌ಸಿ) ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ವಿಜಯದಶಮಿ ಪ್ರಯುಕ್ತ, ರೇಶಿಮ್‌ಬಾಗ್‌ನಲ್ಲಿ ಸಂಘದ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಶುಕ್ರವಾರ ಮಾತನಾಡಿದರು.

1951ರಿಂದ 2011ರವರೆಗೆ, ದೇಶದಲ್ಲಿ ಭಾರತೀಯ ಮೂಲದ ಧರ್ಮಗಳಿಗೆ ಸೇರಿದವರ ಜನಸಂಖ್ಯೆ ಶೇ 88 ಆಗಿತ್ತು. ಅದು ಈಗ ಶೇ 83.8ಕ್ಕೆ ಕುಸಿದಿದೆ. ಅದೇ ವೇಳೆಗೆ, ಶೇ 9.8 ರಷ್ಟು ಇದ್ದ ಮುಸ್ಲಿಮರ ಸಂಖ್ಯೆ ಶೇ 14.23ಕ್ಕೆ ಹೆಚ್ಚಿದೆ ಎಂದು ಹೇಳಿದರು.

4ನೇ ಪುಟ ನೋಡಿ

ಅನ್ನದಾತರಿಗೆ ದಕ್ಕದ ಬೆಲೆ ಏರಿಕೆಯ ಪ್ರಯೋಜನ

ಗ್ರಾಹಕರಿಗೆ ಹೊರೆ ರೈತರಿಗೆ ಲುಕ್ಸಾನು

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ರಾಜ್ಯದಲ್ಲಿ ತರಕಾರಿಗಳ ಬೆಲೆ ಗಗನಕ್ಕೇರಿದ್ದರಿಂದ ಗ್ರಾಹಕರು ತತ್ತರಿಸುತ್ತಿದ್ದರೆ, ಕಷ್ಟಪಟ್ಟು ತರಕಾರಿ ಬೆಳೆಯುವ ರೈತರಿಗೂ ಇದರ ಲಾಭ ಸಿಗುತ್ತಿಲ್ಲ. ಈ ಲಾಭದ ಹಣ ನೇರವಾಗಿ ದಲ್ಲಾಳಿಗಳ ಜೇಬಿಗೆ ಸೇರುತ್ತಿದೆ.

ಸುತ್ತಮುತ್ತಲಿನ ಜಿಲ್ಲೆಗಳಿಂದ ಬೆಂಗಳೂರಿನ ಮಾರುಕಟ್ಟೆಗೆ ತರಕಾರಿ ತರುವ ಕೆಲವು ರೈತರನ್ನು ಮಾತನಾಡಿಸಿದಾಗ ಉತ್ಪನ್ನವನ್ನು ಸಿಕ್ಕಿದ ದರಕ್ಕೆ ಮಾರಿ ಹೋಗಬೇಕಾದ ಪರಿಸ್ಥಿತಿಯನ್ನು ಅವರು ಬಿಚ್ಚಿಟ್ಟರು.

> **ರೈತರಿಗಾಗಿಯೇ ವ್ಯವಸ್ಥಿತವಾದ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಬೇಕು. ಅಲ್ಲಿ ಯಾವುದೇ ರೀತಿಯಲ್ಲೂ ಮಧ್ಯವರ್ತಿಗಳಿಗೆ ಅವಕಾಶ ಇರಬಾರದು**
> **ಹನುಮೇಗೌಡ,** ದೊಡ್ಡಬಳ್ಳಾಪುರ ತಾಲ್ಲೂಕು ರೈತ ಸಂಘದ ಅಧ್ಯಕ್ಷ

ಉದಾಹರಣೆಗೆ 12 ಕೆ.ಜಿ. ಟೊಮೆಟೊ ಬಾಕ್ಸ್‌ಗೆ ₹300ರಿಂದ ₹500 ದರದಲ್ಲಿ ಮಧ್ಯವರ್ತಿಗಳು ರೈತರಿಂದ ಖರೀದಿಸುತ್ತಾರೆ. ಅಂದರೆ ಒಂದು ಕೆ.ಜಿಗೆ ಕನಿಷ್ಠ ₹25ರಿಂದ ₹41 ರೈತರಿಗೆ ಸಿಗುತ್ತದೆ. ಅಂತಿಮವಾಗಿ ಗ್ರಾಹಕರಿಗೆ ಪ್ರತಿ ಕೆ.ಜಿ.ಗೆ ₹80 ಕ್ಕೂ ಹೆಚ್ಚು ಬೆಲೆಗೆ ಮಾರಾಟ ಮಾಡಿದರೆ, ಸಾಗಣೆ, ಹಾಳಾಗುವ ಟೊಮೆಟೊದ ಮೌಲ್ಯ ಕಳೆದರೂ ಮಧ್ಯವರ್ತಿಗಳಿಗೆ ಪ್ರತಿ ಕೆ.ಜಿ.ಯ ಮೇಲೆ ಕನಿಷ್ಠ ₹30 ಲಾಭ ಸಿಗುತ್ತದೆ. 'ಇಲ್ಲಿ ಗ್ರಾಹಕರಿಗೂ ಹೊರೆ, ನಮಗೂ ಲುಕ್ಸಾನು' ಎಂದು ರೈತರು ಅಳಲು ತೋಡಿಕೊಳ್ಳುತ್ತಾರೆ.

8ನೇ ಪುಟ ನೋಡಿ

ಮೈಸೂರು ರಸ್ತೆಯಲ್ಲಿ 16 ತಿಂಗಳಿಂದ ನಡೆಯುತ್ತಿರುವ ತಡೆಗೋಡೆ, ಮೋರಿ ನಿರ್ಮಾಣ ಕಾಮಗಾರಿ

ಆಮೆಗತಿ ಕಾಮಗಾರಿ: ಬಗೆಹರಿಯದ ಸಮಸ್ಯೆ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ



ಒಂದು ಬದಿಯಲ್ಲಿ ಬಾಕ್ಸ್ ಮೋರಿ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೆಂಗಳೂರು: ಕೆಂಗೇರಿ ಬಳಿ ಕಳೆದ ವರ್ಷ ಕೊಚ್ಚಿ ಹೋಗಿದ್ದ ವೃಷಭಾವತಿ ರಾಜಕಾಲುವೆಯ ತಡೆಗೋಡೆ ಮರು ನಿರ್ಮಾಣ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ವಾಹನ ಸವಾರರ ಪರದಾಟಕ್ಕೆ ಸದ್ಯಕ್ಕೆ ಮುಕ್ತಿ ಸಿಗುವ ಲಕ್ಷಣಗಳಿಲ್ಲ.

ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಇರುವ ರಾಜಕಾಲುವೆಯ ತಡೆಗೋಡೆ 2020ರ ಜೂನ್ 25ರಂದು ಉಕ್ಕಿದ ವೃಷಭಾವತಿ ರಾಜಕಾಲುವೆ ನೀರಿಗೆ ಕೊಚ್ಚಿ ಹೋಗಿತ್ತು. ಹಳೆಯದಾಗಿದ್ದ ತಡೆಗೋಡೆಯ ಮೇಲೆಯೇ ಹೊಸ ತಡೆಗೋಡೆ ನಿರ್ಮಿಸಲಾಗಿತ್ತು.

ಜೋರು ಮಳೆಯಲ್ಲಿ ರಭಸವಾಗಿ ನೀರು ನುಗ್ಗಿದ್ದರಿಂದ ತಡೆಗೋಡೆ ನೀರು ಪಾಲಾಗಿತ್ತು. ಮೈಸೂರು ರಸ್ತೆಗೆ ನೀರು ತುಂಬಿಕೊಂಡು ಮೆಟ್ರೊ ಮಾರ್ಗದ ಪಿಲ್ಲರ್‌ಗೆ ತೊಂದರೆಯಾಗುವ ಆತಂಕ ಎದುರಾಗಿತ್ತು.

ದುಬಾಸಿಪಾಳ್ಯ ಕಡೆಯಿಂದ ಬರುವ ಕಾಲುವೆ ಮೈಸೂರು ರಸ್ತೆಯನ್ನು ಇದೇ ಜಾಗದಲ್ಲಿ ಹಾದು ವೃಷಭಾವತಿ ರಾಜಕಾಲುವೆ ತಲುಪಬೇಕು. ರಸ್ತೆಗೆ ಅಡ್ಡಲಾಗಿ ಒಂದೇ ಒಂದು ಪೈಪ್ ಅಳವಡಿಸಲಾಗಿತ್ತು.

ಇಡೀ ಕಾಲುವೆಯ ನೀರು ಅದೇ ಪೈಪ್‌ನಿಂದ ರಾಜಕಾಲುವೆಗೆ ಸೇರಬೇಕಿತ್ತು. ಹೆಚ್ಚಿನ ನೀರು ಬಂದಾಗ ರಸ್ತೆಯ ಮೇಲೆಯೇ ಹರಿಯುತ್ತಿತ್ತು. ಅದನ್ನು ತಪ್ಪಿಸಲು ಹೊಸದಾಗಿ ತಡೆಗೋಡೆ ಮತ್ತು ದುಬಾಸಿಪಾಳ್ಯ ಕಡೆಯಿಂದ ಬರುವ ಕಾಲುವೆ ನೀರು ಹರಿದು ಹೋಗಲು ರಸ್ತೆಗೆ ಅಡ್ಡಲಾಗಿ ದೊಡ್ಡದಾದ ಬಾಕ್ಸ್ ಮೋರಿ ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಗಳು ಆರಂಭವಾಗಿ ಒಂದು ವರ್ಷ ನಾಲ್ಕು ತಿಂಗಳು ಕಳೆದಿವೆ.

ತಡೆಗೋಡೆ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ರಸ್ತೆಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಒಂದು ಬದಿಯಲ್ಲಿ ಮಾತ್ರ ಆರಂಭಿಸಲಾಗಿದ್ದು, ಅದು ಕೂಡ ಪೂರ್ಣಗೊಂಡಿಲ್ಲ. ಒಂದು ಬದಿಯಲ್ಲಿ ಕಾಮಗಾರಿ ಪೂರ್ಣಗೊಂಡರೆ ವಾಹನಗಳ ಸಂಚಾರಕ್ಕೆ ಆ ಭಾಗದಲ್ಲಿ ಅವಕಾಶ ಕಲ್ಪಿಸಿ ಇನ್ನೊಂದು ಭಾಗದಲ್ಲಿ ಸೇತುವೆ ನಿರ್ಮಾಣ ಆಗಬೇಕಿದೆ.

ಬಿಬಿಎಂಪಿಗೆ ಹಿಡಿಶಾಪ: ‘ಒಂದು ಭಾಗದ ಕಾಮಗಾರಿ ಮುಗಿಸಲು 16 ತಿಂಗಳು ಕಳೆದರೂ ಸಾಧ್ಯವಾಗಿಲ್ಲ. ಇದು ಪೂರ್ಣಗೊಂಡು ಇನ್ನೊಂದು ಭಾಗದ ಕಾಮಗಾರಿ ಆರಂಭಿಸಿ ಅದನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ವರ್ಷ ಬೇಕಿದೆಯೋ’ ಎಂದು ವಾಹನ ಸವಾರರು ಬಿಬಿಎಂಪಿ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

‘ತಡೆಗೋಡೆ ನಿರ್ಮಾಣ ಕಾಮಗಾರಿ ಶೇ 80ರಷ್ಟು ಪೂರ್ಣಗೊಂಡಿದೆ. ಒಂದು ಬದಿಯ ಮೋರಿ ಕಾಮಗಾರಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅ.31ರೊಳಗೆ ಅವಕಾಶ ಕಲ್ಪಿಸಲು ಸೂಚಿಸಲಾಗಿತ್ತು. ಸತತ ಮಳೆ ಸುರಿಯುತ್ತಿರುವುದರಿಂದ ಗಡುವಿನೊಳಗೆ ಕಾಮಗಾರಿ ಮುಗಿಯುವುದು ಅನುಮಾನ. ಆದರೆ, ಡಿಸೆಂಬರ್ ಅಂತ್ಯದೊಳಗೆ ಎರಡೂ ಬದಿಯ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ವಾಹನ ಸಂಚಾರಕ್ಕೆ ನಿತ್ಯ ತಿಣುಕಾಟ

ಮೈಸೂರು–ಬೆಂಗಳೂರು ರಸ್ತೆ ಎಂದರೆ ಮೊದಲೇ ವಾಹನ ದಟ್ಟಣೆಯ ರಸ್ತೆ. ಮೈಸೂರು ಕಡೆಯಿಂದ ನಗರಕ್ಕೆ ಬರುವ ಮಾರ್ಗದಲ್ಲೇ ಮೈಸೂರು ಕಡೆಗೆ ಹೋಗುವ ಮಾರ್ಗಕ್ಕೂ ಅವಕಾಶ ಕಲ್ಪಿಸಲಾಗಿದೆ. ವಾಹನ ದಟ್ಟಣೆ ಸಂದರ್ಭದಲ್ಲಿ ವಾಹನಗಳು ಗಂಟೆಗಟ್ಟಲೆ ನಿಲ್ಲಬೇಕಾದ ಸ್ಥಿತಿ ಎದುರಾಗಿದೆ.

‘ಏಕಮುಖ ರಸ್ತೆಯಲ್ಲೇ ಎರಡು ಕಡೆಯ ವಾಹನಗಳ ಸಂಚಾರ ಮಾಡಬೇಕಾದ ಇಕ್ಕಟ್ಟನ್ನು ಬಿಬಿಎಂಪಿ ವರ್ಷಗಟ್ಟಲೆಯಿಂದ ಸೃಷ್ಟಿಸಿದೆ. ಪ್ರಮುಖವಾದ ಈ ರಸ್ತೆಯಲ್ಲಿ ಕಾಮಗಾರಿಯನ್ನು ತ್ವರಿತವಾಗಿ ನಡೆಸಬೇಕು ಎಂಬ ಕನಿಷ್ಠ ಜ್ಞಾನವೂ ಪಾಲಿಕೆಗೆ ಇಲ್ಲ’ ಎಂದು ಬೈಕ್ ಸವಾರ ಸೋಮಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಇನ್ಫಿನಿಟಿ ಲರ್ನ್‌ಗೆ ರೋಹಿತ್ ಶರ್ಮ ರಾಯಭಾರಿ

ಬೆಂಗಳೂರು: ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳು ನಡೆಸುತ್ತಿರುವ ಡಿಜಿಟಲ್ ಕಲಿಕಾ ವೇದಿಕೆ ಇನ್ಫಿನಿಟಿ ಲರ್ನ್‌ಗೆ ಕ್ರಿಕೆಟ್ ಆಟಗಾರ ರೋಹಿತ್ ಶರ್ಮ ಅವರು ಬ್ರ್ಯಾಂಡ್ ರಾಯಭಾರಿಯಾಗಿ ಕೆಲಸ ಮಾಡಲಿದ್ದಾರೆ.

‘ಮಾರುಕಟ್ಟೆ ವಿಸ್ತರಣೆ ಯೋಜನೆಯ ಭಾಗವಾಗಿ ಶರ್ಮ ಅವರನ್ನು ಆಯ್ಕೆ ಮಾಡಲಾಗಿದೆ. ನಮ್ಮ ಬ್ರ್ಯಾಂಡ್ ಚಟುವಟಿಕೆಗಳು ಮತ್ತು ಬಹುಮಾಧ್ಯಮ ಮಾರುಕಟ್ಟೆ ಅಭಿಯಾನದಲ್ಲಿ ಶರ್ಮ ಅವರು ಇರಲಿದ್ದಾರೆ. ಶರ್ಮ ಜೊತೆಗಿನ ಪಾಲುದಾರಿಗೆ ಮೂಲಕ ನಾವು ನಮ್ಮ ಬ್ರ್ಯಾಂಡ್‌ಅನ್ನು ಇನ್ನಷ್ಟು ಬಲಪಡಿಸಲಿದ್ದೇವೆ’ ಎಂದು ಪ್ರಕಟಣೆ ಹೇಳಿದೆ.

ಇನ್ಫಿನಿಟಿ ಲರ್ನ್ ಮೂಲಕ ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳ ಜೊತೆ ನಂಟು ಬೆಳೆಸಿಕೊಂಡಿರುವುದಕ್ಕೆ ಸಂತಸ ಆಗುತ್ತಿದೆ ಎಂದು ಶರ್ಮ ಅವರು ಪ್ರತಿಕ್ರಿಯೆ ನೀಡಿದ್ದಾರೆ.



3 ಸಾವಿರ ಮಂದಿಗೆ ಲಸಿಕೆ ಅಭಿಯಾನ

ಬೆಂಗಳೂರು: ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಹಾಗೂ ನಾರಾಯಣ ಹೆಲ್ತ್ ಸಹಯೋಗದಲ್ಲಿ ನಿರಾಶ್ರಿತರು, ಸ್ವಚ್ಛತಾ ಕಾರ್ಮಿಕರು, ಕೂಲಿ ಕಾರ್ಮಿಕರು ಸೇರಿದಂತೆ ಮೂರು ಸಾವಿರ ಮಂದಿಗೆ ಕೋವಿಡ್ ಲಸಿಕೆ ಹಾಕುವ ಅಭಿಯಾನವನ್ನು ಜಂಬೂಸವಾರಿ ದಿಣ್ಣೆಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಕೃಷ್ಣಪ್ಪ,‘ ಬಿಜೆಪಿಗರು ಕೋವಿಡ್‌ಗೆ ಹೆದರಿ ಮನೆಯಲ್ಲಿ ಅಡಗಿ ಕೂತಿದ್ದರು. ಅಂತಹ ಸಂದರ್ಭದಲ್ಲೂ ಆರ್.ಕೆ.ರಮೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಲಸಿಕೆ ಅಭಿಯಾನದ ಮೂಲಕ ಕ್ಷೇತ್ರದ ಜನರ ನೆರವಿಗೆ ನಿಂತಿರುವುದು ಶ್ಲಾಘನೀಯ’ ಎಂದರು.

ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ‘ಅಭಿವೃದ್ಧಿ ವಂಚಿತ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರೆಯಲು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ದುರಾಡಳಿತ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಕೆಲಸ ಮಾಡಬೇಕು’ ಎಂದರು.


ರಿಲಯನ್ಸ್‌ನಿಂದ ದಸರಾ ರಿಯಾಯಿತಿ

ಬೆಂಗಳೂರು: ದಸರಾ ಸಂಭ್ರಮಾಚರಣೆಗೆ ರಿಲಯನ್ಸ್ ಡಿಜಿಟಲ್‌ನ ಎಲ್ಲ ಸ್ಟೋರ್‌ಗಳು, ಮೈ ಜಿಯೋ ಸ್ಟೋರ್‌ಗಳಲ್ಲಿ ಟಿ.ವಿ, ಫ್ರಿಡ್ಜ್, ಲ್ಯಾಪ್‌ಟಾಪ್, ಮೊಬೈಲ್ ಮತ್ತು ಗೃಹೋಪಯೋಗಿ ಉಪಕರಣಗಳ ಮೇಲೆ ಆಕರ್ಷಕ ಕೊಡುಗೆಗಳು ಮತ್ತು ರಿಯಾಯಿತಿಗಳನ್ನು ಘೋಷಿಸಿದೆ.

₹10 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳು, ಡೆಬಿಟ್ ಕಾರ್ಡ್‌ಗಳು ಮತ್ತು ಇಎಂಐ ವಹಿವಾಟುಗಳ ಮೇಲೆ ಗ್ರಾಹಕರು ₹2,500ರವರೆಗೆ ರಿಯಾಯಿತಿ ಸಿಗಲಿದೆ. ₹ 1 ಲಕ್ಷಕ್ಕಿಂತ ಹೆಚ್ಚಿನ ವಹಿವಾಟಿಗೆ ₹ 6 ಸಾವಿರ ರಿಯಾಯಿತಿ ಸಿಗಲಿದ್ದು, ಅ.21ರವರೆಗೆ ಈ ಕೊಡುಗೆ ಲಭ್ಯ. ಪೇಟಿಎಂ ಮತ್ತು ವಿವಿಧ ಡಿಜಿಟಲ್ ಪಾವತಿಯ ಮೇಲೆ ಶೇ 10ರಷ್ಟು ಕ್ಯಾಶ್‌ಬ್ಯಾಕ್ ಇರಲಿದೆ. ಸ್ಯಾಮ್‌ಸಂಗ್ ನಿಯೋ ಕ್ಯೂಎಲ್‌ಇಡಿ ಟಿ.ವಿ ಮೇಲೆ ಶೇ 20ರಷ್ಟು ಕ್ಯಾಶ್‌ಬ್ಯಾಕ್ ಜೊತೆಗೆ ₹37,400 ಮೌಲ್ಯದ ಸೌಂಡ್‌ಬಾರ್ ಅನ್ನು ಉಚಿತವಾಗಿ ಪಡೆಯಬಹುದು.

ವಿವಿಧ ಎಲೆಕ್ಟ್ರಾನಿಕ್ ವಸ್ತುಗಳ ಮೇಲೆ ಭಾರಿ ರಿಯಾಯಿತಿ, ಕೊಡುಗೆ ನೀಡಲಾಗಿದ್ದು, www.reliancedigital.in ಮೂಲಕವೂ ಕೊಡುಗೆ ಪಡೆಯಬಹುದೆಂದು ಪ್ರಕಟಣೆ ಹೇಳಿದೆ.

ನಗರದಲ್ಲಿ ಇಂದು




ಡಿ.ವಿ. ಗುಂಡಪ್ಪ

ಡಿವಿಜಿ ಸಾಹಿತ್ಯ ಸಂಭ್ರಮ–ಮತ್ತೆ! ಮತ್ತೆ!: ಡಿ.ವಿ. ಗುಂಡಪ್ಪ ಅವರ 19 ಪುಸ್ತಕಗಳು, ಎ.ನರಸಿಂಹ ಭಟ್ ಅವರ ‘ಮಂಕುತಿಮ್ಮನ ಕಗ್ಗ–ಅರ್ಥಾನುಸಂಧಾನ’ ಹಾಗೂ ದಿ.ಕೊರ್ಗಿ ವೆಂಕಟೇಶ್ವರ ಉಪಾಧ್ಯಾಯ ಅವರ ನಾಲ್ಕು ಪುಸ್ತಕಗಳ ಬಿಡುಗಡೆ:ಎಸ್.ಆರ್.ರಾಮಸ್ವಾಮಿ, ಅತಿಥಿಗಳು–ಶತಾವಧಾನಿ ಆರ್. ಗಣೇಶ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಆಯೋಜನೆ, ಸ್ಥಳ–ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ವಜ್ರದ ಆಭರಣಗಳ ಪ್ರದರ್ಶನ: ಆಯೋಜನೆ–ಎನ್.ಕೆ.ಡೈಮಂಡ್ ಜೆವೆಲ್ಲರಿ, ಸ್ಥಳ–ಐಟಿಸಿ ಗಾರ್ಡೆನಿಯಾ, ರೆಸಿಡೆನ್ಸಿ ರಸ್ತೆ (ಬೆಳಿಗ್ಗೆ 10ರಿಂದ ಸಂಜೆ 7)

ಸಾಂಸ್ಕೃತಿಕ ಸಿರಿ ಸಿಂಚನ: ಅತಿಥಿಗಳು–ಫಣಿವೇಣಿ ಸೀತಾರಾಮು, ಸ್ವಪ್ನಾ, ಎನ್. ರಾಘವೇಂದ್ರ, ಪಿ.ಎಂ.ವೇದಾವತಿ, ಆಯೋಜನೆ–ಪುಣ್ಯಕೋಟಿ ಕಲಾಕೇಂದ್ರ ಟ್ರಸ್ಟ್, ಸ್ಥಳ–ಸ್ವಾಮಿ ವಿವೇಕಾನಂದ ಸಭಾ ಭವನ, ಹನುಮಂತ ನಗರ, ಮಧ್ಯಾಹ್ನ 2.30

‘ಬನ್ನಿ ಬಂಗಾರ’ ಹಾಗೂ ಉತ್ತರ ಕರ್ನಾಟಕ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಗಮೇಶ ಬಾದವಾಡಗಿ ಅವರ ‘ರೊಟ್ಟಿ ಪಂಚಮಿ’ ಪುಸ್ತಕ ಬಿಡುಗಡೆ–ಚಂದ್ರಶೇಖರ ಕಂಬಾರ, ಅತಿಥಿಗಳು–ಬಸವರಾಜ ಹೊರಟ್ಟಿ, ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ, ಶಂಕರ ಪಾಟೀಲ ಮುನೇನಕೊಪ್ಪ, ಎಂ.ಬಿ.ಪಾಟೀಲ, ಎಸ್.ಆರ್.ವಿಶ್ವನಾಥ್, ಆಯೋಜನೆ–ಉತ್ತರ ಕರ್ನಾಟಕ ನಾಗರಿಕ ಅಭಿವೃದ್ಧಿ ಸಂಘ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4



ಚಂದ್ರಶೇಖರ ಕಂಬಾರ

ಹನುಮಂತನ ಶ್ರದ್ಧಾಭಕ್ತಿ ಪೌರಾಣಿಕ ನಾಟಕ ಪ್ರದರ್ಶನ: ಅತಿಥಿಗಳು–ಎಚ್.ವಿ. ಶಂಕರ್, ಎಸ್.ರಾಜೇಂದ್ರ ಬಾಬು, ಕೆ.ಜಿ.ಗಿರೀಶ್, ನರಸಿಂಹ ರಾ.ಹೆಗಡೆ, ಚಂದ್ರಶೇಖರ್, ಆಯೋಜನೆ–ರಂಗ ಸಮಾಜ, ಸ್ಥಳ–ಸ್ವಾಮಿ ವಿವೇಕಾನಂದ ಸಭಾಭವನ, ಹನುಮಂತ ನಗರ, ಸಂಜೆ 4.30

‘ಮಾರ್ಗದರ್ಶಿ’ ತಂತ್ರಾಂಶ ಬಿಡುಗಡೆ ಹಾಗೂ ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ: ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಸಿ. ನಾಗೇಶ್, ಪಿ.ರವಿಕುಮಾರ್, ಅಧ್ಯಕ್ಷತೆ–ಸಿ.ಎಸ್.ಕೇದಾರ್, ಆಯೋಜನೆ–ಇಂಡಿಯಾ ಫಾರ್ ಐಎಎಸ್, ಸ್ಥಳ–ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಸಂಜೆ 5

ಆತಂಕ ಬಗೆಹರಿದಿದೆ: ನವಜೋತ್ ಸಿಧು

ನವದೆಹಲಿ: ತಮ್ಮ ಆತಂಕಗಳನ್ನೆಲ್ಲ ಬಗೆಹರಿಸಲಾಗಿದ್ದು, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ತಾವು ಮುಂದುವರಿಯುವುದಾಗಿ ನವಜೋತ್ ಸಿಂಗ್ ಸಿಧು ಹೇಳಿದ್ದಾರೆ.

ಶುಕ್ರವಾರ ಇಲ್ಲಿ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರೊಂದಿಗೆ ಅರ್ಧ ಗಂಟೆಯ ಕಾಲ ಮಾತುಕತೆ ನಡೆಸಿದ ಬಳಿಕ ಅವರು ಈ ವಿಷಯ ಪ್ರಕಟಿಸಿದರು.

ಪ್ರಿನ್ಸ್ ಜುವೆಲರಿಯಲ್ಲಿ ರಿಯಾಯಿತಿ

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿ ಪ್ರಿನ್ಸ್ ಜುವೆಲರಿಯಲ್ಲಿ ಮದುಮಗಳಿಗೆ ಹೊಸ ಆಭರಣಗಳ ಸಂಗ್ರಹವನ್ನು ಹಬ್ಬಗಳ ಋತುವಿನಲ್ಲಿ ಸಿದ್ಧಪಡಿಸಲಾಗಿದೆ.

ಹಬ್ಬಗಳ ಸಂದರ್ಭದಲ್ಲಿ ಮುಹೂರ್ತಂ ಹೆಸರಿನಲ್ಲಿ ಆಭರಣಗಳ ಸಂಗ್ರಹವನ್ನು ಕಂಪನಿ ಬಿಡುಗಡೆ ಮಾಡಿದೆ.

ಇದರಲ್ಲಿ ಚಿನ್ನ ಹಾಗೂ ವಜ್ರದ ಆಭರಣಗಳು ಇವೆ. ಸಾಂಪ್ರದಾಯಿಕ ನೆಕ್‌ಲೇಸ್‌ಗಳು, ಬಳೆಗಳು, ಕಿವಿಯೋಲೆಗಳು ಸೇರಿದಂತೆ ಹಲವು ಆಭರಣಗಳು ಈ ಸಂಗ್ರಹದಲ್ಲಿ ಇವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ದೀಪಾವಳಿ ಹಬ್ಬದ ಕೊಡುಗೆಯಾಗಿ ಕಂಪನಿಯು ವೇಸ್ಟೇಜ್ ಮೇಲೆ ಶೇಕಡ 30ರಷ್ಟು ರಿಯಾಯಿತಿ ಘೋಷಿಸಿದೆ.

ಚಿನ್ನಾಭರಣ ಖರೀದಿ ವೇಳೆ ಪ್ರತಿ ಗ್ರಾಂಗೆ ₹ 350ರವರೆಗೆ ಉಳಿತಾಯ ಮಾಡಲು ಅವಕಾಶ ಇದೆ,

ವಜ್ರದ ಆಭರಣಗಳಿಗೆ ಪ್ರತಿ ಕ್ಯಾರಟ್ ಮೇಲೆ ಶೇಕಡ 15ರಷ್ಟು ರಿಯಾಯಿತಿ ಇದೆ.

ವಿಕ್ಟೋರಿಯಾ ಆಸ್ಪತ್ರೆ: ತುರ್ತು ಚಿಕಿತ್ಸೆಗಾಗಿ ರೋಗಿಗಳ ಪರದಾಟ–ಸಾರ್ವಜನಿಕರ ಆಕ್ರೋಶ

ಟ್ರಾಮಾ ಕೇರ್: ಒಂದೇ ಹಾಸಿಗೆಯಲ್ಲಿ ಇಬ್ಬರಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಟ್ರಾಮಾ ಕೇರ್ ಕೇಂದ್ರದ ತುರ್ತು ಚಿಕಿತ್ಸೆ ವಿಭಾಗದಲ್ಲಿ ಹಾಸಿಗೆಗಳ ಕೊರತೆಯಿಂದ ಒಂದೇ ಹಾಸಿಗೆಯಲ್ಲಿ ಇಬ್ಬರು ರೋಗಿಗಳಿಗೆ ಚಿಕಿತ್ಸೆ ನೀಡಿದ ಘಟನೆ ಶುಕ್ರವಾರ ನಡೆದಿದೆ.

ಆಸ್ಪತ್ರೆಗೆ ಭೇಟಿ ನೀಡಿದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆ.ಆರ್.ಎಸ್) ಮುಖಂಡರು, ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವಂತೆ ಆಗ್ರಹಿಸಿದರು. ವೈದ್ಯರು ಹಾಗೂ ಸಿಬ್ಬಂದಿ ಸೂಕ್ತವಾಗಿ ಚಿಕಿತ್ಸೆ ನೀಡುತ್ತಿಲ್ಲ ಎಂದು ರೋಗಿಗಳ ಸಂಬಂಧಿಗಳು ಈ ವೇಳೆ ಆರೋಪಿಸಿದರು. ವಿಜಯದಶಮಿ ಹಬ್ಬದಿಂದಾಗಿ ಕೆಲ ವೈದ್ಯರು ಹಾಗೂ ಸಿಬ್ಬಂದಿ ಗೈರಾಗಿದ್ದರು. ಇದರಿಂದಾಗಿ ರೋಗಿಗಳು ದಾಖಲಾತಿಗಾಗಿ ಆಸ್ಪತ್ರೆಯ ಹೊರಗಡೆಯೇ ಕೆಲವು ಸಮಯ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಸ್ಪತ್ರೆಯ 80 ಐಸಿಯು ಹಾಸಿಗೆಗಳು ಭರ್ತಿಯಾಗಿದ್ದವು.

ಆಸ್ಪತ್ರೆಯ ವ್ಯವಸ್ಥೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಕೆ.ಆರ್.ಎಸ್ ಪಕ್ಷದ ಮುಖಂಡರು, ಅಲ್ಲಿನ ವ್ಯವಸ್ಥೆಯನ್ನು ಸಾಮಾಜಿಕ ಜಾಲತಾಣದ ಮೂಲಕ ನೇರ ಪ್ರಸಾರ ಮಾಡಿದರು. ಸ್ಥಳದಲ್ಲಿದ್ದ ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇದರಿಂದಾಗಿ ಕೆಲ ಕಾಲ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿದರು.

ರೋಗಿಗಳ ನರಳಾಟ: ಆಸ್ಪತ್ರೆಯ ವಾರ್ಡ್‌ಗಳು ಹಾಗೂ ಆವರಣದಲ್ಲಿ ರೋಗಿಗಳು ನರಳಾಡುವ ದೃಶ್ಯ ಸಾಮಾನ್ಯವಾಗಿತ್ತು. ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ವಿವಿಧೆಡೆಯಿಂದ ಬಂದ ಕೆಲ ರೋಗಿಗಳು ಐಸಿಯು ಹಾಸಿಗೆ ಸಿಗದೆಯೇ ಬೇರೆಡೆಗೆ ತೆರಳಿದರು. ದ್ರವ ರೂಪದ ಗ್ಲೂಕೋಸ್ ಬಾಟಲು ಸಂಪರ್ಕ ಹೊಂದಿದ್ದ ರೋಗಿಯೊಬ್ಬರು ಚಿಕಿತ್ಸೆಗೆ ಬೇರೆಡೆಗೆ ಕರೆದೊಯ್ಯುವಂತೆ ಆಸ್ಪತ್ರೆಯ ಆವರಣದಲ್ಲಿಯೇ ಗೋಗರೆಯುತ್ತಿದ್ದರು. ಆಸ್ಪತ್ರೆಯಲ್ಲಿ ರೋಗಿಗಳನ್ನು ಕರೆದೊಯ್ಯಲು ಬೇಕಾದ ಗಾಲಿ ಕುರ್ಚಿ ಹಾಗೂ ಸ್ಟ್ರೆಚರ್‌ಗಳೂ ಅಗತ್ಯ ಪ್ರಮಾಣದಲ್ಲಿ ಇರಲಿಲ್ಲ.

‘ಗಾಲಿ ಕುರ್ಚಿ, ಸ್ಟ್ರೆಚರ್ ಆಸ್ಪತ್ರೆಯಲ್ಲಿ ಇಲ್ಲ ಎಂದು ರೋಗಿಯೊಬ್ಬರು ಕರೆ ಮಾಡಿ, ಅಳಲು ತೋಡಿಕೊಂಡರು. ಹೀಗಾಗಿ, ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಲಾಯಿತು. ಅಲ್ಲಿನ 80 ಐಸಿಯು ಹಾಸಿಗೆಗಳೂ ಭರ್ತಿಯಾಗಿದ್ದವು. ಶವ ಇರುವ ಹಾಸಿಗೆಯಲ್ಲಿಯೇ ರೋಗಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಮೂರು ಗಂಟೆ ಅವಧಿಯಲ್ಲಿ ಐವರು ಮೃತಪಟ್ಟರು’ ಎಂದು ಕೆ.ಆರ್.ಎಸ್. ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ರಘು ಜಾಣಗೆರೆ ಬೇಸರ ವ್ಯಕ್ತಪಡಿಸಿದರು.

‘ಇರುವ ವ್ಯವಸ್ಥೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹಾಸಿಗೆಗಳು ಭರ್ತಿಯಾಗಿದ್ದರಿಂದ ಸ್ವಲ್ಪ ಸಮಸ್ಯೆಯಾಗಿತ್ತು. ರೋಗಿಗಳನ್ನು ಬೇರೆ ಸರ್ಕಾರಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗಿದೆ. ಒಂದೇ ಹಾಸಿಗೆಯಲ್ಲಿ ಶವ ಮತ್ತು ರೋಗಿಯನ್ನು ಇರಿಸಿಲ್ಲ’ ಎಂದು ಆಸ್ಪತ್ರೆಯ ವೈದ್ಯಾಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

‘ಈ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ’ ಎಂದು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ಸಿ. ಆರ್. ಜಯಂತಿ ತಿಳಿಸಿದರು.

ಮಳೆಯಲ್ಲಿಯೇ ರೋಗಿಗಳ ಸಾಗಾಟ

ರೋಗಿಗಳನ್ನು ಕರೆದೊಯ್ಯಲು ನಿರ್ಮಿಸಲಾಗಿರುವ ಪಥಕ್ಕೆ ಚಾವಣಿ ನಿರ್ಮಿಸಿಲ್ಲ. ಇದರಿಂದಾಗಿ ಗಾಲಿ ಕುರ್ಚಿ ಹಾಗೂ ಸ್ಟ್ರೆಚರ್ ಮೂಲಕ ಮಳೆಯಲ್ಲಿಯೇ ರೋಗಿಯನ್ನು ಸಿಬ್ಬಂದಿ ಕರೆದೊಯ್ದರು. ಆಂಬುಲೆನ್ಸ್‌ಗಳಲ್ಲಿ ಕರೆತರಲಾದ ರೋಗಿಗಳನ್ನೂ ಮಳೆಯ ನಡುವೆಯೇ ಆಸ್ಪತ್ರೆಗೆ ಸಾಗಿಸಲಾಯಿತು.

‘ಈ ರೀತಿ ಅವ್ಯವಸ್ಥೆಯಿಂದಲೇ ಸರ್ಕಾರಿ ಆಸ್ಪತ್ರೆಗಳು ಜನರಿಂದ ದೂರವಾಗುತ್ತಿವೆ. ಗಾಯಗೊಂಡವರಿಗೆ ಹಾಗೂ ಹೃದಯಾಘಾತವಾದವರಿಗೆ ನಿಗದಿತ ಅವಧಿಯೊಳಗೆ ಚಿಕಿತ್ಸೆ ನೀಡಿದಲ್ಲಿ ಮಾತ್ರ ಉಳಿಸಿಕೊಳ್ಳಲು ಸಾಧ್ಯ. ಸಾವು–ಬದುಕಿನ ನಡುವೆ ಹೋರಾಡುತ್ತಿರುವವರ ಜೀವ ಉಳಿಸುವ ಬದಲು, ಜೀವ ತೆಗೆಯುತ್ತಿರುವುದು ವಿಪರ್ಯಾಸ’ ಎಂದು ಕೆ.ಆರ್.ಎಸ್. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಚಿನ್ನಾಭರಣ ಮೇಳಕ್ಕೆ ನಟಿ ಪ್ರಿಯಾಂಕ ಉಪೇಂದ್ರ ಚಾಲನೆ

ಬೆಂಗಳೂರು: ಜ್ಯುವೆಲ್ಸ್ ಆಫ್ ಇಂಡಿಯಾ ವತಿಯಿಂದ ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಆಯೋಜಿಸಿರುವ ಆಭರಣಗಳ ಮಾರಾಟ ಮತ್ತು ಪ್ರದರ್ಶನ ಮೇಳವನ್ನು ನಟಿ ಪ್ರಿಯಾಂಕ ಉಪೇಂದ್ರ ಶುಕ್ರವಾರ ಉದ್ಘಾಟಿಸಿದರು.

ಅ.18ರವರೆಗೆ ನಡೆಯಲಿರುವ ಚಿನ್ನಾಭರಣ ಮೇಳದಲ್ಲಿ ಭಾರತದ ಅತ್ಯಂತ ಪುರಾತನ ಹಾಗೂ ವಿವಿಧ ವಿನ್ಯಾಸಗಳ ಅಪರೂಪದ ಚಿನ್ನಾಭರಣಗಳನ್ನು ಪ್ರದರ್ಶಿಸಲಾಗುತ್ತಿದೆ.

‘ದಸರಾ ಸಂದರ್ಭದಲ್ಲಿ ದೇಶದ ಎಲ್ಲ ಅತ್ಯುತ್ತಮ ಆಭರಣಗಳು ಒಂದೇ ಸೂರಿನಡಿ ಪ್ರದರ್ಶನವಾಗುತ್ತಿವೆ. ಚಿನ್ನಾಭರಣ ಖರೀದಿಗೆ ಈ ಮೇಳ ಅತ್ಯುತ್ತಮ ಸಮಯ. ವಿನೂತನ ಹಾಗೂ ಆಕರ್ಷಕ ಆಭರಣ ಮೇಳದಲ್ಲಿ ಬೆಂಗಳೂರಿನ ಮಹಿಳೆಯರಷ್ಟೇ ಅಲ್ಲದೆ, ರಾಜ್ಯದ ಎಲ್ಲರೂ ಭಾಗವಹಿಸಬೇಕು’ ಎಂದು ಪ್ರಿಯಾಂಕ ಉಪೇಂದ್ರ ಹೇಳಿದರು.

ಮೇಳದ ಸಂಚಾಲಕ ಸಂದೀಪ್ ಬೇಕಲ್,‘ಎಲ್ಲ ಅಭಿರುಚಿಯ ಹಾಗೂ ಎಲ್ಲ ವರ್ಗದವರ ದರಗಳಿಗೆ ಹೊಂದಿಕೊಳ್ಳುವ ಆಭರಣಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗುತ್ತಿದೆ’ ಎಂದರು.



ಮೇಳವನ್ನು ನಟಿ ಪ್ರಿಯಾಂಕ ಉಪೇಂದ್ರ ಉದ್ಘಾಟಿಸಿದರು. ರೂಪದರ್ಶಿಯರು ಇದ್ದಾರೆ.

ನಿಗದಿಯಂತೆ ಶಾಲೆ ಆರಂಭಕ್ಕೆ ಎನ್‌ಸಿಇಇ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಹಿಂದೆ ಘೋಷಿಸಿರುವಂತೆ ಅಕ್ಟೋಬರ್ 21ರಿಂದ ಕಿರಿಯ ಪ್ರಾಥಮಿಕ ಶಾಲೆಗಳ ತರಗತಿ ಆರಂಭಿಸಬೇಕು ಎಂದು ಶಿಕ್ಷಣ ತುರ್ತು ಪರಿಸ್ಥಿತಿಗಾಗಿ ರಾಷ್ಟ್ರೀಯ ಒಕ್ಕೂಟ (ಎನ್‌ಸಿಇಇ) ಆಗ್ರಹಿಸಿದೆ.

‘ಅ.21ರಿಂದ ಕಿರಿಯ ಪ್ರಾಥಮಿಕ ಶಾಲೆಗಳ ತರಗತಿ ಆರಂಭಿಸುವುದಾಗಿ ಸಚಿವರು ಘೋಷಿಸಿದ್ದರು. ಈಗ, ಪುನಃ ತರಗತಿ ಆರಂಭದ ಕುರಿತು ಪೋಷಕರ ಜತೆ ಚರ್ಚಿಸುವುದಾಗಿ ಹೇಳಿರುವುದು ನಿರಾಶಾದಾಯಕ ಬೆಳವಣಿಗೆ. ಸರ್ಕಾರ ಇನ್ನು ವಿಳಂಬ ಮಾಡಬಾರದು. ನಿಗದಿಯಂತೆಯೇ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೂ ತರಗತಿ ಆರಂಭಿಸಬೇಕು’ ಎಂದು ಒಕ್ಕೂಟದ ಸದಸ್ಯರಾದ ಶಿಕ್ಷಣ ತಜ್ಞ ಡಾ.ವಿ.ಪಿ. ನಿರಂಜನಾರಾಧ್ಯ ಮತ್ತು ಗುರುಮೂರ್ತಿ ಕಾಶಿನಾಥನ್ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಶಾಲೆಗಳ ಆರಂಭ ವಿಳಂಬದಿಂದ ಮಕ್ಕಳಲ್ಲಿ ಅಪೌಷ್ಟಿಕತೆ, ಶೈಕ್ಷಣಿಕ ಮತ್ತು ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಿದೆ. ಕೋವಿಡ್‌ನಿಂದ ಮಕ್ಕಳಿಗೆ ತೊಂದರೆಯಾಗದು ಎಂಬ ಪುರಾವೆಗಳು ಇವೆ. ತಕ್ಷಣ ಮಧ್ಯಾಹ್ನದ ಬಿಸಿಯೂಟದೊಂದಿಗೆ ತರಗತಿಗಳನ್ನು ಆರಂಭಿಸಬೇಕು. ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಬಯಸುವ ಪೋಷಕರಿಗೆ ಪ್ರೋತ್ಸಾಹ ನೀಡಬೇಕು. ಕಳುಹಿಸಲು ಇಚ್ಛಿಸದವರಿಗೆ ಬಲವಂತ ಮಾಡಬಾರದು ಎಂದು ಸಲಹೆ ನೀಡಿದ್ದಾರೆ.

ಶಾಲೆಗಳ ಪುನರಾರಂಭ ಪ್ರಕ್ರಿಯೆಯಲ್ಲಿ ಪೋಷಕರನ್ನೂ ತೊಡಗಿಸಿಕೊಳ್ಳಬೇಕು. ಮಕ್ಕಳಿಗೆ ಹೆಚ್ಚು ಪೋಷಕಾಂಶಗಳಿರುವ ಆಹಾರ ನೀಡಬೇಕು. ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು. ಶಾಲೆಯನ್ನು ತೆರೆಯುವ ವಿಚಾರದಲ್ಲಿ ವಿಳಂಬಕ್ಕೆ ಸಕಾರಣಗಳಿಲ್ಲ. ವಿಳಂಬದಿಂದ ಮಕ್ಕಳ ಬದುಕಿಗೆ ಹಾನಿಯಾಗುತ್ತದೆ. ಈ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದ್ದಾರೆ.

ಸಿಎಂ ಹೇಳಿಕೆ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ಮತೀಯ ಗೂಂಡಾಗಿರಿಯನ್ನು ಬೆಂಬಲಿಸಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಯುವ ಕಾಂಗ್ರೆಸ್ ಕಾರ್ಯಕರ್ತರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಕ್ಷಾ ರಾಮಯ್ಯ ನೇತೃತ್ವದಲ್ಲಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು. ಮುಖ್ಯಮಂತ್ರಿಯವರ ಪ್ರತಿಕೃತಿ ದಹಿಸಿದ ಯುವ ಕಾಂಗ್ರೆಸ್ ಸದಸ್ಯರು, ಆಕ್ರೋಶ ವ್ಯಕ್ತಪಡಿಸಿದರು.

‘ಬೊಮ್ಮಾಯಿ ಅವರು ಕೇವಲ ಸಂಘ ಪರಿವಾರದ ಮುಖ್ಯಮಂತ್ರಿ ಎಂಬಂತೆ ಹೇಳಿಕೆ ನೀಡಿದ್ದಾರೆ. ಇದರ ಪರಿಣಾಮವಾಗಿ ರಾಜ್ಯದಲ್ಲಿ ಮತೀಯ ಗೂಂಡಾಗಿರಿ ಹೆಚ್ಚುವ ಅಪಾಯವಿದೆ. ಸಂವಿಧಾನಬದ್ಧವಾಗಿ ಸರ್ಕಾರ ನಡೆಸಬೇಕಾದವರು ಹಾದಿ, ಬೀದಿಯಲ್ಲಿ ಧರ್ಮ ಬೋಧನೆ ಮಾಡುವುದು ಖಂಡನೀಯ’ ಎಂದು ರಕ್ಷಾ ರಾಮಯ್ಯ ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷೆ ಭವ್ಯಾ, ಪ್ರಧಾನ ಕಾರ್ಯದರ್ಶಿ ಆನಂದ್, ಜವಾಹರ್ ಬಾಲ್ ಮಂಚ್ ಅಧ್ಯಕ್ಷ ಸಿರಿಲ್ ಪ್ರಭು, ಕಾರ್ಯದರ್ಶಿ ಮಾನ್ನಾ ಮನ್ನಾರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಾಲಿವುಡ್ ನಟಿ ಫರೂಖ ನಿಧನ

ಲಖನೌ (ಪಿಟಿಐ): ಬಾಲಿವುಡ್‌ನ ಹೆಸರಾಂತ ನಟಿ ಫರೂಖ ಜಾಫರ್ (88) ಅವರು ಮಿದುಳಿನ ಪಾರ್ಶವಾಯುವಿನಿಂದ ಶುಕ್ರವಾರ ನಿಧನರಾದರು ಎಂದು ಅವರ ಮೊಮ್ಮಗ ಶಾಜ್ ಅಹಮ್ಮದ್ ಅವರು ತಿಳಿಸಿದ್ದಾರೆ.

1981ರಲ್ಲಿ ‘ಉಮ್‌ರಹೋ ಜಾನ್’ ಚಲನಚಿತ್ರದ ಮೂಲಕ ಫರೂಖ ಅವರು ಬಾಲಿವುಡ್‌ಗೆ ಕಾಲಿರಿಸಿದ್ದರು. ಆ ಚಿತ್ರದಲ್ಲಿ ರೇಖಾ ಅವರ ತಾಯಿಯ ಪಾತ್ರ ನಿರ್ವಹಿಸಿದ್ದರು.

‘ಪೀಪ್ಲಿ ಲೈವ್’, ‘ಸ್ವದೇಶ್’, ‘ಸುಲ್ತಾನ್’, ‘ಬುಲಾಬೋ ಸಿತಾಬೋ’ ಮೊದಲಾದ ಸಿನಿಮಾಗಳಲ್ಲೂ ನಟಿಸಿದ್ದರು.

ಅವರು ಉತ್ತರ ಪ್ರದೇಶ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಎಸ್. ಎಂ.ಜಾಫರ್ ಅವರನ್ನು ವಿವಾಹವಾಗಿದ್ದರು.

10, 12ನೇ ತರಗತಿ ಪರೀಕ್ಷೆ: 18ರಂದು ವೇಳಾಪಟ್ಟಿ ಪ್ರಕಟ

ನವದೆಹಲಿ: 10 ಮತ್ತು 12ನೇ ತರಗತಿಯ ಮೊದಲ ಅವಧಿಯ ಬೋರ್ಡ್ ಪರೀಕ್ಷೆಗಳನ್ನು ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಆಫ್‌ಲೈನ್‌ನಲ್ಲಿ ನಡೆಸಲಾಗುವುದು ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಗುರುವಾರ ತಿಳಿಸಿದೆ.

ವೇಳಾಪಟ್ಟಿಯನ್ನು ಇದೇ 18ರಂದು ಪ್ರಕಟಿಸಲಾಗುವುದು ಎಂದು ತಿಳಿಸಲಾಗಿದೆ.

ಬಹು ಆಯ್ಕೆ ಪ್ರಶ್ನೆಗಳು ಇರಲಿವೆ. ಪರೀಕ್ಷೆಯ ಅವಧಿ 90 ನಿಮಿಷ. ಚಳಿಗಾಲದ ಕಾರಣದಿಂದ 10.30ರ ಬದಲಿಗೆ 11.30ರಿಂದ ಪರೀಕ್ಷೆ ಆರಂಭವಾಗಲಿದೆ ಎಂದು ಮಂಡಳಿ ತಿಳಿಸಿದೆ.

ಆರೋಪಗಳು ಯಾರನ್ನೂ ಬಿಟ್ಟಿಲ್ಲ: ರಾಮಲಿಂಗಾ ರೆಡ್ಡಿ

ಬೆಂಗಳೂರು: ‘ದಕ್ಷ ಹಾಗೂ ಪ್ರಾಮಾಣಿಕರಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರನ್ನೂ ಆರೋಪಗಳು ಬಿಟ್ಟಿರಲಿಲ್ಲ. ಗಾಳಿ ಮಾತಿನ ಚರ್ಚೆಗೆ ಹೆಚ್ಚು ಮಹತ್ವ ನೀಡಬಾರದು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಪಕ್ಷದ ಮುಖಂಡರಾದ ಸಲೀಂ ಮತ್ತು ವಿ.ಎಸ್. ಉಗ್ರಪ್ಪ ಮಾತನಾಡುವ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಲಂಚದ ಆರೋಪ ಮಾಡಿರುವ ಕುರಿತು ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ರಾಜಾಜಿನಗರದಲ್ಲಿರುವ ನಿವೇಶನಗಳೆಲ್ಲ ನಿಜಲಿಂಗಪ್ಪ ಅವರದ್ದು ಎಂದು ಆರೋಪ ಮಾಡುತ್ತಿದ್ದರು. ಆದರೆ, ಅವರು ಇಡೀ ಬೆಂಗಳೂರಿನಲ್ಲಿ ಒಂದು ನಿವೇಶನ ಕೂಡ ಹೊಂದಿರಲಿಲ್ಲ’ ಎಂದರು.

ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ‘ಪರ್ಸೆಂಟೇಜ್’ ವ್ಯವಹಾರ ಇರಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶೂನ್ಯ ‘ಪರ್ಸೆಂಟೇಜ್’ ಇದ್ದರೆ, ಈಗ ಬಿಜೆಪಿ ಸರ್ಕಾರದಲ್ಲಿ ಶೇಕಡ 20ಕ್ಕೇರಿದೆ. ಸಲೀಂ ಶೇಕಡ 12ರ ‘ಪರ್ಸೆಂಟೇಜ್’ ಕುರಿತು ಮಾತನಾಡಿರುವುದು ಶುದ್ಧ ಸುಳ್ಳು ಎಂದು ಹೇಳಿದರು.

ಐದು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಭಾಗಿ ● ಕೋವಿಡ್ ಮಾರ್ಗಸೂಚಿ ಪಾಲನೆ ಅತಿವಿರಳ

‘ಅರಮನೆಯೊಳಗಿನ ಜಂಬೂಸವಾರಿ’ ಸಂಪನ್ನ

● ಕೆ.ನರಸಿಂಹಮೂರ್ತಿ

ಮೈಸೂರು: ದಸರಾ ಉತ್ಸವದ ವೈಭವಯುತ ಇತಿಹಾಸದಲ್ಲಿ ನಾಲ್ಕನೇ ಬಾರಿಗೆ ಅರಮನೆಗಷ್ಟೇ ಸೀಮಿತವಾಗಿ ವಿಶ್ವವಿಖ್ಯಾತ ಜಂಬೂ ಸವಾರಿ ಶುಕ್ರವಾರ ಇಳಿಸಂಜೆಯ ಹೊನ್ನ ಕಿರಣಗಳ ಅಭಿಷೇಕದಲ್ಲಿ ಸಂಪನ್ನಗೊಂಡಿತು.

ಜಂಬೂಸವಾರಿ ವೀಕ್ಷಿಸಲು 500 ಮಂದಿಗಷ್ಟೇ ಅವಕಾಶವಿದೆ ಎಂಬ ಸರ್ಕಾರದ ಆದೇಶ ಮೀರಿ ಐದು ಸಾವಿರಕ್ಕೂ ಹೆಚ್ಚು ಜನ ನೆರೆದಿದ್ದರು. ಹಿಂದಿನ ವರ್ಷ ಇದ್ದ ಕೋವಿಡ್ ಆತಂಕ ಈಗ ಮರೆತಿದ್ದರಿಂದ ಕೋವಿಡ್ ಮಾರ್ಗ ಸೂಚಿ ಪಾಲನೆ ಅತಿವಿರಳವಾಗಿತ್ತು.

ಸಂಜೆ 4.32ಕ್ಕೆ ಅರಮನೆ ಹೊರ ಆವರಣದ ಕೋಟೆ ಆಂಜನೇಯ ಗುಡಿಯ ಮುಂದೆ ನಂದಿ ಧ್ವಜಕ್ಕೆ ಪೂಜೆ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೆರೆದ ವಾಹನದಲ್ಲಿ ಅರಮನೆ ಆವರಣಕ್ಕೆ ಬಂದರು. 4.50ಕ್ಕೆ ಆನೆಗಳ ಮೆರವಣಿಗೆ ಶುರುವಾಯಿತು.

ಕುಮ್ಕಿ ಆನೆಗಳಾಗಿ ಕಾವೇರಿ, ಚೈತ್ರ ಅಭಿಮನ್ಯುವಿಗೆ ಸಾಥ್ ನೀಡಿದವು. ಸಾಲಾನೆಗಳಾಗಿ ಧನಂಜಯ, ಗೋಪಾಲಸ್ವಾಮಿ ಮತ್ತು ಅಶ್ವತ್ಥಾಮ ಹೆಜ್ಜೆ ಹಾಕಿದವು. ಆಕರ್ಷಕವಾದ ಆರು ಸ್ತಬ್ಧ ಚಿತ್ರಗಳು, ಪೊಲೀಸ್ ಪಡೆ, ಅಶ್ವಾರೋಹಿ ಪಡೆಗಳೊಂದಿಗೆ, ಮಂಗಳವಾದ್ಯ, ವೀರಗಾಸೆ, ಕತ್ತಿ ವರಸೆ, ನಗಾರಿ, ಡೊಳ್ಳು, ಕಂಸಾಳೆ, ತಾಳಮದ್ದಲೆ, ಪಟ ಕುಣಿತ, ಗೊಂಬೆ ಕುಣಿತದ ಕಲಾವಿದರು ಮೆರವಣಿಗೆಗೆ ಮೆರುಗು ತಂದರು.

5.24ಕ್ಕೆ ಅಭಿಮನ್ಯು ಆನೆ ಹೊತ್ತಿದ್ದ 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿ ಅಲಂಕರಿಸಿ ಇಡಲಾಗಿದ್ದ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಮುಖ್ಯಮಂತ್ರಿ ಪುಷ್ಪನಮನ ಸಲ್ಲಿಸಿದರು. ನಂತರ ರಾಷ್ಟ್ರಗೀತೆ ಶುರುವಾಗಿ ಮುಗಿಯುವುದರೊಳಗೆ 21 ಸುತ್ತು ಕುಶಾಲತೋಪು ಸಿಡಿಸಲಾಯಿತು. ಆನೆಗಳು ಸೊಂಡಿಲೆತ್ತಿ ದೇವಿಗೆ ನಮಸ್ಕರಿಸಿದವು. ಎಲ್ಲರೂ ಚಾಮುಂಡೇಶ್ವರಿಗೆ ಜೈಕಾರ ಹಾಕಿದ ಬಳಿಕ ಅಂಬಾರಿಯು ಮುಂದಕ್ಕೆ ಸಾಗಿ ಬಲರಾಮ ಗೇಟ್‌ನಲ್ಲಿ ಮುಕ್ತಾಯವಾಯಿತು.

ಜಂಬೂಸವಾರಿಯನ್ನು ಅರಮನೆಯ ಹೊರಗಿನಿಂದ ವೀಕ್ಷಿಸಲು ಚಾಮರಾಜೇಂದ್ರ ವೃತ್ತದಲ್ಲೂ ಸಾವಿರಾರು ಮಂದಿ ಅಂತರ ಮರೆತು ಗುಂಪುಗೂಡಿದ್ದರು. ದೀಪಾಲಂಕಾರಕ್ಕೆಂದು ಅಳವಡಿಸಿದ್ದ ಕಂಬಗಳು, ಕಟೌಟ್‌ಗಳ ಮೇಲೂ ಅಪಾಯ ಲೆಕ್ಕಿಸದೆ ಕುಳಿತಿದ್ದರು.

ಮೆರವಣಿಗೆ: ಮೊಟ್ಟಮೊದಲ ಬಾರಿಗೆ ಬೆಳಿಗ್ಗೆಯೇ ಚಾಮುಂಡೇಶ್ವರಿ ದೇವಿ ಉತ್ಸವಮೂರ್ತಿಯ ಮೆರವಣಿಗೆಯು ಬೆಟ್ಟದಿಂದ ಅರಮನೆವರೆಗೂ ನಡೆದು ಸಾವಿರಾರು ಮಂದಿ ಕಣ್ತುಂಬಿಕೊಂಡು ಕೈ ಮುಗಿದಿದ್ದರು. ಮುಂಚಿನ ವರ್ಷಗಳಲ್ಲಿ ಉತ್ಸವಮೂರ್ತಿಯನ್ನು ವಾಹನದಲ್ಲಿಟ್ಟು ಅರಮನೆಗೆ ತರಲಾಗುತ್ತಿತ್ತು.



ಮೈಸೂರು ಅರಮನೆ ಆವರಣದಲ್ಲಿ ಶುಕ್ರವಾರ ಸಂಜೆ ಚಿನ್ನದ ಅಂಬಾರಿಯಲ್ಲಿರಿಸಲಾಗಿದ್ದ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪಾರ್ಚನೆ ಮಾಡಿದರು. ಸಚಿವ ಎಸ್‌.ಟಿ.ಸೋಮಶೇಖರ್, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ಮೇಯರ್ ಸುನಂದಾ ಪಾಲನೇತ್ರ, ನಗರ ಪೊಲೀಸ್ ಕಮಿಷನರ್ ಚಂದ್ರಗುಪ್ತ ಇದ್ದಾರೆ.– ಪ್ರಜಾವಾಣಿ ಚಿತ್ರ/ ಬಿ.ಆರ್. ಸವಿತಾ

ಮುಖ್ಯಾಂಶಗಳು

- ಅರಮನೆಯಲ್ಲಿ ನಾಲ್ಕನೇ ಬಾರಿಗೆ ಸರಳ ಜಂಬೂಸವಾರಿ
- ಕೋವಿಡ್ ಮಾರ್ಗಸೂಚಿಯನ್ನು ಲೆಕ್ಕಿಸದ ಜನ

ಕನ್ನಡ ನಾಡು ಸುಭಿಕ್ಷವಾಗಲಿ ಎಂದು ಚಾಮುಂಡಿ ತಾಯಿಯಲ್ಲಿ ಬೇಡಿಕೊಂಡಿದ್ದೇನೆ. ಮಳೆ, ಬೆಳೆ ಚೆನ್ನಾಗಿ ಬಂದು ರೈತರ ಬಾಳು ಹಸನಾಗಲಿ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ಮಂಗಳೂರಿನ ಕುದ್ರೋಳಿಯ ಗೋಕರ್ಣನಾಥ ದೇವಸ್ಥಾನದಲ್ಲಿ ವಿಜಯ ದಶಮಿಯ ಸಡಗರದಲ್ಲಿ ಪಾಲ್ಗೊಂಡ ಜನರು – ಪ್ರಜಾವಾಣಿ ಚಿತ್ರ

‘ದೀಪಾಲಂಕಾರ 9 ದಿನ ವಿಸ್ತರಣೆ’

ಮೈಸೂರು: ‘ವಿದ್ಯುತ್ ದೀಪಾಲಂಕಾರವನ್ನು ಒಂಬತ್ತು ದಿನಗಳವರೆಗೆ ವಿಸ್ತರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಜಂಬೂಸವಾರಿ ಉದ್ಘಾಟನೆಗೂ ಮುನ್ನ ಸುತ್ತೂರು ಮಠಕ್ಕೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೆಚ್ಚು ಪ್ರವಾಸಿಗರು ಬರುತ್ತಿರುವುದರಿಂದ, ಜನಪ್ರತಿನಿಧಿಗಳು ಮತ್ತು ಸ್ಥಳೀಯರು ಮನವಿ ಮಾಡಿರುವುದರಿಂದ ವಿಸ್ತರಿಸಲಾಗಿದೆ’ ಎಂದರು. ದೀಪಾಲಂಕಾರ ಶುಕ್ರವಾರಕ್ಕೆ (ಅ.15) ಕೊನೆಗೊಳ್ಳಬೇಕಿತ್ತು.

ಮಡಿಕೇರಿ: ದಶಮಂಟಪಗಳ ಮೆರವಣಿಗೆ ವೈಭವ



ಮಡಿಕೇರಿಯಲ್ಲಿ ಶುಕ್ರವಾರ ನಡೆದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಆಕರ್ಷಕ ಮಂಟಪ

ಮಡಿಕೇರಿ: ‘ಮಂಜಿನ ನಗರಿ’ಯಲ್ಲಿ ಶುಕ್ರವಾರ ರಾತ್ರಿ ವಿದ್ಯುತ್ ಬೆಳಕಿನಲ್ಲಿ ಝಗಮಗಿಸಿದ ದಶಮಂಟಪಗಳ ಮೆರವಣಿಗೆಯು ಮಧ್ಯರಾತ್ರಿವರೆಗೂ ನಡೆಯಿತು. ಕಾಲೇಜು ರಸ್ತೆಯ ಪೇಟೆ ಶ್ರೀರಾಮಮಂದಿರ ಮಂಟಪದ ಶೋಭಾಯಾತ್ರೆ ಮೊದಲು ರಾತ್ರಿ 8ಕ್ಕೆ ಆರಂಭಗೊಂಡಿತು.

ನಂತರ ಕೋಟೆ ಗಣಪತಿ, ದೇಚೂರು ಶ್ರೀರಾಮ ಮಂದಿರ, ದಂಡಿನ ಮಾರಿಯಮ್ಮ, ಚೌಡೇಶ್ವರಿ, ಕೋಟೆ ಮಾರಿಯಮ್ಮ, ಕೋದಂಡ ರಾಮಮಂದಿರ, ಕರವಲೆ ಭಗವತಿ, ಕಂಚಿ ಕಾಮಾಕ್ಷಿಯಮ್ಮ ಸಮಿತಿಯ ಮಂಟಪಗಳು ಪೌರಾಣಿಕ ಕಥೆಯನ್ನು ಪ್ರಸ್ತುತ ಪಡಿಸಿದವು. ಪ್ರಮುಖ ರಸ್ತೆಗಳಲ್ಲಿ ದೀಪಾಲಂಕಾರವು ದಸರೆಯ ಸೊಬಗನ್ನು ಹೆಚ್ಚಿಸಿತ್ತು.

ಪ್ರತಿ ವರ್ಷ ಮೈಸೂರಿನಲ್ಲಿ ಜಂಬೂಸವಾರಿ ಮುಕ್ತಾಯವಾದ ಬಳಿಕ ಪ್ರವಾಸಿಗರು ಮಡಿಕೇರಿಯಲ್ಲಿ ನಡೆಯುವ ಶೋಭಾಯಾತ್ರೆ ಕಣ್ತುಂಬಿಕೊಳ್ಳಲು ಧಾವಿಸುತ್ತಿದ್ದರು. ಆದರೆ, ಈ ವರ್ಷ ಪ್ರವಾಸಿಗರ ಸಂಖ್ಯೆ ಕಡಿಮೆಯಿತ್ತು.

ಪ್ರವಾಸಿ ತಾಣಗಳಲ್ಲಿ ಜನದಟ್ಟಣೆ ತಡೆಯಲು ಮಡಿಕೇರಿ ಸುತ್ತಮುತ್ತಲ ಪ್ರವಾಸಿ ತಾಣವನ್ನು ಜಿಲ್ಲಾಡಳಿತ ಬಂದ್ ಮಾಡಿತ್ತು. ಮಾಹಿತಿ ತಿಳಿಯದೇ ಬಂದ ಪ್ರವಾಸಿಗರು ನಿರಾಸೆ ಅನುಭವಿಸಿದರು.

ಉತ್ಸವಮೂರ್ತಿ ಮೆರವಣಿಗೆ: ಟೀಕೆ

ಮೈಸೂರು: ಅಂಬಾರಿಯಲ್ಲಿಡುವ ಮುನ್ನವೇ ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ಚಾಮುಂಡಿಬೆಟ್ಟದಿಂದ ಅರಮನೆಯವರೆಗೆ ತೆರೆದ ವಾಹನದ ಮೆರವಣಿಗೆಯಲ್ಲಿ ಕರೆತಂದ ಸರ್ಕಾರದ ತೀರ್ಮಾನ ಟೀಕೆಗೆ ಗುರಿಯಾಗಿದೆ.

‘ಕೋವಿಡ್ ಕಾರಣಕ್ಕೆ ಜಂಬೂಸವಾರಿಯನ್ನು ಮೊಟಕುಗೊಳಿಸಿದ ಸರ್ಕಾರವೇ 10. ಕಿಮೀ ವರೆಗಿನ ಮೆರವಣಿಗೆಗೆ ಅನುಮತಿ ನೀಡಿದ್ದು ದಂದ್ವ ನಿಲುವಿಗೆ ಸಾಕ್ಷಿ’ ಎಂದು ವಿದ್ವಾಂಸ ಶೆಲ್ವಪಿಳ್ಳೈ ಅಯ್ಯಂಗಾರ್ ಹೇಳಿದರು.

‘ಬನ್ನಿಮಂಟಪದವರೆಗಿನ ಜಂಬೂಸವಾರಿಯಲ್ಲಿ ಮಾತ್ರವೇ ಕೋವಿಡ್ ಬರುತ್ತದೆಯೇ’ ಎಂದು ಸಂಶೋಧಕ ನಂಜರಾಜೇ ಅರಸ್ ಪ್ರಶ್ನಿಸಿದರು.

ಉತ್ಸವಮೂರ್ತಿಯ ಮೆರವಣಿಗೆ ನಡೆಸಲು, ದಸರಾ ಉತ್ಸವ ಸಮಿತಿಯಲ್ಲಿ ಶಾಸಕ ಎಸ್.ಎ.ರಾಮದಾಸ್ ಒತ್ತಾಯಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಮೂರು ಮನೆ ಆಗಲಿದೆ ಕಾಂಗ್ರೆಸ್

ಚಿತ್ರದುರ್ಗ: ಕಾಂಗ್ರೆಸ್ ಮುಗಿಸಲು ಇತರ ಪಕ್ಷಗಳು ಬೇಕಿಲ್ಲ. ಆ ಪಕ್ಷದ ಆಂತರಿಕ ಬೇಗುದಿ ನಿರ್ಣಾಯಕ ಹಂತ ತಲುಪಿದೆ. ಕಾಂಗ್ರೆಸ್ ಶೀಘ್ರವೇ ಒಡೆದು ಮೂರು ಮನೆ ಆಗಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಇಲ್ಲಿಯ ಮುರುಘಾಮಠದಲ್ಲಿ ನಡೆಯುತ್ತಿರುವ ಶರಣ ಸಂಸ್ಕೃತಿ ಉತ್ಸವದಲ್ಲಿ ಗುರುವಾರ ಭಾಗಿಯಾಗಿದ್ದ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

‘ಕಾಂಗ್ರೆಸ್ ಕೆಲವು ರಾಜ್ಯಗಳಲ್ಲಿ ಮಾತ್ರ ಅವಶೇಷಗಳ ಮಾದರಿಯಲ್ಲಿ ಉಳಿದುಕೊಂಡಿದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ತಿರುಕನ ಕನಸು ಕಾಣುತ್ತಿದೆ. ಏಷ್ಟೇ ಅಬ್ಬರಿಸಿದರೂ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ನಿಶ್ಚಿತ’ ಎಂದು ಹೇಳಿದರು.



‘ಗುತ್ತಿಗೆದಾರರ ಮೇಲೆ ನಡೆದ ದಾಳಿಗೂ ಬಿ.ಎಸ್. ಯಡಿಯೂರಪ್ಪ ಅವರಿಗೂ ಯಾವುದೇ ಸಂಬಂಧವಿಲ್ಲ. ಸಿದ್ದರಾಮಯ್ಯ ಹಾಗೂ ಬಿ.ಎಸ್. ಯಡಿಯೂರಪ್ಪ ಭೇಟಿಯಾಗಿದ್ದಾರೆ ಎಂಬ ಎಚ್.ಡಿ.ಕುಮಾರಸ್ವಾಮಿ ಅವರ ಆರೋಪದಲ್ಲಿ ಹುರುಳಿಲ್ಲ. ಇದೊಂದು ರಾಜಕೀಯ ಪ್ರೇರಿತ ಹೇಳಿಕೆ. ಶುದ್ಧ ಸುಳ್ಳು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ವಿಜಯೇಂದ್ರ–ಡಿಕೆಶಿ ಮಾತುಕತೆ: ಮುರುಘಾ ಮಠದ ಯುವ ಮೇಳದ ವೇದಿಕೆಯ ಮೇಲೆ ಅಕ್ಕ–ಪಕ್ಕ ಕುಳಿತಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಪ್ತವಾಗಿ ಮಾತುಕತೆ ನಡೆಸಿದರು.

ಸಮಾರಂಭವನ್ನು ಉದ್ದೇಶಿಸಿ ಗಣ್ಯರು ಮಾತನಾಡುತ್ತಿರುವ ಸಂದರ್ಭದಲ್ಲಿ ಇಬ್ಬರು ನಾಯಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಆಪ್ತವಾಗಿ ನಡೆದ ಈ ಮಾತುಕತೆ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿತು.

ವದಂತಿ, ಆರೋಪಗಳಿಗೆ ತಲೆ ಕೆಡಿಸಿಕೊಳ್ಳಬೇಡಿ: ಡಿಕೆಶಿ

ಹಿರಿಯೂರು: ‘ವದಂತಿ, ಆರೋಪಗಳಿಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಅವನ್ನೆಲ್ಲ ಹೇಗೆ ಎದುರಿಸಬೇಕೆಂಬ ಶಕ್ತಿಯನ್ನು ಭಗವಂತ ಕೊಟ್ಟಿದ್ದಾನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಗುರುವಾರ ನಗರದ ಬೈಪಾಸ್ ರಸ್ತೆಯಲ್ಲಿ ತಮ್ಮನ್ನು ಭೇಟಿಯಾಗಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

‘ವಿರೋಧಿಸುವವರು ಬೇರೆ ಪಕ್ಷಗಳಲ್ಲೂ ಇರಬಹುದು. ನಮ್ಮಲ್ಲೂ ಇರಬಹುದು. ನಮಗೆ ವ್ಯಕ್ತಿಗಿಂತ ಪಕ್ಷ ಮುಖ್ಯವಾಗಬೇಕು. ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ಎಲ್ಲ ಆರೋಪಗಳಿಗೆ ತಕ್ಕ ಉತ್ತರ ಕೊಡೋಣ. ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ಶೀಘ್ರದಲ್ಲಿಯೇ ಚುನಾವಣೆ ನಡೆಯಲಿದೆ. ತದನಂತರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯಲಿದೆ. ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಪಕ್ಷದ ಅಧಿಕಾರ ಸ್ಥಾಪಿಸುವತ್ತ ಹೆಚ್ಚಿನ ಗಮನ ಕೊಡಿ’ ಎಂದು ಸಲಹೆ ನೀಡಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	117.85	9,748	4,959
ಹಾರಂಗಿ	2,859	2,858.48	1,454	1,500
ಕಬಿನಿ	2284.00	2,279.81	2,300	2,000
ಹೇಮಾವತಿ	2,922	2,911.48	3,198	4,123
ಲಿಂಗನಮಕ್ಕಿ	1,819	1,815.70	2,101	-
ಸೂಪಾ (ಮೀ)	564	557.03	1,975	3,760
ಮಾಣಿ	594	587.46	803	-
ತುಂಗಭದ್ರಾ	1,633	1,632.99	38,546	38,246
ಮಲಪ್ರಭಾ	2079.5	2,079.50	1,794	1,794
ಘಟಪ್ರಭಾ	2175	2,175	2,505	2,505
ಭದ್ರಾ	186	186	8,159	8,159
ಆಲಮಟ್ಟಿ (ಮೀ)	519.6	519.60	21,389	21,389
ನಾರಾಯಣಪುರ (ಮೀ)	492.25	492.22	25,000	29,600

* ನೆಲಮಟ್ಟದಿಂದ

‘ಮೈಸೂರು ಸಾಹಿತ್ಯ ಸಂಭ್ರಮ’ ಇಂದಿನಿಂದ

ಮೈಸೂರು: ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ನಡೆಯಲಿರುವ ಐದನೇ ಆವೃತ್ತಿಯ ‘ಮೈಸೂರು ಸಾಹಿತ್ಯ ಸಂಭ್ರಮ–2021’ಕ್ಕೆ ಅ.16 ರಂದು ಚಾಲನೆ ಲಭಿಸಲಿದೆ.

ಕೋವಿಡ್ ಕಾರಣ ಈ ಬಾರಿಯೂ ಎಲ್ಲ ಗೋಷ್ಠಿ, ಸಂವಾದಗಳು ವರ್ಚುವಲ್ ವೇದಿಕೆಯಲ್ಲಿ ನಡೆಯಲಿದೆ. ಅ.16 ಅಲ್ಲದೆ 17, 20, 23, 24, 27, 30 ಹಾಗೂ 31 ರಂದು ಸಂಜೆ 7 ರಿಂದ ರಾತ್ರಿ 8.15ರ ವರೆಗೆ ಗೋಷ್ಠಿಗಳನ್ನು ಆಯೋಜಿಸಲಾಗಿದೆ.

ಶನಿವಾರ ನಡೆಯಲಿರುವ ಗೋಷ್ಠಿಯಲ್ಲಿ ಲೇಖಕರಾದ ನವಾಜ್ ಅಹ್ಮದ್ ಮತ್ತು ಸೀತಾ ಭಾಸ್ಕರ್ ಅಮೆರಿಕದಿಂದ ಪಾಲ್ಗೊಳ್ಳಲಿದ್ದಾರೆ. ನವಾಜ್ ಅಹ್ಮದ್ ಅವರ ‘ರೇಡಿಯಂಟ್ ಫ್ಯುಜಿಟಿವ್ಸ್’ ಕಾದಂಬರಿ ಕುರಿತು ಸಂವಾದ ನಡೆಯಲಿದೆ.

ಎಂಟು ದಿನಗಳ ಉತ್ಸವದಲ್ಲಿ ಜೆಫ್ರಿ ಆರ್ಚರ್ ಸೇರಿದಂತೆ ದೇಶ–ವಿದೇಶಗಳ ಹೆಸರಾಂತ ಸಾಹಿತಿಗಳು, ಚಿಂತಕರು, ಬರಹಗಾರರು, ಸಿನಿಮಾ ನಿರ್ದೇಶಕರು ಪಾಲ್ಗೊಳ್ಳಲಿದ್ದಾರೆ. ಯೂಟ್ಯೂಬ್ ಹಾಗೂ ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಇರಲಿದ್ದು,

ಮಾಹಿತಿಗೆ www.mysuruliteraturefestival.com ಸಂಪರ್ಕಿಸಬಹುದು.

‘ಕುಲಾಂತರಿ ತಳಿ ಪ್ರಯೋಗಕ್ಕೆ ಆಕ್ಷೇಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ರ್‍ಯಾಲಿಸ್ ಇಂಡಿಯಾ ಕಂಪನಿಗೆ ಕುಲಾಂತರಿ ಹತ್ತಿ ಮತ್ತು ಮೆಕ್ಕೆ ಜೋಳಗಳ ಕ್ಷೇತ್ರ ಪ್ರಯೋಗಕ್ಕೆ ಅವಕಾಶ ನೀಡಬಾರದು ಎಂದು ವಿವಿಧ ಸಂಘಟನೆಗಳು ಪರಿಸರವಾದಿಗಳು ಒತ್ತಾಯಿಸಿದ್ದಾರೆ. ಈ ಬಗ್ಗೆ ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಆಕ್ಷೇಪಣೆ ಸಲ್ಲಿಸಿದ್ದಾರೆ.

‘ವಿಶ್ವದೆಲ್ಲೆಡೆ ಕುಲಾಂತರಿ ತಂತ್ರಜ್ಞಾನ ಅಪಾಯಕಾರಿ ಮಾತ್ರವಲ್ಲ, ಹಳಸಲು ತಂತ್ರಜ್ಞಾನ ಎಂದೂ ಸಾಬೀತಾಗಿದೆ. 20 ಕ್ಕೂ ಹೆಚ್ಚು ದೇಶಗಳು ಕುಲಾಂತರಿ ಬೆಳೆಗಳನ್ನು ನಿಷೇಧ ಮಾಡಿವೆ. ಯುರೋಪಿನ 28 ದೇಶಗಳಲ್ಲಿ ಅರ್ಧಕ್ಕೂ ಹೆಚ್ಚು ದೇಶಗಳು ಕುಲಾಂತರಿ ಮುಕ್ತ ದೇಶಗಳಾಗಿವೆ. ನಮ್ಮ ದೇಶದಲ್ಲಿ ಬಿ.ಟಿ ಹತ್ತಿಯ ಕೆಟ್ಟ ಪರಿಣಾಮಗಳನ್ನು ಕಂಡ ಎಲ್ಲ ರಾಜ್ಯಗಳೂ ಕುಲಾಂತರಿ ಬದನೆ ಮತ್ತು ಸಾಸಿವೆಗಳನ್ನು ಹೋರಾಟದ ಮೂಲಕ ಹಿಮ್ಮೆಟಿಸಲಾಯಿತು’ ಎಂದು ಪತ್ರದಲ್ಲಿ ಹೇಳಿದ್ದಾರೆ.

‘ಕೇರಳ, ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಒಡಿಶಾ, ಛತ್ತೀಸಘಡ, ಗುಜರಾತ್ ರಾಜ್ಯಗಳು ಈ ಹಿಂದೆಯೇ ಕುಲಾಂತರಿ ಕ್ಷೇತ್ರ ಪ್ರಯೋಗಗಳಿಗೆ ಅವಕಾಶ ನೀಡದಿರಲು ತೀರ್ಮಾನಿಸಿದ್ದವು. ಹೀಗಿರುವಾಗ ಕರ್ನಾಟಕಕ್ಕೆ ಇದರ ಅನಿವಾರ್ಯತೆ ಖಂಡಿತಾ ಇಲ್ಲ. ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು’ ಎಂದಿದ್ದಾರೆ.

ರ್‍ಯಾಲಿಸ್ ಇಂಡಿಯಾ ಕಂಪನಿಯು ಹತ್ತಿಯಲ್ಲಿ ಯಾವ ಹೊಸ ಅಂಶ ಅಥವಾ ಸಮಸ್ಯೆಗೆ ಸಂಬಂಧಿಸಿ ಕುಲಾಂತರಿ ಪ್ರಯೋಗ ಮಾಡಲು ಹೊರಟಿದೆ ಎಂಬ ಸರಿಯಾದ ಮಾಹಿತಿ ನೀಡಿಲ್ಲ. ಆದರೆ, ಕಂಪನಿ ಪ್ರಯೋಗದಿಂದ ಪರಿಸರ, ಜೀವಿಗಳ ಮೇಲಾಗಲಿ ಪರಿಣಾಮ ಆಗುವುದಿಲ್ಲ ಎಂದು ಸರ್ಕಾರದ ಮನವೊಲಿಸಲು ಪ್ರಯತ್ನಿಸುತ್ತಿದೆ ಎಂದಿದ್ದಾರೆ.

‘ನಮ್ಮ ಬೆಳೆಗಳನ್ನು ಕುಲಾಂತರಿ ಮಾಲಿನ್ಯಗೊಳಿಸುವ ಪ್ರಕ್ರಿಯೆ ಕ್ಷೇತ್ರ ಪ್ರಯೋಗಗಳಿಂದಲೇ ಆರಂಭವಾಗುತ್ತಿದೆ. ‘ನಿರ್ಬಂಧಿತ’ ಎಂದು ಹೇಳಿಕೊಳ್ಳುವ ಈ ಕ್ಷೇತ್ರ ಪ್ರಯೋಗಗಳಲ್ಲಿ ಬೆಳೆಗಳನ್ನು ಹೊಲಗಳಲ್ಲಿ ಮುಕ್ತವಾಗಿ ಬೆಳೆಯಲಾಗುತ್ತದೆ. ಇಲ್ಲಿ ಪಾಲಿಸಬೇಕಾದ ಕಟ್ಟುಕಟ್ಟಳೆಗಳನ್ನು ಬಹುತೇಕ ಪಾಲಿಸುವುದಿಲ್ಲ. ಕುಲಾಂತರಿ ಮಾಲಿನ್ಯವು ಮುಕ್ತವಾಗಿ ಪರಿಸರಕ್ಕೆ ಸೇರಿ ಹಿಮ್ಮೊಗಗೊಳಿಸಲಾಗದಂಥ ಘಾಸಿ ಉಂಟು ಮಾಡುತ್ತದೆ’ ಎಂದೂ ಎಚ್ಚರಿಕೆ ನೀಡಿದ್ದಾರೆ.

ಆಕ್ಷೇಪಣೆ ಪತ್ರಕ್ಕೆ ‘ನಮ್ಮೂರ ಭೂಮಿ ನಮಗಿರಲಿ ಅನ್ಯರಿಗಲ್ಲ’ (ರೈತ ಸಂಘಟನೆಗಳು, ಸಾವಯವ ಕೃಷಿ ಸಂಘಟನೆಗಳು, ಕೃಷಿ ಕೂಲಿಕಾರ ಸಂಘಟನೆ, ಗ್ರಾಮೀಣ ಮಹಿಳಾ ಸಂಘಟನೆ, ಪರಿಸರ ಸಂಘಟನೆಗಳು ಸೇರಿ 40 ಕ್ಕೂ ಹೆಚ್ಚು ಸಂಘಟನೆಗಳ ಸಮನ್ವಯ), ಪರಿಸರವಾದಿ ಅ.ನ.ಯಲ್ಲಪ್ಪ ರೆಡ್ಡಿ, ಲೇಖಕ ನಾಗೇಶ್ ಹೆಗಡೆ, ಕೃಷಿ ಅರ್ಥಶಾಸ್ತ್ರಜ್ಞ ಪ್ರಕಾಶ್ ಕಮ್ಮರಡಿ ಸಹಿ ಮಾಡಿದ್ದಾರೆ.



ಶರಣ ಸಂಸ್ಕೃತಿ ಉತ್ಸವ

ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಚಿತ್ರದುರ್ಗದ ರಾಜಬೀದಿಗಳಲ್ಲಿ ಶುಕ್ರವಾರ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಮೆರವಣಿಗೆ ವೈಭವದಿಂದ ಜರುಗಿತು

ನಾಳೆಯಿಂದ ಬೊಮ್ಮಾಯಿ ಚುನಾವಣಾ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾನಗಲ್ ಮತ್ತು ಸಿಂದಗಿ ಉಪಚುನಾವಣೆ ಪ್ರಚಾರಕ್ಕೆ ಮುಖ್ಯ ಮಂತ್ರಿ ಬೊಮ್ಮಾಯಿ ಇದೇ 17ರಿಂದ ಪ್ರಚಾರ ನಡೆಸಲಿದ್ದಾರೆ. ಬಿಜೆಪಿಯ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ಇದೇ 21 ರಿಂದ ಎರಡೂ ಕ್ಷೇತ್ರಗಳಲ್ಲಿ ನಾಲ್ಕು ದಿನಗಳ ಕಾಲ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಬೊಮ್ಮಾಯಿ ಅವರು ವಿಜಯದಶಮಿ ಪ್ರಯುಕ್ತ ಯಡಿಯೂರಪ್ಪ ಅವರನ್ನು ‘ಕಾವೇರಿ’ ನಿವಾಸದಲ್ಲಿ ಭೇಟಿ ಮಾಡಿ ಶುಭಾಶಯ ಕೋರಿ ಮಾತುಕತೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಅಕ್ಟೋಬರ್ 17 ರಿಂದ ಹಾನಗಲ್‌ನಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳುತ್ತೇನೆ. ಆ ಬಳಿಕ ಸಿಂದಗಿಯಲ್ಲಿ ಎರಡು ದಿನಗಳ ಪ್ರಚಾರ ನಡೆಸುತ್ತೇನೆ ಎಂದರು.

ಶಾಸಕ ಮಸಾಲ ಜಯರಾಂ ಅವರ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಅವರು ನನ್ನ ಒಳ್ಳೆಯ ಸ್ನೇಹಿತರು ಎಂದರು.

ಬಿಎಸ್‌ವೈ ಚುನಾವಣಾ ಪ್ರಚಾರ: ಯಡಿಯೂರಪ್ಪ ಅವರು ಇದೇ ತಿಂಗಳ 20 ಅಥವಾ 21 ರಿಂದ ಚುನಾವಣಾ ಪ್ರಚಾರಕ್ಕೆ ತೆರಳಲಿದ್ದಾರೆ. ಮೊದಲ ಹಂತವಾಗಿ ನಾಲ್ಕು ದಿನಗಳ ಪ್ರಚಾರ ನಡೆಸುವ ಅವರು ಇದೇ 26 ರ ಬಳಿಕ ಇನ್ನೊಂದು ಸುತ್ತಿನ ಪ್ರಚಾರಕ್ಕೆ ತೆರಳಲಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

‘ಜನಸಂಖ್ಯಾ ನೀತಿ ಪುನರ್‌ರಚನೆ ಅಗತ್ಯ’

ಒಂದನೇ ಪುಟದಿಂದ

ಅಸ್ಸಾಂ, ಪಶ್ಚಿಮ ಬಂಗಾಳ, ಬಿಹಾರದಂಥ ಗಡಿ ರಾಜ್ಯಗಳ ಗಡಿ ಜಿಲ್ಲೆಗಳಲ್ಲಿ ಮುಸ್ಲಿಂ ಸಮುದಾಯದವರ ಜನಸಂಖ್ಯೆ ಅಭಿವೃದ್ಧಿ ದರವು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು ಇದೆ. ಇದು, ಬಾಂಗ್ಲಾದೇಶದಿಂದ ನಿಲ್ಲದ ನುಸುಳುವಿಕೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ನಮ್ಮ ದೇಶದ ಜನಸಂಖ್ಯೆಯ ಶೇ 56ರಿಂದ ಶೇ 57ರಷ್ಟು ಜನರು ಯುವ ಸಮುದಾಯದವರೇ ಆಗಿದ್ದಾರೆ. 30 ವರ್ಷಗಳಲ್ಲಿ ಅವರಿಗೂ ವಯಸ್ಸಾಗುತ್ತದೆ. ಆಗ ಅವರನ್ನು ನೋಡಿಕೊಳ್ಳಲಿರುವ ಜನರು ಎಷ್ಟು... ಎಂಬೆಲ್ಲ ವಿಷಯಗಳ ಬಗ್ಗೆ ಗಂಭೀರವಾಗಿ ಚಿಂತಿಸಬೇಕು ಎಂದು ಎಂದು ವಿವರಿಸಿದರು.

ಇದರೊಂದಿಗೆ, ನಮ್ಮ ಪರಿಸರ ಹಾಗೂ ಸಂಪನ್ಮೂಲವು ಈ ಪ್ರಮಾಣದ ಜನಸಂಖ್ಯೆಯನ್ನು ಸಂಬಾಳಿಸಲು ಸಮರ್ಥವೇ ಎಂಬ ಬಗ್ಗೆಯೂ ಯೋಚಿಸಬೇಕಿದೆ ಎಂದರು.

‘ಜನಸಂಖ್ಯೆಯು ಸಮಸ್ಯೆ ಆಗುವುದಾದರೆ, ಅದರ ಅಸಮತೋಲನವೂ ಸಮಸ್ಯೆಯೇ’ ಎಂದು ಅವರು ಹೇಳಿದರು.

ನುಸುಳುವಿಕೆ, ಮತಾಂತರಗಳಿಂದಾಗಿ, ವಿಶೇಷವಾಗಿ ಗಡಿ ಪ್ರದೇಶದಲ್ಲಿ ಜನಸಂಖ್ಯಾ ದರದಲ್ಲಿ ಧಾರ್ಮಿಕ ಅಸಮತೋಲನ ಕಂಡುಬಂದಿದೆ. ಇದರಿಂದ ದೇಶದ ಏಕತೆ, ಸೌಹಾರ್ದತೆಗೆ ಹಾಗೂ ಸಾಂಸ್ಕೃತಿಕ ಅಸ್ಮಿತೆಗೆ ಧಕ್ಕೆಯಾಗಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್ ಕಾರ್ಯಕರ್ತರೂ ಸೇರಿದಂತೆ ದೇಶದ ಜನರು, ಇಂಥ ಜನಸಂಖ್ಯಾ ಅಸಮತೋಲನಕ್ಕೆ ‘ಕಾರಣಗಳು’ ಏನು ಎಂಬುದನ್ನು ತಿಳಿದುಕೊಂಡು, ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಇದನ್ನು ದೇಶಕ್ಕಾಗಿನ ಕರ್ತವ್ಯ ಎಂದು ತಿಳಿದು, ಇಂಥ ಜನಸಂಖ್ಯಾ ಅಸಮಾನತೆ ನಿವಾರಣೆಯಿಂದ ದೇಶವನ್ನು ರಕ್ಷಿಸಲು ಕಾನೂನುಬದ್ಧವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು.

ಭಯೋತ್ಪಾದನೆ ನಿಗ್ರಹ ತ್ವರಿತವಾಗಲಿ: ‘ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರು, ವಿಶೇಷವಾಗಿ ಹಿಂದೂಗಳನ್ನು ಗುರಿಯಾಗಿಸಿ ಹತ್ಯೆ ನಡೆಸುತ್ತಿದ್ದಾರೆ. ಹಿಂದೂಗಳ ಮನೋಸ್ಥೈರ್ಯವನ್ನು ಕಸಿದು ಮತ್ತೆ ಕಣಿವೆಯಲ್ಲಿ ಭಯೋತ್ಪಾದನೆಯನ್ನು ಮರುಸ್ಥಾಪಿಸಲು ಹೊರಟಿದ್ದಾರೆ. ಹೀಗಾಗಿ, ಉಗ್ರರ ಚಟುವಟಿಕೆಗಳನ್ನು ನಿಯಂತ್ರಿಸಿ ಅವರನ್ನು ಸದೆಬಡಿಯುವ ಪ್ರಯತ್ನಗಳನ್ನು ಚುರುಕುಗೊಳಿಸಬೇಕು’ ಎಂದು ಭಾಗವತ್ ಹೇಳಿದ್ದಾರೆ.

‘ಸನಾತನ ಹಿಂದೂ ಸಂಸ್ಕೃತಿ ಹಾಗೂ ಉದಾರವಾದ ಹಿಂದೂ ಸಮಾಜಕ್ಕೆ ಎಲ್ಲರನ್ನೂ ಒಳಗೊಳ್ಳುವ ಶಕ್ತಿ ಇದೆ. ಮೂಲಭೂತವಾದ, ಅಸಹನೆ, ಭಯೋತ್ಪಾದನೆ, ಸಂಘರ್ಷ, ಹಗೆತನ ಹಾಗೂ ಶೋಷಣೆಯ ಆಪತ್ತಿನಿಂದ ಅದೊಂದೇ ಜಗತ್ತನ್ನು ರಕ್ಷಿಸಬಲ್ಲದು’ ಎಂದರು.

ಒಟಿಟಿ ವೇದಿಕೆಗಳಲ್ಲಿ ಅನಿಯಂತ್ರಿತ ವಿಷಯಗಳು ಪ್ರಸಾರವಾಗುತ್ತಿರುವುದಕ್ಕೆ, ಅನಿಯಂತ್ರಿತ ಬಿಟ್‌ಕಾಯಿನ್ ಕರೆನ್ಸಿ ಹಾಗೂ ಸಮಾಜ ಎಲ್ಲ ವರ್ಗದವರಲ್ಲೂ ಹೆಚ್ಚಿದ ಮಾದಕ ವಸ್ತು ಸೇವನೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಇವುಗಳನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

‘ನಿರ್ವಹಣೆ ಹಿಂದೂ ಭಕ್ತರಿಗೇ ಇರಲಿ’

ಒಂದನೇ ಪುಟದಿಂದ

ದಕ್ಷಿಣ ಭಾರತದಲ್ಲಿ ಬಹುತೇಕ ದೇವಾಲಯಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರಗಳೇ ನೋಡಿಕೊಳ್ಳುತ್ತವೆ. ದೇಶದ ಕೆಲವು ಭಾಗದ ದೇವಾಲಯಗಳನ್ನು ಸರ್ಕಾರ ನೋಡಿಕೊಂಡರೆ, ಇನ್ನೂ ಕೆಲವನ್ನು ಭಕ್ತರೇ ನಿರ್ವಹಿಸುತ್ತಾರೆ. ಸರ್ಕಾರ ನಿರ್ವಹಿಸುವ ಮಾತಾ ವೈಷ್ಣೋದೇವಿ ಮಂದಿರ, ಭಕ್ತರ ನಿರ್ವಹಣೆಯಲ್ಲಿರುವ ಮಹಾರಾಷ್ಟ್ರದ ಗಜಾನನ ಮಹಾರಾಜ ಹಾಗೂ ದೆಹಲಿಯ ಝಂಡೇವಾಲಾ ದೇವಾಲಯಗಳಲ್ಲಿ ದಕ್ಷ ನಿರ್ವಹಣೆ ಇದೆ. ಆದರೆ, ಎಲ್ಲಿ ದಕ್ಷತೆ ಇಲ್ಲವೋ ಅಂಥಲ್ಲಿ ಲೂಟಿಗೆ ದಾರಿಯಾಗುತ್ತಿದೆ ಎಂದರು.

‘ದೇವಸ್ಥಾನಕ್ಕೆ ದೇವರಲ್ಲದೇ ಬೇರಾರೂ ಮಾಲೀಕರಲ್ಲ. ಅರ್ಚಕರು ಕೇವಲ ವ್ಯವಸ್ಥಾಪಕರು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸರ್ಕಾರ ಕೂಡ, ನಿರ್ವಹಣೆ ಉದ್ದೇಶದಿಂದ ಮಾತ್ರ ಅದರ ಮೇಲೆ ನಿಯಂತ್ರಣ ಹೊಂದಬಹುದು. ಅದೂ ಸ್ವಲ್ಪ ಸಮಯದ ನಿಯಂತ್ರಣ ಎಂದಿದೆ. ಹೀಗಾಗಿ, ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಿದೆ. ಅಲ್ಲದೇ, ಹಿಂದೂ ಸಮುದಾಯವು ಈ ದೇವಸ್ಥಾನಗಳನ್ನು ಹೇಗೆ ನಿರ್ವಹಿಸಬೇಕು ಎಂದು ನಿರ್ಧರಿಸುವ ಅಗತ್ಯವೂ ಇದೆ’ ಎಂದು ಭಾಗವತ್ ಪ್ರತಿಪಾದಿಸಿದ್ದಾರೆ.

ಗಾಳಿಯಲ್ಲಿ ಗುಂಡು ಹಾರಿಸಿದ ಶಾಸಕ: ಪ್ರಕರಣ ದಾಖಲು

ಮಾಲೂರು: ವಿಜಯದಶಮಿ ಅಂಗವಾಗಿ ಆಯುಧಗಳಿಗೆ ಪೂಜೆ ಸಲ್ಲಿಸಿದ ಬಳಿಕ ಶಾಸಕ ಕೆ.ವೈ.ನಂಜೇಗೌಡ ನಾಡ ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸಿರುವುದು ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ.

ತಾಲ್ಲೂಕಿನ ಕೊಮ್ಮನಹಳ್ಳಿಯಲ್ಲಿ ಶುಕ್ರವಾರ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮೊದಲು ಬನ್ನಿಮರ, ಶಸ್ತ್ರಾಸ್ತ್ರಗಳಿಗೆ ಅವರು ಪೂಜೆ ಸಲ್ಲಿಸಿದರು. ಬಳಿಕ ನಾಡ ಬಂದೂಕಿನಿಂದ ಗಾಳಿಯಲ್ಲಿ 4 ಸುತ್ತು ಗುಂಡು ಹಾರಿಸಿದರು. ಈ ಬಗ್ಗೆ ಮಾಸ್ತಿ ಪೊಲೀಸ್ ಠಾಣೆಯಲ್ಲಿ ಶಾಸಕರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಶಾಸಕ ನಂಜೇಗೌಡ ಅವರ ಸಹೋದರ ಈರೇಗೌಡ ಅವರ ಹೆಸರಿನಲ್ಲಿ ಬಂದೂಕು ಪರವಾನಗಿ ಇದೆ. ಪರವಾನಗಿ ಪಡೆದವರು ಬಳಸಬೇಕಿದ್ದ ಬಂದೂಕನ್ನು ಶಾಸಕರು ಬಳಸಿದ್ದಾರೆ. ಜೊತೆಗೆ, ಸಾರ್ವಜನಿಕ ಸ್ಥಳದಲ್ಲಿ ಗುಂಡು ಹಾರಿಸುವುದು ಅಪರಾಧ’ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿನಿ ಹಂಚಿಕೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್

‘ಹುಳು ಹಿಡಿದ ಆಹಾರ ಪದಾರ್ಥ ವಿತರಣೆ’

ಪ್ರಜಾವಾಣಿ ವಾರ್ತೆ

ತಿಪಟೂರು: ಅಕ್ಷರ ದಾಸೋಹ ಯೋಜನೆಯಡಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ ಪದಾರ್ಥ ಹುಳು ಹಿಡಿದಿದೆ ಎಂದು ಆರೋಪಿಸಿರುವ ವಿದ್ಯಾರ್ಥಿಯೊಬ್ಬಳು, ಇದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾಳೆ.

ತಾಲ್ಲೂಕಿನ ಹೊನ್ನವಳ್ಳಿಯ ಕೆಪಿಎಸ್ ಶಾಲೆಯಲ್ಲಿ ಎರಡು ದಿನಗಳ ಹಿಂದೆ ಆಹಾರ ಪದಾರ್ಥ ವಿತರಣೆ ಮಾಡಿದ್ದರು. ಇದು ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ವಿದ್ಯಾರ್ಥಿನಿ ಆರೋಪಿಸಿದ್ದಾಳೆ.

‘ಫ್ರೆಂಡ್ಸ್ ಇಂತಹ ಹಾಳಾದ ಅಕ್ಕಿ ಮತ್ತು ಬೇಳೆಯನ್ನು ಶಾಲೆಯಿಂದ ನೀಡಿದ್ದಾರೆ. ಇಂತಹ ಬೇಳೆ ತಿನ್ನಲು ಸಾಧ್ಯವೇ ಎಂದು ಕೇಳಿದರೆ ದನಕ್ಕೆ ಹಾಕಿ ಎಂದು ಹೇಳುತ್ತಾರೆ. ನಾವೇನು ಮಾಡಬೇಕು’ ಎಂದು ವಿದ್ಯಾರ್ಥಿನಿ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಅಕ್ಷರ ದಾಸೋಹದ ಅಡಿ 3 ತಿಂಗಳಿನಿಂದ ಯಾವುದೇ ಆಹಾರ ಪದಾರ್ಥ ವಿತರಿಸಿಲ್ಲ. ಈ ಬಗ್ಗೆ ಶಾಲೆ ಮುಖ್ಯಸ್ಥರಿಂದ ವಿವರಣೆ ಕೇಳಲಾಗುವುದು

ಪ್ರಕಾಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ

ಅಧಿಕಾರಿಗಳು ಉಳಿದಿರುವ ಕಾಳುಗಳನ್ನು ವಿತರಿಸುವಂತೆ ಮೌಖಿಕವಾಗಿ ತಿಳಿಸಿದ್ದರು. ಬೇಳೆಗಳಿಗೆ ಸಾಮಾನ್ಯ ಹುಳುಗಳಾಗಿದ್ದು, ಸ್ವಚ್ಛ ಮಾಡಿ ವಿತರಿಸಲಾಗುವುದು

ವೀಣಾ, ಮುಖ್ಯಶಿಕ್ಷಕಿ, ಕೆ.ಪಿ.ಎಸ್. ಹೊನ್ನವಳ್ಳಿ ಶಾಲೆ



ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಕೆಪಿಎಸ್ ಶಾಲಾ ಆವರಣದಲ್ಲಿ ಹುಳು ಹಿಡಿದಿರುವ ಬೇಳೆಯನ್ನು ಸ್ವಚ್ಛಗೊಳಿಸಿ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು

‘ಮೂರು ತಿಂಗಳ ಹಿಂದೆ ವಿತರಣೆ ಮಾಡಿದ್ದ ಅಕ್ಕಿ ಹಾಗೂ ಮೂರು ಕ್ವಿಂಟಲ್ ಬೇಳೆ ಉಳಿದಿದ್ದು, ಇದೀಗ ಮಕ್ಕಳಿಗೆ ವಿತರಣೆ ಮಾಡಲಾಗುತ್ತಿದೆ’ ಎಂದು ಶಿಕ್ಷಕರು ತಿಳಿಸಿದ್ದಾರೆ.

ವಿಡಿಯೊ ವೈರಲ್ ಆದ ಬಳಿಕ ಬಿಸಿಯೂಟದ ಅಡುಗೆ ಸಿಬ್ಬಂದಿ ಮೂಲಕ ಆಹಾರ ಪದಾರ್ಥವನ್ನು ಸ್ವಚ್ಛಗೊಳಿಸಿ, ವಿದ್ಯಾರ್ಥಿಗಳಿಗೆ ನೀಡಲು ಶಿಕ್ಷಕರು ಮುಂದಾಗಿದ್ದಾರೆ.

ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಇಸ್ರೇಲ್ ರಾಯಭಾರಿ

ಮುಂಬೈ: ರಾಷ್ಟ್ರೀಯ ಸ್ವಯಂಸೇವಕ ಸಂಘವು ಆಯೋಜಿಸಿದ್ದ ವಿಜಯದಶಮಿ ಉತ್ಸವದಲ್ಲಿ, ಇಸ್ರೇಲ್‌ನ ಹಿರಿಯ ರಾಜತಾಂತ್ರಿಕರೊಬ್ಬರು ಶುಕ್ರವಾರ ಭಾಗಿಯಾಗಿದ್ದರು. ಮುಂಬೈನಲ್ಲಿರುವ, ಇಸ್ರೇಲ್ ರಾಯಭಾರಿ ಕೊಬ್ಬಿ ಶೋಶಾನಿ ಅವರು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರ ಪಕ್ಕದ ಆಸನದಲ್ಲಿ ಇದ್ದರು.ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ, ಭಾರತ–ಇಸ್ರೇಲ್ ರಾಜತಾಂತ್ರಿಕ ಹಾಗೂ ದ್ವಿಪಕ್ಷೀಯ ಚಟುವಟಿಕೆಗಳು ಹೆಚ್ಚಿವೆ. ಈ ಹಿನ್ನೆಲೆಯಲ್ಲಿ, ಇಸ್ರೇಲ್ ರಾಯಭಾರಿಯ ಉಪಸ್ಥಿತಿ ಮಹತ್ವ ಪಡೆದಿದೆ.

ಉಕ್ಕು ಉದ್ಯಮಗಳಿಗೆ ಇನ್ನು ಗಣಿಗಳು 'ದೂರ'!

ಒಂದನೇ ಪುಟದಿಂದ...

1957ರಲ್ಲಿ ಜಾರಿಗೆ ಬಂದಿರುವ ಎಂಎಂಡಿಆರ್ ಕಾಯ್ದೆಗೆ 2021ರ ಜೂನ್ 18ರಂದು ಸಂಸತ್ತು ತಿದ್ದುಪಡಿ ಅಂಗೀಕರಿಸಿದೆ. ಅದರಂತೆ, 'ರಾಜ್ಯಗಳು ಗಣಿಗಳನ್ನು ಉಕ್ಕು ಉದ್ಯಮಗಳಿಗೆ ಮಾತ್ರ ಮೀಸಲಿಡುವಂತಿಲ್ಲ. ಅದಿರನ್ನು ಉಕ್ಕು ಉತ್ಪಾದನೆಗೇ ಬಳಸುವಂತೆ ಷರತ್ತೂ ಹಾಕುವಂತಿಲ್ಲ. ಹಾಗೆ, ಅದಿರನ್ನು ಉಕ್ಕು ತಯಾರಿಕೆಗೇ ಬಳಸಲಾಗುವುದು ಎಂದು ಗುತ್ತಿಗೆದಾರರೂ ಖಾತರಿ ಕೊಡಬೇಕಿಲ್ಲ. ಈ ರೀತಿ ಗಣಿಗಳನ್ನು ಮೀಸಲಿಡುವುದು ಖನಿಜ ಕಾಯ್ದೆ ಸೆಕ್ಷನ್ 10ಬಿ, ಉಪಬಂಧ 6ರ ಆಶಯಗಳಿಗೆ ವಿರುದ್ಧವಾದುದು' ಎಂದೂ ನೋಟಿಸ್‌ನಲ್ಲಿ ವಿವರಿಸಲಾಗಿದೆ.

ರಾಜ್ಯ ಸರ್ಕಾರ ಆಗಸ್ಟ್ 31ರಂದು ಹೊರಡಿಸಿರುವ 'ಮಾಡೆಲ್ ಟೆಂಡರ್ ಡಾಕ್ಯುಮೆಂಟ್'ನಲ್ಲಿ, 2015ರ ಜುಲೈ 30ರಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಉಲ್ಲೇಖಿಸಿದೆ. ಈ ಆದೇಶವು, 'ಸಮಾಜ ಪರಿವರ್ತನಾ ಸಮುದಾಯ' ವರ್ಸಸ್ ಕರ್ನಾಟಕ ರಾಜ್ಯದ ಪ್ರಕರಣದಲ್ಲಿ ಹೊರಬಂದಿದ್ದು, ವ್ಯಾಪಕವಾಗಿ ಅಕ್ರಮವೆಸಗಿದ 'ಸಿ' ವರ್ಗದ ಗಣಿಗಳ ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ವಿಧಿವಿಧಾನಗಳನ್ನು ಸೂಚಿಸಲಾಗಿದೆ. ಅಲ್ಲದೆ, ಕೋರ್ಟ್ ಆದೇಶ ಆಗಿನ ಎಂಎಂಡಿಆರ್ ಕಾಯ್ದೆ ನಿಯಮಾವಳಿಗೆ ಅನುಗುಣವಾಗಿತ್ತು ಎಂದೂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಚರ್ಚೆಗೆ ಗ್ರಾಸವಾದ ಮತೀಯ ಗೂಂಡಾಗಿರಿ ಮತ್ತು ಕೋಮು ಸಂಘರ್ಷ • ಮಾಜಿ, ಹಾಲಿ ಮುಖ್ಯಮಂತ್ರಿಗಳ ನಡುವೆ ಟ್ವೀಟ್ ಸಮರ


'ಘನತೆಯಿರಲಿ, ಪರಿವಾರದ ಕೂಗುಮಾರಿಗಳಂತೆ ವರ್ತಿಸಬೇಡಿ'

ಬೆಂಗಳೂರು: 'ನಾನು ಅಧಿಕಾರದಲ್ಲಿದ್ದಾಗ ಹಿಂದೂಗಳನ್ನು ಕೊಲ್ಲಿಸಿದ್ದೆ ಎಂದು ಪರಿವಾರದ ಕೂಗುಮಾರಿಗಳ ರೀತಿ ಆರೋಪಿಸಬೇಡಿ. ಇಂತಹ ಬೇಜವಾಬ್ದಾರಿ ಹೇಳಿಕೆ ನೀಡುವ ಮೊದಲು ನೀವು ಕುಳಿತ ಕುರ್ಚಿಯ ಘನತೆಯ ಬಗ್ಗೆ ಯೋಚಿಸಿ' ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹೇಳಿದ್ದಾರೆ.

ಮತೀಯ ಗೂಂಡಾಗಿರಿಯನ್ನು ಸಮರ್ಥಿಸಿ ಮುಖ್ಯಮಂತ್ರಿ ನೀಡಿದ್ದ ಹೇಳಿಕೆಯನ್ನು ಖಂಡಿಸಿ ಸಿದ್ದರಾಮಯ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದರು. ಅಲ್ಲಿಯೇ ಪ್ರತಿಕ್ರಿಯಿಸಿದ್ದ ಬೊಮ್ಮಾಯಿ, ಸಿದ್ದರಾಮಯ್ಯ ವಿರುದ್ಧ ಹಿಂದೂಗಳ ಹತ್ಯೆಯ ಆರೋಪ ಮಾಡಿದ್ದರು. ಟ್ವಿಟರ್‌ನಲ್ಲೇ ಮತ್ತೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ಸುಳ್ಳು ಆರೋಪ ಮಾಡಿರುವ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿತ್ತು. ಕಿರಿಯರು ತಿದ್ದಿಕೊಳ್ಳಲಿ ಎಂಬ ಕಾರಣಕ್ಕೆ ಪ್ರತಿಕ್ರಿಯೆಯನ್ನಷ್ಟೇ ನೀಡಿದ್ದೇನೆ' ಎಂದಿದ್ದಾರೆ.

'2013-18ರಲ್ಲಿ ಕೋಮು ಸಂಘರ್ಷದಲ್ಲಿ ಹತ್ಯೆಗೀಡಾದ 10 ಹಿಂದೂಗಳ ಸಾವು ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಯ ಸದಸ್ಯರಿಂದ ನಡೆದಿದೆ. 11 ಮುಸ್ಲಿಮರು ಮತ್ತು 10 ಹಿಂದೂಗಳ ಸಾವಿಗೆ ಬಜರಂಗ ದಳ, ಹಿಂದೂ ಜಾಗರಣಾ ವೇದಿಕೆ ಸದಸ್ಯರು ಕಾರಣ. ಸಿ.ಎಂ ಹುದ್ದೆಯಲ್ಲಿದ್ದೀರಿ. ತನಿಖೆ ನಡೆಸಿ, ಸತ್ಯಾಂಶ ತಿಳಿಸಿ' ಎಂದು ಆಗ್ರಹಿಸಿದ್ದಾರೆ.

'ನಾನು ಮುಖ್ಯಮಂತ್ರಿಯಾಗಿದ್ದಾಗ ಹತ್ಯೆಗೀಡಾಗಿದ್ದಾರೆ ಎಂದು ನಿಮ್ಮ ಪಕ್ಷದವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದ ಪಟ್ಟಿಯಲ್ಲಿ ಜೀವಂತವಾಗಿ ಇರುವ ಅಶೋಕ್ ಪೂಜಾರಿ ಅವರ ಹೆಸರನ್ನೂ ಸೇರಿಸಲಾಗಿತ್ತು. ಅದರಿಂದ ಬಿಜೆಪಿ ತನ್ನ ಬಣ್ಣವನ್ನು ತಾನೇ ಬಯಲು ಮಾಡಿಕೊಂಡು ನಗೆಪಾಟಲಿಗೆ ಗುರಿಯಾಗಿದ್ದು ನೆನಪಿದೆಯೇ' ಎಂದು ಪ್ರಶ್ನಿಸಿದ್ದಾರೆ.


ಸಿದ್ದರಾಮಯ್ಯ

'ಹಿಂದೂಗಳ ಹತ್ಯೆಗೆ ಕಣ್ಣೀರು ಸುರಿಸುವ ನೀವು ಹೊನ್ನಾವರದ ಪರೇಶ್ ಮೇಸ್ತಾ ಹತ್ಯೆ ಪ್ರಕರಣದಲ್ಲಿ ನ್ಯಾಯ ಒದಗಿಸಿ. ದಕ್ಷಿಣ ಕನ್ನಡದ ಪ್ರಕಾಶ್ ಕುಳಾಯಿ, ಕೇಶವ ಶೆಟ್ಟಿ, ಹರೀಶ್ ಪೂಜಾರಿ, ಬ್ರಹ್ಮಾವರದ ಪ್ರವೀಣ್ ಪೂಜಾರಿ, ಚಿಕ್ಕಮಗಳೂರಿನ ಕಲ್ಲಪ್ಪ ಹಂಡಿಭಾಗ್, ಧನ್ಯಶ್ರೀ ಹಾಗೂ ವಿಜಯಪುರದ ದಾನಮ್ಮ ಕೂಡ ಹಿಂದೂಗಳು ಎನ್ನುವುದು ನೆನಪಿನಲ್ಲಿರಲಿ. ಇವರ ಹತ್ಯೆಯ ಆರೋಪಿಗಳನ್ನೂ ದಯವಿಟ್ಟು ಶಿಕ್ಷಿಸಿ' ಎಂದು ಒತ್ತಾಯಿಸಿದ್ದಾರೆ.

ಆರೋಪಿ ಜತೆ ಕಟೀಲ್ ನಂಟು: 'ಮಂಗಳೂರಿನ ವಿನಾಯಕ ಬಾಳಿಗಾ ಅವರ ಹತ್ಯೆಯ ಪ್ರಮುಖ ಆರೋಪಿಯಾದ ನರೇಶ್ ಶೆಣೈ ಜತೆ ನಿಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನಿಕಟ ನಂಟು ಹೊಂದಿದ್ದಾರೆ. ಅವರಿಬ್ಬರೂ ಖಾಸಾ ದೋಸ್ತ್‌ಗಳು' ಎಂದು ಹೇಳಿದ್ದಾರೆ.

'ನನ್ನಿಂದ ಆಡಳಿತವನ್ನಾಗಲಿ, ಪೊಲೀಸಿಂಗ್ ಆಗಲಿ ಕಲಿಯಬೇಕಿಲ್ಲ ಎಂದು ಹೇಳಿದ್ದೀರಿ. ನನ್ನಿಂದಾಗಲಿ, ನಿಮ್ಮ ತಂದೆ ಎಸ್.ಆರ್. ಬೊಮ್ಮಾಯಿ ಅವರಿಂದಾಗಲಿ ನೀವು ಏನಾದರೂ ಕಲಿತಿದ್ದರೆ, ಕೇವಲ ಅಧಿಕಾರಕ್ಕಾಗಿ ಕೋಮುವಾದಿ ಪಕ್ಷದ ಜೊತೆ ಹೇಗೆ ಸೇರಿಕೊಳ್ಳುತ್ತಿದ್ದೀರಿ ಅಲ್ಲವೆ' ಎಂದು ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ 'ಹಿಂದೂ ವಿರೋಧಿ ಐಕಾನ್'

ಬೆಂಗಳೂರು: 'ನೀವು ಮುಖ್ಯಮಂತ್ರಿ ಆಗಿದ್ದಾಗ ಹಿಂದೂ ವಿರೋಧಿಗಳ 'ಐಕಾನ್' ಆಗಿದ್ದೀರಿ. ಟಿಪ್ಪುಸುಲ್ತಾನನ ಆಡಳಿತದಲ್ಲಿ ಹಿಂದುಗಳ ಕಗ್ಗೊಲೆ ನಡೆಯುತ್ತಿತ್ತೋ, ಅದೇ ರೀತಿ ನಿಮ್ಮ ಆಡಳಿತದಲ್ಲೂ ಹಿಂದೂ ಕಾರ್ಯಕರ್ತರ ಕಗ್ಗೊಲೆಗಳು ನಡೆದವು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದಿದ್ದಾರೆ.


ಮಂಗಳೂರಿನಲ್ಲಿ ತಾವು ನೀಡಿದ ಹೇಳಿಕೆ ಬಗ್ಗೆ ಸಿದ್ದರಾಮಯ್ಯ ಅವರ ಟೀಕೆಗಳಿಗೆ ಬೊಮ್ಮಾಯಿ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

'ಆಡಳಿತ ನಡೆಸುವ ಮತ್ತು ಪೊಲೀಸ್ ವ್ಯವಸ್ಥೆಯನ್ನು ಮುನ್ನಡೆಸುವ ಬಗ್ಗೆ ನಿಮ್ಮಿಂದ ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ. ನಮ್ಮಲ್ಲಿ ಸಮರ್ಥ ಪೊಲೀಸ್ ಪಡೆ ಇದೆ. ಅದು ಕಾನೂನು ಸುವ್ಯವಸ್ಥೆ ನಿರ್ವಹಣೆಯನ್ನು ಸಮರ್ಥವಾಗಿ ನಿಭಾಯಿಸುತ್ತದೆ. ಪೊಲೀಸ್ ವ್ಯವಸ್ಥೆ ನಿಮ್ಮ ಅವಧಿಯಲ್ಲಿ ನಿಷ್ಕ್ರಿಯವಾಗಿ ಕುಳಿತಿತ್ತು' ಎಂದು ತಿರುಗೇಟು ನೀಡಿದ್ದಾರೆ.

'ಪರಸ್ಪರ ಭಾವನೆಗಳನ್ನು ಎಲ್ಲ ಸಮುದಾಯದವರು ಗೌರವಿಸಿದರೆ ಸಮಾಜದಲ್ಲಿ ಸೌಹಾರ್ದ ಉಳಿಯುತ್ತದೆ. ಅದು ತಪ್ಪಿದಾಗ ಸಮಾಜದಲ್ಲಿ ಪ್ರತಿಯೊಂದು ಕ್ರಿಯೆಗೂ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಕಾನೂನು ತನ್ನದೇ ಆದ ಕ್ರಮ ತೆಗೆದುಕೊಳ್ಳುತ್ತದೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿ, ಸಮಾಜದಲ್ಲಿ ಸಾಮರಸ್ಯ ಕಾಯಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದೆ. ಆದರೆ, ನಿಮ್ಮ ಕಾಲದಲ್ಲಿ ಹೀಗಿರಲಿಲ್ಲ. ಹಿಂದುಗಳ ಕಗ್ಗೊಲೆ ಅವ್ಯಾಹತವಾಗಿ ನಡೆಯುತ್ತಿತ್ತು. ಕನ್ನಡಿಯಲ್ಲಿ ಒಮ್ಮೆ ನಿಮ್ಮ ಮುಖ ನೋಡಿಕೊಳ್ಳಿ. ರಕ್ತ ಹರಿಸಿ ರಾತ್ರಿ ಹೇಗೆ ನಿದ್ದೆ ಮಾಡುತ್ತಿದ್ದಿರಿ ಎಂಬುದು ದೇವರಿಗೇ ಗೊತ್ತು' ಎಂದು ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ನಾನು ರಾಷ್ಟ್ರೀಯವಾದಿ: 'ನನ್ನ ತಂದೆ ರಾಷ್ಟ್ರೀಯವಾದಿ, ನಾನೂ ಅದನ್ನೇ ಪಾಲಿಸುತ್ತೇನೆ. ಆರ್‌ಎಸ್‌ಎಸ್ ಕೂಡ ರಾಷ್ಟ್ರೀಯತೆಯನ್ನೇ ಪ್ರತಿಪಾದಿಸುತ್ತದೆ' ಎಂದು ಅವರು ಮತ್ತೊಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.


'ನನ್ನ ತಂದೆ ನನಗೆ ಸಾರ್ವಜನಿಕ ಜೀವನದಲ್ಲಿ ಯಾವುದು ಉತ್ತಮ ಎಂಬುದನ್ನು ಕಲಿಸಿದ್ದಾರೆ. ಇದೇ ರೀತಿಯ ಮಾರ್ಗದರ್ಶನವನ್ನು ಅವರು ನಿಮಗೂ ನೀಡಿರಬಹುದು ಎಂಬುದು ನನ್ನ ಭಾವನೆ. ಅದೇನೆ ಇರಲಿ ಸಿದ್ದರಾಮಯ್ಯ ಅವರೇ ನೀವು ಜೀವನ ಪರ್ಯಂತ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿತ್ತಾ ಬಂದಿದ್ದೀರಿ. ಈಗ ಒಂದು ಕುಟುಂಬದ ಹಿನ್ನೆಲೆ ಗಾಯಕರಾಗಿದ್ದೀರಿ' ಎಂದು ಬೊಮ್ಮಾಯಿ ಕುಟುಕಿದ್ದಾರೆ.


ಬಸವರಾಜ ಬೊಮ್ಮಾಯಿ

ಮೇವಿಗೆ ಬದಲು ಚಾಕೊಲೇಟ್!

ಜಬಲ್‌ಪುರ, ಮಧ್ಯಪ್ರದೇಶ (ಪಿಟಿಐ): ಕ್ಷೀರೋತ್ಪಾದನೆ ವೃದ್ಧಿಸುವ ಗುರಿಯೊಂದಿಗೆ ಸ್ಥಳೀಯ ವಿಶ್ವವಿದ್ಯಾಲಯ ಜಾನುವಾರುಗಳಿಗೆ ಮೇವಿಗೆ ಪರ್ಯಾಯವಾಗಿ ನೀಡಲು ಚಾಕೊಲೇಟ್ ಅಭಿವೃದ್ಧಿಪಡಿಸಿದೆ. ಇದು, ಹಾಲಿನ ಉತ್ಪಾದನೆ ಹೆಚ್ಚಿಸುವ ಜೊತೆಗೆ ಜಾನುವಾರುಗಳ ಸಂತತಿ ವೃದ್ಧಿಗೂ ನೆರವಾಗಲಿದೆ ಎಂದು ವಿ.ವಿ ಅಧಿಕಾರಿಗಳು ಹೇಳಿದ್ದಾರೆ.

ಎರಡು ತಿಂಗಳ ಸಂಶೋಧನೆಯ ಬಳಿಕ ಸ್ಥಳೀಯ ನಾನಾಜಿ ದೇಶ್‌ಮುಖ್ ಪಶುಸಂಗೋಪನಾ ವಿಜ್ಞಾನ ವಿಶ್ವವಿದ್ಯಾಲಯವು ಜಾನುವಾರುಗಳಿಗಾಗಿ ಬಹುಪೋಷಕಾಂಶ ಮತ್ತು ಜೀವಸತ್ವವುಳ್ಳ ಚಾಕೊಲೇಟ್ ಅಭಿವೃದ್ಧಿ-


ಪ್ರಾತಿನಿಧಿಕ ಚಿತ್ರ

ಪಡಿಸಿದೆ. ಹಸಿರು ಮೇವು ಅಲಭ್ಯವಿದ್ದಾಗ, ಪರ್ಯಾಯವಾಗಿ ಇದನ್ನು ಬಳಸಬಹುದು ಎಂದು ಕುಲಪತಿ ಎಸ್.ಪಿ.ತಿವಾರಿ ತಿಳಿಸಿದರು.

ಪಶು ಸಂಗೋಪನಾ ಇಲಾಖೆಯ ಸಹಯೋಗದಲ್ಲಿ ಮೇವುಗಳಿಗೆ ಒದಗಿಸಲು ರಾಜ್ಯದಾದ್ಯಂತ ರೈತರಿಗೆ ಶೀಘ್ರದಲ್ಲೇ ಪೂರೈಸಲಾಗುವುದು. ಅಲ್ಲದೆ, ಚಾಕೊಲೇಟ್ ಉತ್ಪಾದನೆಗೆ ಸ್ಟಾರ್ಟ್ ಅಪ್ ಆರಂಭಿಸಲು ಮುಂದಾಗುವ ಪಶುಸಂಗೋಪನೆ ಕೋರ್ಸ್ ಪದವೀಧರರಿಗೆ ತಂತ್ರಜ್ಞಾನ ಒದಗಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ಈ ಚಾಕೊಲೇಟ್ ಜಾನುವಾರುಗಳಲ್ಲಿ ಹಾಲಿನ ಉತ್ಪಾದನೆ ಸಾಮರ್ಥ್ಯ ಹೆಚ್ಚಿಸಲಿದೆ. ಜಾನುವಾರುಗಳ ಸಂತತಿ ವೃದ್ಧಿಗೂ ಕಾರಣವಾಗಲಿದೆ. ಅತ್ಯಧಿಕ ಪ್ರೊಟೀನ್ ಮತ್ತು ಜೀವಸತ್ವಗಳುಳ್ಳ ಈ ಚಾಕೊಲೇಟ್ ಅನ್ನು ನೇರವಾಗಿ ಅಥವಾ ಇತರೆ ಮೇವುಗಳ ಜೊತೆಗೆ ಮಿಶ್ರಣ ಮಾಡಿಯೂ ನೀಡಬಹುದಾಗಿದೆ ಎಂದು ವಿವರಿಸಿದರು.

ಪ್ರತಿ ಚಾಕೊಲೇಟ್ ತೂಕ 500 ಗ್ರಾಂ ಆಗಿದ್ದು, ದರ ₹ 25 ನಿಗದಿಪಡಿಸಲಾಗಿದೆ. ಸಾಂಪ್ರದಾಯಿಕವಾಗಿ ಜಾನುವಾರುಗಳಿಗೆ ನೀಡಲಾಗುವ ಸಾಸಿವೆ ಹಿಟ್ಟು, ಭತ್ತದ ಹೊಟ್ಟು, ಕಾಕಂಬಿ, ಗಂಜಿ, ಉಪ್ಪು, ನಿಂಬೆ ಪೌಡರ್ ಅನ್ನು ಬಳಸಿ ಇದನ್ನು ಉತ್ಪಾದಿಸಲಾಗಿದೆ.

ಚಾಕೊಲೇಟ್ ಉತ್ಪಾದನೆಗೆ ಪೂರಕವಾಗಿ ಮರದ ಅಚ್ಚನ್ನೂ ವಿ.ವಿ. ವಿನ್ಯಾಸಗೊಳಿಸಿದೆ. ಸದ್ಯ, 500 ಚಾಕೊಲೇಟ್ ಅನ್ನು ಉತ್ಪಾದಿಸಲಾಗಿದೆ. ಸರ್ಕಾರಕ್ಕೆ ಪತ್ರ ಬರೆದಿದ್ದು, ಅನುಮೋದನೆ ದೊರೆತ ಕೂಡಲೇ ಉತ್ಪನ್ನವು ಮಾರುಕಟ್ಟೆಗೆ ಪ್ರವೇಶಿಸಲಿದೆ ಎಂದು ಅವರು ವಿವರಿಸಿದರು.

ವಿಚಾರ ನಿಷ್ಠುರಿ, ಕೋಮಲ ಹೃದಯಿ

• ಎಂ.ಎಸ್. ಆಶಾದೇವಿ

ರೈಲ್ವೆ ನಿಲ್ದಾಣ, ಬೆಳಗಿನ ಜಾವ, ಅದೇ ರೈಲಿನಲ್ಲಿ ರಾಜ್ಯದ ಉ ಪ ಮು ಖ್ಯ ಮ ೦ ತ್ರಿ ಯ ವ ರೂ ಪ್ರಯಾಣಿಸಿದ್ದರು. ಜಿಕೆಜಿ ಇಳಿದು ಸರ ಸರ ಮುಂದೆ ಬರುವಾಗ ಪೊಲೀಸರು ಅವರನ್ನು ತಡೆದು, ಉಪಮುಖ್ಯಮಂತ್ರಿಯವರು ಹೋಗುವ ತನಕ ಮಿಕ್ಕವರಾರೂ ಹೋಗುವಂತಿಲ್ಲ ಎಂದರು. ರೀ, ಅದೆಲ್ಲಾ ಸಾಧ್ಯವಿಲ್ಲ, ಅವರೂ ನಮ್ಮಂತೆಯೇ ಬರಲಿ ಬೇಕಾದರೆ, ರಕ್ಷಣೆಯ ವಿಷಯವಾದರೆ, ನಾವೆಲ್ಲ ಬಡಪ್ರಜೆಗಳು ಹೋದಮೇಲೆ ಆ ಮಹಾನುಭಾವರು ಹೋಗಲಿ, ನೀವೆಲ್ಲಾ ಇದೀರಲ್ಲಾ ಅವರಿಗೆ ರಕ್ಷಣೆ ಕೊಡೋದಿಕ್ಕೆ ಅಂತ ರೇಗಿ, ಅವರ ಪಾಡಿಗೆ ಅವರು ನಿಲ್ದಾಣದಿಂದ ಹೊರಬಂದರು. ಅವತ್ತೇ ಅವರನ್ನು ನಾನು, ನಾನು ಕೆಲಸ ಮಾಡುತ್ತಿದ್ದ ಗ್ರಾಮೀಣ ಕಾಲೇಜಿಗೆ ಅತಿಥಿಯಾಗಿ ಕರೆದಿದ್ದೆ.

ಎಂದಿನಂತೆ ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದ ಶಾಸಕರು ಎಷ್ಟು ಹೊತ್ತಾದರೂ ಬರಲಿಲ್ಲ. ಜಿಕೆಜಿ ಮುಖ ಕೆಂಪಗಾಗುತ್ತಾ ಹೋಯಿತು. ನನಗೆ ಇನ್ನು ಹತ್ತು ನಿಮಿಷ ಅಷ್ಟೆ. ಆಮೇಲೆ ಕಾರ್ಯಕ್ರಮ ಶುರು ಮಾಡೋಣ ಎಂದರು. ಶಾಸಕರ ಆಗಮನವಾಯಿತು. ಅವರ ಕೈ, ಕಾಲಿಗೆ ಬ್ಯಾಂಡೇಜಿನ ಅಲಂಕಾರವಿತ್ತು. ಅದನ್ನೇ ದಿಟ್ಟಿಸಿ ನೋಡುತ್ತಾ, ಕಲಾವಿದನ ನಾಟಕೀಯತೆಯಲ್ಲಿ ಜಿಕೆಜಿ, 'ಪಾಪ, ತುಂಬಾ ನೋವಿದ್ಯಾ, ನೀವೇ ಬಿದ್ದು ಮುರಿದದ್ದಾ? ಯಾರಾದರೂ ಮುರಿದದ್ದಾ' ಎಂದು ಕೇಳಿಯೇ ಬಿಟ್ಟರು. ಪ್ರಿನ್ಸಿಪಾಲರಿಗೂ ನನಗೂ ಜೀವ ಬಾಯಿಗೆ ಬಂದಿತ್ತು. ಶಾಸಕರು ಅಸ್ಪಷ್ಟ ಧ್ವನಿಯಲ್ಲಿ ಏನು ಹೇಳಿದರೋ ಯಾರಿಗೂ ತಿಳಿಯಲಿಲ್ಲ! ಈಗಲೂ ನನಗನ್ನಿಸುವುದು, ಶಾಸಕರಿಗೆ ಇವರ ಪ್ರಶ್ನೆ ಸರಿಯಾಗಿ ಕೇಳಿಸಿರಲಿಕ್ಕಿಲ್ಲ ಎಂದು! ಇಲ್ಲವಾದಲ್ಲಿ ಅವತ್ತು ಅಲ್ಲೊಂದು ಮಾರಾಮಾರಿಯಾಗುತ್ತಿತ್ತು.

ಜಿಕೆಜಿ ಅವರು ಉಳಿದುಕೊಂಡ ಹೋಟೆಲಿನ ಬಿಲ್ಲನ್ನು ನಾನು ಕೊಡಲು ಹೋದರೆ, ಏನು ಮಾಡಿದರೂ ಅವರು ಒಪ್ಪಲಿಲ್ಲ. ಸರ್ಕಾರಿ ಕಾಲೇಜಿನಲ್ಲಿ ಇದಕ್ಕೆಲ್ಲ ಎಷ್ಟು ದುಡ್ಡು ಇಟ್ಟಿರ್ತಾರೆ ಅಂತ ನನಗೆ ಗೊತ್ತಿದೆ, ನೀನು ಸುಮ್ಮನಿರು, ನಿನ್ನ ಮನೆಗೆ ಊಟಕ್ಕೆ ಬರ್ತೀನಿ ಸಾಕು, ಎಂದು ಅವರೇ ಅದರ ಬಿಲ್ಲು ಕೊಟ್ಟರು. ಅವರಿಗೆ ಇಷ್ಟ ಎಂದು ತಾಲಿಪಿಟ್ಟು ಮಾಡಿದ್ದೆ. ಇಷ್ಟಪಟ್ಟು ತಿಂದ ಅವರು ಹೇಳಿದ ಮಾತು ಈಗಲೂ ಕಿವಿಯಲ್ಲಿದೆ. 'ಇಟ್ಸ್ ವಂಡರ್‌ಫುಲ್, ನನ್ನ ಹೆಂಡ್ತೀನೂ ತುಂಬಾ ಚೆನ್ನಾಗಿ ಮಾಡ್ತಾಳೆ. ಐ ಡೋಂಟ್ ವಾಂಟ್ ಟು ಕಂಪೇರ್, ಆದರೆ ನೀನು ಸಾಕು ಮಗಳು. ಆದ್ದರಿಂದ ಒಂದು ಮಾರ್ಕ್ಸ್ ಜಾಸ್ತಿ'.

ಕೋಪ ಬಂದಾಗ, ತುಂಬಾ ಕಾಲ ನಾನು ಫೋನ್ ಮಾಡದೇ ಇದ್ದಾಗಲೆಲ್ಲ, 'ಹೌ ಆರ್ ಯು ಬ್ಯಾಡ್ ಗರ್ಲ್ ಆಫ್ ದ ವರ್ಲ್ಡ್' ಎಂದೇ ಮಾತು ಶುರುವಾಗುತ್ತಿತ್ತು. ಅವರು ಬರೆದದ್ದನ್ನೆಲ್ಲ ಕಳಿಸಿಯೇ ಕಳಿಸುತ್ತಿದ್ದರು. ಓದಿ ಪ್ರತಿಕ್ರಿಯಿಸದೇ ಇದ್ದರೆ ದೂರ್ವಾಸ ಮುನಿ. ಹೆಣ್ಣುಮಕ್ಕಳನ್ನು ಕುರಿತು ಒಂದು ಮಹತ್ವದ ಕೃತಿ ಬರೆಯಬೇಕೆನ್ನುವುದು ಅವರ ಮಹದಾಸೆಯಾಗಿತ್ತು. ಅದಕ್ಕಾಗಿ ಅವರು ನೋಟ್ಸ್ ಕೂಡ ಮಾಡುತ್ತಾ ಇದ್ದರು. ಇದ್ದಕ್ಕಿದ್ದಂತೆ ಅವರಿಗೆ ಗಾಂಧಿಯ ಉಪವಾಸಗಳನ್ನು ಕುರಿತು ಬರೆಯಬೇಕು ಎನ್ನಿಸಿತು. ಅದನ್ನು ಬರೆದ ಮೇಲೆ, ಹಲವರಿಗೆ ಓದಲು ಕೊಟ್ಟು ಅವರ ಪ್ರತಿಕ್ರಿಯೆಗಳನ್ನು ಬರೆಯಿಸಿಕೊಂಡರು. ಹಿರಿಯ ಲೇಖಕರೊಬ್ಬರ ಚಿತಾವಣೆಯಿಂದ (!) ಜಿಕೆಜಿ ನನ್ನನ್ನೇ ಮುನ್ನುಡಿ ಬರೆಯಲು ಕೇಳಿದರು. ಸರ್, ದೊಡ್ಡವರೆಲ್ಲ ಬರೆಯಲಿ ನಾನು ಯಾಕೆ ಎಂದರೆ, ನನಗೆ/ನಮಗೆ ನೀನೂ ದೊಡ್ಡವಳು. ಬರಿಬೇಕು ಸುಮ್ಮನೆ, ಜಂಭ ಮಾಡದೆ ಅಪ್ಪನ ಮಾತು ಕೇಳು ಅಂದರು. ಆ ಪುಸ್ತಕದಲ್ಲಿ ಅವರನ್ನು ಮೆಚ್ಚಿಕೊಂಡದ್ದಕ್ಕಿಂತ ಅವರನ್ನು ಪ್ರಶ್ನಿಸುವ ಮಾತುಗಳೇ ಅಧಿಕ. ಆದರೆ ಜಿಕೆಜಿ ಹೇಳಿದರು, ನಮ್ಮ ಸಾರ್ವಜನಿಕ ಚರ್ಚೆಗಳು ಇರಬೇಕಾದ್ದೇ ಹೀಗೆ, ನನಗೆ ಏನೂ ಬೇಸರವಿಲ್ಲ ಎಂದು.

ಈ ಎಲ್ಲ ಪ್ರಸಂಗಗಳೂ ಜಿಕೆಜಿಯವರ ವ್ಯಕ್ತಿತ್ವವನ್ನು, ಅವರ ನೋಟ ನಿಲುಮೆಗಳನ್ನು ಚಿತ್ರಿಸುತ್ತವೆ. ಅವರೊಬ್ಬ ಆರ್ದ್ರಹೃದಯದ ಅಂತಃಕರುಣಿಯಾದಂತೆಯೇ ಜನಪರ ವಿಷಯಗಳ ಹೊತ್ತಿನಲ್ಲಿ ನಿಷ್ಠುರವಾದ ಸಾರ್ವಜನಿಕ ನಿಲುವುಗಳನ್ನು ಅಷ್ಟೇ ಉಗ್ರವಾಗಿ ಪ್ರ ತಿ ಪಾ ದಿ ಸ ಬ ಲ್ಲ ವ ರಾ ಗಿ ದ್ದ ರು . ಮೂಲಭೂತವಾದಿಗಳನ್ನು ಎದುರು ಹಾ ಕಿ ಕೊ ಳ್ಳ ಬ ಲ್ಲ ವ ರಾ ಗಿ ದ್ದ ರು . ವಾಚಕರವಾಣಿಗೆ ತಮ್ಮ ವಸ್ತುನಿಷ್ಠ ಆಲೋಚನೆಗಳನ್ನು ಏ ಕಾ ೦ ಗಿ ಯಾ ಗಿ ಯಾ ದ ರೂ ಬರೆಯಬಲ್ಲವರಾಗಿದ್ದರು. ನೈತಿಕತೆಯ ಪ್ರಶ್ನೆಯು ಕೊನೆಯವರೆಗೂ ಅವರಿಗೆ ಮೂಲಧಾತುವಾಗಿತ್ತು. ಬಹುತ್ವದ ಭಾರತವು ಅವರಿಗೆ ಬೌದ್ಧಿಕ ನಿಲುವು ಮಾತ್ರವಾಗಿರಲಿಲ್ಲ, ಪೊಲಿಟಿಕಲಿ ಕರೆಕ್ಟ್ ಧೋರಣೆಯೂ ಆಗಿರಲಿಲ್ಲ. ಅವರು ಅದನ್ನು ಮನವಾರೆ ನಂಬಿ ನೆಚ್ಚಿದವರಾಗಿದ್ದರು.

ರಂಗಭೂಮಿ, ಸಿನೆಮಾಗಳಲ್ಲಿ ತೊಡಗಿಸಿಕೊಂಡಿದ್ದ ಜಿಕೆಜಿ, ಅದರಲ್ಲಿ ಕೆಲವು ಪಾತ್ರಗಳನ್ನು ತಮ್ಮ ವ್ಯಕ್ತಿತ್ವದ ಅನಾವರಣ ಎಂದೇ ತಿಳಿಯುತ್ತಿದ್ದರು. ನನ್ನ ನೆನಪು ಸರಿಯಾಗಿದ್ದರೆ, ರಂಗಶಂಕರದಲ್ಲಿ ಅವರು ಕಿಂಗ್ ಲಿಯರ್ ಮಾಡಿದ್ದೇ ಕಡೆ ಇರಬೇಕು. ಆ ನಾಟಕದ ತಾಲೀಮು ನಡೆಯುತ್ತಿರುವಾಗ ಪದೇ ಪದೇ ಫೋನ್ ಮಾಡುತ್ತಿದ್ದರು. 'ಅಲ್ಲಾ ಆಶಾ, ಅಪ್ಪನ ಪಾತ್ರ ಅಮ್ಮನಷ್ಟೇ ಮುಖ್ಯ ಅಲ್ವೇನಮ್ಮಾ, ಆದರೂ ಅಮ್ಮನಿಗೆ ಪ್ರಥಮ ಪ್ರಾಶಸ್ತ್ಯ, ಇರಲಿ, ಅದನ್ನ ನಾನು ಅಲ್ಲಗಳೆಯೋದಿಲ್ಲ, ಆದರೆ ಅಪ್ಪನ ಪಾತ್ರ, ವ್ಯಕ್ತಿತ್ವ ಇನ್ನೂ ಹೆಚ್ಚಿನದಕ್ಕೆ ಅರ್ಹ ಅಲ್ವೇನಮ್ಮಾ' ಎನ್ನುವ ಪ್ರಶ್ನೆಯನ್ನು ಕೇಳಿದ್ದರು. ನಾನು ಲಘುವಾಗಿ, 'ನಮ್ಮ ಇಂಡಿಯಾದಲ್ಲಿ ಅಪ್ಪಂದಿರಿಗೆ ಸಿಕ್ಕಾಪಟ್ಟೆ ಸ್ಕೋಪ್ ಕೊಟ್ಟೂ ಕೊಟ್ಟೂ ಅವರು ಅಲ್ಲಿ ಹೋಗಿ ಕೂತಿರ್ತಾರೆ, ಅವರಿಗೆ ಸಹಜವಾಗಿ ಇರೋಕೇ ಬರೋಲ್ಲ, ತುಂಬಾ ಬಡಿವಾರ ಮಾಡ್ತಾರೆ' ಅಂದುಬಿಟ್ಟಿದ್ದೆ. ಮಾರನೇ ದಿನ ಅವರು ಮತ್ತೆ ಫೋನ್ ಮಾಡಿದಾಗಲೇ ಅವರಿಗೆ ಅದು ತುಂಬಾ ಕಾಡಿದೆ ಅನ್ನುವುದು ಗೊತ್ತಾಗಿದ್ದು. ಆ ನಾಟಕಕ್ಕೆ ಹೋಗಿದ್ದೆ. ಅವರು ಕಿಂಗ್ ಲಿಯರ್‌ನ ಪಾತ್ರದಲ್ಲಿ ನಿಜಕ್ಕೂ ಮುಳುಗಿಹೋಗಿದ್ದರು.

ಈಗ ಅನ್ನಿಸುತ್ತಿದೆ, ಯಾವುದೊಂದನ್ನೂ ಅವರು ಪ್ರಾಮಾಣಿಕತೆಯಲ್ಲಿಯೇ ನಿಭಾಯಿಸಲು ನೋಡಿದರು. ಅಪ್ರಾಮಾಣಿಕವಾಗಿ ಅವರು ಏನನ್ನೂ ಮಾತನಾಡಲಿಲ್ಲ, ಬರೆಯಲಿಲ್ಲ, ಬದುಕಲಿಲ್ಲ. ತಮ್ಮ ಇರಾದೆಗೆ ಅನುಗುಣವಾಗಿಯೇ ಅವರು ಬದುಕಿದರು. ಅವರ ಅಭಿಪ್ರಾಯಗಳನ್ನು ನಾವು ಒಪ್ಪದೇ ಇರಬಹುದು, ಆದರೆ ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸಲು ಸಾಧ್ಯವಿಲ್ಲ. 84ರ ವಯಸ್ಸಿನಲ್ಲಿಯೂ ಅವರ ವೈಚಾರಿಕ ಪ್ರಖರತೆಗೆ ಯಾವ ಭಂಗವೂ ಬಂದಿರಲಿಲ್ಲ. ಅವರ ಅಧ್ಯಯನಶೀಲತೆ ಇನಿತೂ ಕಡಿಮೆಯಾಗಿರಲಿಲ್ಲ. ಇದೇ ಮೇಷ್ಟ್ರಿಂದ ನಾವು ಕಲಿಯಬೇಕಾದ ನಿಜ ಪಾಠ.

ರಂಗಕರ್ಮಿ ಜಿ.ಕೆ. ಗೋವಿಂದರಾವ್ ಇನ್ನಿಲ್ಲ

ಒಂದನೇ ಪುಟದಿಂದ...

ಅವರಿಗೆ ಶ್ಯಾಮಲಾ ಗುರುಪ್ರಸಾದ್ ಹಾಗೂ ಶಾಂತಲಾ ರಾವ್ ಎಂಬ ಪುತ್ರಿಯರಿದ್ದಾರೆ.

1937ರ ಏಪ್ರಿಲ್ 27ರಂದು ಬೆಂಗಳೂರಿನಲ್ಲಿ ಜನಿಸಿದ್ದ ಗೋವಿಂದರಾವ್ ಅವರು ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡಿದ್ದರು.

ಕಿರು ಕಾದಂಬರಿ ಈಶ್ವರ ಅಲ್ಲಾ, ವಿಮರ್ಶಾ ಲೇಖನಗಳು, ಮನು ವರ್ಸಸ್ ಅಂಬೇಡ್ಕರ್ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಗ್ರಹಣ, ಮಿಥಿಲೆಯ ಸೀತೆಯರು, ಕರ್ಫ್ಯೂ, ನಿಶ್ಶಬ್ದ, ಶಾಸ್ತ್ರಿ ಭೂಮಿ ತಾಯಿಯ ಚೊಚ್ಚಲ ಮಗ, ಅಜ್ಜು ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದರು. ಮಹಾ ಪರ್ವ ಮತ್ತು ಮಾಲ್ಗುಡಿ ಡೇಸ್ ಧಾರಾವಾಹಿಗಳಲ್ಲಿ ನಟಿಸಿದ್ದರು.

ಅನಾರೋಗ್ಯದ ಕಾರಣದಿಂದಾಗಿ ಆಗಸ್ಟ್‌ನಲ್ಲಿ ಹುಬ್ಬಳ್ಳಿಯಲ್ಲಿರುವ ಪುತ್ರಿಯ ಮನೆಗೆ ಬಂದಿದ್ದರು. ಆರು ದಿನಗಳ ಹಿಂದೆ ಆರೋಗ್ಯ ಕ್ಷೀಣಿಸಿದಾಗ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಕುಟುಂಬದವರು ತಿಳಿಸಿದ್ದಾರೆ.

ಗೋವಿಂದರಾವ್ ಆಸೆಯಂತೆ ಅವರ ಕಣ್ಣುಗಳನ್ನು ಇಲ್ಲಿನ ಎಂ.ಎಂ. ಜೋಶಿ ನೇತ್ರ ವಿಜ್ಞಾನ ಸಂಸ್ಥೆಗೆ ದಾನ ಮಾಡಲಾಯಿತು. ಶುಕ್ರವಾರ ಬೆಳಿಗ್ಗೆ ಅಂತ್ಯಕ್ರಿಯೆ ನೆರವೇರಿತು.


ಕಲೆ: ಮನೋಹರ ಕೆ.ಆಚಾರ್ಯ

ತುದಿಯಿರದ ನೆತ್ತರ ನದಿ

ಇದೊಂದು ರೀತಿ ಕಳ್ಳ ಪೊಲೀಸ್ ಆಟ. ಮೊದಲಾರ್ಧ ದುರುಳರ ಮೆರೆದಾಟ; ದ್ವಿತೀಯಾರ್ಧ ಪೊಲೀಸರ ಆಟ ಮತ್ತು ಕಳ್ಳಾಟ. ಕಥೆ ಇಲ್ಲಿ ನೆಪಕ್ಕೆ ಮಾತ್ರ; 'ಕಥೆ ಮುಗಿಸುವುದೇ' ಇದರ ಸೂತ್ರ.

ತಮ್ಮ ಮೊದಲ ನಿರ್ದೇಶನದಲ್ಲಿ ನಟ ದುನಿಯಾ ವಿಜಯ್ ತಮ್ಮ ನಟನೆಯ ಹಿಂದಿನೆಲ್ಲ ಸಿನಿಮಾಗಳಿಗಿಂತ ಸಾಕಷ್ಟು ಮುಂದಕ್ಕೆ ಹೋಗಿದ್ದಾರೆ. ಆದರೆ ಹಾಗೆ ಸಾಗಿದ ದಾರಿ ಹೇಗಿದೆಯೆಂದರೆ ಅಲ್ಲಿಂದ ತಿರುಗಿ ಬರಲು ಅವರು ನಡೆಸುವ ಪ್ರಯತ್ನಗಳೂ ಮಸುಕು ಎನಿಸುವಷ್ಟು!

ಆಯುಧಪೂಜೆಯ ದಿನ ಬಿಡುಗಡೆಯಾದ 'ಸಲಗ', ಪಾತಾಳಲೋಕದ ಸಕಲ ಆಯುಧಗಳನ್ನು, ಅವುಗಳಿಂದ ಸಾಧಿಸಬಹುದಾದ ಕ್ರೌರ್ಯದ ಪರಮಾವಧಿಯನ್ನೂ ಈರುಳ್ಳಿಯ ಹಾಗೆ ಬಿಡಿಸಿಡುತ್ತದೆ. ಒಂದು ದೃಶ್ಯದಿಂದ ಇನ್ನೊಂದು ದೃಶ್ಯಕ್ಕೆ ಚೆಲ್ಲಾಡುವ ನೆತ್ತರು ಹೆಚ್ಚುತ್ತಲೇ ಹೋಗುತ್ತದೆ. ಕೆಂಡ, ಸೂರಿ ಅಣ್ಣ, ಸಲಗ, ಸಾವಿತ್ರಿ ಹೀಗೆ ಹೆಸರುಗಳಷ್ಟೇ ಅಲ್ಲ, ಅವರ ಮುಖ ವರ್ತನೆ ಎಲ್ಲವೂ ವಿಕ್ಷಿಪ್ತವೇ. ಕೆಲವು ಕಡೆಗಳಲ್ಲಿ ತಮಿಳು ಸಿನಿಮಾಲೋಕದಿಂದ ಜಾರಿಬಿದ್ದಂತೆಯೂ, ಸೂರಿ ಸಿನಿಮಾಗಳಿಂದ ದಂಗೆಯೆದ್ದು ಧುಮುಕಿದಂತೆಯೂ ಕಾಣುವ ಪಾತ್ರಗಳು ಹಿಂಸೆಯನ್ನೂ ಕ್ರೌರ್ಯವನ್ನೂ ಮೆರೆಯುವ ರೀತಿ ನಿದ್ದೆಗೆಡಿಸುವಷ್ಟು ಬೀಭತ್ಸವಾಗಿದೆ.

ಮೊದಲರ್ಧದ ಹಿಂಸೆಗೆ 'ಸಕಾರಣ ನ್ಯಾಯ'ವೊದಗಿಸುವ ಪ್ರಯತ್ನ ದ್ವಿತೀಯಾರ್ಧದಲ್ಲಿದೆ. 'ತೊಳ್ಕೊಳ್ಬೇಕಾಗಿರೋದು ಪಾದವನ್ನಲ್ಲ; ಪಾಪವನ್ನು' ಎನ್ನುವ ಮಾತು ದ್ವಿತೀಯಾರ್ಧದ ಸೂತ್ರವಾಕ್ಯ. ಕತ್ತಲಲ್ಲಿರುವ ಪಾತಕಿಗಳನ್ನು ಬೆಳಕಿನಲ್ಲಿರುವ ವ್ಯವಸ್ಥೆ ಹೇಗೆ ಬೆಳೆಸುತ್ತದೆ, ಬಳಸಿಕೊಳ್ಳುತ್ತದೆ ಎಂಬುದನ್ನು ಕಾಣಿಸುವ ಪ್ರಯತ್ನವೂ ಇದೆ. ಅಷ್ಟೇ ಅಲ್ಲ, ಆ ತೆರೆಮರೆಯಾಟದಲ್ಲಿ ಬಲಿಯಾಗುವ ಅಮಾಯಕರ ಛಿದ್ರ ಜಗತ್ತನ್ನು ಕಾಣಿಸಬೇಕು ಎಂಬ ಹಂಬಲವೂ ನಿರ್ದೇಶಕರಿಗಿದೆ. ಆದರೆ ಮೊದಲಾರ್ಧದಲ್ಲಿ ಪ್ರೇಕ್ಷಕನ ಮನಸಲ್ಲಿ ಚೆಲ್ಲಿದ ರಕ್ತವನ್ನು ತೊಳೆಯುವುದು ಅಷ್ಟು ಸುಲಭವಲ್ಲ.


'ಸಲಗ' ಚಿತ್ರದಲ್ಲಿ ವಿಜಯ್

ಸಲಗ

- ನಿರ್ಮಾಣ: ಕೆ.ಪಿ. ಶ್ರೀಕಾಂತ್
- ನಿರ್ದೇಶನ: ದುನಿಯಾ ವಿಜಯ್
- ತಾರಾಗಣ: ದುನಿಯಾ ವಿಜಯ್, ಧನಂಜಯ್, ಶ್ರೀಧರ್, ಅಚ್ಯುತ್ ಕುಮಾರ್, ಚನ್ನಕೇಶವ, ಯಶ್ ಶೆಟ್ಟಿ, ಸಂಪತ್, ನೀನಾಸಂ ಅಶ್ವತ್ಥ್, ಸಂಜನಾ ಆನಂದ್

ನಾವು ನೋಡಿದ ಸಿನಿಮಾ

ಕೆಂಡನನ್ನು ಕೊಲ್ಲುವ ಮುನ್ನ 'ಬ್ಯಾಟ್ಸ್‌ಮನ್'ಗಳು ಉಣ್ಣುವ ಅನ್ನ, ಛಿದ್ರಗೊಂಡ ದೇಹದ ಪೋಸ್ಟ್ ಮಾರ್ಟಂ ನೋಡುತ್ತ ಎಸಿಪಿ ಸಾಮ್ರಾಟ್ ಉಣ್ಣುವ ಅನ್ನ, ರೌಡಿ ಮಗಳು ಎಂಬ ಹಣೆಪಟ್ಟಿ ಹೊತ್ತುಕೊಳ್ಳಲಾರದೆ ಅವಮಾನದಿಂದ ಸಾಯುವ ಬಾಲಕಿಯ ಡಬ್ಬಿಯಲ್ಲಿ ಅರ್ಧ ತಿಂದುಬಿಟ್ಟ ಅನ್ನ – ಈ ಮೂರು ಇಮೇಜ್‌ಗಳನ್ನು 'ಸಲಗ'ನ ಜಗತ್ತಿನ ಮೂರು ಕೇಂದ್ರಗಳಾಗಿ ನೋಡಬಹುದು.

ಬಿಲ್ಡಪ್ಪುಗಳನ್ನು ಉಳಿಸಿಕೊಂಡೂ ವಿಜಯ್, ಸಹನಟರಿಗೆ ಸಾಕಷ್ಟು 'ಸ್ಕ್ರೀನ್‌ಸ್ಪೇಸ್' ಬಿಟ್ಟುಕೊಟ್ಟಿದ್ದಾರೆ. ತೆರೆಯ ಮೇಲೆ ಬರುವ ಒಂದೊಂದು ಪಾತ್ರಗಳೂ ಬೇರೆ ಬೇರೆ ರೀತಿಯಲ್ಲಿ ಮನಸ್ಸಿಗೆ ತಮ್ಮ ಗುರುತಿನ ಚೂರಿಯನ್ನು ಚುಚ್ಚಿಯೇ ಹೋಗುತ್ತವೆ. ಅಚ್ಯುತ್ ಕುಮಾರ್ ಅವರಂಥ ನಟನ ಜೊತೆಗೆ ಶ್ರೀಧರ್ ಎಂಬ ಹೊಸ ಪ್ರತಿಭೆಯೂ ಉಜ್ವಲಗೊಳ್ಳಲು ವಿಜಯ್ ಜಾಗ ಮಾಡಿಕೊಟ್ಟಿದ್ದಾರೆ. ಆದರೆ ನಾಯಕಿ ಸಂಜನಾ ಮಾತ್ರ ಕಷ್ಟಪಟ್ಟು ಬಂದು ಮುಖವನ್ನೊಮ್ಮೆ ತೋರಿಸಿ ಮಾಯವಾಗಿಬಿಡುತ್ತಾರೆ. ರೌಡಿಗಳ ಮಚ್ಚಿನ ಹೊಡೆತ, ಪೊಲೀಸರ ಗುಂಡಿನ ಮೊರೆತ ಮತ್ತು ಮಾಸ್ತಿ ಅವರ ಸಂಭಾಷಣೆಯ ಹರಿತ ಈ ಮೂರೂ ಎಲ್ಲ ಗಡಿರೇಖೆಗಳನ್ನು ಚಿಂದಿಯೆಬ್ಬಿಸಿ ತ್ರಿಕೋನ ಸ್ಪರ್ಧೆಗೆ ಬಿದ್ದಿವೆ. ನೆತ್ತರ ವಾಸನೆಗೆ ಜಾನಪದದ ಕಂಪು ಬೆರೆಸುವ ಪ್ರಯತ್ನವನ್ನು ಚರಣ್ ರಾಜ್ ಮಾಡಿದ್ದಾರೆ. ಶಿವ ಸೇನಾ ಕ್ಯಾಮೆರಾ ರೌಡಿಗಳ ಮಚ್ಚಿನಷ್ಟೇ ಜೋರಾಗಿ ಚಲಿಸಿದೆ.

ಕೊನೆಯಲ್ಲಿ ವಿಶೇಷ ಸೂಚನೆಯೊಂದಿದೆ: ಈ ಚಿತ್ರವನ್ನು ನೋಡಿಬಂದ ತಕ್ಷಣ ಊಟ ಮಾಡಬೇಡಿ; ತಿನ್ನುವ ಅನ್ನ ಕೆಂಪಾಗಿ ಕಾಣಿಸುತ್ತದೆ. ನೀರು ಕುಡಿಯಬೇಡಿ; ಬಟ್ಟಲಲ್ಲಿನ ಜಲ ನೆತ್ತರ ವಾಸನೆ ಪೂಸುತ್ತದೆ. ನಿದ್ದೆ ಮಾಡಬೇಡಿ; ದುಃಸ್ವಪ್ನ ಬೆಚ್ಚಿಬೀಳಿಸುತ್ತದೆ.

ಪದ್ಮನಾಭ ಭಟ್

ಕೋಟಿ ಲೂಟಿಯ ಕಥನ

ಕಿಚ್ಚ ಸುದೀಪ್ ಅಭಿನಯದಲ್ಲಿ 2016ರಲ್ಲಿ ತೆರೆಕಂಡಿದ್ದ 'ಕೋಟಿಗೊಬ್ಬ–2' ಗಲ್ಲಾಪೆಟ್ಟಿಗೆಯಲ್ಲಿ ಭಾರಿ ಸದ್ದು ಮಾಡಿದ್ದ ಚಿತ್ರ. ಅದ್ದೂರಿತನ ಹಾಗೂ ಸುದೀಪ್ ಅವರ ನೈಜ ಅಭಿನಯದಿಂದಾಗಿ ಈ ಚಿತ್ರವು ಪ್ರೇಕ್ಷಕರನ್ನು ಮೋಡಿ ಮಾಡಿತ್ತು. ಇದೇ ಸಿನಿಮಾದ ಎಳೆಯನ್ನಿಟ್ಟುಕೊಂಡು ನಿರ್ಮಿಸಿರುವ 'ಕೋಟಿಗೊಬ್ಬ–3' ಚಿತ್ರದ ಕಥೆಯು ಅದೇ ಜಾಡಿನಲ್ಲಿ ಸಾಗಿದ್ದರೂ ಇನ್ನಷ್ಟು ದೃಶ್ಯವೈಭವ, ಅದ್ದೂರಿತನವನ್ನು ಮೈಗೂಡಿಸಿಕೊಂಡಿದೆ.

ಶಿವ, ಸತ್ಯ ಹಾಗೂ ಗೋಸ್ಟ್ ಹೀಗೆ ಮೂರು ಗೆಟಪ್‌ಗಳಲ್ಲಿ ಸುದೀಪ್ ಅವರು ಕಾಣಿಸಿಕೊಂಡಿದ್ದಾರೆ. ಚಿತ್ರದ ಮೊದಲಾರ್ಧ ಹೊಡೆದಾಟ, ಸಾಹಸ ದೃಶ್ಯಗಳಿಗೆ ಮೀಸಲಾದರೆ ದ್ವಿತೀಯಾರ್ಧದಲ್ಲಿ ಅಲ್ಪ ಭಾವನಾತ್ಮಕ ಅಂಶಗಳಿಗೂ ನಿರ್ದೇಶಕ ಶಿವ ಕಾರ್ತಿಕ್ ಅವರು ಒತ್ತು ನೀಡಿದ್ದಾರೆ.

ಜಾನು ಎಂಬ ಅನಾಥ ಬಾಲಕಿಗೆ ಚಿಕಿತ್ಸೆ ಕೊಡಿಸಲು ಪೋಲೆಂಡ್‌ಗೆ ತೆರಳುವ ಸತ್ಯ ಅಲ್ಲಿನ ವಸ್ತುಸಂಗ್ರಹಾಲಯದಲ್ಲಿ ನಡೆಯುವ ದರೋಡೆ ಪ್ರಕರಣದಲ್ಲಿ ಸಿಲುಕಿಕೊಳ್ಳುತ್ತಾನೆ. ದರೋಡೆ ಮಾಡಿರುವುದು ನಾನಲ್ಲ, ನನ್ನಂತೆಯೇ ಇರುವ ಶಿವ ಎಂದು ಆತ ಗೋಗರೆದರೂ ಯಾರೂ ನಂಬುವುದಿಲ್ಲ. ಹೀಗೆ ಶಿವ ನಡೆಸುವ ಎಲ್ಲಾ ಅಪರಾಧ ಕೃತ್ಯಗಳಿಗೂ ಸತ್ಯ ಬಲಿಪಶುವಾಗುತ್ತಾನೆ. ಕೊನೆಗೆ ಈ ಗೊಂದಲದಿಂದ ಆತ ಹೊರಬರುವುದೇ ಈ ಚಿತ್ರದ ಕಥಾಹಂದರ.

ಚಿತ್ರದ ಬಹುಭಾಗದವರೆಗೂ ಶಿವ ಮತ್ತು ಸತ್ಯ ಬೇರೆ ಬೇರೆಯೇ ಅಥವಾ ಒಬ್ಬನೇ ವ್ಯಕ್ತಿಯೇ ಎನ್ನುವ ಗೊಂದಲದ ಗೂಡೊಳಗೆ ಪ್ರೇಕ್ಷಕರು ಸಿಲುಕುವಂತೆ ಮಾಡಿದ್ದಾರೆ ನಿರ್ದೇಶಕರು.



ಕೋಟಿಗೊಬ್ಬ–3

ಕೋಟಿಗೊಬ್ಬ 3

- ನಿರ್ದೇಶಕರು:ಶಿವ ಕಾರ್ತಿಕ್
- ನಿರ್ಮಾಪಕರು: ಸೂರಪ್ಪ ಬಾಬು
- ತಾರಾಗಣ: ಕಿಚ್ಚ ಸುದೀಪ್, ಮಡೋನಾ ಸೆಬಾಸ್ಟಿಯನ್, ಅಫ್ತಾಬ್ ಶಿವದಾಸಾನಿ, ನವಾಬ್ ಶಾ, ಶ್ರದ್ಧಾ ದಾಸ್, ರವಿಶಂಕರ್
- ಸಂಗೀತ: ಅರ್ಜುನ್ ಜನ್ಯ

ನಾಯಕನ ತಾಯಿಯ ಪಾತ್ರದಲ್ಲಿ ನಟಿಸಿರುವ ಅಭಿರಾಮಿ ಅವರು ಭಾವನಾತ್ಮಕ ದೃಶ್ಯಗಳಿಗೆ ಜೀವ ತುಂಬಿದ್ದಾರೆ. ಈ ಪಾತ್ರವು ಫ್ಲ್ಯಾಷ್ ಬ್ಯಾಕ್ ಮೂಲಕ ಬಂದರೂ ಮನಸ್ಸಿಗೆ ನಾಟುವಂತಿದೆ.

ಚೇಸಿಂಗ್, ಹೊಡೆದಾಟದ ದೃಶ್ಯಗಳು ಚಿತ್ರದ ಬಹುಭಾಗವನ್ನು ಆವರಿಸಿಕೊಂಡಿವೆ. ಕೆಲವು ದೃಶ್ಯಗಳು ವಾಸ್ತವಕ್ಕೆ ನಿಲುಕದಿದ್ದರೂ ಸಿನಿಮಾ ಎಂದು ಸಮಾಧಾನಪಟ್ಟುಕೊಳ್ಳಬಹುದು.

ಸುದೀಪ್ ಅವರೇ ಮೂರು ಗೆಟಪ್‌ಗಳಲ್ಲಿ ತೆರೆಯನ್ನಾವರಿಸಿಕೊಳ್ಳುವುದರಿಂದ ಕೆಲವೆಡೆ ಉಳಿದ ಪಾತ್ರಗಳು ಗೌಣ ಎನಿಸದಿರದು. ನಾಯಕಿಗೆ ಅಭಿನಯಕ್ಕೆ ಹೆಚ್ಚು ಅವಕಾಶ ಇಲ್ಲದಿದ್ದರೂ ಮಡೋನಾ ಸೆಬಾಸ್ಟಿಯನ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಚಿತ್ರದ ದ್ವಿತೀಯಾರ್ಧದಲ್ಲಿ ಸುದೀಪ್- ರವಿಶಂಕರ್ ಜೋಡಿ ಮೋಡಿ ಮಾಡುತ್ತದೆ. ಮೊದಲಾರ್ಧದಲ್ಲಿ ಚಿತ್ರದ ಕಥೆಯು ಗಂಭೀರವಾಗಿ ಸಾಗಿದರೆ ದ್ವಿತೀಯಾರ್ಧದಲ್ಲಿ ಅಲ್ಲಲ್ಲಿ ಮೂಡಿಬರುವ ನವಿರು ಹಾಸ್ಯ ಸನ್ನಿವೇಶಗಳು ನಗೆಯುಕ್ಕಿಸುತ್ತವೆ.

ಇಂಟರ್‌ಪೋಲ್ ಅಧಿಕಾರಿಗಳಾಗಿ ನಟಿಸಿರುವ ಅಫ್ತಾಬ್ ಶಿವದಾಸಾನಿ ಮತ್ತು ಶ್ರದ್ಧಾ ದಾಸ್ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರೂ, ಈ ಪಾತ್ರಗಳು ನಾಯಕನ ಮುಂದೆ ಯಾವುದೇ ಸವಾಲುಗಳನ್ನು ಸೃಷ್ಟಿಸದೆ ಕೇವಲ ಹೆಸರಿಗೆ ಮಾತ್ರ ಎಂಬಂತೆ ಭಾಸವಾಗದಿರದು. ಹಾಡುಗಳು ಅಷ್ಟಾಗಿ ಆಪ್ತ ಎನಿಸುವುದಿಲ್ಲ. ಖಳನಟನ ಪಾತ್ರದ ಮೂಲಕ ನವಾಬ್ ಶಾ ಅವರು ಚಿತ್ರಕ್ಕೆ ಕಳೆ ತಂದುಕೊಟ್ಟಿದ್ದಾರೆ. ತಬಲಾ ನಾಣಿ, ರಂಗಾಯಣ ರಘು ಮೊದಲಾದವರು ನಟಿಸಿದ್ದರೂ ಆ ಪಾತ್ರಗಳು ಪ್ರೇಕ್ಷಕರ ಗಮನ ಸೆಳೆಯುವಲ್ಲಿ ವಿಫಲವಾಗಿವೆ ಎನ್ನಬಹುದು.

ನವೀನ್ ಕುಮಾರ್ ಜಿ.

ಅಪ್ಪ ಎಂದರೆ ಪುಸ್ತಕ, ಸಿನಿಮಾ ಪ್ರೀತಿ...

ಹುಬ್ಬಳ್ಳಿ: 'ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ಸೇರುವ ಕೊನೆ ದಿನಗಳವರೆಗೂ ಅಪ್ಪ ಪುಸ್ತಕ ಓದುತ್ತಿದ್ದರು. ಮೊಮ್ಮಗಳು (ಶ್ಯಾಮಲಾ ಗುರುಪ್ರಸಾದ್ ಅವರ ಮಗಳು) ತಯಾರಿಸಿದ ಕಿರುಚಿತ್ರವನ್ನು ನೋಡಿ ವಿಶ್ಲೇಷಣೆ ಮಾಡಿದ್ದರು. ನಮ್ಮಲ್ಲಿ ಪುಸ್ತಕ, ಸಿನಿಮಾ ಪ್ರೀತಿ ತುಂಬಿದ್ದರು'

–ಹೀಗೆ ಅಪ್ಪನ ಜೊತೆಗಿನ ನೆನಪುಗಳನ್ನು ಹಂಚಿಕೊಂಡು ಕಣ್ಣೀರಾದರು ಹುಬ್ಬಳ್ಳಿಯಲ್ಲಿ ಶುಕ್ರವಾರ ನಿಧನರಾದ ರಂಗಕರ್ಮಿ ಪ್ರೊ. ಜಿ.ಕೆ. ಗೋವಿಂದರಾವ್ ಅವರ ಪುತ್ರಿ ಶ್ಯಾಮಲಾ ಗುರುಪ್ರಸಾದ್.

ಇಲ್ಲಿನ ಗೋಲ್ಡನ್ ಟೌನ್ ನಿವಾಸದಲ್ಲಿ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು 'ದಿನದಿಂದ ದಿನಕ್ಕೆ ಆರೋಗ್ಯ ಕ್ಷೀಣಿಸುತ್ತಿದ್ದರೂ ಅಪ್ಪನ ಪುಸ್ತಕ ಪ್ರೀತಿ ಮಾತ್ರ ಯಾವತ್ತೂ ಕಡಿಮೆಯಾಗಲಿಲ್ಲ. ಇತ್ತೀಚಿನ ದಿನಗಳವರೆಗೂ ತಡರಾತ್ರಿ ತನಕ ಪುಸ್ತಕ ಓದುತ್ತಿದ್ದರು. ಓದಿದ ವಿಷಯವನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು' ಎಂದು ತಂದೆಯೊಂದಿಗಿನ ಕೊನೆಯ ದಿನಗಳನ್ನು ನೆನಪಿಸಿಕೊಂಡರು.



ಸುಭಾಷಿತ

ಮೊದಲ ವಿಜಯ ಸಾಧಿಸಿದ ಬಳಿಕ ವಿಶ್ರಾಂತಿಗೆ ಹೋಗಿಬಿಡಬೇಡಿ. ಎರಡನೇ ಬಾರಿ ನೀವೇನಾದರೂ ವಿಫಲರಾದರೆ, ಮೊದಲ ಜಯ ನಿಮಗೆ ಲಭಿಸಿದ್ದು ಕೇವಲ ಅದೃಷ್ಟದಿಂದ ಎಂದು ಹೇಳಲು ಹಲವಾರು ಬಾಯಿಗಳು ಕಾಯುತ್ತಿರುತ್ತವೆ.

–ಎ.ಪಿ.ಜೆ. ಅಬ್ದುಲ್ ಕಲಾಂ

ಐ.ಟಿ. ದಾಳಿಗೆ ಅನ್ಯ ಉದ್ದೇಶ ಅಪಾಯಕಾರಿ ಬೆಳವಣಿಗೆ

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ತೆರಿಗೆ ವಂಚನೆ ಎಸಗಿದವರ ವಿರುದ್ಧ ಅಥವಾ ತೆರಿಗೆ ವಂಚನೆಗೆ ನೆರವು ನೀಡಿದವರ ವಿರುದ್ಧ ದಾಳಿ ನಡೆಸುವುದು ಕಾನೂನುಬದ್ಧ ಪ್ರಕ್ರಿಯೆ. ಆದರೆ, ಇಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ಎಂಬುದು ಕೇಂದ್ರ ಸರ್ಕಾರದ ಕೈಯಲ್ಲಿನ ಅಸ್ತ್ರದಂತೆ ಬಳಕೆಯಾಗುತ್ತಿದೆ. ರಾಜಕೀಯ ವಿರೋಧಿಗಳ ಮೇಲೆ, ಸರ್ಕಾರದ ನೀತಿಗಳನ್ನು ಟೀಕಿಸುವವರ ವಿರುದ್ಧ ಈಗ ಈ ಇಲಾಖೆಯನ್ನು ಬಳಸಿಕೊಳ್ಳಲಾಗುತ್ತಿದೆ. ಅಷ್ಟೇ ಅಲ್ಲ, ತನಗೆ ಆಗದ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗೆ ಒಂದು ಎಚ್ಚರಿಕೆಯ ಸಂದೇಶ ರವಾನಿಸಬೇಕು ಎಂದಾದಲ್ಲಿ ಕೇಂದ್ರ ಸರ್ಕಾರವು ಈ ಇಲಾಖೆಯನ್ನು ಬಳಕೆ ಮಾಡಿಕೊಳ್ಳುತ್ತಿದೆ. ಮಾಜಿ ಮುಖ್ಯಮಂತ್ರಿ ಹಾಗೂ ರಾಜ್ಯ ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಉಮೇಶ್ ಅವರ ನಿವಾಸದ ಮೇಲೆ ಈಚೆಗೆ ಆದಾಯ ತೆರಿಗೆ ಇಲಾಖೆ ದಾಳಿ ನಡೆದಿದೆ. ಉಮೇಶ್ ಅವರ ಜೊತೆ ಒಡನಾಟ ಹೊಂದಿರುವ ಕೆಲವು ಗುತ್ತಿಗೆದಾರರ ಮೇಲೆಯೂ ದಾಳಿ ನಡೆದಿದೆ. ಈ ದಾಳಿಯು ರಾಜಕೀಯಪ್ರೇರಿತವಾಗಿ ನಡೆದಿದ್ದು ಎಂಬಂತೆಯೇ ಕಾಣಿಸುತ್ತಿದೆ. ಉಮೇಶ್ ಅವರು ತಮ್ಮೊಂದಿಗೆ ಕೆಲಸ ಮಾಡಿದ್ದರು ಎಂದು ಯಡಿಯೂರಪ್ಪ ಅವರ ಕುಟುಂಬದವರು ಹೇಳಿದ್ದಾರೆ.



ಈಗ ನಡೆದಿರುವ ದಾಳಿಯು ತೆರಿಗೆ ವಂಚನೆಯನ್ನು ಪತ್ತೆ ಮಾಡುವುದಕ್ಕಿಂತಲೂ ಹೆಚ್ಚಾಗಿ ಯಡಿಯೂರಪ್ಪ ಅವರನ್ನು ಕಟ್ಟಿಹಾಕುವ ಉದ್ದೇಶವನ್ನು ಹೊಂದಿರುವಂತಿದೆ

ರಾಜ್ಯ ರಾಜಕಾರಣದ ಬದಲಾದ ಸಂದರ್ಭದಲ್ಲಿ ಈ ದಾಳಿಯ ಮಹತ್ವ ಹೆಚ್ಚು. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಒತ್ತಡ ಹೇರಲಾಗಿತ್ತು. ಬಿಜೆಪಿಯ ಕೇಂದ್ರ ನಾಯಕರು ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತಂದರು. ಈಗ ನಡೆದಿರುವ ದಾಳಿಯು ತೆರಿಗೆ ವಂಚನೆಯನ್ನು ಪತ್ತೆ ಮಾಡುವುದಕ್ಕಿಂತಲೂ ಹೆಚ್ಚಾಗಿ ಯಡಿಯೂರಪ್ಪ ಅವರನ್ನು ಕಟ್ಟಿಹಾಕುವ ಉದ್ದೇಶವನ್ನು ಹೊಂದಿರುವಂತಿದೆ.

ಬೊಮ್ಮಾಯಿ ನೇತೃತ್ವದ ಹೊಸ ಸರ್ಕಾರದ ಕೆಲವು ನಿರ್ಧಾರಗಳಿಗೆ ಸಂಬಂಧಿಸಿ ಯಡಿಯೂರಪ್ಪ ಮತ್ತು ಅವರ ಬಳಗದವರು, ಬೊಮ್ಮಾಯಿ ಅವರ ಮೇಲೆ ಒತ್ತಡ ತಂದಿದ್ದಾರೆ ಎಂಬ ವರದಿಗಳು ಇವೆ. ಹಸ್ತಕ್ಷೇಪದ ಕಾರಣದಿಂದಾಗಿ ಬೊಮ್ಮಾಯಿ ಅವರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಆಗುತ್ತಿಲ್ಲ, ಆಡಳಿತದಲ್ಲಿ ಹಸ್ತಕ್ಷೇಪ ಮಾಡಬೇಡಿ ಎಂಬ ಸಂದೇಶ ರವಾನಿಸಲು ಈ ದಾಳಿ ನಡೆಸಲಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಸಮಸ್ಯೆ ಇರುವುದು ಬಿಜೆಪಿಯ ಆಂತರಿಕ ವಲಯದಲ್ಲಿ. ಆ ಸಮಸ್ಯೆಯನ್ನು ಪಕ್ಷವು ರಾಜಕೀಯವಾಗಿ, ಪಕ್ಷದ ಚೌಕಟ್ಟಿನ ಒಳಗೆ ಬಗೆಹರಿಸಿಕೊಳ್ಳಬೇಕು. ಈ ಸಮಸ್ಯೆ ಬಗೆಹರಿಸಲು ಆದಾಯ ತೆರಿಗೆ ಇಲಾಖೆಯನ್ನು ಬಳಸಿದ್ದು ಸರಿಯಲ್ಲ. ಆದಾಯ ತೆರಿಗೆ ಇಲಾಖೆಯು ಕೇಂದ್ರ ಸರ್ಕಾರದ ಒಂದು ಅಂಗ, ಜನರ ತೆರಿಗೆ ಹಣದಲ್ಲಿ ನಡೆಯುವ ಸಂಸ್ಥೆ ಅದು ಎಂಬುದನ್ನು ಮರೆಯುವಂತಿಲ್ಲ. ಕರ್ನಾಟಕದಲ್ಲಿ ಬಿಜೆಪಿಯನ್ನು ತಳಮಟ್ಟದಿಂದ ಕಟ್ಟುವಲ್ಲಿ ಯಡಿಯೂರಪ್ಪ ಅವರ ಕೊಡುಗೆ ಬಹಳ ದೊಡ್ಡದು. ಅವರನ್ನು ಒತ್ತಾಯದಿಂದ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ್ದೇ ಅಲ್ಲದೆ, ಈಗ ಅವರನ್ನು ರಾಜಕೀಯ ವಿರೋಧಿ ಎಂಬಂತೆ ಬಿಜೆಪಿಯಲ್ಲಿ ಕೆಲವರು ನೋಡುತ್ತಿದ್ದಾರೆ. ಹಾಗಾಗಿಯೇ, ಈ ದಾಳಿಗಳ ಮೂಲಕ 'ದೂರ ಇದ್ದರೆ ಕ್ಷೇಮ' ಎಂಬ ಸಂದೇಶವನ್ನು ಅವರಿಗೆ ರವಾನಿಸಲಾಗುತ್ತಿದೆ ಎಂಬ ವಿಶ್ಲೇಷಣೆಯು ರಾಜಕೀಯ ವಲಯದಲ್ಲಿ ನಡೆದಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಮತ್ತು ಇತರ ಸಂಸ್ಥೆಗಳನ್ನು ವಿರೋಧ ಪಕ್ಷಗಳ ನಾಯಕರ ಮೇಲೆ ದಾಳಿ ನಡೆಸಲು ಬಳಸಿಕೊಂಡ ನಿದರ್ಶನಗಳು ಹಲವು ಇವೆ. ತಮಿಳುನಾಡಿನಲ್ಲಿ ಡಿಎಂಕೆ, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್, ಮಹಾರಾಷ್ಟ್ರದಲ್ಲಿ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ), ಇತರ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ನಾಯಕರ ಮೇಲೆ ದಾಳಿ ನಡೆಸಲು ಕೇಂದ್ರವು ಈ ಸಂಸ್ಥೆಗಳನ್ನು ಬಳಕೆ ಮಾಡಿಕೊಂಡಿದೆ. ನಾಯಕರ ಜೊತೆಗಾರರ ಮೇಲೆಯೂ ದಾಳಿಗಳು ನಡೆದಿವೆ. ಕೇಂದ್ರ ಸರ್ಕಾರವನ್ನು ತೀಕ್ಷ್ಣವಾಗಿ ಟೀಕೆ ಮಾಡಿದ ದಿನಪತ್ರಿಕೆ, ಮಾಧ್ಯಮ ಚಟುವಟಿಕೆ ಮೇಲೆ ದಾಳಿ ನಡೆದಿದೆ. ಕೇಂದ್ರದ ತೀರ್ಮಾನವನ್ನು ಕಟುವಾಗಿ ವಿಮರ್ಶಿಸುವ ವ್ಯಕ್ತಿಗಳ ಮೇಲೆ ಇಂತಹ ದಾಳಿಗಳು ನಡೆದಿವೆ. ತಾವು ಮಾಡಿದ ಕೆಲಸದ ಬಗ್ಗೆ ಈ ಸಂಸ್ಥೆಗಳು ತಾವೇ ಪ್ರಚಾರ ಕೊಟ್ಟುಕೊಳ್ಳುತ್ತವೆ. ಕೇಂದ್ರ ಹಣಕಾಸು ಸಚಿವಾಲಯವು ಈ ಸಂದರ್ಭದಲ್ಲಿಯೂ ಅದೇ ಕೆಲಸ ಮಾಡಿದೆ. ಸರ್ಕಾರಿ ಸಂಸ್ಥೆಗಳನ್ನು ಕೆಲವರ ವಿರುದ್ಧ ಮಾತ್ರ ಬಳಕೆ ಮಾಡಿಕೊಳ್ಳುವುದು, ದ್ವೇಷ ಸಾಧನೆಗೆ ಬಳಸಿಕೊಳ್ಳುವುದು ತಪ್ಪು. ಇದು ತೀರಾ ಅಪ್ರಜಾಸತ್ತಾತ್ಮಕ ನಡೆ. ಆದರೆ, ಈ ರೀತಿ ಮಾಡುತ್ತಿರುವುದಕ್ಕೆ ಎದುರಾದ ಟೀಕೆಗಳ ಬಗ್ಗೆ ಕೇಂದ್ರವು ತಲೆಕೆಡಿಸಿಕೊಂಡಿಲ್ಲ. ಬಿಜೆಪಿಯಲ್ಲಿ ಇರುವ ನಾಯಕರ ವಿರುದ್ಧವೂ ಈ ಅಸ್ತ್ರ ಬಳಸುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ. ಆಡಳಿತದ ಎಲ್ಲ ನಿಯಮಗಳಿಗೆ ಹಾಗೂ ಕಾನೂನುಗಳಿಗೆ ಇದು ವಿರುದ್ಧ.

ಜನನಿಷ್ಠೆಗಿಂತ 'ಸ್ವಾಮಿತ್ವ ಯೋಜನೆ'ಗೆ ಆಡಳಿತಾರೂಢ ಬಿಜೆಪಿ ಒತ್ತು

ರಾಜಕೀಯ ಸಮೀಕರಣದ ಹೊಸ ಮಜಲು



ಗತಿಬಿಂಬ

ವೈ.ಗ.ಜಗದೀಶ್

ರಾಜ್ಯದ ಭವಿಷ್ಯಕ್ಕೆ ಮುನ್ನುಡಿ ಬರೆಯುವ ವಿಧಾನಸಭೆ ಚುನಾವಣೆಯ ಕಡೆಗೆ ಹೆಜ್ಜೆ ಇಡುವ ಹೊತ್ತಿನೊಳಗೆ ರಾಜಕೀಯ ಸಮೀಕರಣವನ್ನೇ ಬದಲು ಮಾಡುವ ಪುಟ್ಟ ನಡೆಗಳು ಶುರುವಾಗಿವೆ. ಕಾಲುಚಾಚಿ ಕುಳಿತಿದ್ದವರು, ಮಲಗಿದ್ದವರು ದಿಗ್ಗನೆದ್ದು ಬೀದಿಯಲ್ಲಿ ಅಬ್ಬರಿಸುತ್ತಿದ್ದಾರೆ.

2013ರ ವಿಧಾನಸಭೆ ಚುನಾವಣೆಗೆ ವರ್ಷ ಬಾಕಿ ಇದ್ದಾಗ ಶುರುವಾಗಿದ್ದ ನಡಾವಳಿಗಳು ರಾಜಕೀಯ ಪಕ್ಷಗಳ ಒಳಗುಡಿಯಲ್ಲಿ, ನಾಯಕರ ಪಡಸಾಲೆಗಳಲ್ಲಿ ಮತ್ತೆ ಚಾಲ್ತಿಗೆ ಬಂದಿವೆ. ಈ ಕಿರಿಕಿಚ್ಚು ಹಿರಿದಾಗುವುದೋ ಅಥವಾ ಅಪ್ಪಳಿಸಬಹುದಾದ ಧಾಡಸಿ ಹೊಡೆತಕ್ಕೆ ಅಲ್ಲಿಯೇ ಕಮರಿಹೋಗುವುದೋ ಎಂದು ಹೇಳುವ ಕಾಲವಿನ್ನೂ ಪಕ್ವವಾಗಿಲ್ಲ.

ಬಿ.ಎಸ್. ಯಡಿಯೂರಪ್ಪ ಅವರನ್ನು ಇಳಿಸಿ, ಮುಖ್ಯಮಂತ್ರಿಯನ್ನಾಗಿ ಬಸವರಾಜ ಬೊಮ್ಮಾಯಿ ಅವರನ್ನು ಮಾಡಲಾಯಿತು. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರನ್ನು ಭೇಟಿ ಮಾಡಿದ ಬೊಮ್ಮಾಯಿ ಆಶೀರ್ವಾದ ಪಡೆದರು. ಯಾರೂ ಬೆಂಬಲ ಕೇಳದಿದ್ದರೂ, 'ಸರ್ಕಾರಕ್ಕೆ ಸಂಕಷ್ಟ ಎದುರಾದರೆ ತಮ್ಮ ಪಕ್ಷ ಬೆಂಬಲಕ್ಕೆ ನಿಲ್ಲಲಿದೆ' ಎಂದು ಗೌಡರು ಘೋಷಿಸಿದರು. ಜೆಡಿಎಸ್‌ನ ಉಪವರಿಷ್ಠ ಎಚ್.ಡಿ. ಕುಮಾರಸ್ವಾಮಿ ಕೂಡ ಅದೇ ಧಾಟಿಯಲ್ಲಿ ಮಾತನಾಡಿದರು. ಇತ್ತೀಚೆಗೆ ಜೆಡಿಎಸ್ ನಾಯಕರು ಆಡಳಿತ ಪಕ್ಷವನ್ನು ಟೀಕಿಸುವುದಕ್ಕಿಂತ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರನ್ನು ಹಂಗಿಸುವುದರಲ್ಲೇ ಹೆಚ್ಚಿನ ಸಮಯ ವ್ಯಯಿಸುತ್ತಿದ್ದಾರೆ. ಪ್ರತಿಪಕ್ಷಕ್ಕೆ ವಿರೋಧಪಕ್ಷ ಎಂಬ ನಿಲುವಿಗೆ ಜೆಡಿಎಸ್ ಆತುಕೊಂಡಂತೆ ಕಾಣಿಸುತ್ತಿದೆ.


'ಬೊಮ್ಮಾಯಿ ಸರ್ಕಾರಕ್ಕೆ ಸಂಕಷ್ಟ ಎದುರಾದರೆ' ಎಂಬ ಗೌಡರ ಮಾತನ್ನೇ ತೆಗೆದುಕೊಂಡರೆ, ಖುದ್ದು ಯಡಿಯೂರಪ್ಪನವರೇ 'ರಾಜೀನಾಮೆ' ಘೋಷಿಸಿ, ಬೊಮ್ಮಾಯಿ ಹೆಸರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಸೂಚಿಸಿರುವಾಗ ಸಂಕಷ್ಟ ಎದುರಾಗುವುದಾದರೂ ಯಾರಿಂದ? ಯಡಿಯೂರಪ್ಪ ಅವರನ್ನು ಇಳಿಸುವ ಹೊತ್ತಿಗೆ, ಅವರು ರಾಜೀನಾಮೆ ಕೊಡುವುದಿಲ್ಲ; ಬಲವಂತದಿಂದ ಕೊಡಿಸಿದರೆ ಪಕ್ಷವನ್ನೇ ಒಡೆದು ಹೊಸ ಪಕ್ಷ ಕಟ್ಟಲಿದ್ದಾರೆ; ಸರ್ಕಾರ ಬಹುಮತ ಕಳೆದುಕೊಳ್ಳುತ್ತದೆ ಎಂಬ ಸುದ್ದಿಯೂ ಹರಡಿತ್ತು. ಗೌಡರ 'ಸಂಕಷ್ಟಹರ' ಪಾತ್ರಧಾರಿಯ ಹಿಂದಿನ ಲೆಕ್ಕಾಚಾರ ಹೀಗೂ ಇದ್ದೀತು!

ಅಂದರೆ, ಗೌಡರು ಮತ್ತು ಕುಮಾರಸ್ವಾಮಿ ಒಂದಿಷ್ಟರ ಮಟ್ಟಿಗೆ ಬಿಜೆಪಿಯ ಕಡೆಗೆ ಒಲವು ಹೊಂದಿರುವುದು ಈ ಎಲ್ಲ ನಡೆಗಳಿಂದ ಸಿಗುವ ಹೊಳಹು. ಮುಂದಿನ ಚುನಾವಣೆ ಹೊತ್ತಿಗೆ ಒಂದಿಷ್ಟು ಸಾಮು ಮಾಡಿದರೂ ಸಿಗಬಹುದಾದ, ಸಿಗಬೇಕಾದ ಯಶಸ್ಸು ಸಿಗದೇ ಇದ್ದರೆ ಜೆಡಿಎಸ್, ಬಿಜೆಪಿ ಜತೆಗೆ ಈಗಿರುವ ಸಡಿಲ ಸಖ್ಯವನ್ನು ಮತ್ತಷ್ಟು ಬಿಗಿಗೊಳಿಸಬಹುದು. 35-40 ಸ್ಥಾನಗಳಲ್ಲಿ ಗೆದ್ದರೂ ಮುಖ್ಯಮಂತ್ರಿ ಸ್ಥಾನ ಸಿಗದಿದ್ದರೆ ಬಿಜೆಪಿ ಜತೆಗೆ ಕುಮಾರಸ್ವಾಮಿ ಕೂಡಿಕೆ ಮಾಡಿಕೊಳ್ಳಬಹುದು. ಅವರು ಇತ್ತೀಚಿನ ದಿನಗಳಲ್ಲಿ ಏರುಕಂಠದಿಂದ ಆರ್‌ಎಸ್‌ಎಸ್‌ನ ಬಣ್ಣವನ್ನು ಬಯಲು ಮಾಡುತ್ತಿದ್ದಾರೆ. ಇದು ತತ್‌ಕ್ಷಣದ ಎರಡು ಉಪಚುನಾವಣೆಗಳು ಹಾಗೂ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಒಂದಿಷ್ಟು ವೋಟು ಗಿಟ್ಟಿಸುವ ಲೆಕ್ಕಾಚಾರದಂತಿದೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ಯಡಿಯೂರಪ್ಪ ಆಪ್ತ ಆಯನೂರು ಉಮೇಶ್, ಶಶಿಧರ ಮರಡಿ, ಬಿ.ವೈ. ವಿಜಯೇಂದ್ರ ಆಪ್ತ ಅರವಿಂದ್ ಮತ್ತು ಗುತ್ತಿಗೆದಾರರ ಮೇಲೆ ಆದಾಯ ತೆರಿಗೆ ದಾಳಿ ನಡೆದಿದೆ. ತಮ್ಮದೇ ಪಕ್ಷದ ಪ್ರಭಾವಿ ನಾಯಕನನ್ನು ಕೇಂದ್ರೀಕರಿಸಿ ಐ.ಟಿ ಬಲೆ ಹೆಣೆದ ಹುನ್ನಾರವಾದರೂ ಏನು? ಸರ್ಕಾರ ಅಥವಾ ಬಿಜೆಪಿಯಲ್ಲಿ ಯಡಿಯೂರಪ್ಪನವರಷ್ಟೇ ಹಣ ಮಾಡಿದವರು, ಸರ್ಕಾರಿ ಯಂತ್ರಾಂಗ, ಗುತ್ತಿಗೆ, ಖರೀದಿ ಬಳಸಿಕೊಂಡು ಕಮಿಷನ್ ಪಡೆಯುತ್ತಿರುವ ಸಚಿವರು ಇಲ್ಲವೇ? ದೇಶದಲ್ಲೇ ಅತ್ಯುನ್ನತ ಗುಪ್ತಚರ ಪಡೆ ಇಟ್ಟುಕೊಂಡ ಗೃಹ ಸಚಿವ ಅಮಿತ್ ಶಾ ಅವರಿಗೆ ಈ ಕುರಿತು ಮಾಹಿತಿಯಿಲ್ಲವೇ ಎಂಬ ಪ್ರಶ್ನೆಗಳು ಬಂದು ನಿಲ್ಲುತ್ತವೆ.

ಯಡಿಯೂರಪ್ಪ ಅವರನ್ನು ಕಟ್ಟಿ ಹಾಕುವುದು ಇದರ ಹಿಂದಿನ ಲೆಕ್ಕಾಚಾರ ಎಂಬ ವಿಶ್ಲೇಷಣೆಯೂ ಇದೆ. ಅದರಿಂದ ಬಿಜೆಪಿಗೇನು ಲಾಭ? ಅವರು ಓಡಾಡಿದರೆ ಎರಡು ಉಪಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಪಡೆಯುವ ಮತ ಮತ್ತಷ್ಟು ಹೆಚ್ಚಾಗಬಹುದು. ಇದು ಗೊತ್ತಿದ್ದೂ ಐ.ಟಿಯನ್ನು ಛೂ ಬಿಟ್ಟಿದ್ದು ಏಕೆ?

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ಬಿಜೆಪಿ ಬಹುಮತ ಪಡೆದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯನ್ನು ಗಮನಿಸಿದರೆ ಒಂದು ಸಿದ್ಧಸೂತ್ರ ಸಿಗುತ್ತದೆ. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಗೋವಾದ ಪ್ರಮೋದ ಸಾವಂತ್, ಮಹಾರಾಷ್ಟ್ರದ ದೇವೇಂದ್ರ ಫಡಣವೀಸ್, ಉತ್ತರಪ್ರದೇಶದ ಯೋಗಿ ಆದಿತ್ಯನಾಥ ಇವರೆಲ್ಲ ಚಿಕ್ಕಪ್ರಾಯದಲ್ಲೇ ಮುಖ್ಯಮಂತ್ರಿ ಹುದ್ದೆಗೇರಿದವರು. ಯೋಗಿ, ಒಂದಿಷ್ಟು ಜನಪ್ರಿಯರಾದರೂ ತಮ್ಮದೇ ಬಲದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಷ್ಟು, ಮುಖ್ಯಮಂತ್ರಿಯಾದ ಹೊತ್ತಿನಲ್ಲಿ ಅವರು ಪ್ರಭಾವಿಯಾಗಿರಲಿಲ್ಲ. ಮೋದಿ–ಶಾ ಪೆಟ್ಟಿಗೆ ಬಗ್ಗದ ಮಧ್ಯಪ್ರದೇಶದ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಬದಲು ಮಾಡುವುದು ಅಷ್ಟು ಸುಲಭವಲ್ಲ. ಹರಿಯಾಣದ ಮನೋಹರ್‌ಲಾಲ್ ಖಟ್ಟರ್, ಗುಜರಾತ್‌ನ ಭೂಪೇಂದ್ರ ಭಾಯಿ ಪಟೇಲ್ ಮುಖ್ಯಮಂತ್ರಿಯಾದಾಗ 60ರ ಆಸುಪಾಸಿನವರೇ. ಕರ್ನಾಟಕದಲ್ಲಿ ಯಡಿಯೂರಪ್ಪನವರನ್ನು ಇಳಿಸಲೇಬೇಕೆಂದು ಹಟಕ್ಕೆ ಬಿದ್ದಾಗ, ಲಿಂಗಾಯತರ ಮನಸ್ಸನ್ನು ಗಾಸಿ ಮಾಡದೇ ಇರುವ ಕಾರಣಕ್ಕೆ ಲಿಂಗಾಯತರು, ಉತ್ತರ ಕರ್ನಾಟಕದ ಭಾಗದವರು ಆದ ಬೊಮ್ಮಾಯಿ ಸಹಜ ಆಯ್ಕೆಯಾಗಿದ್ದರು. ಸಾಮರಸ್ಯದ ನೆಲೆವೀಡಾದ ಕರ್ನಾಟಕದಲ್ಲಿ ಏರುಧ್ವನಿಯ ಕೂಗುಮಾರಿಗಳನ್ನು ಜನ ಸಹಿಸಲಾರರು. ಕೋಮುವಾದವನ್ನು ಮೃದುಧ್ವನಿಯಲ್ಲಿ ಪ್ರತಿಪಾದಿಸುವ ಬೊಮ್ಮಾಯಿಯಂತಹ ನಾಯಕನೇ ಸೂಕ್ತ ಎಂಬ ನಿರ್ಧಾರಕ್ಕೆ ಬಂದಿರಲೂ ಸಾಕು.



ಐ.ಟಿ ದಾಳಿಯ ಹುನ್ನಾರವನ್ನು ಈ ರಾಜಕೀಯ ಆಯಾಮದಲ್ಲೇ ನೋಡಬೇಕಾಗಿದೆ. ಯಡಿಯೂರಪ್ಪ ಆಪ್ತರನ್ನು ಐ.ಟಿ ದಾಳಿಗೆ ಗುರಿ ಮಾಡುವ ಮೂಲಕ, ಸವಾಲು ಒಡ್ಡುವವರು, ಬಂಡಾಯ ಏಳುವವರು ಪಕ್ಷಕ್ಕೆ ಬೇಕಿಲ್ಲ, ಅಪರಿಚಿತ ಅಥವಾ ಜನಸಮುದಾಯವನ್ನು ಪ್ರಭಾವಿಸುವ ಛಾತಿ ಇಲ್ಲದ ಸಾಮಾನ್ಯ ಮುಖವನ್ನು ಮುಖ್ಯಮಂತ್ರಿ ಹುದ್ದೆಗೆ ಏರಿಸಿ ಸರ್ಕಾರ ನಡೆಸುತ್ತೇವೆ, ಪಕ್ಷ ಕಟ್ಟುತ್ತೇವೆ ಎಂಬ ಸಂದೇಶವನ್ನು ಸಾರುವುದು ಇದರ ಆಶಯ. ಜನಪ್ರಿಯ ನಾಯಕನಿಗಿಂತ ಸಂಘ ನಿಷ್ಠ ಅಥವಾ ಮೋದಿ–ಅಮಿತ್ ಶಾ ಹೇಳಿದಂತೆ ನಡೆದುಕೊಳ್ಳಬಲ್ಲ, 'ಸ್ವಾಮಿತ್ವ'ವನ್ನೇ ನಂಬಿಕೊಂಡ ಸಾಮಾನ್ಯ ನಾಯಕ ಸಾಕು ಎಂಬುದು ಪಕ್ಷದ ಧೋರಣೆ ಇದ್ದಂತೆ ಕಾಣಿಸುತ್ತಿದೆ. ಇವೆಲ್ಲದರಾಚೆಗೂ ಇರುವ ಸಂಗತಿಯೆಂದರೆ, ಒಂದು ವೇಳೆ ಯಡಿಯೂರಪ್ಪ 2012ರಲ್ಲಿ ಕೆಜೆಪಿ ಕಟ್ಟಿದಂತೆ ಈಗ ಉತ್ಸವಮೂರ್ತಿಯಾಗಿದ್ದುಕೊಂಡು ವಿಜಯೇಂದ್ರ ನೇತೃತ್ವದಲ್ಲಿ ಪಕ್ಷ ಕಟ್ಟುವ ಲೆಕ್ಕಾಚಾರ ಅವರ ಆಪ್ತ ವಲಯದಲ್ಲಿ ನಡೆಯುತ್ತಿತ್ತು. ಹೊಸ ಪಕ್ಷ ಕಟ್ಟುವ ಘೋಷಣೆ ಮಾಡಿದ ಮೇಲೆ, ಐ.ಟಿ ದಾಳಿ ನಡೆಸಿದರೆ ದ್ವೇಷದ ರಾಜಕಾರಣ ಎಂಬ ದೂಷಣೆಗೆ ಗುರಿಯಾಗಬೇಕಾಗುತ್ತದೆ. ಈಗಲೇ ಮಾಡಿದರೆ, ಪಕ್ಷದೊಳಗಿನ ಭ್ರಷ್ಟರನ್ನೂ ಬಿಡುವುದಿಲ್ಲ ಎಂಬ ಸಂದೇಶ ರವಾನಿಸಿದಂತಾಗುತ್ತದೆ ಎಂಬ ತರ್ಕ ಇದ್ದಂತಿದೆ.

'ಸಿದ್ದರಾಮಯ್ಯನವರನ್ನು ಯಡಿಯೂರಪ್ಪ ಭೇಟಿ ಮಾಡಿದ್ದಕ್ಕೆ ಐ.ಟಿ ದಾಳಿ ನಡೆಯಿತು' ಎಂಬ ಕುಮಾರಸ್ವಾಮಿ ಹೇಳಿಕೆಯನ್ನು ಈ ಇಬ್ಬರೂ ನಾಯಕರು ಅಲ್ಲಗಳೆದಿದ್ದಾರೆ. ಯಡಿಯೂರಪ್ಪ ಯಾರನ್ನು ಭೇಟಿ ಮಾಡಿದ್ದರು ಎನ್ನುವುದಕ್ಕಿಂತ ವಿಜಯೇಂದ್ರ ಅವರು ಯಾರನ್ನು ಯಾವಾಗ ಏಕಾಗಿ ಭೇಟಿ ಮಾಡಿದ್ದರು ಎಂಬುದು ಮತ್ತಷ್ಟು ನಿಗೂಢದ ಸಂಗತಿ. ಹಾಗೊಂದು ವೇಳೆ ಯಡಿಯೂರಪ್ಪ ಪಕ್ಷ ಕಟ್ಟುವುದು ನಿಜವಾದರೆ, ಅವರು ಹಿಂದಿನಂತೆ ತಮ್ಮದೇ ಪಕ್ಷದ ಮೂಲಕ ಚುನಾವಣೆಗೆ ಸ್ಪರ್ಧಿಸಿದರೂ ಆ ಹೊತ್ತಿನ ರಾಜಕೀಯ ಲೆಕ್ಕದಲ್ಲಿ ಕಾಂಗ್ರೆಸ್ ಅಥವಾ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳುವ ಅಂದಾಜು ಇದ್ದಂತಿದೆ. ಏಕಾಂಗಿಯಾಗಿ ಸ್ಪರ್ಧಿಸಿದರೆ ಹಿಂದೆ 6 ಸ್ಥಾನ ಗೆದ್ದಂತೆ ಈಗ 3 ಅಥವಾ 10 ಗೆಲ್ಲಬಹುದು. ಅದರಿಂದ ಬಿಜೆಪಿಗೆ ನಷ್ಟವಾಗಬಹುದೇ ವಿನಾ ತಮ್ಮ ಪುತ್ರ ವಿಜಯೇಂದ್ರಗೆ ಏನೂ ಲಾಭವಾಗದು ಎಂಬುದು ಯಡಿಯೂರಪ್ಪಗೆ ಗೊತ್ತಿಲ್ಲದ ಸತ್ಯವೇನಲ್ಲ.

ಹೀಗೆ, ಚುನಾವಣೆಯನ್ನು ಎದುರಿಟ್ಟುಕೊಂಡು ರಾಜಕೀಯ ಸಮೀಕರಣವೊಂದು ಮುನ್ನೆಲೆಗೆ ಬಂದಿದೆ. ಅದು ಎಲ್ಲಿಗೆ ತಲುಪುತ್ತದೆ ಎಂಬುದಕ್ಕೆ ಇನ್ನಾರು ತಿಂಗಳಾದರೂ ಕಾಯಬೇಕಷ್ಟೇ.

'ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ/ ಕೋಟಿ ನಟರಾಂತಿಹರು ಚಿತ್ರಪಾತ್ರಗಳ/ ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ/ ನೋಟಕರು ಮಾಟಕರೆ ಮಂಕುತಿಮ್ಮ' ಎಂಬ ಡಿವಿಜಿ ವಾಣಿಯಷ್ಟೇ ಸದ್ಯ ನಮ್ಮೆದುರು ಇರುವುದು.

ಚುರುಮುರಿ



ನಿರಾಯುಧ ಪೂಜೆ!

● ಎಸ್.ಬಿ.ರಂಗನಾಥ್

'ಇದೇನೋ ಹಣೆಯ ಬುಗುಟು?!' ಚೆಡ್ಡಿ ದೋಸ್ತನನ್ನ ಕೇಳಿದೆ.

'ನಿರಾಯುಧಪೂಜಾ ಪ್ರಭಾವ' ಎಂದ!

'ಮೊನ್ನೆ ಆದದ್ದು ಆಯುಧಪೂಜೆ. ಇದೆಂಥದೋ ನಿನ್ನ ಹೊಸ ಪೂಜೆ?'

'ಆಯುಧಪೂಜೆ ದಿನ ಗೃಹಮಂತ್ರಿಗಳು ತರಕಾರಿ ತರೋಕೆ ಆರ್ಡರ್ ಮಾಡಿದ್ರಿಂದ ಮಗನ ಸ್ಕೂಲ್ ಸೈಕಲ್ ತಗೊಂಡು ಮಾರ್ಕೆಟ್‌ಗೆ ಹೋದೆ...'

'ನಿನ್ನ ಸ್ಕೂಟರ್ ಇತ್ತಲ್ಲೋ?'

'ಅದು ಉಪವಾಸ ವ್ರತಾಚರಣೆಯಲ್ಲಿ ಇದೆಯಪ್ಪಾ'.

'ತರಕಾರಿಯವನ್ನ ಕ್ಯಾರೆಟ್ ರೇಟ್ ಕೇಳ್ದೆ. 25 ರೂಪಾಯಿ ಎಂದ. ಒಂದು ಕೇಜಿ ಕೊಡು ಎಂದೆ. ತೂಕ ಮಾಡಿ ಕೈಚೀಲಕ್ಕೆ ಹಾಕ್ತಾ ನೂರು ರೂಪಾಯಿ ಅನ್ನೋದೇ! ಕೇಳಿದ್ದಕ್ಕೆ, 'ನಾನು ಹೇಳಿದ್ದು ಕಾಲು ಕೇಜಿಗೆ ಸ್ವಾಮಿ, ಈಗ ನಾವು ರೇಟು ಹೇಳೋದು ಕಾಲು ಕೇಜಿಗೇ' ಎಂದ. ನಂತ್ರ ಬರ್ತೀನಿಂತ ಹೇಳಿ ವಾಪಸ್ ಮಾಡಿದೆ'.

'ಆಮೇಲೆ?'

'ಮುಂದೆ ಬೈಎಲೆಕ್ಷನ್ ಕ್ಯಾನ್ವಾಸ್ ಗ್ರೂಪಲ್ಲಿ ಮಿತ್ರ ಚಿಕ್ಕೇಶಿ ಸಿಕ್ಕ. ಕ್ಯಾಂಪೇನ್‌ಗೆ ಬಾರೋ, ಧಾರಾಳ ಸಂಭಾವನೆ ಅಂದ. ಮನೇಲಿ ಕೇಳಿ ಹೇಳ್ತೀನಿ ಅಂದೆ. ಅವ್ನ ಪಕ್ಷದೋನ ಅಂಗಡೀಲಿ ತರಕಾರಿ ಕೊಡಿಸಿದ. ಮನೆಗೆ ಹೋದಾಗ ಅಡುಗೆ ಮನೆಯೆಲ್ಲಾ ಹೊಗೆ. ಸೌದೆ ಒಲೇಲಿ ಅಡುಗೆ ಮಾಡ್ತಿದ್ದ ಶ್ರೀಮತಿಯೂ ಭಾರೀ ಬಿಸಿ!'

'ಮುಂದೇನಾಯ್ತೋ?'

ಮೂಗೊರೆಸಿಕೊಳ್ತಾ, 'ಹೋಳಿಗೆ ಸಾರಿಗೆ ನುಗ್ಗಿಕಾಯಿ ತರೋಕೆ ಹೇಳಿದ್ದೆನಲ್ಲಾ' ಎಂದಳು.

ಕೇಜಿ ನೂರಾನಲವತ್ತೈಂತ ತಿಳಿಸಿ ಎಲೆಕ್ಷನ್ ವಿಷ್ಯ ಹೇಳ್ದೆ. ಸಿಕ್ಕಾಪಟ್ಟೆ ರಾಂಗಾಗಿ, 'ಈ ರಾಜಕೀಯದೋರ ಸುದ್ದೀನ ನನ್ಮುಂದೆ ಹೇಳ್ಬೇಡಿ. ನಾವು ಬೆಲೆಯೇರಿಕೆಯಲ್ಲಿ ಬೇಯ್ತಿರೋವಾಗ ಅವ್ರು ನಾಚಿಕೆಯಿಲ್ದೆ ಎಲೆಕ್ಷನ್, ಮತಾಂತರ ತಡೆಯೋಕ್ಕೆ ಕಾನೂನು ಅಂತೆಲ್ಲ ಗಿಮಿಕ್ ಮಾಡ್ತಾ ಅವ್ರೆ, ವೋಟಿಗೆ ಬರಲಿ' ಎನ್ನುತ್ತಾ ಹಲ್ಲು ಕಡಿದಳು...'

'ನಿನ್ನ ಹಣೆ ಬುಗುಟಿನ ವಿಚಾರ?'

'ನಾನು, ಮತದಾನ ಮಾಡೋದು ನಮ್ಮ ಕರ್ತವ್ಯ ಎನ್ನುತ್ತಿದ್ದಂತೆ, ನನ್ನ ಹಣೆಗೆ ಆಕೆಯ ಅಡುಗೆಮನೆ ಆಯುಧ ರಪ್ಪಂತ ಅಪ್ಪಳಿಸಿತು!'

ನನಗೆ ನಗೆ ಬರಲಿಲ್ಲ!

ದಿನದ ಟ್ವೀಟ್


ಗಂಭೀರವಾಗಿ ಪರಿಗಣಿಸಿ



ಮತ್ತೊಂದು 'ಪ್ರಧಾನಿ ಅನ್ನ ಉತ್ಸವ'ವನ್ನು (ಆಹಾರಧಾನ್ಯ ಉತ್ಸವ) ಮೋದಿಯವರು ನೆರವೇರಿಸಬೇಕಾಗಬಹುದು! 'ಆತಂಕಕಾರಿ': ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 116 ದೇಶಗಳ ಪೈಕಿ ಭಾರತ 101ನೇ ಸ್ಥಾನದಲ್ಲಿದೆ.

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ



ಆರ್ಥಿಕ ವಿಚಾರಗಳಲ್ಲಿ ಮತ್ತು ವಿದೇಶಾಂಗ ನೀತಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು 'ವಿಕಾಸ'ವನ್ನು ತಂದುಕೊಡುವಲ್ಲಿ ವಿಫಲವಾಗಿದೆ ಎಂಬುದು ಈಗ ಸ್ಪಷ್ಟವಾಗಿದೆ. ಲಡಾಖ್‌ನಲ್ಲಿ ನಮ್ಮ ಇದುವರೆಗಿನ ರಕ್ಷಣಾ ನೀತಿಯು ಹಿಮಾಲಯ ಸದೃಶ ವೈಫಲ್ಯದಂತೆ ಕಾಣಿಸುತ್ತಿದೆ. ವಿಫಲ ನೀತಿಗಳನ್ನು ಸರಿಪಡಿಸಲು ಸಹಾಯ ಮಾಡಲು ನಾನು ಸಿದ್ಧನಿದ್ದೇನೆ. ಆದರೆ, ಅತಿಯಾದ ಸೊಕ್ಕು ಅಡ್ಡಿಯಾಗಿ ನಿಂತಿದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 16-10-1996

● **ಕೇಂದ್ರ– ರಾಜ್ಯಗಳ ಸಂಬಂಧ ಶಿಫಾರಸು ಪರಿಶೀಲನೆಗೆ ಸಮಿತಿ**

ನವದೆಹಲಿ, ಅ. 15 (ಯುಎನ್‌ಐ)– ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಕುರಿತಂತೆ ಸರ್ಕಾರಿಯಾ ಆಯೋಗ ಮಾಡಿರುವ ಶಿಫಾರಸುಗಳನ್ನು ಪುನರ್‌ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲು ಇಂದು ನಡೆದ ಅಂತರರಾಜ್ಯ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದಕ್ಕೆ ಮುನ್ನ ಬೆಳಿಗ್ಗೆ ನಡೆದ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಸತತ ಸಂಪರ್ಕ ಕಲ್ಪಿಸಲು ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಧಾರದ ಮೇಲೆ ಸಾಂಸ್ಥಿಕ ವ್ಯವಸ್ಥೆಯೊಂದನ್ನು ಜಾರಿ ಮಾಡಲಾಗುವುದು ಎಂದು ಪ್ರಕಟಿಸಿದರು.

ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾದ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಲಾಗುವುದು ಎಂದು ಅವರು ಹೇಳಿದರು.

● **ಕಾಂಗ್ರೆಸ್ ಪುನರುಜ್ಜೀವನಕ್ಕೆ ಎಸ್ಸೆನ್ ಕರೆ**

ಬೆಂಗಳೂರು, ಅ. 15– ಅಪ್ರಾಮಾಣಿಕ, ಭ್ರಷ್ಟಾಚಾರ, ನೈತಿಕ ಅಧಃಪತನದಿಂದ ಎಲ್ಲ ರಾಜಕೀಯ ಪಕ್ಷಗಳೂ ಕುಗ್ಗಿ ಹೋಗಿರುವ ಈ ಸನ್ನಿವೇಶದಲ್ಲಿ ಜನತೆಯ ನಿರೀಕ್ಷೆಯಂತೆ ವಿಶ್ವಾಸಾರ್ಹ ಹಾಗೂ ಆದರ್ಶಯುತ ಪಕ್ಷವೊಂದರ ಅಗತ್ಯ ತುಂಬಲು ಹಳೇ ಕಾಂಗ್ರೆಸ್ಸಿಗರು ಒಂದುಗೂಡಿ ಕಾಂಗ್ರೆಸ್ ಪಕ್ಷವನ್ನು ಪುನರುಜ್ಜೀವನಗೊಳಿಸಬೇಕೆಂದು ಹಿರಿಯ ಮುತ್ಸದ್ದಿ ಎಸ್. ನಿಜಲಿಂಗಪ್ಪ ಅವರು ಇಂದು ಇಲ್ಲಿ ಕರೆ ನೀಡಿದರು.

50 ವರ್ಷಗಳ ಹಿಂದೆ

ಶನಿವಾರ, 16-10-1971

● **ಕೇರಳದ ಕಾಲೇಜು ಶಿಕ್ಷಕರೂ ಸೇರಿದಂತೆ ಖೋಟಾ ಡಾಲರ್ ತಂಡದ ಬಂಧನ**

ಬೆಂಗಳೂರು, ಅ. 15– ನಕಲಿ ಅಮೆರಿಕನ್ ಡಾಲರ್ ಕರೆನ್ಸಿ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತಂದರೆಂಬ ಆಪಾದನೆ ಮೇಲೆ ಗಣ್ಯ ನಾಗರಿಕರು, ವರ್ತಕರು ಇರುವ ಭಾರೀ ತಂಡವೊಂದನ್ನು ರಾಜ್ಯದ ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಕೇರಳ ಮತ್ತು ಮೈಸೂರು ರಾಜ್ಯಗಳಿಗೆ ಸೇರಿದ 11 ಮಂದಿ ಇರುವ ತಂಡದಿಂದ 20 ಡಾಲರ್ ಮೌಲ್ಯದ ಒಟ್ಟು 75 ಕರೆನ್ಸಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೊಯಮತ್ತೂರಿನ ಟೆಕ್ಸ್‌ಟೈಲ್ ಉದ್ದಿಮೆದಾರ ರಾಜೇಂದ್ರ ಅವರು ಈ ತಂಡದ ನಾಯಕರೆಂದು ಹೇಳಲಾಗಿದೆ.

ಕಲ್ಲಿಕೋಟೆಯ ಸೈನ್ಸ್ ಮತ್ತು ಆರ್ಟ್ಸ್ ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಕೆ. ಜೋಸೆಫ್, ಕೊಟ್ಟಾಯಂ ಜಿಲ್ಲೆಯ ಪಲಾಯಿಯ ಲೆಕ್ಚರರ್ ಜಾರ್ಜ್ ಸಿ. ಮುತಾಲಿ, ರಬ್ಬರ್ ತೋಟಗಳ ಒಡೆಯ ಕೆ. ರವೀಂದ್ರನ್ ಮತ್ತು ಕಂಟ್ರಾಕ್ಟರ್ ಕೆ. ಸುಗಥನ್ ಬಂಧಿತರು.

● **ಗಾಂಧಿವಾದ ಪಾಲನೆಯಲ್ಲಿ ಚೀನಾದ್ದೇ ಮೇಲುಗೈ**

ಅಹಮದಾಬಾದ್, ಅ. 15– ಗಾಂಧೀಜಿಯವರು ಭಾರತದ ರಾಷ್ಟ್ರಪಿತನಾದರೂ ಅವರ ವಿಚಾರಧಾರೆಗಳನ್ನು ಭಾರತಕ್ಕಿಂತ ಚೀನಾದಲ್ಲಿಯೇ ಹೆಚ್ಚಾಗಿ ಅನುಷ್ಠಾನಕ್ಕೆ ತರಲಾಗಿದೆ ಎಂದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಲಿಯ ಮಾಜಿ ಡೈರೆಕ್ಟರ್ ಡಾ. ಆತ್ಮಾರಾಂ ತಿಳಿಸಿದ್ದಾರೆ.

ಸಂಗತ

ಚರಿತ್ರೆಯ 'ಕಾಲಕೋಶ'ದ ಮಾದರಿ

ಚರಿತ್ರೆ ಒಂದು ಬೌದ್ಧಿಕ ಶಿಸ್ತಾಗಿ ನೇಪಥ್ಯಕ್ಕೆ ಸರಿಯುತ್ತಿರುವಂತೆ ಭಾಸವಾಗುತ್ತಿದೆ

● ಡಾ. ಅಶ್ವತ್ಥನಾರಾಯಣ


'ಪಠ್ಯಪುಸ್ತಕಗಳಲ್ಲಿನ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ, ಸಂಬಂಧಿಸಿದವರ ಮೇಲೆ ಹಲ್ಲೆ ಮಾಡುತ್ತಿದ್ದರು' ಎಂಬ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಹೇಳಿಕೆ ಖಂಡನೀಯ ಎಂದು ಹೇಳುತ್ತಲೇ, ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ಬೆಳವಣಿಗೆಗಳ ಕುರಿತು ಈ ಪ್ರತಿಕ್ರಿಯೆ.

ತಮ್ಮ ಮತ್ತು ತಮಗೆ ಮಾತ್ರ ಒಪ್ಪಿತವಾದ ಚರಿತ್ರೆಯನ್ನು ಕಾಲಕೋಶಗಳ (ಟೈಮ್ ಕ್ಯಾಪ್ಸೂಲ್) ಮೂಲಕ ಭವಿಷ್ಯಕ್ಕೆ ಸೇರಿಸಬೇಕು ಎನ್ನುವ ಮನೋಧರ್ಮ ಹೊಸದೇನೂ ಅಲ್ಲ. ವಿವಿಧ ಕಾಲಘಟ್ಟಗಳಲ್ಲಿ ಪ್ರಭುತ್ವಗಳು ಇಂತಹ ಮಾದರಿಗಳನ್ನು ಸೃಷ್ಟಿಸುತ್ತಲೇ ಬಂದಿವೆ. ಈಗ ಪಠ್ಯಪುಸ್ತಕಗಳನ್ನು ತಮ್ಮ ಸಿದ್ಧಾಂತಕ್ಕೆ 'ಪರಿವರ್ತಿಸುವ' ಮೂಲಕ ಹೊಸ ಬಗೆಯ 'ಟೈಮ್ ಕ್ಯಾಪ್ಸೂಲ್' ಅನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ.

ನಾನು ಸಹ ಪರಿಷ್ಕರಣಾಪೂರ್ವದ 7ನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷನಾಗಿ 2013-14ರಲ್ಲಿ, ನಂತರ ಪ್ರೌಢಶಾಲಾ ಹಂತದ ಸಮಾಜವಿಜ್ಞಾನದ ಪರಿಷ್ಕರಣಾ ಸಮಿತಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ. ಆಗಲೂ ವಿಷಯ ತಜ್ಞರಾಗಿ ಚರಿತ್ರೆಯನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿದವರು ಮಾತ್ರ ಸಮಿತಿಯಲ್ಲಿದ್ದರು. ಚರಿತ್ರೆಗೆ ಸಂಬಂಧಿಸಿದ 'ಸಾರ್ವಜನಿಕ' ಚರ್ಚೆಗಳು ಸಾಮಾನ್ಯವಾಗಿ ಕೆಲವೇ ವಿಷಯಗಳ ಸುತ್ತ ನಡೆಯುತ್ತಿದ್ದುದರ ಬಗ್ಗೆ ಅರಿವಿದ್ದ ನಾವು ಮುಕ್ತವಾಗಿ ಚರ್ಚಿಸುತ್ತಿದ್ದೆವು. ಈ ಬಗೆಯ ಚರ್ಚೆಗಳು ಧರ್ಮಗಳು ಮತ್ತು ಕೆಲವು ಚಾರಿತ್ರಿಕ ವ್ಯಕ್ತಿಗಳ ಸುತ್ತ, ವಿಶೇಷವಾಗಿ ಟಿಪ್ಪು ಸುಲ್ತಾನ್‌ಗೆ ಸಂಬಂಧಿಸಿದಂತೆ ನಡೆಯುತ್ತಿರುವುದನ್ನು ಆಗಾಗ ಗಮನಿಸುತ್ತಿದ್ದೇವೆ.

ಅಧಿಕಾರಸ್ಥ ವ್ಯಕ್ತಿಯನ್ನು ಆಯಾ ಕಾಲಘಟ್ಟದ ಸಂಕೀರ್ಣ ರಾಜಕೀಯ ಪ್ರಕ್ರಿಯೆಯ ಭಾಗವಾಗಿ ನೋಡಬೇಕೇ ವಿನಾ ಅವನು ಯಾವ ಧರ್ಮಕ್ಕೆ ಸೇರಿದವನು ಎಂಬುದನ್ನಲ್ಲ. ಹಾಗೆ ನೋಡಿದ ತಕ್ಷಣವೇ ಚರಿತ್ರೆ ಕುರಿತು ಅನಗತ್ಯ ತಕರಾರುಗಳು ಹುಟ್ಟಿಕೊಳ್ಳುತ್ತವೆ. ಚರಿತ್ರೆಯನ್ನು ವ್ಯಕ್ತಿಗಳ, ಕಾಲಘಟ್ಟಗಳ, ಚಳವಳಿಗಳ, ಧರ್ಮಗಳ ಹಿನ್ನೆಲೆಯಿಂದ ಪ್ರವೇಶ ಮಾಡುತ್ತಿರುವುದರಿಂದ ಇಂದು ಈ ಪರಿಯ ಆರ್ಭಟಗಳು ನಡೆಯುತ್ತಿವೆ. ಇದು ಚರಿತ್ರೆಯನ್ನು 'ರಾಜಕೀಯ ಸಾಧನ'ವಾಗಿ ಪರಿವರ್ತಿಸಿಕೊಂಡ ಪರಂಪರೆಯ ಬಳುವಳಿ. ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡಿರುವವರು ಮೌನಸಾಕ್ಷಿಗಳಾಗಿ ಮನಃಸಾಕ್ಷಿಯನ್ನು ಮೌನಕ್ಕೆ ಒಪ್ಪಿಸಿದರೂ ಹೀಗಾಗಬಹುದು. ಕನಿಷ್ಠಪಕ್ಷ ಚರಿತ್ರೆಯಿಂದಲೇ ಬದುಕನ್ನು ಕಟ್ಟಿಕೊಂಡಿರುವವರ ಮೇಲೆ ಇಂದು ದೊಡ್ಡ ಜವಾಬ್ದಾರಿ ಇದೆ. ವಸ್ತುನಿಷ್ಠ ಚರಿತ್ರೆಯನ್ನು ತರಗತಿ ಒಳಗೆ ಮತ್ತು ಹೊರಗೆ ಮಾತನಾಡುವ ತುರ್ತಿದೆ. ಇಷ್ಟಕ್ಕೂ ಪರಿಷ್ಕೃತ ಪಠ್ಯಪುಸ್ತಕಗಳನ್ನು ರೂಪಿಸುವಾಗ ನಿರ್ದಿಷ್ಟ ತತ್ವ, ಸಿದ್ಧಾಂತಕ್ಕೆ ಒಳಗಾಗದೆ ವಸ್ತುನಿಷ್ಠ ಚರಿತ್ರೆಯನ್ನು ಕೊಡುವುದೇ ಮೂಲ ಆಶಯವಾಗಿತ್ತು. 'ಕೇಸರೀಕರಣಕ್ಕೆ ಪರ್ಯಾಯವಾಗಿ ಪಠ್ಯಗಳನ್ನು ಕಾಂಗ್ರೆಸ್ಸೀಕರಣ ಮಾಡುವುದು ಪರ್ಯಾಯವಲ್ಲ' ಎಂಬ ಸ್ಪಷ್ಟ ನಿಲುವನ್ನು ಸರ್ವಾಧ್ಯಕ್ಷ ಬರಗೂರು ರಾಮಚಂದ್ರಪ್ಪ ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದರು. ಅಷ್ಟರಮಟ್ಟಿಗೆ ಪರಿಷ್ಕರಣಕಾರರಿಗೆ ಮುಕ್ತ ಸ್ವಾತಂತ್ರ್ಯವಿತ್ತು.

ಇಂದಿನ ಸಂಕೀರ್ಣ ಸಂದರ್ಭದಲ್ಲಿ ತಿ.ತಾ.ಶರ್ಮ ಅರ್ಧ ಶತಮಾನದ ಹಿಂದೆಯೇ ದಾಖಲಿಸಿದ ಈ ಮಾತುಗಳು ಹೆಚ್ಚು ಪ್ರಸ್ತುತವಾಗಿವೆ: 'ಇತಿಹಾಸ ವ್ಯಾಖ್ಯಾನ ದ್ವಿಮುಖವಾದದ್ದು. ವರ್ತಮಾನದ ಅವಶ್ಯಕತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಹಿಂದೆ ನಡೆದುಹೋದುದನ್ನೆಲ್ಲ ಸಮರ್ಥನೆ ಮಾಡುವುದು ಒಂದು; ಭೂತಕಾಲದ ವಿದ್ಯಮಾನಗಳ ಬಣ್ಣವನ್ನು ವರ್ತಮಾನದ ವಿದ್ಯಮಾನಗಳಿಗೆ ಹಚ್ಚುವುದು ಇನ್ನೊಂದು. ನಮ್ಮ ತಲೆಯಲ್ಲಿ ಏನೇನೋ ರಾಜಕೀಯ ಬಯಕೆ ಅಥವಾ 'ಬೇಕು'ಗಳು ತಲೆಹಾಕುತ್ತವೆ. ಅವುಗಳಿಗೆ ಹೊಂದಿಕೊಳ್ಳುವ ಪುಕ್ಕಟೆ ಪುರಾಣಗಳನ್ನು ಸೃಷ್ಟಿ ಮಾಡುವ ಕಲೆಯೊಂದರ ಅವತಾರವಾಗುತ್ತದೆ. ಹೀಗಾಗಿ ನಮಗೆ ನಿಜವಾಗಿ ನಡೆದದ್ದು ಯಾವುದು, ಕಟ್ಟಿದ ಕಥೆ ಯಾವುದು, ಈ ಬೆರಕೆಯನ್ನು ವಿಂಗಡಿಸುವುದೇ ಒಂದು ದೊಡ್ಡ ಸಮಸ್ಯೆ'. ಚರಿತ್ರೆಯ ವಿದ್ಯಾರ್ಥಿಗಳಿಗೆ ಈ ತಿಳಿವಳಿಕೆ ಅತ್ಯಂತ ಪ್ರಾಥಮಿಕವಾದದ್ದು.



ಚರಿತ್ರೆಯ ಜ್ಞಾನಶಿಸ್ತಿನಲ್ಲಿ ವಿಶೇಷ ಪರಿಣತಿ ಇರುವವರು ಮಾತ್ರ ಸಮಿತಿಗಳಲ್ಲಿ ಇದ್ದರೆ ಅದಕ್ಕೆ ಲೆಜಿಟಿಮಸಿ ದಕ್ಕುತ್ತದೆ. ಈ ಬಗೆಯ ಜವಾಬ್ದಾರಿಗಳನ್ನು ನಿರ್ವಹಿಸಲು ಸರ್ಕಾರ ವಿಷಯ ಪರಿಣತರನ್ನೇ ನೇಮಕ ಮಾಡಬೇಕೇ ವಿನಾ, ವಿಷಯದಲ್ಲಿ 'ಪರಿಣತಿ' ಇದೆ ಎಂದು ತಮಗೇ ತಾವೇ ಪ್ರಮಾಣಪತ್ರಗಳನ್ನು ಕೊಟ್ಟುಕೊಳ್ಳುವವರನ್ನಲ್ಲ! ಡ್ರೈವಿಂಗ್ ನನಗೆ ಚೆನ್ನಾಗಿ ಬರುತ್ತದೆ ಎಂದು ತನಗೆ ತಾನೇ 'ಅರ್ಹತೆ'ಯ ಪತ್ರವನ್ನು ಕೊಟ್ಟುಕೊಳ್ಳಲಾಗುವುದಿಲ್ಲ ಅಲ್ಲವೇ?

ಬಹಳ ಗಾಬರಿ ಹುಟ್ಟಿಸುವ ವಿಷಯವೆಂದರೆ, ಚರಿತ್ರೆಯು ಸಾರ್ವಜನಿಕರ ದೃಷ್ಟಿಯಿಂದ 'ಅನವಶ್ಯಕ' ಎಂಬ ಹೊಸ ಸಮಸ್ಯೆ ಸೃಷ್ಟಿಯಾಗಿರುವುದು. ನಮ್ಮ ಹಿಂದಿನ ತಲೆಮಾರಿನವರು ಬಹಳ ಪರಿಶ್ರಮಪಟ್ಟು ಚರಿತ್ರೆಗೆ ದೊಡ್ಡ ಘನತೆ, ಗೌರವವನ್ನು ದೊರಕಿಸಿಕೊಟ್ಟಿದ್ದಾರೆ. ಅದನ್ನು ಮತ್ತಷ್ಟು ವಿಸ್ತರಿಸದಿದ್ದರೂ ಅದರ ತಾತ್ವಿಕ ಚೌಕಟ್ಟನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ. ಇಂದು ಜಾರಿಯಾಗುತ್ತಿರುವ ಹೊಸ 'ಜ್ಞಾನ' ಕಲಿಕಾ ಮಾದರಿಯಲ್ಲಿ ಗಂಭೀರ ಸ್ಥಿತ್ಯಂತರಗಳು ಕಾಣುತ್ತಿವೆ. ಇಂದಿನ ತಲೆಮಾರಿಗೆ ಚರಿತ್ರೆ ಇನ್ನೂ ಹೆಚ್ಚು ಸ್ಪಷ್ಟವಾಗಿ ಗೋಚರಿಸಬೇಕಿತ್ತು. ಅಜ್ಜನ ಹೆಗಲ ಮೇಲೆ ಕುಳಿತ ಮೊಮ್ಮಗನಿಗೆ ಅಜ್ಜನಿಗಿಂತ ಹೆಚ್ಚು ದೂರ ಕಾಣುವಂತೆ. ಆದರೆ ಇಂದು ಕಣ್ಣ ಮುಂದಿನ ಮಬ್ಬಿನಿಂದ ಮೊಮ್ಮಗ ನರಳುತ್ತಿದ್ದಾನೇನೊ ಎನ್ನುವ ಅನುಮಾನ ಆವರಿಸಿದೆ.

ಲೇಖಕ: ನಿವೃತ್ತ ಪ್ರಾಧ್ಯಾಪಕ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ಲ್ಯಾಂಡ್‌ಲೈನ್ ಅವಾಂತರ...

ಬಿಎಸ್‌ಎನ್‌ಎಲ್ ಸ್ಥಿರ ದೂರವಾಣಿಯನ್ನು (ಲ್ಯಾಂಡ್‌ಲೈನ್) ಬ್ಯಾಂಕ್, ಕಚೇರಿಗಳಲ್ಲಿ ಬಳಸಲಾಗುತ್ತಿತ್ತು. ಆದರೆ ಈಗ ಕೆಲ ವರ್ಷಗಳಿಂದ ಇವು ನಿಷ್ಕ್ರಿಯವಾಗಿವೆ. ಸೇವೆಯೂ ಇಲ್ಲ, ಬಳಕೆಯೂ ಇಲ್ಲ. ಆದರೆ ದೂರವಾಣಿಯ ಬಿಲ್ ತಪ್ಪದೇ ಬರುತ್ತಿದ್ದು, ಕಟ್ಟಲೇಬೇಕು, ಕಟ್ಟುತ್ತಿದ್ದಾರೆ! ಬಳಸದ ಸ್ಥಿರ ದೂರವಾಣಿಗಳನ್ನು ಆಯಾ ಇಲಾಖೆಯವರು ಹಿಂದಿರುಗಿಸಲಿ ಮತ್ತು ಈ ಹಿಂದೆ ಠೇವಣಿ ಇಟ್ಟ ಹಣ ಹಿಂಪಡೆಯಲಿ. ಹೇಗೂ ಈಗ ಮೊಬೈಲ್ ಫೋನ್ ಅವಲಂಬನೆ ಹೆಚ್ಚಾಗಿದೆ. ಸರ್ಕಾರಿ ಹಣ ಸುಮ್ಮನೆ ಪೋಲಾಗುವುದೇಕೆ?

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಸಮಾನವಾದ ನ್ಯಾಯ ದೊರಕಲಿ

ಕೊರೊನಾ ಕಾಲಘಟ್ಟದಲ್ಲಿ ಹತ್ತನೇ ತರಗತಿ ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳನ್ನೂ ಸರ್ಕಾರ ಪಾಸು ಮಾಡಿತು. ಆದರೆ ಸಾವಿರಾರು ವಿದ್ಯಾರ್ಥಿಗಳು ಮುಖ್ಯ ಪರೀಕ್ಷೆಗೆ ಹಾಜರಾಗಲಿಲ್ಲ. ಕಾರಣಗಳು ಹತ್ತಾರು. ಗ್ರಾಮಗಳಿಗೆ ಹೋದವರು ಪರೀಕ್ಷೆ ಕಟ್ಟಲು ಸಾಧ್ಯವಾಗದೇ ಇರಬಹುದು, ಶುಲ್ಕ ಕಟ್ಟದಿದ್ದಕ್ಕೆ ಸಂಸ್ಥೆಯವರು ಪ್ರವೇಶಪತ್ರ ನೀಡದೇ ಹೋಗಿರಬಹುದು ಇಲ್ಲವೇ ಪರೀಕ್ಷಾ ಶುಲ್ಕ ಕಟ್ಟಲಾಗದಷ್ಟು ಆರ್ಥಿಕವಾಗಿ ಹಿಂದುಳಿದಿರಬಹುದು, ಈ ಬಾರಿ ಪರೀಕ್ಷೆ ಶುಲ್ಕ ಕಟ್ಟದೇ ಇದ್ದರೂ ಎಲ್ಲರನ್ನೂ ಪಾಸು ಮಾಡಬಹುದು ಎಂದುಕೊಂಡಿರಬಹುದು ಅಥವಾ ಇರುವ ಒಬ್ಬ ಮಗ ಇಲ್ಲವೇ ಮಗಳು ಈ ವರ್ಷ ಪರೀಕ್ಷೆಗೆ ಹಾಜರಾಗದಿದ್ದರೆ ಏನಂತೆ, ಬದುಕಿ ಉಳಿದರೆ ಸಾಕು ಎಂಬುದು ಪೋಷಕರ ನಿಲುವೂ ಆಗಿದ್ದಿರಬಹುದು.

ಬಳಿಕ ಪೂರಕ ಪರೀಕ್ಷೆಗೆ ಹಾಜರಾಗಿದ್ದವರಲ್ಲಿ ಬಹಳಷ್ಟು ಮಂದಿ ಅನುತ್ತೀರ್ಣರಾಗಿದ್ದಾರೆ. ಇದರಿಂದ, ಮುಖ್ಯ ಪರೀಕ್ಷೆಗೆ ಹಾಜರಾಗಿದ್ದ ತಮ್ಮ ಸ್ನೇಹಿತರಂತೆ ತಾವೂ ಉತ್ತೀರ್ಣರಾಗಬಹುದು ಎಂಬ ಭರವಸೆ ಹೊಂದಿದ್ದ ವಿದ್ಯಾರ್ಥಿಗಳಿಗೆ ದೊಡ್ಡ ಆಘಾತವಾಗಿದೆ. ಪಿಯುಸಿಗೆ ಹೋಗಲೇಬೇಕೆಂದು ನಿರೀಕ್ಷಿಸಿದ್ದವರು ನಿರಾಸೆಗೊಂಡಿದ್ದಾರೆ. ಎಲ್ಲ ವಿದ್ಯಾರ್ಥಿಗಳನ್ನೂ ಒಂದೇ ಎಂಬಂತೆ ನೋಡಿ, ಅವರಿಗೂ ಸಮಾನವಾದ ನ್ಯಾಯ ದೊರಕಿಸಿಕೊಡಬಲ್ಲದೇ ಸರ್ಕಾರ?

ಡಾ. ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಕನಿಷ್ಠ ವೇತನವಾದರೂ ಬೇಡವೇ?

ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ 'ಎ' ಮತ್ತು 'ಬಿ' ದರ್ಜೆಯ ದೇವಾಲಯಗಳ ಅರ್ಚಕರ ವೇತನ ಹೆಚ್ಚಳ ಮಾಡಲಾಗಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ. ಆದರೆ ಅವರು 'ಸಿ' ವರ್ಗದ ದೇವಾಲಯಗಳಲ್ಲಿ ಕೆಲಸ ಮಾಡುತ್ತಿರುವ ಅರ್ಚಕರ ಸ್ಥಿತಿಯನ್ನು ಗಮನಕ್ಕೇ ತೆಗೆದುಕೊಂಡಿಲ್ಲ. ಅವರಲ್ಲಿ ಬಹುತೇಕ ದೇವಾಲಯಗಳ ಅರ್ಚಕರ ವೇತನ ₹ 2, ₹ 3 ಇದೆ. ಇದು ನಾಚಿಕೆಗೇಡಿನ ಸಂಗತಿ. ನಾವು ಆಸ್ತಿಕರೋ ನಾಸ್ತಿಕರೋ ಬೇರೆ ಪ್ರಶ್ನೆ. ಆದರೆ ಈ ದೇವಾಲಯಗಳು ಇಲಾಖೆ ವ್ಯಾಪ್ತಿಗೆ ಬರುತ್ತವೆ. ಅಲ್ಲಿ ಕೆಲಸ ಮಾಡುವವರಿಗೆ ಮರ್ಯಾದೆ ತರುವ ಒಂದು ಕನಿಷ್ಠ ವೇತನವಾದರೂ ಬೇಡವೇ?

ಕೆ.ವೆಂಕಟರಾಜು, ಚಾಮರಾಜನಗರ

ಪಿಸುಮಾತು: ಪುಕ್ಕಟೆ ಮನರಂಜನೆ

ರಾಜಕಾರಣಿಗಳಿಬ್ಬರ ಮಧ್ಯದ ಪಿಸುಮಾತು ನಿರೀಕ್ಷೆಯಂತೆ ರಾಜಕೀಯ ಕೋಲಾಹಲವನ್ನು ಸೃಷ್ಟಿಸಿದೆ. ವಾಸ್ತವದಲ್ಲಿ ಈ ಮಾತಿನಲ್ಲಿ ಅಂತಹ ವಿಶೇಷ ಏನೂ ಇಲ್ಲ. ಇದನ್ನು ದಿನನಿತ್ಯದ ಜೀವನದಲ್ಲಿ ಬಹುಶಃ ಪ್ರತಿಯೊಬ್ಬರೂ ಕೇಳಿರುತ್ತಾರೆ, ಚರ್ಚಿಸಿರುತ್ತಾರೆ ಮತ್ತು ಅಬ್ಬಾ ಎಂದು ಆಶ್ಚರ್ಯಪಟ್ಟಿರುತ್ತಾರೆ. ತಂತ್ರಜ್ಞಾನದ ಆವಿಷ್ಕಾರಗಳು ಗೋಪ್ಯತೆಯನ್ನು ನೇಪಥ್ಯಕ್ಕೆ ಸೇರಿಸಿರುವಾಗ, ಪರಸ್ಪರ ಗೋಪ್ಯವಾಗಿ ಮಾತನಾಡಿಕೊಳ್ಳುವವರು ಹೆಚ್ಚಿನ ಎಚ್ಚರಿಕೆ ವಹಿಸಬೇಕಾಗುತ್ತದೆ. ಆಡಿಯೊ ಮತ್ತು ವಿಡಿಯೊ ಲೀಕ್‌ನಲ್ಲಿ ಕೆಲವರ ರಾಜಕೀಯ ಭವಿಷ್ಯವೇ ನೆಲಕಚ್ಚಿರುವ ಉದಾಹರಣೆಗಳು ಇನ್ನೂ ಕಣ್ಮುಂದೆ ಇರುವಾಗ ಈ ರಾಜಕಾರಣಿಗಳು ಇದನ್ನು ತಿಳಿಯದೇ ಹೋದದ್ದು ದುರ್ದೈವ. ಸಾರ್ವಜನಿಕರ ನೆನಪಿನ ಶಕ್ತಿ ಕ್ಷೀಣವಾಗಿರುತ್ತದೆ. ಈ ಘಟನೆ ಮತ್ತು ಹೇಳಿಕೆ ಯಾವ ವ್ಯತ್ಯಾಸವನ್ನೂ ಉಂಟು ಮಾಡುವುದಿಲ್ಲ. ಕೆಲವು ದಿನ ಮಾಧ್ಯಮದಲ್ಲಿ ಮಿಂಚಿ ಅಷ್ಟೇ ವೇಗದಲ್ಲಿ ಮಾಯವಾಗುತ್ತದೆ. ಸಾರ್ವಜನಿಕರಿಗೆ ಪುಕ್ಕಟೆ ಮನರಂಜನೆ ದೊರಕುತ್ತದೆ ಅಷ್ಟೇ.

ರಮಾನಂದ ಶರ್ಮಾ, ಬೆಂಗಳೂರು

ಕಳಚಿಹೋದ ಸಾಕ್ಷಿಪ್ರಜ್ಞೆ

'ಮರಣವೇ ಮಹಾನವಮಿ' ಎಂದು ಸಾರಿದ ವಿಜಯದಶಮಿ ದಿನ ನಸುಕಿನಲ್ಲಿ, ನಮ್ಮ ನಡುವಿನ ಸಾಕ್ಷಿಪ್ರಜ್ಞೆ ಪ್ರೊ. ಜಿ.ಕೆ.ಗೋವಿಂದ ರಾವ್ ದೇಹ ಬಿಟ್ಟಿದ್ದಾರೆ. ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ಗೋವಿಂದ ರಾವ್ ಸೇರಿದಂತೆ ಅನೇಕ ಮೇಷ್ಟ್ರುಗಳ ಜಾಯಮಾನ. ಇದು ಕನ್ನಡದ ಸಂದರ್ಭಕ್ಕೆ ತುಂಬಾ ಸಾಮಾನ್ಯ. ಲಂಕೇಶ್, ಅನಂತಮೂರ್ತಿ, ಪ್ರೊ. ಟಿ.ಎಸ್.ಲೋಹಿತಾಶ್ವ, ಶರತ್ ಲೋಹಿತಾಶ್ವ, ಅವಿನಾಶ್ ಹೀಗೆ ಸಾಲು ಸಾಲು ಉದಾಹರಣೆಗಳು ನಮ್ಮ ಎದುರಿಗಿವೆ.

ತೊಂಬತ್ತರ ದಶಕದಲ್ಲಿ ಶೇಕ್ಸ್‌ಪಿಯರ್ ಕುರಿತು ಉಪನ್ಯಾಸ ನೀಡಲು ಗದುಗಿಗೆ ಜಿಕೆಜಿ ಬಂದಿದ್ದರು. ಆಗ ಅವರೊಂದಿಗೆ ನನಗಾದ ಪರಿಚಯ ಆತ್ಮೀಯತೆಗೆ ತಿರುಗಿ ನಾನವರ ಅಭಿಮಾನಿಯಾಗಿ ಹೋದೆ. ಅನೇಕ ಬೈಠಕ್ಕುಗಳ ಸಂದರ್ಭದಲ್ಲಿ ಅವರು ವಿವರಿಸುತ್ತಿದ್ದ ವೈಚಾರಿಕ ಮಾತುಗಳ ಆಳ ಅಪರೂಪ. ಶಿಸ್ತುಬದ್ಧ ಜೀವನಶೈಲಿ, ವೈಚಾರಿಕ ಪ್ರಖರತೆ, ತಾತ್ವಿಕ ಸಂವಾದ, ಸಾತ್ವಿಕ ಸಿಟ್ಟು ಮತ್ತು ಸ್ನೇಹಮಯ ವರ್ತನೆ ಅನುಕರಣೀಯ.

ವೈಚಾರಿಕ ಭಿನ್ನಾಭಿಪ್ರಾಯ ಇರುವವರ ಜೊತೆ ತುಂಬಾ ಗಂಭೀರವಾದ ಅಂತರ ಕಾಪಾಡಿಕೊಳ್ಳುತ್ತಿದ್ದರು. ತಮ್ಮ ನಟನೆಯ ಸೆಲೆಬ್ರಿಟಿ ಸ್ಟೇಟಸ್ಸನ್ನು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಚಾಮ್‌ಸ್ಕಿ ವಿಚಾರಗಳನ್ನು ಖಾಸಗಿ ಬೈಠಕ್ಕಿನಲ್ಲಿ ಅರ್ಥಪೂರ್ಣವಾಗಿ ಮಂಡಿಸಿದ್ದು ಈಗಲೂ ಹಸಿರಾಗಿ ಉಳಿದಿದೆ. ಕೆಲವರ ಹಿಡನ್ ಅಜೆಂಡಾಗಳ ಬಗ್ಗೆ ಸಂಸ್ಕೃತಿ ಚಿಂತಕರ ಚಾವಡಿಯಲ್ಲಿ ಆಕರ್ಷಕವಾಗಿ, ಮನ ಮುಟ್ಟುವಂತೆ ಚರ್ಚೆ ಮಾಡುತ್ತಿದ್ದರು. ಕೋಮುವಾದದ ಅಪಾಯಗಳನ್ನು ವಿವರಿಸುವಾಗ ಕೇಳುಗರ ಮೈ ಜುಂ ಎನ್ನುತ್ತಿತ್ತು. ನಂಬಿದ ಸಿದ್ಧಾಂತಗಳಿಗೆ ಅಪಚಾರವಾಗುವ ವಾತಾವರಣ ಕಂಡು ಬೇಸರಗೊಂಡಿದ್ದರೂ, ನಂಬಿದ ವಿಚಾರಗಳನ್ನು ಪ್ರತಿಪಾದಿಸುತ್ತ, ಬೇಡವಾದದ್ದನ್ನು ತೀವ್ರವಾಗಿ ಖಂಡಿಸುತ್ತಲೇ ಕೊನೇ ದಿನಗಳನ್ನು ಕಳೆದರು. ವೈಚಾರಿಕ ಪರಂಪರೆಯ ಕೊಂಡಿಯೊಂದು ಕಳಚಿ ಶೂನ್ಯ ಭಾವ ಕಾಡುತ್ತಿದೆ.

ಪ್ರೊ. ಸಿದ್ದು ಯಾಪಲಪರವಿ, ಕಾರಟಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮನಸ್ಥಿತಿಯಲ್ಲಿ ಬದಲಾವಣೆ ಆಗಿದೆಯೇ?


ಆರ್‌ಎಸ್‌ಎಸ್ ಐಷಾರಾಮಿ ಬದುಕಿನ ಆಗರ



• ಎಚ್.ಡಿ.ಕುಮಾರಸ್ವಾಮಿ

ಆರ್‌ಎಸ್‌ಎಸ್ ಈಗ ಒಂದು ಪರಿಶುದ್ಧ ಸೇವಾ ಸಂಸ್ಥೆಯಾಗಿ ಉಳಿದಿದೆಯೇ? ಉಳಿದಿದ್ದರೆ, ಪವರ್ ಸೆಂಟರ್ ಆಗುವ ತವಕ ಏಕೆ? ಮೋದಿ ನೇತೃತ್ವದ ಸರ್ಕಾರದ ಜುಟ್ಟು ನಾಗಪುರದ ಸಂಘದ ಕಚೇರಿಯಲ್ಲಿದೆ ಎನ್ನುವುದು ಸುಳ್ಳೇ? ಪ್ರಜಾತಂತ್ರ ತತ್ವದಲ್ಲಿ ಆಯ್ಕೆಯಾಗಿ ಮಂತ್ರಿಗಳಾದವರಿಗೆ ಆಡಳಿತದ ಅಧಿಕಾರ ನೀಡದೇ ಐಎಎಸ್ ಅಧಿಕಾರಿಗಳಿಗೆ ಕೊಟ್ಟಿರುವುದೇಕೆ? 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಅಂದರೆ ಇದೇನಾ? ಬಹುಶಃ 'ಕನಿಷ್ಠ ಪ್ರಜಾಪ್ರಭುತ್ವ, ಗರಿಷ್ಠ ಸರ್ವಾಧಿಕಾರ'ದ ಪರಿಕಲ್ಪನೆಯೇ ಎಂಬುದು ಕಾಡುತ್ತಿರುವ ಆತಂಕಗಳು

ಪ್ರಜಾವಾಣಿ ಚರ್ಚೆ



ಮೊದಲಿನಿಂದಲೂ 'ಓದು' ನನ್ನ ಇಷ್ಟದ ಹವ್ಯಾಸ. ತಂದೆಯವರಿಂದ ಬಂದ ಬಳುವಳಿ ಅದು. ದಿನೇಶ್ ನಾರಾಯಣ್ ಅವರು ಬರೆದ The RSS: And the Making of the Deep Nation ನಾನು ಇತ್ತೀಚೆಗೆ ಓದಿದ ಕೃತಿ. ಇದು ಆರ್‌ಎಸ್‌ಎಸ್‌ನ ಯಶೋಗಾಥೆ. ಪುಸ್ತಕ ಕೈಗೆತ್ತಿಕೊಂಡು ಅತ್ಯಂತ ಕುತೂಹಲದಿಂದ ಓದತೊಡಗಿದೆ. 1925ರಿಂದ ಸಂಘ ಬೆಳೆದ ರೀತಿ, ದೇಶದುದ್ದಗಲಕ್ಕೂ ವ್ಯಾಪಿಸಿಕೊಂಡಿದ್ದು, ಬಿಜೆಪಿ ಹುಟ್ಟು, ಸ್ವಯಂಸೇವಕರನ್ನು ರೂಪಿಸುವ ವಿಧಾನ... ಹೀಗೆ ಅನೇಕ ಅಂಶಗಳು ಚಕಿತಗೊಳಿಸಿದವು.

ಒಂದು ಪಕ್ಷದ ನಾಯಕನಾಗಿ ನನಗೆ ಬಿಜೆಪಿಯ ಸಂಘಟನಾ ಶಕ್ತಿ, ಬೆಳವಣಿಗೆ ಬಗ್ಗೆ ಖಂಡಿತಾ ಅಸೂಯೆ ಇಲ್ಲ. ಅದೇ ರೀತಿ ಆರ್‌ಎಸ್‌ಎಸ್ ಬಗ್ಗೆ ಮೊದಲು ನನಗೆ ಸಕಾರಾತ್ಮಕ ಅಭಿಪ್ರಾಯ ಇತ್ತಾದರೂ ಈ ಪುಸ್ತಕ ಓದಿದ ಮೇಲೆ ಅದು ಬದಲಾಯಿತು. ಓದುತ್ತಾ ಹೋದಂತೆಲ್ಲ ಅನೇಕ ಆಘಾತಕಾರಿ ಅಂಶಗಳು ಗೊತ್ತಾದವು.

ಏಕೆಂದರೆ, ದಿನೇಶ್ ನಾರಾಯಣ್ ಅವರು ಸಂಘವನ್ನು ಅತಿ ಸನಿಹದಿಂದ ನೋಡಿ, ಅನೇಕ ಪ್ರಚಾರಕರು, ಸ್ವಯಂಸೇವಕರನ್ನು ಖುದ್ದು ಕಂಡು ಸತ್ಯಸಂಗತಿಗಳನ್ನು ಹೆಕ್ಕಿ ಬರೆದಿದ್ದಾರೆ. ಹೀಗೆ ಅವರು ಉಲ್ಲೇಖಿಸಿದ ಬಹುಮುಖ್ಯ ಅಂಶವೆಂದರೆ ದೇಶದಲ್ಲಿ ಕೆಲಸ ಮಾಡುತ್ತಿರುವ 4 ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಸಂಘದಿಂದ ತರಬೇತಿ ಪಡೆದವರು ಎಂಬುದು. ಇದರಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳೂ ಇದ್ದಾರೆ. ಇವರೆಲ್ಲ ಸಂಘದ ಕಾರ್ಯಕರ್ತರು ಎನ್ನುವುದಕ್ಕಿಂತ ಅದರ ಗರಡಿಯಿಂದ ಬಂದವರು. ಸಂಘದ ಕಾರ್ಯಸೂಚಿ ಜಾರಿಯ ಹೊಣೆಯನ್ನು ಇವರಿಗೆ ವಹಿಸಲಾಗಿದೆ ಎನ್ನುವುದು ನನ್ನ ಕಳವಳ ಹೆಚ್ಚಿಸಿದ ಅಂಶ. ಆ ಮಟ್ಟಿಗೆ ಇವರನ್ನು ಬ್ರೈನ್ ವಾಶ್ ಮಾಡಿ ಕಳಿಸಲಾಗಿದೆ ಎಂದು ದಿನೇಶ್ ನಾರಾಯಣ್ ವಿವರಿಸುತ್ತಾರೆ.

2016ರ ಒಂದೇ ವರ್ಷದಲ್ಲಿ 676 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆ ಪಾಸಾಗುತ್ತಾರೆ. ಇಷ್ಟೂ ಜನ ಒಂದೇ ಸಂಸ್ಥೆಯಲ್ಲಿ ತರಬೇತಿ ಪಡೆದವರು, ಆ ಸಂಸ್ಥೆ ಆರ್‌ಎಸ್‌ಎಸ್ ಅಧೀನ ಸಂಸ್ಥೆ! ನನ್ನ ಅನುಮಾನವಿರುವುದು ಇವರೆಲ್ಲರೂ ವಿಭಿನ್ನತೆಯಲ್ಲಿ ಏಕತೆಯ ತುಂಬಿರುವ ಭಾರತದಲ್ಲಿ ಎಲ್ಲರಿಗೂ ಸಲ್ಲುವಂತೆ ಕರ್ತವ್ಯ ನಿರ್ವಹಿಸಲು ಸಾಧ್ಯವೇ? ಐಎಎಸ್ ಪರೀಕ್ಷೆ, ಆಯ್ಕೆ ನಡೆಸುವ ಸಂಸ್ಥೆಯ ಪಾವಿತ್ರ್ಯದ ಕಥೆ ಏನು? ಬ್ರೈನ್‌ವಾಶ್ ಮಾಡಲ್ಪಟ್ಟ ಅಧಿಕಾರಿಗಳಿಂದ ಬಹುತ್ವ ಭಾರತವನ್ನು ಒಟ್ಟಿಗೆ ಇಟ್ಟುಕೊಳ್ಳಲು ಸಾಧ್ಯವೇ ಎಂಬ ಕಳವಳದ ಜತೆ ಆತಂಕವೂ ಸೇರಿಕೊಂಡಿತು.

ಆರ್‌ಎಸ್‌ಎಸ್ ಈಗ ಒಂದು ಪರಿಶುದ್ಧ ಸೇವಾ ಸಂಸ್ಥೆಯಾಗಿ ಉಳಿದಿದೆಯೇ? ಉಳಿದಿದ್ದರೆ, ಪವರ್ ಸೆಂಟರ್ ಆಗುವ ತವಕ ಏಕೆ? ಮೋದಿ ನೇತೃತ್ವದ ಸರ್ಕಾರದ ಜುಟ್ಟು ನಾಗಪುರದ ಸಂಘದ ಕಚೇರಿಯಲ್ಲಿದೆ ಎನ್ನುವುದು ಸುಳ್ಳೇ? ಪ್ರಜಾತಂತ್ರ ತತ್ವದಲ್ಲಿ ಆಯ್ಕೆಯಾಗಿ ಮಂತ್ರಿಗಳಾದವರಿಗೆ ಆಡಳಿತದ ಅಧಿಕಾರ ನೀಡದೇ ಐಎಎಸ್ ಅಧಿಕಾರಿಗಳಿಗೆ ಕೊಟ್ಟಿರುವುದೇಕೆ? 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಅಂದರೆ ಇದೇನಾ? ಬಹುಶಃ 'ಕನಿಷ್ಠ ಪ್ರಜಾಪ್ರಭುತ್ವ, ಗರಿಷ್ಠ ಸರ್ವಾಧಿಕಾರ'ದ ಪರಿಕಲ್ಪನೆಯೇ ಎಂಬುದು ಕಾಡುತ್ತಿರುವ ಆತಂಕಗಳು.

ಸ್ವಾತಂತ್ರ್ಯಕ್ಕೂ ಮೊದಲು ಸಂಘ ಹೇಗಿತ್ತು? ಈಗ ಹೇಗಿದೆ? ಅಂದು ಸಂಘವೆಂದರೆ ಸರಳತೆ, ಸೇವಾ ಮನೋಭಾವ. ಸ್ವಯಂ ಸೇವಕರು, ಪ್ರಚಾರಕರು ಅಷ್ಟೇ ಸರಳತೆ, ಸಜ್ಜನಿಕೆಯಿಂದ ಇದ್ದರು. ಶಾಖೆಗಳಿಗೆ ಅವರು ಸೈಕಲ್‌ನಲ್ಲಿ ಬರುತ್ತಿದ್ದ ದೃಶ್ಯಗಳನ್ನು ನೋಡಿದ್ದೇನೆ. ಚಳಿ ಮಳೆ ಬಿಸಿಲೆನ್ನದೇ ಹಳ್ಳಿ, ಕಾಡು-ಮೇಡು ಅಲೆಯುತ್ತಾ ಅಲ್ಲೇ ಮಲಗಿ, ತಣ್ಣೀರು ಸ್ನಾನಕ್ಕೆ ಒಗ್ಗಿಕೊಂಡಿದ್ದ ಆ ಪ್ರಚಾರಕರ ಬಗ್ಗೆ ನನ್ನ ತಕರಾರು ಇಲ್ಲ.

ಈಗ! ಸಂಘವೆಂದರೆ 'ಸದಾನಂದ'ದ ಪರಿವಾರ. ಐಷಾರಾಮಿ ಬದುಕಿನ ಆಗರ, ಬ್ಯುಸಿನೆಸ್ ಕ್ಲಾಸ್ ಪ್ರಯಾಣದ, ಲೋಲುಪತೆಯ ಖಯಾಲಿಗಳ ಆಡುಂಬೊಲ. ಸಂಘವು ಸೇವೆಯ ಪಾವಿತ್ರ್ಯ ಉಳಿಸಿಕೊಂಡಿಲ್ಲ. ಅದರ ಗುರಿ ಅಧಿಕಾರ ಮಾತ್ರ. ಅದಕ್ಕಾಗಿ ಅವರ ಬಳಿ ಇರುವ ಏಕೈಕ ಟೂಲ್‌ಕಿಟ್ ಹಿಂದುತ್ವ. ಆ ಮೂಲಕ ದೇಶವನ್ನು ಪುನಃ ಅಂಧಕಾರಕ್ಕೆ ತಳ್ಳುವ ಕೆಲಸ ಮಾಡುತ್ತಿದೆ. ಸಂವಿಧಾನದತ್ತವಾಗಿ ಪ್ರಮಾಣ ಸ್ವೀಕರಿಸಿದ ಪ್ರಧಾನಿ, ಮುಖ್ಯಮಂತ್ರಿ, ಮಂತ್ರಿಗಳನ್ನು ಕೀಲುಗೊಂಬೆಗಳನ್ನಾಗಿ ಮಾಡಿಕೊಳ್ಳುವ ಅಪ್ರಜಾಸತ್ತಾತ್ಮಕ ಕೂಟವೇ ಇವತ್ತಿನ ಸಂಘ.

ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಹೇಗೆ ಬದಲಾಗಿದೆಯೋ ಸಂಘವೂ ಹಾಗೆಯೇ ಬದಲಾಯಿತು. ಸಂಘಕ್ಕೆ ಈಗ ದೇಶಪ್ರೇಮ ಬೇಕಿಲ್ಲ, ಅಭಿವೃದ್ಧಿ ಅಗತ್ಯವಿಲ್ಲ. ಶಾಂತಿ-ನೆಮ್ಮದಿ ರುಚಿಸುವುದಿಲ್ಲ. ಎಲ್ಲ ಪವರ್ ಸೆಂಟರ್‌ಗಳನ್ನು ದುರ್ಬಲಗೊಳಿಸಿ ತಾನೇ 'ಸೂಪರ್ ಪವರ್ ಸೆಂಟರ್' ಆಗಿ ಭಾರತವನ್ನು ತನ್ನ ಮುಷ್ಠಿಯಲ್ಲಿ ಇಟ್ಟುಕೊಳ್ಳಬೇಕೆಂಬ ಮಹಾತ್ವಾಕಾಂಕ್ಷೆ ಅದಕ್ಕಿರುವುದನ್ನು ಗಮನಿಸಬಹುದು.

ಇನ್ನು, ಸಂಘದ ಗರ್ಭಗುಡಿಗೆ ಕೆಲವರಿಗಷ್ಟೇ ಪ್ರವೇಶ. ಹಿಂದುತ್ವ ಸಿದ್ಧಾಂತಕ್ಕೆ ಶರಣಾದವರಿಗಷ್ಟೇ ಅಲ್ಲಿ ಅವಕಾಶ. ಬಿಜೆಪಿಯಲ್ಲಿ ಇರುವ ಎಲ್ಲರಿಗೂ ಈ ಗರ್ಭಗುಡಿ ಮುಕ್ತವಾಗಿಲ್ಲ.

ಕೇವಲ ಎರಡೇ ಸೀಟಿನ ಪಕ್ಷವಾಗಿದ್ದ ಬಿಜೆಪಿಗೆ ರಕ್ತಮಾಂಸ ತುಂಬಿ ಅದಕ್ಕಾಗಿ ಬದುಕನ್ನೇ ಮುಡಿಪಿಟ್ಟ ಎಲ್.ಕೆ.ಆಡ್ವಾಣಿ ಅವರಿಗೆ ಬಂದ ಗತಿ ಏನು? ಜಿನ್ನಾ ಬಗ್ಗೆ ಮಾತನಾಡಿದರೆಂಬ ಒಂದೇ ಕಾರಣಕ್ಕೆ ಅವರ ರಾಜಕೀಯ ಜೀವನವನ್ನೇ ಮುಗಿಸಲಾಯಿತು. ಇದು ಸಂಘದ ನಿಜಸ್ವರೂಪ.

ಆಳಕ್ಕಿಳಿದು ಅಧ್ಯಯನ ಮಾಡಿದಂತೆಲ್ಲ ಸಂಘದ ವಿರಾಟ್ ರೂಪ ದರ್ಶನವಾಗುತ್ತಿದೆ. ಆರ್‌ಎಸ್‌ಎಸ್ ಎಲ್ಲಿ ನೋಂದಣಿಯಾಗಿದೆ? ಅದರ ಅಧಿಕೃತತೆಯ ಪುರಾವೆ ಏನು? ಅದು ಕಾರ್ಯನಿರ್ವಹಿಸುತ್ತಿರುವ ಕಟ್ಟಡಗಳೆಲ್ಲ ಅದರ ಸ್ವಂತದ್ದೇ ಅಥವಾ ಬೇನಾಮಿಯೇ? ಅದರ ಆಸ್ತಿ, ವಹಿವಾಟು ಇತ್ಯಾದಿಗಳ ಲೆಕ್ಕಪತ್ರ ಮಾಹಿತಿ ಎಲ್ಲಿದೆ? ಬರುತ್ತಿರುವ ಕೋಟ್ಯಂತರ ರೂಪಾಯಿ ಆದಾಯಕ್ಕೆ ಲೆಕ್ಕ ಕೊಡಲಾಗುತ್ತಿದೆಯೇ? ಬಿಜೆಪಿಯು ಪ್ರತಿ ಸದಸ್ಯನ ವಿವರ ಇಟ್ಟಿದೆ, ಅದೇ ರೀತಿ ಸಂಘ ಇಟ್ಟಿದೆಯೇ? ಸ್ವಯಂಸೇವಕರು ಕೊಟ್ಟ ಹಣದಿಂದ ಸ್ಥಾಪನೆ ಮಾಡಿದ ಶಾಲೆಗಳ ಕಥೆ ಏನಾಗಿದೆ? ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಗಳಲ್ಲಿ ಲಕ್ಷಗಳ ಲೆಕ್ಕದಲ್ಲಿ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಹಾಗಾದರೆ ಉಚಿತ ಶಿಕ್ಷಣ ಸೇವೆ ಎನ್ನುವುದು ಬರೀ ಪೊಳ್ಳೇ? ದೇಶಾದ್ಯಂತ ಬೇನಾಮಿ ಟ್ರಸ್ಟುಗಳು, ವ್ಯಕ್ತಿಗಳ ಹೆಸರಿನಲ್ಲಿ ಇರುವ ಆಸ್ತಿಗಳ ಬಗ್ಗೆ ತನಿಖೆ ನಡೆಯಲಿ.

ಆರ್‌ಎಸ್‌ಎಸ್ ನಮ್ಮ ರಾಷ್ಟ್ರಧ್ವಜವನ್ನು ಏನೆಂದು ಕರೆಯುತ್ತದೆ ಗೊತ್ತೇ? ಆ ಪದವನ್ನು ಇಲ್ಲಿ ಬರೆಯಲು ಬಯಸುವುದಿಲ್ಲ. ಸಂಘದ ಗೌರವ ಏನಿದ್ದರೂ ಭಗವಾಧ್ವಜಕ್ಕೆ ಮಾತ್ರ. ರಾಷ್ಟ್ರಗೀತೆಯನ್ನೂ ಅದು ಒಪ್ಪುವುದಿಲ್ಲ. ಜತೆಗೆ, ನಾವು ಬಂದಿರುವುದೇ ಸಂವಿಧಾನ ಬದಲಿಸಲಿಕ್ಕೆ ಎನ್ನುವ ದರ್ಪ ಬೇರೆ. ಇವರು ರಾಷ್ಟ್ರಭಕ್ತರೇ?

ಹಿಂದೂ ಮತ್ತು ಮುಸ್ಲಿಮರ ಪೂರ್ವಜರು ಒಂದೇ ಎನ್ನುವ ಸಂಘವು ಸಂಘಟನೆ, ಚುನಾವಣೆ ಬಂದ ಕೂಡಲೇ ಅವರ ವಿರುದ್ಧ ದ್ವೇಷ ಕಕ್ಕುತ್ತದೆ. ಮುಸ್ಲಿಮರ ಆಕ್ರಮಣಗಳ ಕಥೆಗಳನ್ನೇ ಶಾಖೆಗಳಲ್ಲಿ ಅರೆದು ಕುಡಿಸುತ್ತಾ ಕೊನೆಗೆ ನಾವೆಲ್ಲ ಒಂದು, ನಾವೆಲ್ಲ ಹಿಂದೂ ಎನ್ನುತ್ತದೆ. ಇದಕ್ಕಿಂತ ದ್ವಿಮುಖ ಧೋರಣೆ ಏನಿದೆ? ಶಾಂತಿ-ಸಹನೆ ಎಂದು ಉಪನ್ಯಾಸ ಮಾಡುವುದು ಒಂದೆಡೆಯಾದರೆ, ಶಾಖೆಗಳಲ್ಲಿ ಕತ್ತಿ ಖಡ್ಗಗಳನ್ನು ಏಕೆ ಸಂಗ್ರಹಿಸಲಾಗುತ್ತದೆ. ಇದು ಕಾನೂನು ಬಾಹಿರ ಅಲ್ಲವೇ?

ಆರ್‌ಎಸ್‌ಎಸ್ ಎಂದೂ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಂಡಿಲ್ಲ, ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿದಿಲ್ಲ. ನೆಲದ ಕಾನೂನನ್ನು ಗೌರವಿಸಿಲ್ಲ. ಇಂಥ ಸಂಸ್ಥೆ ರಾಷ್ಟ್ರದ ವಿಪತ್ತು ಮಾತ್ರವಲ್ಲ, ದೇಶದ ಜಾತ್ಯತೀತ. ಧರ್ಮಾತೀತ ಮೂಲದ್ರವ್ಯಕ್ಕೆ ವಿಷವುಣಿಸುತ್ತಿರುವ ಕಾರ್ಕೋಟಕ ವಿಷಸರ್ಪ.

ಹೀಗಾಗಿ ಎಲ್ಲರೂ ದೇಶವನ್ನು ರಕ್ಷಿಸಿಕೊಂಡು ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ಹೋರಾಡಬೇಕಿದೆ. ಈ ದಿಕ್ಕಿನಲ್ಲಿ ಭಾರತಕ್ಕೆ ಭಾರತವೇ ಒಂದಾಗಬೇಕಿದೆ.

ಲೇಖಕ: ಜೆಡಿಎಸ್ ನಾಯಕ, ಕರ್ನಾಟಕದ ಮಾಜಿ ಮುಖ್ಯಮಂತ್ರಿ



ನಾವೆಲ್ಲಾ ವಾಲ್ಮೀಕಿಯಂತಾಗಬೇಕು

ವ್ಯಕ್ತಿಯ ಗುಣದಿಂದ ವ್ಯಕ್ತಿತ್ವ ರೂಪುಗೊಳ್ಳುತ್ತೆ. ವ್ಯಕ್ತಿಯ ಗುಣ ಕೆಟ್ಟದಾಗಿದ್ದರೆ, ಅವನ ವ್ಯಕ್ತಿತ್ವವೂ ಕೆಟ್ಟದ್ದಾಗಿರುತ್ತೆ. ಮಾಡುವ ಕೆಲಸ ಒಳ್ಳೆಯದಾಗಿರಬೇಕಾದರೆ ನಾವು ಒಳ್ಳೆಯವರಾಗಿರಬೇಕು. ಒಳ್ಳೆಯ ಕವಿತೆ ಬರೆಯಬೇಕಾದರೂ ಕವಿಯ ಮನಸ್ಸು ಒಳ್ಳೆತನದಿಂದಿರಬೇಕು. ಕವಿಯ ಮನಸ್ಸು ಕೆಟ್ಟರೆ, ಉತ್ತಮ ಕವಿತೆ ಹುಟ್ಟಲಾರರು. ಹಾಗೆಯೇ, ಒಬ್ಬ ವಿಜ್ಞಾನಿ ಒಳ್ಳೆಯ ಮನಸ್ಸಿನಿಂದ ಯೋಚಿಸಿದರೆ, ಒಳ್ಳೆಯ ಸಂಶೋಧನೆಯಾಗುತ್ತೆ. ಇದು ಕವಿ, ವಿಜ್ಞಾನಿಗಳಿಗಲ್ಲದೆ, ಒಬ್ಬ ಋಷಿಗೂ ಗುಣಮೌಲ್ಯಗಳು ಅನ್ವಯವಾಗುತ್ತದೆ. ನಿರ್ಮಲ ಮನಸ್ಸಿನಿಂದ ಧ್ಯಾನಿಸಿದರೆ, ಒಳ್ಳೆಯ ಫಲ ಸಿಗುತ್ತೆ. ಇಲ್ಲದಿದ್ದರೆ, ತಪಃಭಂಗವಾಗಿ ವೈಫಲ್ಯ ಅನುಭವಿಸಬೇಕಾಗುತ್ತದೆ. ಬೇಡನಾಗಿದ್ದ ವಾಲ್ಮೀಕಿ 'ರಾಮಾಯಣ' ಬರೆಯುವಷ್ಟು ಪಾರಂಗತನಾಗಿದ್ದು ಅವನೊಳಗಿನ ಕ್ರೌರ್ಯ ಅಳಿದಾಗ. ಬೇಡನಾಗಿ ಅದೆಷ್ಟೋ ಪಕ್ಷಿ-ಪ್ರಾಣಿಗಳನ್ನು ಕೊಂದಿದ್ದ ವಾಲ್ಮೀಕಿಗೆ, ಮತ್ತೊಬ್ಬ ಬೇಡ ಕ್ರೌಂಚಪಕ್ಷಿಯನ್ನು ಕೊಂದಾಗ ಬಹಳ ನೋವಾಗುತ್ತದೆ. ವಾಲ್ಮೀಕಿ ಶೋಕದಿಂದ ಆಡಿದ ಶ್ಲೋಕವೇ ಕಾವ್ಯಮಯವಾಗಿ 'ರಾಮಾಯಣ'ದಂಥ ಮಹಾಕಾವ್ಯಕ್ಕೆ ಪ್ರೇರಣೆಯಾಗುತ್ತದೆ.


ಕರುಣೆ-ಮಮತೆ ಇಲ್ಲದವನಿಗೆ ಪರೋಪಕಾರಬುದ್ಧಿ ಬರುವುದಿಲ್ಲ. ಕೆಟ್ಟ ಜನರಿಗೆ ಬುದ್ಧಿಯೇ ಇರುವುದಿಲ್ಲ ಅಂತ ವಿಜ್ಞಾನವೂ ಹೇಳುತ್ತೆ, ಸಮಾಜವೂ ಒಪ್ಪಿಕೊಳ್ಳುತ್ತೆ. ಬುದ್ಧಿ ಕಡಿಮೆ ಇರುವುದರಿಂದಲೇ ಮೃಗಗಳು ಕ್ರೂರವಾಗಿ ವರ್ತಿಸುತ್ತವೆ. ಹಾಗೇ, ಬುದ್ಧಿ ಕಡಿಮೆ ಇರುವ ಮನುಷ್ಯರಲ್ಲೇ ಸ್ವಾರ್ಥ-ದ್ವೇಷ-ಮೋಸಗಳು ಹೆಚ್ಚಾಗಿರುತ್ತವೆ. ಜ್ಞಾನ-ವಿವೇಕ ಇರುವ ಮನುಷ್ಯರಲ್ಲಿ ದಯೆ-ಔದಾರ್ಯಗಳು ಹೆಚ್ಚಿರುತ್ತವೆ. ಬಹುಮುಖ್ಯವಾಗಿ ಕಷ್ಟದಲ್ಲಿರುವವರ ಬಗ್ಗೆ ಅನುಕಂಪ ಸ್ಫುರಿಸುತ್ತದೆ. ವಿಶ್ವದ ಮೊದಲ ಮಹಾಕಾವ್ಯ ರಾಮಾಯಣ ಹುಟ್ಟಿದ್ದು, ಕ್ರೌಂಚಪಕ್ಷಿಯ ಮೇಲಾದ ಕ್ರೌರ್ಯವನ್ನು ಖಂಡಿಸಿದಾಗ. ಮನುಷ್ಯನಲ್ಲಿರುವ ಕೆಟ್ಟತನಗಳನ್ನು ಕೆಡವಿ, ಅವನ ಮನದಲ್ಲಿ ಒಳ್ಳೆತನ ಉದ್ದೀಪಿಸಲು ವಾಲ್ಮೀಕಿ 24 ಸಾವಿರ ಶ್ಲೋಕಗಳ ಮಹಾಕಾವ್ಯವನ್ನು ಬರೆದು ಆದಿಕವಿ ಅನ್ನಿಸಿಕೊಳ್ಳುತ್ತಾನೆ. ಅಂದರೆ ಒಳ್ಳೆಯ ಸಾಹಿತ್ಯ ಹುಟ್ಟುವುದು ಒಳ್ಳೆಯ ಸಾಹಿತಿಯಿಂದಲೇ ಅನ್ನುವುದು ರಾಮಾಯಣ ಕಾಲದಿಂದಲೂ ನಿರೂಪಿತವಾಗಿದೆ. ಆದರೆ, ಇಂಥ ಒಳ್ಳೆತನ ಸುಮ್ಮನೆ ಹುಟ್ಟುವುದಿಲ್ಲ. ಅದಕ್ಕೂ ಬೇಕು ಸಾಕಷ್ಟು ಪರಿಶ್ರಮ ಅನ್ನುವುದು ಸಹ ವಾಲ್ಮೀಕಿ ಜೀವನವೃತ್ತಾಂತ ಸಾಕ್ಷೀಕರಿಸುತ್ತದೆ.

ಬೇಡನಾಗಿದ್ದಾಗ ಕ್ರೂರನಾಗಿ ಪ್ರಾಣಿಪಕ್ಷಿಗಳನ್ನು ಕೊಲ್ಲುತ್ತಿದ್ದ ರತ್ನಾಕರ, ನಾರದಮುನಿಯ ಸಲಹೆಯಂತೆ ಪಾಪಕೃತ್ಯ ಬಿಟ್ಟು, ಪುಣ್ಯ ಸಂಪಾದಿಸಲು ತಪಸ್ಸಿಗೆ ಕುಳಿತುಕೊಂಡಾಗ, ಅವನ ಮೈಮೇಲೆ ಹುತ್ತ ಬೆಳೆಯುತ್ತದೆ. ಧೃತಿಗೆಡದೆ ಏಕಾಗ್ರಚಿತ್ತನಾಗಿ ತಪಸ್ಸು ಮಾಡಿ ತನ್ನ ಮನದೊಳಗಿದ್ದ ಕ್ರೌರ್ಯದ ಪಾಪವನ್ನು ತೊಳೆದುಕೊಳ್ಳುತ್ತಾನೆ. ಯೋಚನೆಯ ಹುತ್ತದಿಂದ (ವಲ್ಮೀಕ) ಸುಜ್ಞಾನ ಪಡೆದು ಹೊರಬಂದು, ವಾಲ್ಮೀಕಿ ಹೆಸರಿನಲ್ಲಿ ಸಾತ್ವಿಕ ಜೀವನ ನಡೆಸುತ್ತಾನೆ. ತಪಸ್ಸಿನಿಂದ ವಾಲ್ಮೀಕಿ ಮನಸ್ಸು ಅದೆಷ್ಟು ಉತ್ತಮವಾಗಿರುತ್ತದೆಂದರೆ, ಕ್ರೌಂಚಪಕ್ಷಿಯ ಸಾವಿಗೆ ಮರುಗುತ್ತಾನೆ. ಕೊಂದ ಬೇಡನನ್ನು ಶಪಿಸುತ್ತಾನೆ. ಇಂಥ ಒಳ್ಳೆಯ ಮನಸ್ಸು ವಾಲ್ಮೀಕಿಗೆ ಇದ್ದಿದ್ದರಿಂದಲೇ ರಾಮಾಯಣದಂಥ ಅತ್ಯುನ್ನತ ಮಹಾಕಾವ್ಯವನ್ನು ಬರೆಯಲು ಸಾಧ್ಯವಾಯಿತು. ದೌರ್ಜನ್ಯ ನಡೆಸುವವರಿಗೆ ಎಂಥ ಫಲ ಸಿಗುತ್ತೆ ಎಂಬುದನ್ನು 'ದುರ್ಜನ-ಸಜ್ಜನ'ರ ಕಥಾಹಂದರದಲ್ಲಿ ಅರ್ಥಪೂರ್ಣವಾಗಿ ನಿರೂಪಿಸುವ ಪ್ರೌಢಿಮೆ ಸಿದ್ಧಿಸಿತು.

ನಾವು ಅಷ್ಟೇ, ಬೇಡ ಮನಃಸ್ಥಿತಿಯಿಂದ ವಾಲ್ಮೀಕಿಯ ಸಾತ್ವಿಕ ಮನಃಸ್ಥಿತಿಗೆ ಬರಬೇಕು. ಒಳ್ಳೆಯ ಮನಸ್ಸು ಮೂಡಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ವಾಲ್ಮೀಕಿಯ ತಪಸ್ಸಿನಂತೆ ಕಠಿಣ ಪರಿಶ್ರಮದಿಂದ ಮನಸ್ಸನ್ನು ಹದವಾಗಿ ಪರಿಷ್ಕರಿಸಬೇಕು. ಕಾಡಿನಲ್ಲಿ ಒಂಟಿ ಸಲಗದಂತೆ ಅಲೆವ ಮನಸ್ಸನ್ನು ಪರಹಿತವೆಂಬ ಖೆಡ್ಡಾದಲ್ಲಿ ಪಳಗಿಸಬೇಕು. 'ಪರೋಪಕಾರಕ್ಕೆ ಇದೇ ಈ ಶರೀರ' ಎಂಬ ತ್ಯಾಗದ ಪಾಕದಲ್ಲಿ ಪರಿಪಕ್ವವಾಗಿಸಬೇಕು. ಪಾಪ-ಪುಣ್ಯಗಳ ಯೋಚನೆಯ ಹುತ್ತದಲ್ಲಿ ವಾಲ್ಮೀಕಿಯಂತೆ ಉತ್ತಮಗೊಳ್ಳಬೇಕು. ನಾಲ್ಕು ಜನರಿಗೆ ಮಾಡುವ ಉಪಕಾರದಲ್ಲಿ ಉತ್ತಮ ಬದುಕಿದೆ ಎಂಬುದು ಮನದಟ್ಟಾದಾಗ ನಮಗೆ 'ಸಚ್ಚಿದಾನಂದ'ದ ಅನುಭವವಾಗುತ್ತದೆ. •

ಆರ್‌ಎಸ್‌ಎಸ್ ಬಗೆಗಿನ ಟೀಕೆಗೆ ವಿಮರ್ಶೆಯ ಬಡತನ ಕಾರಣವೇ?

• ಕೋಟ ಶ್ರೀನಿವಾಸ ಪೂಜಾರಿ



ಆರ್‌ಎಸ್‌ಎಸ್ ಎಂಬುದು ಒಂದು ಕುಟುಂಬಕ್ಕಾಗಿ, ಒಂದು ಜಾತಿಗಾಗಿ, ಕೆಲವೇ ವ್ಯಕ್ತಿಗಳಿಗಾಗಿ ಕೆಲಸ ಮಾಡುವ ಸಂಸ್ಥೆಯಲ್ಲ. 1977ರಲ್ಲಿ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿ ಮೇಲೆದ್ದು ಬಂದ ಸುನಾಮಿ ಲಕ್ಷಾಂತರ ಜನರ ಮಾರಣಹೋಮ ಮಾಡಿದಾಗ ಸೇನೆಯಷ್ಟೆ ಸಮರ್ಪಕವಾಗಿ ಪರಿಹಾರ ಕಾರ್ಯಗಳನ್ನು ಸಂಘ ಮಾಡಿತು. ಅಂದಿನ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಸಂಘದ ಕಾರ್ಯವನ್ನು ಪ್ರಶಂಸಿಸಿದ್ದರು

ರಾಷ್ಟ್ರೀಯ ಸ್ವಯಂಸೇವಕ ಸಂಘ 1925 ಸೆಪ್ಟೆಂಬರ್ 25ರ ವಿಜಯದಶಮಿಯಂದು ನಾಗಪುರದಲ್ಲಿ ಆರಂಭವಾದಾಗಿನಿಂದ ಇಂದಿನವರೆಗೆ ತನ್ನ ವೈಚಾರಿಕ ನಿಲುವಿಗೋಸ್ಕರ ಮತ್ತು ತಾನು ನಂಬಿದ ತತ್ವಗಳಿಗೋಸ್ಕರ ಒಂದಷ್ಟು ಸಂಘರ್ಷಗಳ ಮಧ್ಯೆಯೇ ಬೆಳೆದಿದೆ ಮತ್ತು ಕುಗ್ಗಿಸುತ್ತವೆ.

ಅಂದಿನಿಂದ ಇಲ್ಲಿಯವರೆಗೂ ಸಂಘವನ್ನು ಟೀಕಿಸುವವರೂ ಸಮರ್ಥಿಸುವವರೂ ಇದ್ದಾರೆ. 'ವಸುದೈವ ಕುಟುಂಬಕಂ' ಅಂದರೆ ಇಡೀ ಜಗತ್ತೇ ತನ್ನ ಕುಟುಂಬ, ಕುಟುಂಬದಲ್ಲಿರುವ ಎಲ್ಲರೂ ನನ್ನ ಬಂಧುಗಳು ಎಂಬ ಸೂತ್ರದಡಿ ವಿಶಾಲ ರೆಂಬೆ ಕೊಂಬೆಗಳನ್ನು ಚಾಚಿ ದೇಶ ಮಾತ್ರವಲ್ಲ; ಜಗತ್ತಿನೆಲ್ಲೆಡೆ ಆರ್‌ಎಸ್‌ಎಸ್ ಪಸರಿಸುತ್ತಿದೆ. ರಾಷ್ಟ್ರ ಪ್ರೇಮದ ಬೀಜವನ್ನು ಎಳೆಯ ಮಕ್ಕಳ ಹೃದಯದಲ್ಲಿ ಬಿತ್ತಿ, ರಾಷ್ಟ್ರ ಮೊದಲು ಎಂಬ ನಿಲುವನ್ನು ವೃಕ್ಷರೂಪದಲ್ಲಿ ಬೆಳೆಸುತ್ತದೆ. ಹೀಗಾಗಿ, ಸಂಘ ಶಿಕ್ಷಣ ಪಡೆದ ವ್ಯಕ್ತಿಯೊಬ್ಬ ರಾಷ್ಟ್ರ ಭಕ್ತನಾಗಿ ರೂಪುಗೊಂಡು ವ್ಯಕ್ತಿತ್ವ ನಿರ್ಮಾಣದ ಜತೆಗೆ ರಾಷ್ಟ್ರ ನಿರ್ಮಾಣದ ಕೈಂಕರ್ಯದಲ್ಲಿ ತನ್ನನ್ನೇ ಸಮರ್ಪಣೆ ಮಾಡಿಕೊಳ್ಳುವುದು ಸಂಘದ ಹೆಗ್ಗಳಿಕೆ.

ಹೀಗೆ ಅವಿಚ್ಛಿನ್ನ ಕೊಡುಗೆ ನೀಡುತ್ತಿರುವ ಆರ್‌ಎಸ್‌ಎಸ್ ಅನ್ನು ಕಾಂಗ್ರೆಸ್‌ನ ಸಿದ್ದರಾಮಯ್ಯನವರು ಅಫ್ಘಾನಿಸ್ತಾನದ ಭಯೋತ್ಪಾದಕರಿಗೆ ಹೋಲಿಸಿದ್ದಾರೆ. ನಾಲ್ಕು ಸಾವಿರಕ್ಕೂ ಮಿಕ್ಕಿ ಕೆಎಎಸ್, ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ಸಂಘ ಶಿಕ್ಷಣವನ್ನು ಪಡೆದವರು. ಬಸವರಾಜ ಬೊಮ್ಮಾಯಿಯವರ ಸರ್ಕಾರ ಇಂತಹ ಅಧಿಕಾರಿಗಳ ಮೂಲಕ ಹಿಂದುತ್ವದ ನೆಲೆಗಟ್ಟನ್ನು ವಿಸ್ತರಿಸುವ ಕೆಲಸ ಮಾಡುತ್ತಿದೆ ಎಂದು ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ. ಇಂತಹ ಆಧಾರ ರಹಿತ ಆರೋಪಗಳು ಟೀಕೆ ಮಾಡುವ ವ್ಯಕ್ತಿಗಳ ವ್ಯಕ್ತಿತ್ವ ಕುಗ್ಗಿಸುತ್ತದೆ.

ರಾಷ್ಟ್ರದ ಉನ್ನತಿಗಾಗಿ ಸಮರ್ಪಣಾ ಮನೋಭಾವದ ಕಾರ್ಯವನ್ನು ಸಂಘಟಿಸಿ ಭಾರತವನ್ನು ಪರಮವೈಭವದತ್ತ ಕೊಂಡೊಯ್ಯುವ ಉದ್ದೇಶದಿಂದ ಕೇಶವ ಬಲಿರಾಂ ಹೆಡಗೆವಾರ್ ಅವರು ಸಂಘವನ್ನು ಸ್ಥಾಪಿಸಿದರು.

ಸಂಘದ ಎರಡನೆಯ ಸರಸಂಘ ಚಾಲಕರಾದ ಗುರೂಜಿಯವರನ್ನು ಚೀನಾ ಮತ್ತು ಭಾರತದ ಯುದ್ಧ ಸಂದರ್ಭದಲ್ಲಿ ದುಂಡುಮೇಜಿನ ಚರ್ಚೆಗಾಗಿ ಅಂದಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂರವರೇ ಆಹ್ವಾನಿಸಿದ್ದರು. ಸಭೆಯಲ್ಲಿ ಮಾತು ಆರಂಭಿಸಿದ ಗುರೂಜಿಯವರು, 'ಚೀನಾ ಸೇನೆ ಮುಂದಕ್ಕೆ ಬರುತ್ತಿದೆ ನಿಮ್ಮ ಸೇನೆ ಏನು ಮಾಡುತ್ತಿತ್ತು ಎಂದು ಹೇಳುವ ಬದಲು ನಮ್ಮ ಸೇನೆ ಏನು ಮಾಡುತ್ತಿತ್ತು ಎಂದು ಕೇಳಬಹುದು. ನಿಮ್ಮ ಸೇನೆ ಎಂದರೆ ಈ ದೇಶದ ಸೇನೆ. ನೆಹರೂರವರ ಸೇನೆಯಲ್ಲ. ನಮ್ಮದೇ ಅಂದರೆ ನಮ್ಮ ದೇಶದ ಸೇನೆ' ಎಂದು ಹೇಳಿದಾಗ ಅಲ್ಲಿದ್ದ ಎಲ್ಲರೂ ಕೃತಜ್ಞತೆ ಸಲ್ಲಿಸುತ್ತಾರೆ.

ಸಂಘದ ಮೂರನೆಯ ಸರಸಂಘಚಾಲಕ ಬಾಳಾಸಾಹೇಬ್ ದೇವರಸ್ ಅವರು, ಸಮಾಜದಲ್ಲಿ ಅಸ್ಪೃಶ್ಯತೆ ಅಪರಾಧವಲ್ಲವಾದರೆ ಜಗತ್ತಿನ ಯಾವುದೇ ತಪ್ಪುಗಳು ಅಪರಾಧ ಎಂದು ಅನಿಸುವುದಿಲ್ಲ ಎಂದು ಹೇಳುತ್ತಾ ಅಸ್ಪೃಶ್ಯತೆಯ ಅಡಿಪಾಯಕ್ಕೆ ಕೊಡಲಿಯೇಟು ಹಾಕುತ್ತಾರೆ. ಸ್ವಾತಂತ್ರ್ಯ ಬಂದು ಏಳೂವರೆ ದಶಕ ಸಂದರೂ ಜಾತಿಗೊಂದು ಸ್ಮಶಾನ ಮಾಡುವ ರಾಜಕಾರಣಿಗಳಿಗೆ ಸಂಘದ ಸಾಮಾಜಿಕ ನಿಲುವು ಅರ್ಥವಾಗುತ್ತಿಲ್ಲ ಅಥವಾ ಅರ್ಥವಾಗದಷ್ಟು ಸಂಘ ದ್ವೇಷ ಮನದಲ್ಲಿ ತುಂಬಿಹೋಗಿದೆ.

ಸಂಘವೆಂಬ ರಾಷ್ಟ್ರೀಯ ಸಂಘಟನೆಯ ಅನೇಕ ರೆಂಬೆಗಳಲ್ಲಿ ಭಾರತೀಯ ಜನತಾ ಪಕ್ಷವು ಒಂದು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ವಿಶ್ವ ಹಿಂದೂ ಪರಿಷತ್, ಬಿಎಂಎಸ್, ಕೃಷಿ ಸಂಘ, ವನವಾಸಿ ಕಲ್ಯಾಣ, ಸೇವಾಭಾರತಿ, ಸಂಸ್ಕೃತ ಭಾರತಿ, ಹೀಗೆ ಸಂಘದ ಒಡಲ ಒಳಗೆ ಬೆಸೆದುಕೊಂಡ ಹಲವಾರು ಸಂಘಟನೆಗಳು ದೇಶದಾದ್ಯಂತ ಕೆಲಸ ಮಾಡುತ್ತಿವೆ. ಸಂಘದ ವೈಚಾರಿಕ ನಿಲುವನ್ನು ಸಮರ್ಥಿಸುತ್ತ ಬಿಜೆಪಿ ರಾಜಕೀಯದಲ್ಲಿ ಕೆಲಸ ಮಾಡುತ್ತಿದೆ.

ಆರ್‌ಎಸ್‌ಎಸ್ ಎಂಬುದು ಒಂದು ಕುಟುಂಬಕ್ಕಾಗಿ, ಒಂದು ಜಾತಿಗಾಗಿ, ಕೆಲವೇ ವ್ಯಕ್ತಿಗಳಿಗಾಗಿ ಕೆಲಸ ಮಾಡುವ ಸಂಸ್ಥೆಯಲ್ಲ. 1977ರಲ್ಲಿ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿ ಮೇಲೆದ್ದು ಬಂದ ಸುನಾಮಿ ಲಕ್ಷಾಂತರ ಜನರ ಮಾರಣಹೋಮ ಮಾಡಿದಾಗ ಸೇನೆಯಷ್ಟೆ ಸಮರ್ಪಕವಾಗಿ ಪರಿಹಾರ ಕಾರ್ಯಗಳನ್ನು ಸಂಘ ಮಾಡಿತು. ಅಂದಿನ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಸಂಘದ ಕಾರ್ಯವನ್ನು ಪ್ರಶಂಸಿಸಿದ್ದರು. 1963ರ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸಮ ವಸ್ತ್ರದೊಂದಿಗೆ ಭಾಗವಹಿಸುವಂತೆ ಅಂದಿನ ಪ್ರಧಾನಿ ನೆಹರೂ ಅವರು ಸಂಘಕ್ಕೆ ಆಹ್ವಾನ ನೀಡಿದ್ದರು.

ಸಂಘವು ಒಂದು ಲಕ್ಷಕ್ಕೂ ಅಧಿಕ ಶಾಖೆಗಳನ್ನು ಹೊಂದಿದೆ. 15 ಕೋಟಿಗೂ ಮಿಕ್ಕಿ ಸ್ವಯಂಸೇವಕರು ಇದ್ದಾರೆ. 2 ಲಕ್ಷಕ್ಕೂ ಮೀರಿದ ವಿದ್ಯಾ ಮಂದಿರಗಳಿವೆ. ಬಿಎಂಎಸ್ ಸಂಘಟನೆ ಮೂಲಕ ಎರಡು ಕೋಟಿ ಕಾರ್ಮಿಕ ರನ್ನು ಸಂಘಟಿಸಲಾಗಿದೆ. ವಿದ್ಯಾರ್ಥಿ ಪರಿಷತ್ ನಲ್ಲಿ ಒಂದು ಕೋಟಿಗೂ ಮೀರಿದ ಕಾರ್ಯಕರ್ತ ರಿದ್ದಾರೆ. ಬಿಜೆಪಿ 14 ಕೋಟಿ ಸದಸ್ಯರನ್ನು ಹೊಂದಿದೆ. ವಿಶ್ವದ ಅತಿದೊಡ್ಡ ಸ್ವಯಂಸೇವಕರ ಸಂಘ ಯಾವುದು ಕೇಳಿದರೆ, ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ. ಇಷ್ಟೊಂದು ವಿಸ್ತಾರವಾದ ಸಂಘದ ಮಹತ್ತನ್ನು ಅಧ್ಯಯನ ಮಾಡಿ, ಅರ್ಥಮಾಡಿಕೊಳ್ಳುವುದು ಸೋನಿಯಾ ಗಾಂಧಿಯವರ ನೆರಳಿನಲ್ಲಿ ರಾಜಕಾರಣ ಮಾಡುವ ಸಿದ್ದರಾಮಯ್ಯ ಅವರಿಗೆ ಸಾಧ್ಯ ಎಂದು ನನಗೆ ಅನಿಸುತ್ತಿಲ್ಲ.

ಇಂದು ಸಂಘದ ಸ್ವಯಂಸೇವಕ ಗ್ರಾಮ ಪಂಚಾಯತ್ ನಿಂದ ಆರಂಭವಾಗಿ, ರಾಷ್ಟ್ರದ ಪ್ರಧಾನಿ, ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಲೋಕಸಭೆಯ ಸ್ಪೀಕರ್, ಎಲ್ಲಾ ರಾಜ್ಯದ ರಾಜ್ಯಪಾಲರು ಮಾತ್ರವಲ್ಲದೆ ಅನೇಕ ರಾಜ್ಯದ ಮುಖ್ಯಮಂತ್ರಿಗಳ ಸ್ಥಾನಕ್ಕೆ ಏರಿ ಬಿಟ್ಟಿದ್ದಾರೆ.

ಬೆಂಗಳೂರಿನ ಚನ್ನೇನ ಹಳ್ಳಿಯಲ್ಲಿ ನಡೆದ ಶಿಕ್ಷಾ ವರ್ಗದ ಶಿಬಿರದಲ್ಲಿ ನನ್ನೊಂದಿಗೆ ರಜಾಕ್ ಎಂಬ ಯುವಕ ಹೆಸರು ನೋಂದಾಯಿಸಿ ಪಾಲ್ಗೊಂಡಿದ್ದ. ತನ್ನೊಡಲಲ್ಲಿ ಸಂಘದ ಬಗ್ಗೆ ಇರುವ ವೈಚಾರಿಕ ವಿರೋಧಗಳನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಬಂದಿರಬೇಕು ಎಂದೆಣಿಸಿದ್ದ ನಾನು ಕುತೂಹಲಗೊಂಡಿದ್ದೆ. ಶಿಬಿರ ಮುಕ್ತಾಯದ ದಿನ ಅನಿಸಿಕೆ ಹೇಳಿಕೊಂಡ ರಜಾಕ್, 'ಸಂಘವೇನೆಂದು ತಿಳಿಯುವ ಕುತೂಹಲದಿಂದ ಬಂದೆ. ಮುಕ್ತವಾಗಿ ಪಾಲ್ಗೊಂಡ ನಂತರ ನನಗನಿಸಿದ್ದು, ಶಿಕ್ಷಾ ವರ್ಗಕ್ಕೆ ನಾನು ಬಂದಿದ್ದು ತಡವಾಯಿತು. ನನ್ನ ಇಡೀ ಬದುಕು ಸಂಘ ಸಮರ್ಪಿತ' ಎಂದು ಹೇಳಿದ. ಸಂಘವನ್ನು ಅಫ್ಘಾನಿಸ್ತಾನದ ಭಯೋತ್ಪಾದಕರಿಗೆ ಹೋಲಿಸುವವರಿಗೆ, ರಾಷ್ಟ್ರಪ್ರೇಮಿ ರಜಾಕನ ಮಾತುಗಳು ಹೇಗೆ ಅರ್ಥವಾಗಬೇಕು.

ಟಿಬೆಟ್ ಧರ್ಮಗುರು ದಲೈಲಾಮ ಅವರು, ರಾಷ್ಟ್ರಭಕ್ತಿ ಸಂಸ್ಥೆಯಾದ ಆರ್‌ಎಸ್‌ಎಸ್ ಅನ್ನು ಯಾರಾದರೂ ಅಪಮಾನ ಮಾಡಿದರೆ ಹೆತ್ತಮ್ಮನನ್ನು ಅಪಮಾನ ಮಾಡಿದಂತೆ ಎಂದಿದ್ದರು. ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿಯವರೇ, ನಮಸ್ತೆ ಸದಾ ವತ್ಸಲೆ ಮಾತೃಭೂಮಿ ಎಂಬ ನುಡಿಯೊಂದಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಬನ್ನಿ. ರಾಷ್ಟ್ರಭಕ್ತಿ ವಿಚಾರವನ್ನು ಅರ್ಥಮಾಡಿಕೊಳ್ಳಲಿಕ್ಕೆ ನಿಮಗೆ ಸಾಧ್ಯವಾದರೆ ಅಹುದಹುದೆನ್ನಿ.

ಲೇಖಕ: ಸಮಾಜ ಕಲ್ಯಾಣ ಸಚಿವ, ವಿಧಾನ ಪರಿಷತ್ತಿನ ಸಭಾನಾಯಕ

ಪದಬಂಧ 4749


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗಿದ್ದ ದೇಹವನ್ನು ನೋಡಿದಾಗಲೇ ಈ ಅನುಮಾನ! (3)
3.ನೆನಪಿನಿಂದ ಮಾಸದ ತಿಂಗಳು (2)
5.ವಿಷಯದಲ್ಲಿರುವ ಗರಳ ಕಾಣುತ್ತಿದೆಯೇ? (2)
6.ಕತ್ತಿಯ ಅಲುಗಿದು (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
10.ಅಂಗೈನಿಂದ ಕೆನ್ನೆಗೆ ಕೊಡುವ ಏಟು (4)
11.ಜವಾನನ ಸುತ್ತ ನೆರೆದಿರುವ ಮಂದಿ! (2)
13.ಹುಲ್ಲು ಮುಂತಾದವುಗಳ ರಾಶಿ (2)
14.ಒಲುಮೆಯಿಂದ ಮಾಡಿದ ಒತ್ತಾಯ (3)

ಮೇಲಿಂದ ಕೆಳಕ್ಕೆ

1.ಸಂಕೇತ ಅಥವಾ ಸುಳಿವು (2)
2.ಹರ್ಷವಿಲ್ಲಿ ವಿರಳವಾಗಿದೆ (3)
4. ಕಾಹಿಲೆಯೊಡನೆ ಕಾಣಿಸುವ ಸಿಹಿ! (3)
5.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
6.ಗಣಿಯಲ್ಲಿ ಹುಟ್ಟಿದುದು (3)
8.ನಸುಕಿನಲ್ಲಿ ಕಾಣಿಸಿದ ತೆರೆ! (3)
9.ಜ್ಯೋತಿಶ್ಚಕ್ರದ ರಾಶಿಗಳಲ್ಲಿರುವ ಜೋಡಿ! (3)
10.ಅನುವಾದವನ್ನು ಹೀಗೆನ್ನಿ (3)
11.ಹಡಗು ಇಲ್ಲಿದೆ (3)
12.ಆ ಮೇಲೆ ಕಾಣಿಸಿದ ಕೂರ್ಮ! (2)



4748ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವತೋಮುಖ
4.ಅಧರ 5.ಗಹನ
9.ನಾಲ್ಕು 10.ವಾರಸು
11.ಲಾಭ 12.ವಲ್ಲರಿ
15.ಜಳಕ 16.ಪುನರುತ್ಥಾನ

ಮೇಲಿಂದ ಕೆಳಕ್ಕೆ:
1.ಸಂತೋಷ 2.ವಿರ
3.ಖಗ 4.ಅವಿನಾಭಾವ
6.ನರಭಕ್ಷಕ 7.ಕವಾಟ
8.ನಸುಕು 13.ರಿಪು
14.ಗರುಡ 15.ಜನ

ಸುಡೊಕು 5135

4				2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	7

5134 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಅಕ್ಟೋಬರ್ 16, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಏಕಾದಶೀ ಗಂ. 31-41 (ಸಾ. 6-56) ಶನಿವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 13-49 (ಹ. 11-47) ಗಂಡ ನಾಮ ಯೋಗ ಗಂ. 48-17 ವಣಿಜ ಕರಣ ಗಂ. 3-3 ವಿಷ ಗಂ. 31-41 ಅಮೃತ ಗಂ 55-30 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-13 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 1 8

ಮೇಷ: ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ. ಸ್ನೇಹಿತರಿಂದಾಗಿ ಸಂತೋಷದ ವಾತಾವರಣ.

ವೃಷಭ: ಹಿರಿಯರಿಂದ ಸಕಾಲಿಕ ಸಲಹೆಗಳಿಂದಾಗಿ ಎದುರಾಗಬಹುದಾದ ಗಂಡಾಂತರ ನಿವಾರಣೆ. ವೈಮನಸ್ಯ ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ಮಿಥುನ: ಆತ್ಮೀಯರಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ಪರಸ್ಪರ ವಿಶ್ವಾಸ ಮೂಡುವುದು.

ಕರ್ಕಾಟಕ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ಸಿಂಹ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ಕನ್ಯಾ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರ. ಗೆಳೆಯರಿಂದ ನೆಮ್ಮದಿ.

ತುಲಾ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ವೃಶ್ಚಿಕ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ಧನು: ಭಿನ್ನಾಭಿಪ್ರಾಯದಿಂದಾಗಿ ನಿಂತುಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಲ ಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.

ಮಕರ: ವಿಷಯಾಧಾರಿತ ಚರ್ಚೆಗಳಿಂದಾಗಿ ಚಿಂತನೆಗಳ ಬದಲಾವಣೆಯಿಂದ ಆತ್ಮೋನ್ನತಿ. ವಿಶೇಷ ಭೋಜನ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ಕುಂಭ: ಕೆಲಸ ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಸಕಾಲಿಕ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಮೀನ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ ಕಾರ್ಯಗಳು ಕೂಡಿಬರುವವು.

ನಿಮ್ಮ ಜನ್ಮದಿನ 16-ಅಕ್ಟೋಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಯಾವಾಗಲೂ ಒಂದಿಲ್ಲೊಂದು ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುವಿರಿ. ಏಕಕಾಲದಲ್ಲಿ ಅನೇಕ ಕೆಲಸಗಳನ್ನು ಕಾರ್ಯನಿರ್ವಹಿಸಿ ಯಶಸ್ಸನ್ನು ಸಾಧಿಸುವ ಛಾತಿಯನ್ನು ಹೊಂದಿರುವಿರಿ. ದೂರದೃಷ್ಟಿಯನ್ನು ಹೊಂದಿದವರು.

ಪ್ರತಿಭಟನೆ ಸ್ಥಳದಲ್ಲಿ ವ್ಯಕ್ತಿಯ ಹತ್ಯೆ ಪ್ರಕರಣ ● ಕಿಸಾನ್ ಸಂಯುಕ್ತ ಮೋರ್ಚಾ ಶಂಕೆ

‘ರೈತರ ಹೋರಾಟಕ್ಕೆ ಮಸಿ ಬಳಿಯುವ ಯತ್ನ’

ಸಿಂಘು ಗಡಿ (ಪಿಟಿಐ): ಸಿಂಘು ಗಡಿಯಲ್ಲಿ, ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳದಲ್ಲಿ ನಡೆದಿರುವ ಹತ್ಯೆಯ ಹಿಂದೆ, ರೈತರ ಹೋರಾಟಕ್ಕೆ ಮಸಿ ಬಳಿಯುವ ಸಂಚು ಇರುವ ಅಪಾಯಗಳಿವೆ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಶಂಕೆ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ನಡೆಸಲಾಗುತ್ತಿರುವ ಪ್ರತಿಭಟನೆಯ ನೇತೃತ್ವವನ್ನು ಕಿಸಾನ್ ಸಂಯುಕ್ತ ಮೋರ್ಚಾ ವಹಿಸಿಕೊಂಡಿದೆ. ಹತ್ಯೆ ಪತ್ತೆಯಾದ ಬೆನ್ನಲ್ಲೇ ಮೋರ್ಚಾದ ನಾಯಕರು ಮಾಧ್ಯಮಗೋಷ್ಠಿ ನಡೆಸಿ, ಈ ಬಗ್ಗೆ ವಿವರಣೆ ನೀಡಿದ್ದಾರೆ.



ನಿಹಾಂಗ್ ಸಿಖ್ ಯೋಧರು ಸಂಗ್ರಹ ಚಿತ್ರ

‘ನಮ್ಮ ಹೋರಾಟಕ್ಕೆ ಧರ್ಮದ ಬಣ್ಣ ನೀಡುವ ಯತ್ನಗಳು ನಡೆಯುತ್ತಿವೆ. ಇಲ್ಲಿ ನಡೆದುದ್ದರ ಬಗ್ಗೆ ನಮಗೆಲ್ಲಾ ವಿಷಾದವಿದೆ. ಕಿಸಾನ್ ಸಂಯುಕ್ತ ಮೋರ್ಚಾವು ಮೂರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಡುತ್ತಿದೆ. ಈ ಘಟನೆ ನಮ್ಮ ವಿರುದ್ಧ ನಡೆಸಲಾದ ಒಂದು ಸಂಚು ಇರಬಹುದು’ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಹೇಳಿದೆ.

‘ಹತ್ಯೆಯಾದ ಲಖಬೀರ್ ಸಿಂಗ್ ಹಲವು ದಿನಗಳಿಂದ ನಿಹಾಂಗ್ ಗುಂಪಿನಲ್ಲೇ ಇದ್ದರು. ಅವರ ಪವಿತ್ರ ಗ್ರಂಥವನ್ನು ಕಸಿಯಲು ಯತ್ನಿಸಿದ ಆರೋಪದಲ್ಲಿ ಅವರನ್ನು ಹತ್ಯೆ ಮಾಡಿದ್ದಾರೆ. ಕಳವು ಯತ್ನ ತಪ್ಪು. ಆದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಹತ್ಯೆ ನಡೆಸುವುದನ್ನು ನಾವು ಎಂದಿಗೂ ಒಪ್ಪುವುದಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ನೀಡಿ’ ಎಂದು ಮೋರ್ಚಾ ಆಗ್ರಹಿಸಿದೆ.

‘ಇದು ನಿಹಾಂಗ್ ಗುಂಪಿನ ಆಂತರಿಕ ವಿಚಾರ. ಇದರಲ್ಲಿ ಯಾವುದೇ ಧರ್ಮವನ್ನು ಅವಹೇಳನ ಮಾಡುವ ಯತ್ನವಿಲ್ಲ. ಇದಕ್ಕೆ ಧರ್ಮದ ಬಣ್ಣ ಹಚ್ಚುವ ಅವಶ್ಯಕತೆ ಇಲ್ಲ’ ಎಂದು ಮೋರ್ಚಾದ ನಾಯಕರು ಹೇಳಿದ್ದಾರೆ.

> **ಈ ಘಟನೆಯ ಹಿಂದೆ ಕೇಂದ್ರ ಸರ್ಕಾರದ ಸಂಸ್ಥೆಗಳು ಕೆಲಸ ಮಾಡಿವೆ. ತನಿಖೆ ನಡೆಸಿದರೆ, ಸತ್ಯ ಬಯಲಾಗುತ್ತದೆ. ಹೀಗಾಗಿ ಸರಿಯಾದ ತನಿಖೆ ನಡೆಸಬೇಕು**
> **ಕುಲವಂತ್ ಸಿಂಗ್,** ರೈತನಾಯಕ

> **ಹಿಂಸಾಚಾರಕ್ಕೆ ಎಲ್ಲಿಯೂ ಅವಕಾಶವಿರಬಾರದು. ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆ ಮಾಡಿ, ಶಿಕ್ಷೆ ನೀಡುವುದು ಸರ್ಕಾರದ ಜವಾಬ್ದಾರಿ. ಸರ್ಕಾರ ಈ ಕೆಲಸ ಮಾಡಬೇಕು**
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

> **ಬಿಜೆಪಿ ಕಾರ್ಯಕರ್ತರ ಹತ್ಯೆ ‘ಕ್ರಿಯೆಗೆ ಪ್ರತಿಕ್ರಿಯೆ’ ಎಂದು ಟಿಕಾಯತ್ ಹೇಳಿದ್ದರು. ಇದರಿಂದ ಉತ್ತೇಜಿತರಾಗಿ ಈ ಹತ್ಯೆ ಮಾಡಿದ್ದಾರೆ**
> **ಅಮಿತ್ ಮಾಳವೀಯ**
> ಬಿಜೆಪಿ ಐಟಿ ಘಟಕ ಮುಖ್ಯಸ್ಥ

ಯಾರು ಈ ನಿಹಾಂಗರು?

ಕಟ್ಟಾ ಸಿಖ್ ಯೋಧರನ್ನು ನಿಹಾಂಗರು ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಕಡು ನೀಲಿ ಬಣ್ಣದ ನಿಲುವಂಗಿ, ಅದೇ ಬಣ್ಣದ ದೊಡ್ಡ ಪೇಟ, ಭುಜಕೀರ್ತಿಗಳಲ್ಲಿ ಖಡ್ಗಗಳು, ದೊಡ್ಡ ಖಡ್ಗ, ಚೂರಿ ಇವು ನಿಹಾಂಗರ ವೇಷಭೂಷಣ. ಗುರು ಗೋವಿಂದ ಸಿಂಗ್ ಅವರ ಕಾಲದಿಂದಲೂ ಈ ಪಂಗಡ ಇದೆ. ಧರ್ಮ ರಕ್ಷಣೆ ತಮ್ಮ ಹಕ್ಕು ಎಂದು ಇವರು ಭಾವಿಸಿದ್ದಾರೆ.

ಬ್ರಿಟಿಷರು ಭಾರತಕ್ಕೆ ಬಂದಾಗ ಪಂಜಾಬ್ ಪ್ರಾಂತದಲ್ಲಿ ಈ ಪಂಥವು ಪ್ರಾಬಲ್ಯ ಹೊಂದಿತ್ತು. ಭಾರತದ ಮೇಲೆ ಅಫ್ಗಾನಿಸ್ತಾನ, ಇರಾನ್‌ನ ದಾಳಿಯನ್ನು ಈ ಪಂಥದ ಯೋಧರು ತಡೆದಿದ್ದರು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. 1818ರಲ್ಲಿ ಈ ಪಂಥವು ಛಿದ್ರವಾಯಿತು. ಆಗ ಬಹುತೇಕ ನಿಹಾಂಗರನ್ನು ಬ್ರಿಟಿಷರು ತಮ್ಮ ಸೇನೆಗೆ ಸೇರಿಸಿಕೊಂಡರು. ನಂತರ ಅದೇ ಸಿಖ್ ರೆಜಿಮೆಂಟ್ ಆಯಿತು. ಸೇನೆಯನ್ನು ಸೇರದೆ ಉಳಿದ ನಿಹಾಂಗರು, ತಮ್ಮ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದಾರೆ.

ಆದರೆ ಇವರಲ್ಲಿ ಕೆಲವು ಗುಂಪುಗಳು ಗುರು ಗ್ರಂಥ ಸಾಹಿಬ್‌ನಲ್ಲಿ ಸೂಚಿಸಿರುವುದಕ್ಕಿಂತ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿವೆ. ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂಬ ಆರೋಪವಿದೆ. ನಿಹಾಂಗರು ಈಗ ಭೂಮಾಫಿಯಾ, ಮಾದಕವಸ್ತು ಸೇವನೆ-ಮಾರಾಟಗಳಲ್ಲಿ ತೊಡಗಿದ್ದಾರೆ ಎಂಬ ಆರೋಪವೂ ಇದೆ.

ರೈತರಲ್ಲ, ಭಯೋತ್ಪಾದಕರು: ಗೌರವ್ ಭಾಟಿಯಾ

ಕೇಂದ್ರ ಸರ್ಕಾರದ ವಿರುದ್ಧ ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವವರು ರೈತರಲ್ಲ, ಅರಾಜಕತಾವಾದಿಗಳು ಎಂದು ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಟ್ವೀಟ್ ಮಾಡಿದ್ದಾರೆ. ಪ್ರತಿಭಟನೆ ಸ್ಥಳದಲ್ಲಿ ಯುವಕನೊಬ್ಬನ ಹತ್ಯೆ ನಡೆದಿದೆ. ಇವೆಲ್ಲಾ ನಡೆಯಬಾರದಿತ್ತು. ಕಿಸಾನ್ ಸಂಯುಕ್ತ ಮೋರ್ಚಾವೇ ಇದಕ್ಕೆ ಹೊಣೆ ಎಂದು ಅವರು ಆರೋಪಿಸಿದ್ದಾರೆ.

‘ಪ್ರತಿಭಟನೆಯ ಮೊದಲ ದಿನದಿಂದಲೂ ಭಯೋತ್ಪಾದಕರು ಅಲ್ಲಿ ಸೇರಿಕೊಂಡಿದ್ದಾರೆ. ಜನವರಿ 26ರಂದು ಕೆಂಪುಕೋಟೆಯ ಮೇಲೆ ಅವರು ದಾಳಿ ನಡೆಸಿದರು. ಆನಂತರ ಹಲ್ಲೆ, ಅತ್ಯಾಚಾರಗಳು ನಡೆದವು. ಈಚೆಗಷ್ಟೇ ಲಖಿಂಪುರ ಖೇರಿಯಲ್ಲಿ ಬಿಜೆಪಿ ಕಾರ್ಯಕರ್ತರನ್ನು ಹತ್ಯೆ ಮಾಡಿದರು. ಈಗ ದಲಿತನೊಬ್ಬನನ್ನು ಹತ್ಯೆ ಮಾಡಿದ್ದಾರೆ. ಈ ಭಯೋತ್ಪಾದಕರನ್ನು ಅಲ್ಲಿಂದ ಓಡಿಸಬೇಕು’ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಆಗ್ರಹಿಸಿದ್ದಾರೆ.

ಆದರೆ ಈ ಆರೋಪವನ್ನು ಕಿಸಾನ್ ಸಂಯುಕ್ತ ಮೋರ್ಚಾ ತಳ್ಳಿ ಹಾಕಿದೆ. ‘ಪ್ರತಿಭಟನೆ ನಿರತ ರೈತರಿಗೂ, ಹತ್ಯೆಯಾದ ಲಖಬೀರ್ ಸಿಂಗ್‌ಗೂ ಮತ್ತು ನಿಹಾಂಗ್ ಪಂಥದವರಿಗೆ ಸಂಬಂಧವಿಲ್ಲ’ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಸ್ಪಷ್ಟನೆ ನೀಡಿದೆ.

ಸುದ್ದಿ 2 ನಿಮಿಷ

ಪಟಾಕಿ ನಿಷೇಧ: ನಾಲ್ವರು ಸಿ.ಎಂ ಗಳಿಗೆ ಎಂ.ಕೆ. ಸ್ಟಾಲಿನ್ ಪತ್ರ

ಚೆನ್ನೈ: ದೀಪಾವಳಿ ಸಮಯದಲ್ಲಿ ಪಟಾಕಿ ನಿಷೇಧವನ್ನು ಜಾರಿಗೊಳಿಸಿರುವ ದೆಹಲಿ, ಹರಿಯಾಣ, ರಾಜಸ್ಥಾನ ಮತ್ತು ಒಡಿಶಾದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ನಿಷೇಧವನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ.

‘ಸುಪ್ರೀಂ ಕೋರ್ಟ್ ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ನಿಗದಿಪಡಿಸಿರುವ ಮಾನದಂಡಗಳ ಅಡಿಯಲ್ಲಿ ಬರುವ ಪಟಾಕಿಗಳ ಮಾರಾಟಕ್ಕೆ ಅವಕಾಶ ನೀಡಬೇಕು’ ಎಂದೂ ಕೋರಿದ್ದಾರೆ.

‘ಪಟಾಕಿ ಉದ್ಯಮವು ಶಿವಕಾಶಿ ಪಟ್ಟಣದ ಸುತ್ತಲೂ ಕೇಂದ್ರೀಕೃತವಾಗಿದ್ದು, ತಮಿಳುನಾಡಿನ ಪ್ರಮುಖ ಕೈಗಾರಿಕಾ ಚಟುವಟಿಕೆಗಳಲ್ಲಿ ಒಂದಾಗಿದೆ. ರಾಜ್ಯದ ಸುಮಾರು 8 ಲಕ್ಷ ಕಾರ್ಮಿಕರು ಪಟಾಕಿ ಉದ್ಯಮವನ್ನು ಅವಲಂಬಿಸಿದ್ದಾರೆ. ಹಬ್ಬದ ಸಮಯದಲ್ಲಿ ಪಟಾಕಿ ನಿಷೇಧ ಜಾರಿಗೆ ತಂದಿರುವ ಬಗ್ಗೆ ಮರುಪರಿಶೀಲಿಸಬೇಕೆಂದು’ ಎಂದಿದ್ದಾರೆ.

‘ಸುಪ್ರೀಂ ಕೋರ್ಟ್ ಈಗಾಗಲೇ ಕೆಲವು ಮಾಲಿನ್ಯಕಾರಕ ಪಟಾಕಿಗಳನ್ನು ನಿಷೇಧಿಸಿದೆ. ಅಲ್ಲದೆ ಈಗ ಹಸಿರು ಪಟಾಕಿಗಳನ್ನು ತಯಾರಿಸಲಾಗುತ್ತಿದೆ ಎಂಬ ಅಂಶವನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಪಟಾಕಿಗಳ ಮೇಲೆ ಏಕಾಏಕಿ ನಿಷೇಧವು ಸಮಂಜಸವಲ್ಲ. ಇತರ ರಾಜ್ಯಗಳು ನಿಷೇಧ ಹೇರಿದಲ್ಲಿ ಇಡೀ ಪಟಾಕಿ ಉದ್ಯಮವನ್ನುಮುಚ್ಚಬೇಕಾಗುತ್ತದೆ. ಇದು 8 ಲಕ್ಷ ಕಾರ್ಮಿಕರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ’ ಎಂದೂ ಅವರು ವಿವರಿಸಿದ್ದಾರೆ.



‘ಪಟಾಕಿಗಳನ್ನು ಸಿಡಿಸುವುದು ಭಾರತೀಯ ಹಬ್ಬಗಳ ಅದರಲ್ಲೂ ವಿಶೇಷವಾಗಿ ದೀಪಾವಳಿಯ ಅವಿಭಾಜ್ಯ ಅಂಗವಾಗಿದೆ ಎಂದು ನೀವೂ ಒಪ್ಪಿಕೊಳ್ಳುತ್ತೀರಿ ಎಂದು ಸ್ಟಾಲಿನ್ ಪತ್ರದಲ್ಲಿ ಹೇಳಿದ್ದಾರೆ.

ಜೈಲಿನಲ್ಲಿರುವ ಮಗನಿಗೆ ಮನಿ ಆರ್ಡರ್ ಮಾಡಿದ ಶಾರುಕ್ ಖಾನ್

ಮುಂಬೈ: ‘ಡ್ರಗ್ಸ್ ಪ್ರಕರಣದಲ್ಲಿ ಎನ್‌ಸಿಬಿಯಿಂದ ಬಂಧಿತನಾಗಿರುವ ಬಾಲಿವುಡ್ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ತನ್ನ ತಂದೆಯಿಂದ ಮನಿ ಆರ್ಡರ್ ಮೂಲಕ ₹ 4,500 ಪಡೆದಿದ್ದಾರೆ’ ಎಂದು ಜೈಲಿನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮುಂಬೈನ ಕ್ರೂಸ್ ಹಡಗೊಂದರಿಂದ ವಶಪಡಿಸಿಕೊಂಡ ಡ್ರಗ್ಸ್ ಪ್ರಕರಣದಲ್ಲಿ ಬಂಧಿತರಾಗಿರುವ ಆರ್ಯನ್, ಇಲ್ಲಿನ ಆರ್ಥರ್ ರಸ್ತೆಯ ಜೈಲಿನಲ್ಲಿದ್ದು ಅವರು ಜೈಲಿನ ಒಳಗಿನಿಂದಲೇ ವಿಡಿಯೊ ಕಾಲ್ ಮೂಲಕ ತಮ್ಮ ತಂದೆ-ತಾಯಿಯೊಂದಿಗೆ ಮಾತನಾಡಿದ್ದಾರೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ವಿಶೇಷ ನ್ಯಾಯಾಲಯವು ಆರ್ಯನ್ ಮತ್ತು ಇತರ ಇಬ್ಬರ ಜಾಮೀನು ಅರ್ಜಿಯ ಆದೇಶವನ್ನು ಅ. 20ಕ್ಕೆ ಮುಂದೂಡಿದ್ದು, ಅಲ್ಲಿಯ ತನಕ ಆರ್ಯನ್ ಜೈಲಿನಲ್ಲಿರಬೇಕಾಗುತ್ತದೆ. ಕೋವಿಡ್-19 ಮಾರ್ಗಸೂಚಿ ಜಾರಿಯಲ್ಲಿರುವುದರಿಂದ ಮಗನ ಭೇಟಿಗೆ ಅವರ ಪೋಷಕರಿಗೆ ಅನುಮತಿ ನೀಡಿಲ್ಲ. ಹಾಗಾಗಿ, ವಾರಕ್ಕೆ ಎರಡು ಬಾರಿ ವಿಡಿಯೊ ಕಾಲ್ ಮೂಲಕ ಪೋಷಕರೊಂದಿಗೆ ಮಾತನಾಡಲು ಅನುಮತಿ ನೀಡಲಾಗಿದೆ’ ಎಂದು ಜೈಲಿನ ಅಧಿಕಾರಿಯಬ್ಬರು ಮಾಹಿತಿ ನೀಡಿದ್ದಾರೆ.

ಜೈಲಿನ ಊಟ: ’ಜೈಲಿನಲ್ಲಿ ತಯಾರಿಸಲಾಗುತ್ತಿರುವ ಆಹಾರವನ್ನೇ ಆರ್ಯನ್ ಅವರಿಗೆ ನೀಡಲಾಗುತ್ತಿದೆ. ಶಾರುಕ್ ಖಾನ್ ಮನಿ ಆರ್ಡರ್ ಮೂಲಕ ಮಗನಿಗೆ ₹ 4,500 ಕಳಿಸಿದ್ದು, ಆರ್ಯನ್ ಸೋಮವಾರ ಅದನ್ನು ಪಡೆದಿದ್ದಾರೆ’ ಎಂದರು.

ಸಿಂಘು ಗಡಿ: ಪ್ರತಿಭಟನೆ ಸ್ಥಳದಲ್ಲಿ ವ್ಯಕ್ತಿಯ ಭೀಕರ ಹತ್ಯೆ

ಒಂದನೇ ಪುಟದಿಂದ

ಮೃತ ವ್ಯಕ್ತಿಯನ್ನು ಪಂಜಾಬ್‌ನ ತರಣ್ ತಾರಣ್ ಜಿಲ್ಲೆಯ ಚೀಮಾ ಕುರ್ದ ಗ್ರಾಮದ ಲಖಬೀರ್ ಸಿಂಗ್ (35) ಎಂದು ಗುರುತಿಸಲಾಗಿದೆ. ಲಖಬೀರ್ ಸಿಂಗ್‌ಗೆ ಪತ್ನಿ ಮತ್ತು ಮೂವರು ಮಕ್ಕಳು, ಒಬ್ಬ ತಂಗಿ ಇದ್ದಾರೆ. ಮೃತದೇಹವನ್ನು ಈಗ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೂರು ವಿಡಿಯೊ ವೈರಲ್: ಲಖಬೀರ್ ಸಿಂಗ್ ಹತ್ಯೆಗೆ ಸಂಬಂಧಿಸಿದ ಮೂರು ವಿಡಿಯೊಗಳು ವೈರಲ್ ಆಗಿವೆ. ಸಿಖ್ಖರ ನಿಹಾಂಗ್ ಪಂಥದ ಹಲವು ವ್ಯಕ್ತಿಗಳು ಲಖಬೀರ್ ಸಿಂಗ್‌ರನ್ನು ಥಳಿಸುತ್ತಿರುವ ಒಂದು ವಿಡಿಯೊ ಇದೆ. ಅದರಲ್ಲಿ ಗುರು ಗ್ರಂಥ ಸಾಹಿಬ್ ಅನ್ನು ಅಪವಿತ್ರಗೊಳಿಸುತ್ತೀಯಾ ಎಂದು ನಿಹಾಂಗ್‌ಗಳು ಕೂಗುತ್ತಿರುವುದು ದಾಖಲಾಗಿದೆ.

ಮತ್ತೊಂದು ವಿಡಿಯೊದಲ್ಲಿ, ಕೆಳಗೆ ಬಿದ್ದಿರುವ ಲಖಬೀರ್ ಸಿಂಗ್‌ನ ಕಾಲು ಮತ್ತು ಕೈಗಳ ಮೇಲೆ ನಿಹಾಂಗ್‌ಗಳು ನಿಂತಿರುವ ದೃಶ್ಯವಿದೆ. ಈ ದೃಶ್ಯದಲ್ಲಿ ಲಖಬೀರ್ ಸಿಂಗ್‌ನ ಎಡಗೈ ಕತ್ತರಿಸಿರುವುದು ಮತ್ತು ರಕ್ತ ನೆಲದಲ್ಲಿ ಹರಿಯುತ್ತಿರುವುದು ಕಾಣುತ್ತದೆ. ಮೂರನೇ ವಿಡಿಯೊದಲ್ಲಿ ನಿಹಾಂಗ್‌ಗಳು ಲಖಬೀರ್‌ನ ಹತ್ಯೆಯನ್ನು ಸಂಭ್ರಮಿಸುತ್ತಿರುವ ದೃಶ್ಯಗಳಿವೆ. ಸಿಖ್ಖರ ಪವಿತ್ರ ಗ್ರಂಥವಾದ ಗುರು ಗ್ರಂಥಸಾಹಿಬ್ ಅನ್ನು ಅಪವಿತ್ರಗೊಳಿಸಿದ ಕಾರಣಕ್ಕೆ ಹತ್ಯೆ ಮಾಡಲಾಗಿದೆ ಎಂದು ನಿಹಾಂಗ್‌ಗಳು ಹೇಳುತ್ತಿರುವುದು ಈ ವಿಡಿಯೊದಲ್ಲಿ ದಾಖಲಾಗಿದೆ.

ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಅಪರಿಚಿತ ವ್ಯಕ್ತಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದರು.

ಛತ್ತೀಸಗಡ: ಮೆರವಣಿಗೆ ಮೇಲೆ ಹರಿದ ವಾಹನ- ಯುವಕ ಸಾವು

ಜಸ್ಪುರ (ಪಿಟಿಐ): ಛತ್ತೀಸಗಡದ ಜಸ್ಪುರ ಜಿಲ್ಲೆಯ ಪಾಥಲ್‌ಗಾಂವ್ ಎಂಬಲ್ಲಿ ಶುಕ್ರವಾರ ಮಧ್ಯಾಹ್ನ ದುರ್ಗಾ ಮೂರ್ತಿಗಳ ವಿಸರ್ಜನಾ ಮೆರವಣಿಗೆ ಮೇಲೆ ಎಸ್‌ಯುವಿ ಹರಿದು ಯುವಕನೊಬ್ಬ ಮೃತಪಟ್ಟಿದ್ದು, 16 ಜನ ಗಾಯಗೊಂಡಿದ್ದಾರೆ.

ಮೃತಪಟ್ಟ ಯುವಕನನ್ನು ಗೌರವ್ ಅಗರ್‌ವಾಲ್ (21) ಎಂದು ಗುರುತಿಸಲಾಗಿದೆ.

ಘಟನೆಯ ನಂತರ, ವಾಹನದಲ್ಲಿದ್ದ ಬಬ್ಲು ವಿಶ್ವಕರ್ಮ ಹಾಗೂ ಶಿಶುಪಾಲ ಶಾಹು ಎಂಬ ಯುವಕರನ್ನು ಪಟ್ಟಣದ ಹೊರವಲಯದಲ್ಲಿ ಬಂಧಿಸಲಾಗಿದೆ. ಅದೇ ವೇಳೆಗೆ ಅವರು ಪ್ರಯಾಣಿಸುತ್ತಿದ್ದ ವಾಹನವು ಹೊತ್ತಿ ಉರಿಯುತ್ತಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆರೋಪಿಗಳಿಬ್ಬರೂ ನೆರೆಯ ಮಧ್ಯಪ್ರದೇಶದ ಸಿಂಗ್ರೌಲಿಯವರು ಎಂದು ತಿಳಿದುಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇವರಿಬ್ಬರೂ ಗಾಂಜಾ ಕಳ್ಳಸಾಗಾಣಿಕೆ ಮಾಡುತ್ತಿದ್ದರು. ಪೊಲೀಸರು ಬೆನ್ನಟ್ಟಿದ್ದರಿಂದ, ಸಾಕ್ಷ್ಯ ನಾಶಕ್ಕಾಗಿ ತಾವೇ ವಾಹನಕ್ಕೆ ಬೆಂಕಿ ಇಟ್ಟಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಭೂಪೇಶ್ ಬಘೇಲ್, ‘ಆರೋಪಿಗಳನ್ನು ಕೂಡಲೇ ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಲಾಗಿದ್ದು, ತಪ್ಪಿತಸ್ಥರೆಂದು ಕಂಡುಬಂದ ಪೊಲೀಸ್ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ.

ಮೃತಪಟ್ಟ ಯುವಕನ ಆತ್ಮಕ್ಕೆ ಶಾಂತಿ ಕೋರಿ ಹಾಗೂ ಗಾಯಾಳುಗಳ ಚೇತರಿಕೆಗೆ ಪ್ರಾರ್ಥಿಸಿ ಅವರು ಟ್ವೀಟ್ ಮಾಡಿದ್ದಾರೆ. ‘ದೇವತಾ ಮೆರವಣಿಗೆ ಹೊರಟವರ ಮೇಲೆ ಹೀಗೆ ವಾಹನ ಹರಿಸಿದ ದೃಶ್ಯ ನೋಡಿದರೆ ಸಂಕಟವಾಗುತ್ತದೆ. ಡ್ರಗ್ಸ್ ಮಾಫಿಯಾದವರಿಗೆ ಯಾರ ಭಯವೂ ಇಲ್ಲವಾಗಿದೆ’ ಎಂದು ಮಾಜಿ ಮುಖ್ಯಮಂತ್ರಿ, ಬಿಜೆಪಿ ನಾಯಕ ರಮಣ್ ಸಿಂಗ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೃತಪಟ್ಟ ಯುವಕನ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ನೀಡುವಂತೆ ಹಾಗೂ ಗಾಯಾಳುಗಳ ಚಿಕಿತ್ಸೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಬ್ರಿಟನ್ ಸಂಸದ ಡೇವಿಡ್ ಹತ್ಯೆ

ಲಂಡನ್ (ಎಎಫ್‌ಪಿ): ಬ್ರಿಟನ್‌ನ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಕನ್ಸರ್ವೇಟಿವ್ ಪಕ್ಷದ ಸಂಸದ ಡೇವಿಡ್ ಅಮೆಸ್ಸ್ ಅವರನ್ನು ಶುಕ್ರವಾರ ಅಪರಿಚಿತನೊಬ್ಬ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾನೆ.



‘ಶುಕ್ರವಾರ ತಮ್ಮ ಕ್ಷೇತ್ರದ ಮತದಾರರೊಂದಿಗೆ ಇಲ್ಲಿನ ಬೆಲ್ಫೇರ್ಸ್ ಮೆಥೋಡಿಸ್ಟ್ ಚರ್ಚ್‌ನಲ್ಲಿ ಸಭೆ ನಡೆಸುತ್ತಿದ್ದಾಗ, ಸಭೆಯಲ್ಲಿ ಪಾಲ್ಗೊಂಡಿದ್ದ ಅಪರಿಚಿತನೊಬ್ಬ ಇದ್ದಕ್ಕಿದ್ದಂತೆ ಸಂಸದ ಡೇವಿಡ್ ಮೇಲೆ ದಾಳಿ ನಡೆಸಿ ಚಾಕುವಿನಿಂದ ಹಲವು ಬಾರಿ ಇರಿದು ಹತ್ಯೆ ಮಾಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಡೇವಿಡ್ ಅವರು ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶುಕ್ರವಾರ ಮತದಾರರದೊಂಗೆ ಸಭೆ ನಡೆಸುತ್ತಿದ್ದರು.

ಹೊಸ ರಕ್ಷಣಾ ಸಂಸ್ಥೆಗಳಿಗೆ ಪ್ರಧಾನಿ ಚಾಲನೆ

ನವದೆಹಲಿ (ಪಿಟಿಐ): ಭಾರತದ ರಕ್ಷಣಾ ವಲಯದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಪಾರದರ್ಶಕತೆ, ನಂಬಿಕೆ ಮತ್ತು ತಂತ್ರಜ್ಞಾನ ಆಧಾರಿತ ದೃಷ್ಟಿಕೋನ ಈಗ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. ಏಳು ಹೊಸ ರಕ್ಷಣಾ ಸಂಸ್ಥೆಗಳನ್ನು ದೇಶಕ್ಕೆ ಅರ್ಪಿಸಿದ ಬಳಿಕ ಅವರು ಹೀಗೆ ಹೇಳಿದರು

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ ಇದೇ ಮೊದಲ ಬಾರಿಗೆ, ಈ ವರೆಗೂ ಇದ್ದ ಜಡ ನೀತಿಗಳನ್ನು ಪಕ್ಕಕ್ಕಿರಿಸಿ ಈ ವಲಯದಲ್ಲಿ ದೊಡ್ಡ ಸುಧಾರಣೆಗಳು ನಡೆಯುತ್ತಿವೆ ಎಂದರು. ಆತ್ಮ ನಿರ್ಭರ ಭಾರತ ಉಪಕ್ರಮವನ್ನು ಉಲ್ಲೇಖಿಸಿದ ಅವರು, ‘ಭಾರತ ತನ್ನ ಸ್ವಂತ ಬಲದಿಂದ ಜಗತ್ತಿನ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿಯಾಗಿ ಹೊರಹೊಮ್ಮಬೇಕು ಎಂಬುದು ನಮ್ಮ ಗುರಿ’ ಎಂದರು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಏಳು ರಕ್ಷಣಾ ಸಂಸ್ಥೆಗಳನ್ನು ದೇಶಕ್ಕೆ ಅರ್ಪಿಸಿದರು.

ಅತ್ಯಂತ ಮಹತ್ವದ ಸುಧಾರಣಾ ಕ್ರಮಕ್ಕೆ ಮುಂದಾದ ಸರ್ಕಾರ ಸುಮಾರು 200 ವರ್ಷಗಳಷ್ಟು ಹಳೆಯದಾದ ಆರ್ಡಿನೆನ್ಸ್ ಫ್ಯಾಕ್ಟರಿ ಬೋರ್ಡ್ (ಒಎಫ್‌ಬಿ) ಸಂಸ್ಥೆಯನ್ನು ವಿಸರ್ಜಿಸಿ, ರಾಜ್ಯ ಸರ್ಕಾರಗಳ ಸ್ವಾಮ್ಯದ ಏಳು ರಕ್ಷಣಾ ಸಂಸ್ಥೆಗಳನ್ನು ತೆರೆದಿದೆ. ಒಎಫ್‌ಬಿಗೆ ಸೇರಿದ 41 ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಗಳೂ ಸೇರಿ ಅದರ ಎಲ್ಲಾ ಆಸ್ತಿಯನ್ನೂ ಹೊಸ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಈ ಸಂಸ್ಥೆಗಳು ಉತ್ಪನ್ನಗಳ ತಯಾರಿಕೆಯಲ್ಲಿ ಪರಿಣತಿ ಸಾಧಿಸಿದರೆ ಸಾಲದು. ಉತ್ಪನ್ನಗಳು ಜಾಗತಿಕ ಬ್ರ್ಯಾಂಡ್‌ಗಳಾಗಬೇಕು.

> **ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ತುಂಬಿರುವ ಈ ಹೊತ್ತಿನಲ್ಲಿ ಹಲವಾರು ವರ್ಷಗಳಿಂದ ಸಂಪೂರ್ಣಗೊಳ್ಳದೇ ಇದ್ದ ಕೆಲಸಗಳು ಈಗ ಸಂಪೂರ್ಣಗೊಳ್ಳುತ್ತಿವೆ.**
> **ನರೇಂದ್ರ ಮೋದಿ,** ಪ್ರಧಾನಿ

ಸ್ಪರ್ಧಾತ್ಮಕ ಬೆಲೆ ಭಾರತದ ಬಲವಾಗಿದೆ. ಇದರ ಜೊತೆಗೆ ಗುಣಮಟ್ಟ ಮತ್ತು ವಿಶ್ವಾಸಾರ್ಹತೆ ಕೂಡಾ ಭಾರತದ ಹೆಗ್ಗುರುತಾಗಬೇಕು ಎಂದು ಅವರು ಹೇಳಿದರು.

ಮೊದಲನೇ ಜಾಗತಿಕ ಮಹಾಯುದ್ಧದ ವೇಳೆಯೇ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಭಾರತದ ಸಾಮರ್ಥ್ಯ ಏನು ಎಂಬುದು ಜಗತ್ತಿಗೇ ತಿಳಿದಿತ್ತು. ಆಗಲೇ ಭಾರತ ಜಾಗತಿಕ ಮಟ್ಟದ ಕೌಶಲ ಮತ್ತು ಉತ್ತಮ ಸಂಪನ್ಮೂಲವನ್ನು ಹೊಂದಿತ್ತು. ಆದರೆ ಸ್ವಾತಂತ್ರ್ಯದ ಬಳಿಕ ಈ ಸಂಸ್ಥೆಯನ್ನು ಕಡೆಗಣಿಸಲಾಯಿತು ಎಂದು ಅವರು ಹೇಳಿದರು.

‘ಒಎಫ್‌ಬಿಗೆ ಸುಧಾರಣೆ ತರುವ ಯೋಜನೆ ಸುಮಾರು 15-20 ವರ್ಷಗಳಿಂದ ಬಾಕಿ ಉಳಿದಿತ್ತು. ಆ ಕೆಲಸಕ್ಕೆ ಈಗ ಚಾಲನೆ ದೊರಕಿದೆ’ ಎಂದರು.

ಹೊಸ ಸಂಸ್ಥೆಗಳು: ಮ್ಯುನಿಷನ್ಸ್ ಇಂಡಿಯ ಲಿಮಿಟೆಡ್ (ಎಂಐಎಲ್), ಆರ್ಮೌರ್ಡ್ ವೆಹಿಕಲ್ಸ್ ನಿಗಮ್ ಲಿಮಿಟೆಡ್ (ಎವಿಎಎನ್‌ಐ), ಅಡ್ವಾನ್ಸ್ಡ್ ವೆಪನ್ಸ್ ಆ್ಯಂಡ್ ಎಕ್ವಿಪ್‌ಮೆಂಟ್ ಇಂಡಿಯ ಲಿಮಿಟೆಡ್ (ಎಡಬ್ಲ್ಯುಇ ಇಂಡಿಯ), ಟ್ರೂಪ್ಸ್ ಕಂಫರ್ಟ್ಸ್ ಲಿಮಿಟೆಡ್ (ಟಿಸಿಎಲ್), ಯಂತ್ರ ಇಂಡಿಯ ಲಿಮಿಟೆಡ್ (ವೈಐಎಲ್), ಇಂಡಿಯ ಆಪ್ಟೆಲ್ ಲಿಮಿಟೆಡ್ (ಐಒಎಲ್) ಮತ್ತು ಗ್ಲೈಡರ್ಸ್ ಇಂಡಿಯ ಲಿಮಿಟೆಡ್ (ಜಿಐಎಲ್).

ಗ್ರಾಹಕರಿಗೆ ಹೊರೆ ರೈತರಿಗೆ ಲುಕ್ಸಾನು

ಒಂದನೇ ಪುಟದಿಂದ

‘ಸೂಪರ್ ಮಾರ್ಕೆಟ್‌ಗಳು ಸಹ ರೈತರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ‘ಗ್ರೇಡ್’ಗಳ ಅನ್ವಯ ಖರೀದಿಸುವ ವ್ಯವಸ್ಥೆ ಮಾಡಿಕೊಂಡಿವೆ. ಇವರಿಂದ ರೈತರಿಗೆ ಉತ್ತಮ ಬೆಲೆ ದೊರೆಯುತ್ತಿರುವುದು ನಿಜ. ಆದರೆ, ಅವರು ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ‘ಎ’ ಗ್ರೇಡ್ ಕೃಷಿ ಉತ್ಪನ್ನಗಳನ್ನು ಮಾತ್ರ ಸೂಪರ್ ಮಾರ್ಕೆಟ್‌ಗಳಲ್ಲಿ ಖರೀದಿಸುತ್ತಾರೆ. ಸಣ್ಣ ಕಪ್ಪುಚುಕ್ಕೆಗಳಿದ್ದರೂ ತಿರಸ್ಕರಿಸುತ್ತಾರೆ. ಇದರಿಂದ, ಗುಣಮಟ್ಟ ಕಡಿಮೆ ಇರುವ ಉತ್ಪನ್ನಗಳನ್ನು ಸಾಮಾನ್ಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವುದು ಅನಿವಾರ್ಯವಾಗಿದೆ. ಹೀಗಾಗಿ, ರೈತರು ಮತ್ತೆ ಮಧ್ಯವರ್ತಿಗಳ ಬಲೆಯಲ್ಲಿ ಸಿಲುಕುತ್ತಾರೆ’ ಎಂದು ದೇವನಹಳ್ಳಿಯ ರೈತ ಮಂಜುನಾಥ್ ಹೇಳಿದರು.

‘ಈರುಳ್ಳಿ ಬೆಲೆ ಹೆಚ್ಚಿಗೆಯಾಗಿದ್ದರೂ ಅದರಿಂದ ನಮಗೆ ಲಾಭವಾಗುತ್ತಿಲ್ಲ. ಈರುಳ್ಳಿ ಬೆಳೆಯಲು ಎಕರೆಗೆ ಕನಿಷ್ಠ ₹50 ಸಾವಿರ ಖರ್ಚಾಗುತ್ತದೆ. ಮೊದಲ ದರ್ಜೆಯ ಈರುಳ್ಳಿಗೆ ₹30, ಎರಡನೇ ದರ್ಜೆಗೆ ₹23 ಹಾಗೂ ಮೂರನೇ ದರ್ಜೆಗೆ ₹14 ಸಿಗುತ್ತದೆ. ನಾವು ಬೆಂಗಳೂರಿನ ಯಶವಂತಪುರ ಮಾರುಕಟ್ಟೆಯಲ್ಲಿ ಈರುಳ್ಳಿ ಮಾರಾಟ ಮಾಡುತ್ತೇವೆ. ಸಾಗಾಣಿಕೆ ವೆಚ್ಚ ಎಲ್ಲವೂ ಸೇರಿದರೆ ನಮಗೆ ಲಾಭಕ್ಕಿಂತ ನಷ್ಟವೇ ಹೆಚ್ಚು. 2000 ದಿಂದಲೂ ಈರುಳ್ಳಿ ಬೆಳೆಯುತ್ತಿದ್ದೇವೆ. 2013 ರಲ್ಲಿ ಮತ್ತು 2019 ರಲ್ಲಿ ಎರಡು ವರ್ಷ ಮಾತ್ರ ಲಾಭವಾಗಿತ್ತು’ ಎಂದು ಚಿತ್ರದುರ್ಗ ಜಿಲ್ಲೆ ಡಿ.ಎಸ್.ಹಳ್ಳಿಯ ಈರುಳ್ಳಿ ಬೆಳೆಗಾರ ಮಲ್ಲಿಕಾರ್ಜುನ ತಿಳಿಸಿದರು.

‘ರಾಜ್ಯದಲ್ಲಿ ಎಲ್ಲ ಕಡೆ ಇದೇ ಸ್ಥಿತಿ ಇದೆ. ನಮ್ಮ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹550 ಕ್ಕೆ ಈರುಳ್ಳಿ ಮಾರಿದ್ದೇನೆ. ತೂಕದ ವ್ಯತ್ಯಾಸ, ಕಮಿಷನ್ ಎಲ್ಲವೂ ಲೆಕ್ಕ ಹಾಕಿದರೆ ಕಿಲೋಗೆ ನಮಗ ₹5 ಸಿಕ್ಕಿದೆ. ಆದರೆ ಪೇಟೆಯೊಳಗ ಮಾತ್ರ ಈರುಳ್ಳಿ ರೇಟ್ ಸಿಕ್ಕಾಪಟ್ಟೆ ಐತ್ರಿ’ ಎನ್ನುತ್ತಾರೆ ಹುನಗುಂದ ತಾಲ್ಲೂಕು ಚಿತ್ತಡವಾಡಗಿಯ ರೈತ ಸಂಗಮೇಶ.

ಸ್ಪರ್ಧಾತ್ಮಕ ಬೆಲೆ ಇದ್ದರೆ ಅನುಕೂಲ

‘ಬೆಲೆಗಳು ಸ್ಪರ್ಧಾತ್ಮಕವಾಗಿರಬೇಕು ಮತ್ತು ನ್ಯಾಯಯುತವಾಗಿದ್ದರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಎಪಿಎಂಸಿಯಲ್ಲಿ ಈಗ ಶೇಕಡ 70 ರಷ್ಟು ವಹಿವಾಟು ಕಡಿಮೆ ಯಾಗಿದೆ. ಎಪಿಎಂಸಿಗಳಲ್ಲಿನ ರಾಜಕೀಯ ಕಡಿಮೆ ಮಾಡಿ ಹೊಸ ಸ್ಪರ್ಶ ನೀಡುವುದು ಅಗತ್ಯವಿದೆಯೇ ಹೊರತು ಅವುಗಳನ್ನು ಮುಚ್ಚುವ ಪ್ರಯತ್ನ ಮಾಡಬಾರದು’ ಎಂದು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಅಭಿಪ್ರಾಯ ಪಡುತ್ತಾರೆ.

‘ತೋಟಗಾರಿಕೆ ಮಹಾಮಂಡಳ ರಚಿಸಲಿ’

‘ಹಬ್ಬಗಳು ಬಂದಾಗ ತರಕಾರಿಗಳು, ಹೂವುಗಳ ಬೆಲೆ ಹೆಚ್ಚಾಗುವುದು ಸಾಮಾನ್ಯ. ಜತೆಗೆ, ಪೆಟ್ರೋಲ್, ಡೀಸೆಲ್ ದರವೂ ಏರಿಕೆಯಾಗಿರುವುದರಿಂದ ಸಾಗಾಣಿಕೆ ವೆಚ್ಚವೂ ಹೆಚ್ಚಾಗಿದೆ. ಬೆಲೆ ಏರಿಕೆಯ ಲಾಭ ರೈತರಿಗೆ ದೊರೆಯಬೇಕು. ಹೀಗಾಗಿಯೇ ರೈತರಿಗೆ ಅನುಕೂಲವಾಗುವಂತೆ ಕರ್ನಾಟಕ ತೋಟಗಾರಿಕೆ ಮಾರಾಟ ಮಹಾಮಂಡಳಿ ರಚಿಸುವಂತೆ ಸರ್ಕಾರಕ್ಕೆ ಕೋರಿದ್ದೇವೆ’ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಹೇಳಿದ್ದಾರೆ.

ಸಮೂಹ ಪ್ರತಿರೋಧಕ್ಕೆ ರೂಪಾಂತರ ತಳಿಯ ಸವಾಲು

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ಬೇರೆ ತಳಿಗಳಿಂದ ಸೋಂಕಿಗೆ ಒಳಗಾಗಿದ್ದವರು, ಡೆಲ್ಟಾ ತಳಿಯ ಸೋಂಕಿಗೂ ಒಳಗಾಗಿದ್ದಾರೆ. ಇದು ಸಮೂಹ ಪ್ರತಿರೋಧ ಶಕ್ತಿಯು ಅಭಿವೃದ್ಧಿಯಾಗುವಲ್ಲಿ ಇರುವ ಸವಾಲುಗಳನ್ನು ತೋರಿಸುತ್ತದೆ. ದೆಹಲಿಯಲ್ಲಿ ಈ ವರ್ಷ ತಲೆದೋರಿದ ಕೋವಿಡ್ ಎರಡನೇ ಅಲೆಯ ಸಂದರ್ಭದ ಪ್ರಕರಣಗಳ ಅಧ್ಯಯನದಿಂದ ಇದು ಪತ್ತೆಯಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಎನ್‌ಸಿಡಿಸಿ, ಸಿಎಸ್‌ಐಆರ್-ಐಜಿಐಬಿ, ಲಂಡನ್‌ನ ಕೇಂಬ್ರಿಜ್, ಇಂಪೀರಿಯಲ್ ಕಾಲೇಜ್ ಮತ್ತು ಡೆನ್ಮಾರ್ಕ್‌ನ ಕೋಪೆನ್‌ಹೇಗನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ನಡೆಸಿದ ಅಧ್ಯಯನದಿಂದ ಈ ಮಾಹಿತಿ ತಿಳಿದು ಬಂದಿದೆ.

‘ದೆಹಲಿಯಲ್ಲಿ 2020ರ ಮಾರ್ಚ್, ಜೂನ್, ಸೆಪ್ಟೆಂಬರ್, ನವೆಂಬರ್‌ನಲ್ಲಿ ಮತ್ತು 2021ರ ಮಾರ್ಚ್-ಏಪ್ರಿಲ್‌ನಲ್ಲಿ ಕೋವಿಡ್ ಸೋಂಕಿನ ತೀವ್ರತೆ ಹೆಚ್ಚಾಗಿತ್ತು. ಈ ಹಿಂದಿನ ಬಾರಿ ಸೋಂಕು ತೀವ್ರತೆ ಪಡೆದಿದ್ದಾಗ, ದೆಹಲಿಯ ಶೇ 56.1ರಷ್ಟು ಮಂದಿಗೆ ಸೋಂಕು ಹರಡಿತ್ತು ಎಂದು ಸೆರೊ ಸಮೀಕ್ಷೆಗಳು ಹೇಳಿದ್ದವು. ಇದು ದೆಹಲಿಯ ಜನತೆಯಲ್ಲಿ ಸಮೂಹ ಪ್ರತಿರೋಧ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ದೇಶದಲ್ಲಿ ಎರಡನೇ ಅಲೆ ತೀವ್ರವಾದಾಗ, ದೆಹಲಿಯಲ್ಲೂ ಸೋಂಕು ತೀವ್ರವಾಗಿ ಹರಡಿತ್ತು. ಅಲ್ಲದೆ, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹೆಚ್ಚಾಗಿತ್ತು’ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

‘ಇಂತಹ ಸೋಂಕು ಅಂತ್ಯವಾಗಲು ಸಮೂಹ ಪ್ರತಿರೋಧ ಶಕ್ತಿ ಅಭಿವೃದ್ಧಿಯಾಗುವುದು ಅನಿವಾರ್ಯವಾಗಿದೆ. ಆದರೆ ದೆಹಲಿಯಲ್ಲಿ ಇನ್ನೂ ಪ್ರತಿರೋಧ ಶಕ್ತಿ ಈ ಹಂತ ತಲುಪಿಲ್ಲ ಎಂಬುದು ಎರಡನೇ ಅಲೆ ತೀವ್ರತೆ ಪಡೆದಾಗ ಪತ್ತೆಯಾಗಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಕೋವಿಡ್ ಲಸಿಕೆ ಪಡೆದವರಲ್ಲೂ ಡೆಲ್ಟಾ ತಳಿ ತೀವ್ರವಾಗಿ ಹರಡಿದೆ. ಲಸಿಕೆ ಪಡೆದುಕೊಂಡ ನಂತರ ದೇಹದಲ್ಲಿ ಅಭಿವೃದ್ಧಿಯಾದ ಪ್ರತಿರೋಧ ಶಕ್ತಿಯನ್ನು ಡೆಲ್ಟಾ ತಳಿ ನಿಷ್ಕ್ರಿಯ ಮಾಡುತ್ತದೆ. ಆನಂತರ ದೇಹದಲ್ಲಿ ತೀವ್ರವಾಗಿ ವ್ಯಾಪಿಸುತ್ತದೆ ಎಂಬುದು ಪತ್ತೆಯಾಗಿದೆ. ಹೀಗಾಗಿ ಲಸಿಕೆಯ ಬೂಸ್ಟರ್ ಡೋಸ್ ನೀಡುವ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ’ ಎಂದು ಅಧ್ಯಯನ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಅಫ್ಗನ್: ಮಸೀದಿಯಲ್ಲಿ ಆತ್ಮಾಹುತಿ ದಾಳಿ 37 ಮಂದಿ ಸಾವು

ಕಂದಹಾರ್: ‘ದಕ್ಷಿಣ ಅಫ್ಗಾನಿಸ್ತಾನದ ಕಂದಹಾರ್‌ನ ಇಮಾಮ್ ಬರ್ಗಾ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆಯ ವೇಳೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 37 ಜನರು ಸಾವನ್ನಪ್ಪಿದ್ದು, 74ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ’ ಎಂದು ತಾಲಿಬಾನ್ ಅಧಿಕಾರಿಗಳು ಹೇಳಿದ್ದಾರೆ.

ಶಿಯಾ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಸತತ ಎರಡನೇ ಶುಕ್ರವಾರವೂ ನಡೆದ ದಾಳಿ ಇದಾಗಿದೆ. ‘ಮಸೀದಿಯೊಳಗೆ ಆತ್ಮಹತ್ಯಾ ಬಾಂಬರ್ ತನ್ನನ್ನು ಸ್ಫೋಟಿಸಿಕೊಂಡಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯ ವೇಳೆ ತಿಳಿದುಬಂದಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಸ್ಥಳೀಯ ತಾಲಿಬಾನ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಸ್ಫೋಟದ ಹೊಣೆಯನ್ನು ಇದುವರೆಗೆ ಯಾವ ಉಗ್ರ ಸಂಘಟನೆಯು ಒಪ್ಪಿಕೊಂಡಿಲ್ಲ. ಅ. 8ರಂದು ಕುಂಡುಜ್ ಪ್ರಾಂತ್ಯದ ಶಿಯಾ ಮಸೀದಿಯಲ್ಲಿ ಇಸ್ಲಾಮಿಕ್ ಸ್ಟೇಟ್-ಖೊರಾಸನ್ (ಐಎಸ್-ಕೆ) ನಡೆಸಿದ ಸ್ಫೋಟದ ಮಾದರಿಯಲ್ಲೇ ಈ ದಾಳಿಯನ್ನು ನಡೆಸಲಾಗಿದೆ ಎನ್ನಲಾಗಿದೆ.

ಕಾವ್ಯಾ ಚೋಪ್ರಾಗೆ 98ನೇ ರ್‍ಯಾಂಕ್

ಜೆಇಇ ಅಡ್ವಾನ್ಸಡ್ ಪರೀಕ್ಷೆ -ಮೃದುಲ್ ಪ್ರಥಮ

ನವದೆಹಲಿ (ಪಿಟಿಐ): ಪ್ರಸಕ್ತ ಶೈಕ್ಷಣಿಕ ವರ್ಷದ ಜೆಇಇ ಅಡ್ವಾನ್ಸಡ್ ಪರೀಕ್ಷೆಯ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ದೆಹಲಿ ವಲಯದ ಮೃದುಲ್ ಅಗರ್‌ವಾಲ್ ಉನ್ನತ ಸ್ಥಾನ ಗಳಿಸಿದ್ದಾರೆ. ಪ್ರತಿಷ್ಠಿತ ಭಾರತೀಯ ತಾಂತ್ರಿಕ ಸಂಸ್ಥೆಗಳಿಗೆ (ಐಐಟಿ) ಪ್ರವೇಶ ಪಡೆಯಲು ಇದು ಅರ್ಹತಾ ಪರೀಕ್ಷೆಯಾಗಿದೆ.

ರಾಜಸ್ಥಾನ ಮೂಲದ, 17 ವರ್ಷದ ಮೃದುಲ್ 360 ಅಂಕಗಳಿಗೆ 348 ಅಂಕ ಗಳಿಸಿದ್ದು, ಐಐಟಿ-ಬಾಂಬೆಯಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಬಿ.ಟೆಕ್ ಮಾಡುವ ಗುರಿ ಹೊಂದಿದ್ದಾರೆ. ಇವರು, ಜೆಇಇ ಮುಖ್ಯ ಪರೀಕ್ಷೆಯಲ್ಲಿ ಶೇ 100ರಷ್ಟು ಅಂಕಗಳಿಸಿದ್ದು, ಇತರೆ 17ರ ವಿದ್ಯಾರ್ಥಿಗಳ ಜೊತೆಗೆ ಮೊದಲ ರ್‍ಯಾಂಕ್ ಹಂಚಿಕೊಂಡಿದ್ದಾರೆ.

ಜೆಇಇ ಮುಖ್ಯ ಪರೀಕ್ಷೆಯಲ್ಲಿ ಬಾಲಕಿಯರ ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದ್ದ, ದೆಹಲಿ ವಲಯದವರೇ ಆದ ಕಾವ್ಯಾ ಚೋಪ್ರಾ ಅವರೂ ಜೆಇಇ ಅಡ್ವಾನ್ಸಡ್ ಪರೀಕ್ಷೆಯಲ್ಲಿ ಬಾಲಕಿಯರ ವಿಭಾಗದಲ್ಲಿ ಉನ್ನತ ಸ್ಥಾನಗಳಿಸಿದ್ದಾರೆ. ಇವರು 360 ಅಂಕಗಳಿಗೆ 286 ಅಂಕ ಗಳಿಸಿದ್ದು, 98ನೇ ರ್‍ಯಾಂಕ್ ಪಡೆದಿದ್ದಾರೆ.

ಮುಖ್ಯಾಂಶಗಳು
- **ಐಐಟಿ ಪ್ರವೇಶ ಪಡೆಯಲು ಇದು ಅರ್ಹತಾ ಪರೀಕ್ಷೆ**
- **ರಾಜಸ್ಥಾನ ಮೂಲದ ಮೃದುಲ್ 360 ಅಂಕಗಳಿಗೆ 348 ಅಂಕ ಗಳಿಕೆ**

ಈ ವರ್ಷ ಜೆಇಇ- ಅಡ್ವಾನ್ಸಡ್ ಪರೀಕ್ಷೆಗೆ 41,862 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಇವರಲ್ಲಿ 6,452 ವಿದ್ಯಾರ್ಥಿನಿಯರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷ ಐಐಟಿ-ಕರಗ್‌ಪುರ್ ಪರೀಕ್ಷೆ ಆಯೋಜಿಸಿತ್ತು. ಜೆಇಇ ಅಡ್ವಾನ್ಸಡ್ ಪರೀಕ್ಷೆ 1 ಮತ್ತು 2ನೇ ಪತ್ರಿಕೆಗಳ ಪರೀಕ್ಷೆಗೆ 1,41,699 ಅಭ್ಯರ್ಥಿಗಳು ಹಾಜರಾಗಿದ್ದರು. 97 ವಿದೇಶಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 42 ಮಂದಿ ಹಾಜರಾಗಿದ್ದರು. ಇವರಲ್ಲಿ 7 ಮಂದಿ ಅರ್ಹತೆ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಾದ್ಯಂತ ಇರುವ ಐಐಟಿಗಳಿಗೆ ಪ್ರವೇಶಾರ್ಹತೆ ಪಡೆಯಲು ಜೆಇಇ-ಅಡ್ವಾನ್ಸಡ್ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಈ ವರ್ಷದಿಂದ ಜಾರಿಗೆ ಬಂದಿರುವಂತೆ ಜೆಇಇ ಮುಖ್ಯ ಪರೀಕ್ಷೆಯನ್ನು ವಾರ್ಷಿಕ ನಾಲ್ಕು ಬಾರಿ ನಡೆಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಅಂಕಗಳಿಸಲು ಅವಕಾಶ ಕಲ್ಪಿಸುವುದು ಇದರ ಉದ್ದೇಶ. ಮೊದಲ ಹಂತದ ಪರೀಕ್ಷೆ ಫೆಬ್ರುವರಿ ತಿಂಗಳು, ಎರಡನೇ ಹಂತದ ಪರೀಕ್ಷೆಯು ಮಾರ್ಚ್ ತಿಂಗಳಲ್ಲಿ ನಡೆದಿತ್ತು.

ನಂತರದ ಹಂತದ ಪರೀಕ್ಷೆಗಳು ಏಪ್ರಿಲ್, ಮೇ ತಿಂಗಳು ನಡೆಯಬೇಕಿತ್ತು. ಆದರೆ, ಕೋವಿಡ್ 2ನೇ ಅಲೆ ಪರಿಣಾಮದಿಂದಾಗಿ ಮುಂದೂಡಲಾಗಿತ್ತು. ಬಳಿಕ ಮೂರನೇ ಹಂತದ ಪರೀಕ್ಷೆಯು ಜುಲೈ 20-25 ಹಾಗೂ ನಾಲ್ಕನೇ ಹಂತದ ಪರೀಕ್ಷೆಯು ಆಗಸ್ಟ್ 26 ಮತ್ತು ಸೆಪ್ಟೆಂಬರ್ 2ರ ನಡುವೆ ನಡೆದಿತ್ತು.

ಈಗಾಗಲೇ ರೂಪಿಸಲಾಗಿದ್ದ ನೀತಿಯ ಅನುಸಾರ ನಾಲ್ಕೂ ಪರೀಕ್ಷೆಗಳ ಅತ್ಯುತ್ತಮ ಸಾಧನೆಯನ್ನು ಪರಿಗಣನೆಗೆ ತೆಗೆದುಕೊಂಡು ರ್‍ಯಾಂಕ್ ಅನ್ನು ನಿಗದಿಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿಯಿಂದ ಕಟ್ಟಡಗಳ ಪ್ರಾಥಮಿಕ ಸರ್ವೆಯಲ್ಲಿ ಬಹಿರಂಗ

ಅಪಾಯದಲ್ಲಿವೆ 404 ಕಟ್ಟಡ!

● ಸ್ನೇಹಾ ರಮೇಶ್

ಬೆಂಗಳೂರು: ಶಿಥಿಲಗೊಂಡ ಕಟ್ಟಡಗಳು ಒಂದರ ಹಿಂದೆ ಒಂದರಂತೆ ಕುಸಿದು ಬೀಳುತ್ತಿರುವ ನಡುವೆ, ಯಾವುದೇ ಕ್ಷಣದಲ್ಲಿ ಕುಸಿಯಬಹುದಾದ 404 ಕಟ್ಟಡಗಳನ್ನು ಬಿಬಿಎಂಪಿ ಗುರುತಿಸಿದೆ.

‘2019ರಲ್ಲಿ ನಡೆಸಿದ್ದ ಸರ್ವೆಯಲ್ಲಿ ಈ ರೀತಿಯ 185 ಕಟ್ಟಡಗಳನ್ನು ಪಾಲಿಕೆ ಗುರುತಿಸಿತ್ತು. ಹೊಸದಾಗಿ ಸರ್ವೆ ನಡೆಸಿ 15 ದಿನಗಳಲ್ಲಿ ವರದಿ ನೀಡಲು ಆದೇಶಿಸಲಾಗಿತ್ತು. ಅದರಂತೆ ಸಲ್ಲಿಕೆಯಾಗಿರುವ ಪ್ರಾಥಮಿಕ ವರದಿ ಪ್ರಕಾರ 404 ಕಟ್ಟಡಗಳು ಅಪಾಯದಲ್ಲಿರುವುದು ಗೊತ್ತಾಗಿದೆ’ ಎಂದು ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

‘ಪ್ರಾಥಮಿಕ ಸರ್ವೆಯಲ್ಲಿ ಇಷ್ಟು ಕಟ್ಟಡಗಳನ್ನು ಗುರುತಿಸಲಾಗಿದೆ. ಆ ಕಟ್ಟಡಗಳ ಸದೃಢತೆ ಬಗ್ಗೆ ಕೂಲಂಕಶ ಪರೀಕ್ಷೆ ನಡೆಸುವುದು ಇನ್ನೂ ಬಾಕಿ ಇದೆ’ ಎಂದು ಸರ್ವೆಯಲ್ಲಿ ಭಾಗಿಯಾಗಿದ್ದ ಪಾಲಿಕೆ ಎಂಜಿನಿಯರ್ ಒಬ್ಬರು ತಿಳಿಸಿದರು.

‘ಕಟ್ಟಡಗಳನ್ನು ಮೇಲ್ನೋಟಕ್ಕೆ ನೋಡಿ ಮತ್ತು ಅದು ನಿರ್ಮಾಣ ಆಗಿರುವ ವರ್ಷ ಆಧರಿಸಿ ಕುಸಿಯುವ ಹಂತದಲ್ಲಿರುವ ಕಟ್ಟಡ ಎಂದು ಗುರುತಿಸಲಾಗಿದೆ. ಈ ಎಲ್ಲ ಕಟ್ಟಡಗಳನ್ನು ತಜ್ಞ ಎಂಜಿನಿಯರ್‌ಗಳ ಮೂಲಕ ಅವುಗಳ ಸದೃಢತೆ ಬಗ್ಗೆ ಪರೀಕ್ಷೆ ನಡೆಸಲಾಗುವುದು. ಬಳಿಕವೇ ಅವುಗಳ ತೆರವಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಅವರು ವಿವರಿಸಿದರು.

ಈ ಸರ್ವೆ ಪ್ರಕಾರ ದಕ್ಷಿಣ ವಲಯದಲ್ಲೇ ಅತೀ ಹೆಚ್ಚು 103 ಕಟ್ಟಡಗಳು, ಪಶ್ಚಿಮ ವಲಯದಲ್ಲಿ 95 ಕಟ್ಟಡಗಳಿವೆ. ವಿಶೇಷ ಎಂದರೆ 2019ರಲ್ಲಿ ನಡೆಸಿದ ಸರ್ವೆಯಲ್ಲಿ ಬೊಮ್ಮನಹಳ್ಳಿ ವಲಯದಲ್ಲಿ ಶಿಥಿಲಾವಸ್ಥೆಯಲ್ಲಿರುವ ಒಂದೇ ಒಂದು ಕಟ್ಟಡ ಇರಲಿಲ್ಲ. ಈಗ 9 ಕಟ್ಟಡಗಳನ್ನು ಬಿಬಿಎಂಪಿ ಗುರುತಿಸಿದೆ.

2019ರಲ್ಲಿ ರಾಜರಾಜೇಶ್ವರಿ ನಗರ ವಲಯದಲ್ಲಿ ಒಂದೇ ಒಂದು ಕಟ್ಟಡ ಇತ್ತು. ಈಗ 11 ಕಟ್ಟಡಗಳನ್ನು ಗುರುತಿಸಲಾಗಿದೆ. ಈ 11 ಕಟ್ಟಡಗಳಲ್ಲಿ ಕೆಂಗೇರಿ ಪೊಲೀಸ್ ವಸತಿ ಗೃಹದಲ್ಲಿರುವ 9 ಕಟ್ಟಡಗಳು ಸೇರಿವೆ. ಈ ಕುರಿತು ಪೊಲೀಸ್ ಇಲಾಖೆಗೂ ತಿಳಿಸಲಾಗಿದೆ ಎಂದು ರಾಜರಾಜೇಶ್ವರಿನಗರ ವಲಯದ ಅಧಿಕಾರಿಯೊಬ್ಬರು ತಿಳಿಸಿದರು.

‘ಕಟ್ಟಡದ ಸದೃಢತೆ ಕುರಿತ ವರದಿ ಬಂದ ಕೂಡಲೇ ಕುಸಿಯುವ ಹಂತದಲ್ಲಿರುವ ಕಟ್ಟಡಗಳನ್ನು ನೆಲಸಮ ಮಾಡಲಾಗುವುದು. ಅವುಗಳಲ್ಲಿ ಅಪಾಯದಲ್ಲಿರುವ ಕೆಲ ಕಟ್ಟಡಗಳನ್ನು ವರದಿ ಬಂದ 24 ಗಂಟೆಗಳಲ್ಲಿ ಅವುಗಳನ್ನು ನೆಲಸಮ ಮಾಡಲು ಯೋಜನೆ ರೂಪಿಸಿಕೊಳ್ಳಲಾಗಿದೆ’ ಎಂದು ದಕ್ಷಿಣ ವಲಯದ ಅಧಿಕಾರಿಗಳು ಹೇಳಿದರು.

ಅಧಿಕಾರಿಗಳ ವಿರುದ್ಧವೂ ಕ್ರಮ

2019ರಲ್ಲಿ ಸರ್ವೆ ನಡೆಸಿ 185 ಕಟ್ಟಡಗಳು ಅಪಾಯದಲ್ಲಿವೆ ಎಂದು ಪಟ್ಟಿ ಮಾಡಿದ್ದರೂ ಅವುಗಳನ್ನು 10 ಕಟ್ಟಡಗಳನ್ನಷ್ಟೇ ನೆಲಸಮ ಮಾಡಲಾಗಿದೆ. ಉಳಿದ ಕಟ್ಟಡಗಳನ್ನು ಹಾಗೇ ಉಳಿಸಿಕೊಂಡಿರುವ ಅಧಿಕಾರಿಗಳು ಕ್ರಮ ಎದುರಿಸಲಿದ್ದಾರೆ ಎಂದು ಗೌರವ್ ಗುಪ್ತ ಹೇಳಿದರು.

ಆ ಕಟ್ಟಡಗಳಲ್ಲಿ ವಾಸ ಇರುವ ಜನರ ಸುರಕ್ಷತೆಯನ್ನು ಗಮನದಲ್ಲಿ ಇಟ್ಟುಕೊಂಡು ಅವುಗಳನ್ನು ಕೆಡವಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

‘ಕುಸಿಯುವ ಹಂತದಲ್ಲಿದ್ದ ಕಟ್ಟಡಗಳನ್ನು ಎಂಜಿನಿಯರ್‌ಗಳು ಖುದ್ದು ಪರಿಶೀಲನೆ ನಡೆಸಿದ್ದಾರೆ. ಕೆಲ ಮಾಲೀಕರು ಕಟ್ಟಡಗಳನ್ನು ಸದೃಢ ಮಾಡಿಕೊಂಡಿದ್ದಾರೆ. ಕೆಲವರು ಏನನ್ನೂ ಮಾಡಿಲ್ಲ. ಅಂತಹ ಕಟ್ಟಡಗಳ ನೆಲಸಮಕ್ಕೆ ಏಳು ದಿನಗಳ ಕಾಲಾವಕಾಶ ನೀಡಲಾಗುವುದು. ಅವರು ನೆಲಸಮ ಮಾಡದಿದ್ದರೆ ಬಿಬಿಎಂಪಿಯಿಂದಲೇ ತೆರವುಗೊಳಿಸಲಾಗುವುದು’ ಎಂದು ಪಶ್ಚಿಮ ವಲಯದ ಅಧಿಕಾರಿಯೊಬ್ಬರು ಹೇಳಿದರು.

ಕುಸಿಯುವ ಹಂತದಲ್ಲಿರುವ ಕಟ್ಟಡಗಳು

ವಲಯ	2019ರಲ್ಲಿ ಗುರುತಿಸಿದ್ದ ಕಟ್ಟಡಗಳು	ಹೊಸ ಸರ್ವೆಯಲ್ಲಿ ಪತ್ತೆಯಾದ ಕಟ್ಟಡಗಳು
ದಕ್ಷಿಣ	33	103
ಪಶ್ಚಿಮ	34	95
ಪೂರ್ವ	46	67
ಮಹದೇವಪುರ	3	24
ರಾಜರಾಜೇಶ್ವರಿ ನಗರ	1	11
ಬೊಮ್ಮನಹಳ್ಳಿ	0	9
ಯಲಹಂಕ	60	84
ದಾಸರಹಳ್ಳಿ	8	44
ಒಟ್ಟು	185	404



ಮೆರವಣಿಗೆ

ವಿಜಯದಶಮಿ ಪ್ರಯುಕ್ತ ಯಲಹಂಕ ಸಮೀಪದ ಬಿಕ್ಕನಹಳ್ಳಿಯಲ್ಲಿ ಮುನೇಶ್ವರಸ್ವಾಮಿ, ಅಕ್ಕಯಮ್ಮ ಹಾಗೂ ಮಹೇಶ್ವರಮ್ಮ ದೇವರುಗಳ ಮೆರವಣಿಗೆ ಶುಕ್ರವಾರ ನಡೆಯಿತು.

ಜಮ್ಮು–ಕಾಶ್ಮೀರ: ಎನ್‌ಕೌಂಟರ್‌ನಲ್ಲಿ ಸೈನಿಕರಿಬ್ಬರು ಹುತಾತ್ಮ

ಜಮ್ಮು (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಭಾರತೀಯ ಸೇನೆಯ ಇಬ್ಬರು ಸೈನಿಕರು ಹುತಾತ್ಮರಾಗಿದ್ದಾರೆ’ ಎಂದು ಶುಕ್ರವಾರ ಅಧಿಕಾರಿಗಳು ತಿಳಿಸಿದ್ದಾರೆ.

ರೈಫಲ್‌ಮೆನ್ ವಿಕ್ರಮ್ ಸಿಂಗ್ ನೇಗಿ (26) ಮತ್ತು ಯೋಗಂಬರ್ ಸಿಂಗ್ (27) ಹುತಾತ್ಮರಾದವರು. ಪೂಂಚ್ ಜಿಲ್ಲೆಯ ಮೆಂಧಾರ್ ಉಪ ವಿಭಾಗದ ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಮೆಂಧಾರ್ ಉಪ ವಿಭಾಗದ ನರ್‌ಖಾಸ್ ಅರಣ್ಯದ ಸಾಮಾನ್ಯ ಪ್ರದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಯಲ್ಲಿ ಗುರುವಾರ ಸಂಜೆ ಸೇನಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಸೈನಿಕರು ಸಾವಿಗೀಡಾದರು’ ಎಂದು ರಕ್ಷಣಾ ಸಾರ್ವಜನಿಕ ಸಂಪರ್ಕ ಅಧಿಕಾರಿ ಹೇಳಿದರು. ಸೇನೆಯ ನಿಯೋಜಿತ ತಂಡದ ಅಧಿಕಾರಿಯೊಬ್ಬರು ಕಾಣೆಯಾಗಿದ್ದು, ಅವರ ಪತ್ತೆ ಕಾರ್ಯ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಉಗ್ರನ ಹತ್ಯೆ: ಇತ್ತೀಚೆಗೆ ಶ್ರೀನಗರದಲ್ಲಿ ನಡೆದ ನಾಗರಿಕ ಹತ್ಯೆಯಲ್ಲಿ ಭಾಗಿಯಾಗಿದ್ದ ಉಗ್ರನೊಬ್ಬನನ್ನು ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಶುಕ್ರವಾರ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿವೆ.

ಕೆಲಸ ಕೊಡಿಸುವ ಆಮಿಷವೊಡ್ಡಿ ವಂಚನೆ ● ನಕಲಿ ಗುರುತಿನ ಚೀಟಿ ಪತ್ತೆ

‘ಐಎಎಸ್’ ನಕಲಿ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ



ಸಂದೀಪ್

ಬೆಂಗಳೂರು: ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ಸಂದೀಪ್ ಎಂಬಾತನನ್ನು ಕೇಂದ್ರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯದ ಸಂದೀಪ್, ‘ನಾನು ಐಎಎಸ್ ಅಧಿಕಾರಿ’ ಎಂದು ಹೇಳಿಕೊಂಡು ಓಡಾಡುತ್ತಿದ್ದ. ಆತನ ವಂಚನೆ ವಿರುದ್ಧ ಪುಲಕೇಶಿನಗರ ಹಾಗೂ ವಿಧಾನಸೌಧ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಎರಡೂ ಪ್ರಕರಣಗಳ ತನಿಖೆ ಕೈಗೊಂಡು ಆರೋಪಿ ಸಿಕ್ಕಿಬಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ತನ್ನ ಹೆಸರು ‘ಸಂದೀಪ್ ಎಸ್. ಪ್ರಸಾದ್’ ಎಂದು ಹೇಳಿಕೊಳ್ಳುತ್ತಿದ್ದ ಆರೋಪಿ, ಅಭ್ಯರ್ಥಿಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಸುವುದಾಗಿ ಹೇಳಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿದ್ದನೆಂಬುದು ತನಿಖೆಯಿಂದ ತಿಳಿದುಬಂದಿದೆ’ ಎಂದೂ ತಿಳಿಸಿದರು.

ತಿರುಪತಿಯಲ್ಲಿ ಪರಿಚಯವಾದ ಆಮಿಷ: ‘ಸಂದೀಪ್ ವಿರುದ್ಧ ಕೆ. ವೀಣಾ ಎಂಬುವರು ದೂರು ನೀಡಿದ್ದಾರೆ. ವಂಚನೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಅಧಿಕಾರಿ ಹೇಳಿದರು.

‘ನಗರದ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ವೀಣಾ, ಕೆಲ ತಿಂಗಳ ಹಿಂದೆ ತಿರುಪತಿಗೆ ಹೋಗಿದ್ದರು. ಅಲ್ಲಿ ಅವರಿಗೆ ಆರೋಪಿಯ ಪರಿಚಯವಾಗಿತ್ತು. ಐಎಎಸ್ ಅಧಿಕಾರಿ ಎಂಬುದಾಗಿ ಹೇಳಿಕೊಂಡಿದ್ದ ಆರೋಪಿ, ಕರ್ನಾಟಕ ಸರ್ಕಾರದಲ್ಲಿ ತಿಂಗಳಿಗೆ ₹ 75 ಸಾವಿರ ವೇತನ ಸಿಗುವ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದ. ಅದಕ್ಕೆ ಹಣ ಖರ್ಚಾಗುತ್ತದೆಯೆಂದು ಹೇಳಿ ಹಂತ ಹಂತವಾಗಿ ₹ 6 ಲಕ್ಷ ಪಡೆದಿದ್ದ’, ‘ನೇಮಕಾತಿಯ ನಕಲಿ ಆದೇಶವನ್ನು ವೀಣಾ ಅವರಿಗೆ ಇ–ಮೇಲ್ ಮೂಲಕ ಕಳುಹಿಸಿದ್ದ ಆರೋಪಿ, ಅವರ ಸ್ನೇಹಿತರಿಗೂ ಕೆಲಸದ ಆಮಿಷವೊಡ್ಡಿ ಹಣ ಪಡೆದಿದ್ದ. ನಂತರ ಅಭ್ಯರ್ಥಿಗಳು, ಯಾವಾಗ ಕೆಲಸಕ್ಕೆ ಹಾಜರಾಗಬೇಕೆಂದು ಕೇಳಿದ್ದರು. ಅದಕ್ಕೆ ಆರೋಪಿ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ನೊಂದ ಅಭ್ಯರ್ಥಿ ಠಾಣೆಗೆ ದೂರು ನೀಡಿದ್ದಾರೆ’ ಎಂದೂ ಅಧಿಕಾರಿ ತಿಳಿಸಿದರು.

‘ಅರಣ್ಯ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಹೈಕೋರ್ಟ್... ಹೀಗೆ ಹಲವೆಡೆ ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿ ಆರೋಪಿ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಈತನ ವಿರುದ್ಧ ಸದ್ಯ ಎರಡು ಪ್ರಕರಣಗಳು ದಾಖಲಾಗಿದ್ದು, ಬೇರೆ ಯಾರಾದರೂ ವಂಚನೆಗೀಡಾಗಿದ್ದರೆ ದೂರು ನೀಡಬಹುದು’ ಎಂದೂ ಕೋರಿದ್ದಾರೆ.

ವೀಣಾ ವಿರುದ್ಧವೂ ಪ್ರಕರಣ: ‘ಐಎಎಸ್ ಅಧಿಕಾರಿ ಸಂದೀಪ್ ತುಂಬಾ ಪರಿಚಿತರೆಂದು ಹೇಳಿಕೊಂಡಿದ್ದ ವೀಣಾ, ನೇಮಕಾತಿ ವಿಚಾರವಾಗಿ ಕೆಲವರಿಂದ ಆಮಿಷವೊಡ್ಡಿ ₹ 6 ಲಕ್ಷ ಹಣ ಪಡೆದಿದ್ದರು. ಆ ಹಣವನ್ನು ಸಂದೀಪ್‌ಗೆ ಕೊಟ್ಟಿದ್ದರು ಎನ್ನಲಾಗಿದೆ. ಆತ ನೇಮಕಾತಿಯ ನಕಲಿ ಆದೇಶ ನೀಡಿದ್ದ. ಈ ಬಗ್ಗೆ ಸಹೋದ್ಯೋಗಿಯೊಬ್ಬರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ. ಸಂದೀಪ್ ಹಾಗೂ ಎರಡನೇ ಆರೋಪಿ ವೀಣಾ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮತ್ತೊಬ್ಬ ನಕಲಿ ಅಧಿಕಾರಿ ವಿರುದ್ಧವೂ ದೂರು’

‘ಆರೋಪಿ ಸಂದೀಪ್ ರೀತಿಯಲ್ಲೇ ಕೃತ್ಯ ಎಸಗುತ್ತಿದ್ದಾನೆ ಎನ್ನಲಾದ ಮತ್ತೊಬ್ಬ ಐಎಎಸ್ ನಕಲಿ ಅಧಿಕಾರಿ ವಿ.ಕೆ. ಅಮೃತಯ್ಯ ಎಂಬಾತನ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಆತ ಸದ್ಯ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗಾಂಧಿನಗರದಲ್ಲಿರುವ ಭರತ್ ಎಂಟರ್‌ಪ್ರೈಸಸ್ ಮಳಿಗೆಗೆ ಹೋಗಿದ್ದ ಆರೋಪಿ ಅಮೃತಯ್ಯ, ತನ್ನ ಹೆಸರಿನಲ್ಲಿ ಗುರುತಿನ ಚೀಟಿ ಮಾಡಿಸಿದ್ದ. ‘ವಿ.ಕೆ. ಅಮೃತಯ್ಯ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು’ ಹೆಸರಿನಲ್ಲಿ ನಾಮಫಲಕ, ಗುರುತಿನ ಚೀಟಿ ಹಾಗೂ ವಿಸಿಟಿಂಗ್ ಕಾರ್ಡ್ ಮಾಡಿಕೊಡುವಂತೆ ಮಳಿಗೆ ಮಾಲೀಕ ಸೋಮಶೇಖರ್ ಅವರನ್ನು ಒತ್ತಾಯಿಸಿದ್ದ. ನಕಲಿ ಲೆಟರ್ ಹೆಡ್ ಸಹ ನೀಡಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಹೇಳಿದಂತೆ ಮಳಿಗೆಯ ಮಾಲೀಕರು, ಗುರುತಿನ ಚೀಟಿ ಹಾಗೂ ವಿಸಿಟಿಂಗ್ ಕಾರ್ಡ್ ತಯಾರಿಸಿ ಕೊಟ್ಟಿದ್ದರು. ₹ 12,000 ನೀಡಿದ್ದ ಅವುಗಳನ್ನು ಪಡೆದಿದ್ದ ಆರೋಪಿ, ವಿಧಾನಸೌಧಕ್ಕೆ 3ನೇ ಮಹಡಿಗೆ ಬಂದು ನಾಮಫಲಕ ಹಾಕಿ ಹೋಗುವಂತೆ ಮಾಲೀಕನಿಗೆ ಹೇಳಿದ್ದ. ಅದರಂತೆ ಮಾಲೀಕ, ವಿಧಾನಸೌಧಕ್ಕೆ ಹೋದಾಗ ಅಮೃತಯ್ಯ ಎಂಬ ಐಎಎಸ್ ಅಧಿಕಾರಿ ಇಲ್ಲವೆಂಬುದು ಗೊತ್ತಾಗಿತ್ತು. ನಂತರ, ಠಾಣೆಗೆ ಬಂದು ಮಾಲೀಕ ಸೋಮಶೇಖರ್ ದೂರು ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ರಸ್ತೆ ಗುಂಡಿಗಳಿಗೆ ಪೂಜೆ ಸಲ್ಲಿಸಿ ಆಕ್ರೋಶ

ಬೆಂಗಳೂರು: ನಗರದಲ್ಲಿನ ರಸ್ತೆ ಗುಂಡಿಗಳಿಗೆ ಗುರುವಾರ ವಿಶೇಷ ಪೂಜೆ ಸಲ್ಲಿಸುವ ಮೂಲಕ, ಗಂಭೀರ ಸಮಸ್ಯೆಯನ್ನು ಸರ್ಕಾರ ಕಡೆಗಣಿಸಿರುವ ಬಗ್ಗೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ–ಪ್ಯಾಕ್) ಕಾರ್ಯಕರ್ತರು ಆಯುಧ ಪೂಜೆ ದಿನದಂದು ಚಾಲುಕ್ಯ ವೃತ್ತದ ಗುಂಡಿಗಳಿಗೆ ಪೂಜೆ ಸಲ್ಲಿಸಿದರು. ‘ಜೀವಕ್ಕೆ ಹಾನಿ ಮಾಡುತ್ತಿರುವ ರಸ್ತೆ ಗುಂಡಿಗಳ ಸಮಸ್ಯೆ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಮಳೆ ನೀರು ಗುಂಡಿಗಳಲ್ಲಿ ನಿಲ್ಲುವುದರಿಂದ ವಾಹನ ಸವಾರರು ಗಮನಹರಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಗುಂಡಿಗಳು, ಜೀವಕ್ಕೆ ಅಪಾಯ ತಂದೊಡ್ಡಿವೆ. ಈಗಾಗಲೇ ಹಲವು ಅಪಘಾತಗಳು ನಗರದಲ್ಲಿ ಸಂಭವಿಸಿವೆ’ ಎಂದು ಹೋರಾಟಗಾರ್ತಿ ಕವಿತಾ ರೆಡ್ಡಿ ಆತಂಕ ವ್ಯಕ್ತಪಡಿಸಿದರು.

‘ಬಿಬಿಎಂಪಿ ಮನವಿಗಳನ್ನು ಸಲ್ಲಿಸಿ ಸಾಕಾಗಿದೆ. ಯಾವುದೇ ಕ್ರಮಗಳನ್ನು ಬಿಬಿಎಂಪಿ ಕೈಗೊಳ್ಳುತ್ತಿರುವುದರಿಂದ ರಸ್ತೆ ಗುಂಡಿಗಳಿಗೆ ಪೂಜೆ ಮಾಡಿದ್ದೇವೆ. ಸಮಸ್ಯೆಯ ಗಂಭೀರತೆಯನ್ನು ವ್ಯಂಗ್ಯವಾಗಿ ಎತ್ತಿ ತೋರಿಸಲು ಪೂಜೆ ಮಾಡಲಾಗಿದೆ. ಆಯುಧ ಪೂಜೆ ದಿನ ಸಾಂಪ್ರದಾಯಿಕವಾಗಿ ಯಂತ್ರಗಳನ್ನು ಪೂಜೆ ಸುವುದು ಸಾಮಾನ್ಯ. ಆದರೆ, ಈ ಬಾರಿ, ರಸ್ತೆ ಗುಂಡಿಗಳ ಅಮ್ಮನನ್ನು ಪೂಜಿಸಿದ್ದೇವೆ. ನಾಗರಿಕರು ಯಾವುದೇ ಜೀವವನ್ನು ತೆಗೆದುಕೊಳ್ಳಬೇಡ ಎಂದು ದೇವಿಯಲ್ಲಿ ಪ್ರಾರ್ಥಿಸಿದ್ದೇವೆ’ ಎಂದರು.

‘ಹನಿಟ್ರ್ಯಾಪ್’ ಬಲೆಗೆ ಗುತ್ತಿಗೆದಾರ: ಬಂಧನ

ಬೆಂಗಳೂರು: ಗುತ್ತಿಗೆದಾರರೊಬ್ಬರನ್ನು ‘ಹನಿಟ್ರ್ಯಾಪ್’ ಜಾಲದೊಳಗೆ ಸಿಲುಕಿಸಿ ಲಕ್ಷಾಂತರ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣದಲ್ಲಿ ಆರೋಪಿ ಕಾವ್ಯಾ ಎಂಬಾಕೆಯನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಗುತ್ತಿಗೆದಾರರೊಬ್ಬರು ‘ಹನಿಟ್ರ್ಯಾಪ್’ ಜಾಲದ ಬಗ್ಗೆ ದೂರು ನೀಡಿದ್ದರು. ಅದರನ್ವಯ ಆರೋಪಿ ಕಾವ್ಯಾಳನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಸಹಕರಿಸಿದ್ದ ಇಬ್ಬರು ತಲೆಮರೆಸಿಕೊಂಡಿದ್ದಾರೆ. ಪಡುವಿಯಲ್ಲಿರುವ ಯುವತಿ, ವಿಜಯನಗರದಲ್ಲಿ ವಾಸವಿದ್ದಳು. ‘ಜಾಬ್ ಲೈವ್’ ಉತ್ಪನ್ನಗಳ ಮಾರಾಟ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿದ್ದಳು. ಕೆಲ ತಿಂಗಳ ಹಿಂದೆ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕಾಗಿ ದೂರುದಾರರ ಮನೆಗೆ ಹೋಗಿದ್ದಳು. ಉತ್ಪನ್ನಗಳನ್ನು ಖರೀದಿಸುವಂತೆ ಕೋರಿದ್ದಳು. ದೂರುದಾರ ಉತ್ಪನ್ನಗಳನ್ನು ಖರೀದಿಸಿದ್ದರು. ಈ ಸಂದರ್ಭದಲ್ಲಿ ಇಬ್ಬರ ನಡುವೆ ಮಾತುಕತೆ ಆಗಿ, ಪರಸ್ಪರ ಮೊಬೈಲ್ ನಂಬರ್ ವಿನಿಮಯವಾಗಿತ್ತು. ಇಬ್ಬರೂ ಮೊಬೈಲ್‌ನಲ್ಲಿ ಚಾಟಿಂಗ್ ಆರಂಭಿಸಿದ್ದರು. ಸಲುಗೆಯೂ ಬೆಳೆಯಿತ್ತು. ಇಬ್ಬರೂ ಕನಕಪುರ ಬಳಿಯ ರೆಸಾರ್ಟ್ ಹಾಗೂ ಹಲವೆಡೆ ಸುತ್ತಾಡಿದ್ದರು. ಖಾಸಗಿ ಕ್ಷಣಗಳನ್ನು ಕಳೆದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಇತ್ತೀಚೆಗಷ್ಟೇ ದೂರುದಾರನಿಗೆ ಕರೆ ಮಾಡಿ ನಾಗರಬಾವಿ ಬಳಿ ಕರೆಸಿಕೊಂಡಿದ್ದ ಯುವತಿ, ‘ನಿಮ್ಮ ಜೊತೆಗಿನ ಖಾಸಗಿ ಕ್ಷಣದ ಫೋಟೊ ಹಾಗೂ ವಿಡಿಯೊಗಳು ನನ್ನ ಬಳಿ ಇವೆ. ನಾನು ಕೇಳಿದಷ್ಟು ಹಣ ಕೊಡಬೇಕು. ಇಲ್ಲದಿದ್ದರೆ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ’ ಎಂದಿದ್ದಳು. ಇದಕ್ಕೆ ಒಪ್ಪದ ಗುತ್ತಿಗೆದಾರ, ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಮೂಲಗಳು ವಿವರಿಸಿವೆ.

ಶಾಮೀಲು: ‘ಗುತ್ತಿಗೆದಾರ ಹಾಗೂ ಯುವತಿ, ಹಲವು ಬಾರಿ ಶಾಪಿಂಗ್ ಸಹ ಮಾಡಿದ್ದರು. ಬಟ್ಟೆ ಹಾಗೂ ಆಗತ್ಯ ವಸ್ತುಗಳನ್ನು ಯುವತಿ ಖರೀದಿಸಿದ್ದಳು. ಅದಕ್ಕೆ ಗುತ್ತಿಗೆದಾರರೇ ಹಣ ನೀಡಿದ್ದರು’ ಎಂದೂ ಹೇಳಿವೆ.

‘ಒಟಿಪಿ’ ನೀಡಿ ಹಣ ಕಳೆದುಕೊಂಡ ನಿವೃತ್ತ ಡಿಜಿ–ಐಜಿಪಿ ಶಂಕರ್ ಬಿದರಿ

ಬೆಂಗಳೂರು: ‘ಬ್ಯಾಂಕ್ ಖಾತೆಯ ಪ್ಯಾನ್ ನಂಬರ್ ನವೀಕರಣ ಮಾಡಬೇಕು’ ಎಂದು ಸೈಬರ್ ವಂಚಕರ ಮಾತು ನಂಬಿ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ನೀಡಿದ್ದ ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಶಂಕರ್ ಬಿದರಿ ಅವರು ₹ 89 ಸಾವಿರ ಕಳೆದುಕೊಂಡಿದ್ದಾರೆ.

‘ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಾಯವಾಣಿ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿದ್ದ ವಂಚಕರು ಈ ಕೃತ್ಯ ಎಸಗಿದ್ದಾರೆ. ವಂಚನೆ ಸಂಬಂಧ ಶಂಕರ್ ಬಿದರಿ ದೂರು ನೀಡಿದ್ದು, ಅಪರಿಚಿತ ವ್ಯಕ್ತಿ ವಿರುದ್ಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶಂಕರ್ ಬಿದರಿ ಮೊಬೈಲ್‌ಗೆ ಅ. 11ರಂದು ಸಂದೇಶ ಕಳುಹಿಸಿದ್ದ ವಂಚಕರು, ‘ನಿಮ್ಮ ಪ್ಯಾನ್ ನಂಬರ್ ನವೀಕರಣ ಮಾಡಬೇಕು. ಮಾಡದಿದ್ದರೆ, ಬ್ಯಾಂಕ್ ಖಾತೆ ನಿಷ್ಕ್ರಿಯವಾಗುತ್ತದೆ’ ಎಂಬುದಾಗಿ ಹೇಳಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಂದೇಶ ಬಂದ ಕೆಲ ಹೊತ್ತಿನ ನಂತರ ಬಿದರಿ ಅವರಿಗೆ ಕರೆ ಮಾಡಿದ್ದ ವಂಚಕರು, ಎಸ್‌ಬಿಐ ಸಹಾಯವಾಣಿ ಪ್ರತಿನಿಧಿ ಎಂಬುದಾಗಿ ಪರಿಚಯಿಸಿಕೊಂಡಿದ್ದರು. ‘ಪ್ಯಾನ್ ನಂಬರ್ ನವೀಕರಣ ಮಾಡಬೇಕಿದೆ. ನಿಮ್ಮ ಮೊಬೈಲ್‌ಗೆ ಬಂದಿರುವ ಒಟಿಪಿ ತಿಳಿಸಿ’ ಎಂದಿದ್ದರು. ಅವರ ಮಾತು ನಂಬಿದ್ದ ಶಂಕರ್ ಬಿದರಿ, ಒಟಿಪಿ ಹಂಚಿಕೊಂಡಿದ್ದರು. ಇದಾದ ಕೆಲವೇ ಕ್ಷಣಗಳಲ್ಲಿ ಬ್ಯಾಂಕ್ ಖಾತೆಯಿಂದ ₹ 89 ಸಾವಿರ ಕಡಿತವಾಗಿದೆ’ ಎಂದು ಮೂಲಗಳು ಹೇಳಿವೆ.

ಕೆಐಎ; ಕೆಲಸದ ಆಮಿಷವೊಡ್ಡಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಕೆಲಸ ಕೊಡಿಸುವ ಆಮಿಷವೊಡ್ಡಿ ₹ 8 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ವಿಸಿಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ರಾಘವೇಂದ್ರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಿವಿಲ್ ಎಂಜಿನಿಯರ್ ಆಗಿರುವ ದೂರುದಾರ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. 2020ರ ಡಿಸೆಂಬರ್‌ನಲ್ಲಿ ಅವರಿಗೆ ಆರೋಪಿ ಪರಿಚಯವಾಗಿತ್ತು. ವಿಮಾನ ನಿಲ್ದಾಣದಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿದ್ದ ಆರೋಪಿ, ಹಂತ ಹಂತವಾಗಿ ₹ 8 ಲಕ್ಷ ಪಡೆದಿದ್ದ. ಆದರೆ ನಂತರ ಯಾವುದೇ ಕೆಲಸ ಕೊಡಿಸಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ನಕಲಿ ಆದೇಶ; ಅರೆಕಾಲಿಕ ಉಪನ್ಯಾಸಕ ಬಂಧನ

ಬೆಂಗಳೂರು: ಪ್ರಥಮದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆ ಕೊಡಿಸುವುದಾಗಿ ಹೇಳಿ ಹಣ ಪಡೆದು, ನೇಮಕಾತಿಯ ನಕಲಿ ಆದೇಶ ಪತ್ರ ನೀಡಿ ವಂಚಿಸಿದ್ದ ಆರೋಪದಡಿ ನಾಗರಬಾವಿ ಅಲಿಯಾಸ್ ಸುರೇಶ್ ಎಂಬಾತನನ್ನು ವಿಧಾನಸೌಧ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರಿನ ನಾಗರಾಜು, ಸ್ಥಳೀಯ ಕಾಲೇಜೊಂದರಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್. ಪದ್ಮಿನಿ ನೀಡಿದ್ದ ದೂರಿನನ್ವಯ ನಾಗರಾಜು ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೈಸೂರಿನ ನಿವಾಸಿ ಎಸ್.ಎಲ್. ಪಲ್ಲವಿ ಎಂಬುವರು ಬೆಂಗಳೂರಿನ ಎಂ.ಎಸ್. ಬಿಲ್ಡಿಂಗ್‌ನ 6ನೇ ಮಹಡಿಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಚೇರಿಗೆ ಅ. 5ರಂದು ಬಂದಿದ್ದರು. ‘ಮೈಸೂರು ಮಹಾರಾಣಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮದರ್ಜೆ ಸಹಾಯಕಿ (ಎಫ್‌ಡಿಎ) ಹುದ್ದೆಗೆ ನಾನು ನೇಮಕವಾಗಿದ್ದು, ದಾಖಲೆ ಪರಿಶೀಲನೆಗೆ ಬಂದಿದ್ದೇನೆ’ ಎಂಬುದಾಗಿ ಅವರು ಹೇಳಿದ್ದರು. ತಮ್ಮ ಬಳಿ ಇದ್ದ ನೇಮಕಾತಿ ಆದೇಶ ಪ್ರತಿಯನ್ನು ಅಧಿಕಾರಿಗಳಿಗೆ ತೋರಿಸಿದ್ದರು. ‘ಆದೇಶ ಪ್ರತಿ ಪರಿಶೀಲಿಸಿದ್ದ ಅಧಿಕಾರಿಗಳು, ಅದು ನಕಲಿ ಆದೇಶ ಎಂಬುದನ್ನು ಪತ್ತೆ ಮಾಡಿದ್ದರು. ಈ ಬಗ್ಗೆ ಪದ್ಮಿನಿ ಠಾಣೆಗೆ ದೂರು ನೀಡಿದ್ದರು’ ಎಂದೂ ಹೇಳಿವೆ.

₹ 6 ಲಕ್ಷ ಪಡೆದಿದ್ದ ಆರೋಪಿ: ‘ಆದೇಶ ಪ್ರತಿ ಸಂಬಂಧ ಪಲ್ಲವಿ ಅವರನ್ನು ವಿಚಾರಣೆ ನಡೆಸಲಾಗಿತ್ತು. ‘ಎಫ್‌ಡಿಎ ಕೆಲಸ ಕೊಡಿಸುವುದಾಗಿ ಹೇಳಿದ್ದ ನಾಗರಾಜು ಎಂಬಾತ, ಅದಕ್ಕಾಗಿ ₹ 6 ಲಕ್ಷ ಪಡೆದಿದ್ದ. ಆತನೇ ನಕಲಿ ಆದೇಶ ಪ್ರತಿ ನೀಡಿದ್ದ’ ಎಂಬುದಾಗಿ ಅವರು ಹೇಳಿಕೆ ನೀಡಿದ್ದರು. ಕೃತ್ಯದಲ್ಲಿ ಅವರ ಪಾತ್ರವಿರುವುದು ತಿಳಿಯಿತು’ ಎಂದು ಪೊಲೀಸ್ ಮೂಲಗಳು ವಿವರಿಸಿವೆ.

‘ಪದ್ಮಿನಿ ಹಾಗೂ ಪಲ್ಲವಿ ಹೇಳಿಕೆ ಆಧರಿಸಿ ಆರೋಪಿ ನಾಗರಾಜು ಅವರನ್ನು ಸೆರೆ ಹಿಡಿಯಲಾಗಿದೆ’ ಎಂದೂ ಮೂಲಗಳು ಹೇಳಿವೆ.

ಹಸಿವಿನ ಸೂಚ್ಯಂಕ: ಹಿನ್ನಡೆ ಕಂಡ ಭಾರತ

ನವದೆಹಲಿ (ಪಿಟಿಐ): ಜಾಗತಿಕ ಹಸಿವಿನ ಸೂಚ್ಯಂಕ–2021ರಲ್ಲಿ (ಜಿಎಚ್‌ಐ) ಭಾರತವು 101ನೆಯ ಸ್ಥಾನಕ್ಕೆ ಕುಸಿದಿದೆ. 2020ರಲ್ಲಿ ಭಾರತವು 94ನೆಯ ಸ್ಥಾನದಲ್ಲಿ ಇತ್ತು. ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ನೇಪಾಳಕ್ಕಿಂತ ಕೆಳಗಿನ ಸ್ಥಾನವನ್ನು ಭಾರತವು ಪಡೆದಿದೆ.


ಚೀನಾ, ಬ್ರೆಜಿಲ್ ಮತ್ತು ಕುವೈತ್ ದೇಶಗಳು ಮೊದಲ ಸ್ಥಾನವನ್ನು ಹಂಚಿಕೊಂಡಿವೆ. ಐರ್ಲೆಂಡ್‌ನ ಕನ್ಸರ್ನ್ ವರ್ಲ್ಡ್‌ವೈಡ್ ಮತ್ತು ಜರ್ಮನಿಯ ವೆಲ್ಟ್ ಹಂಗರ್ ಹಿಲ್ಫ್ ಸಂಸ್ಥೆಗಳು ಜೊತೆಯಾಗಿ ಈ ಸೂಚ್ಯಂಕವನ್ನು ಸಿದ್ಧಪಡಿಸಿವೆ. ಭಾರತದಲ್ಲಿನ ಹಸಿವಿನ ಪರಿಸ್ಥಿತಿಯು ‘ಅಪಾಯಕಾರಿ’ ಎಂದು ಸಂಸ್ಥೆಗಳು ಸಿದ್ಧಪಡಿಸಿದ ವರದಿಯು ಹೇಳಿದೆ.

ಈ ಬಾರಿ ಒಟ್ಟು 116 ದೇಶಗಳಲ್ಲಿನ ಪರಿಸ್ಥಿತಿಯನ್ನು ಪರಿಗಣಿಸಿ ಸೂಚ್ಯಂಕ ಸಿದ್ಧಪಡಿಸಲಾಗಿದೆ. ಹಸಿವಿನ ಸೂಚ್ಯಂಕದಲ್ಲಿ ಯಾವ ದೇಶಕ್ಕೆ ಎಷ್ಟನೆಯ ಸ್ಥಾನ ಎಂಬುದನ್ನು ತೀರ್ಮಾನಿಸುವ ಅಂಕಗಳ ವಿಚಾರದಲ್ಲಿಯೂ ಭಾರತವು ಹಿನ್ನಡೆ ಕಂಡಿದೆ. 2000ನೆಯ ಇಸವಿಯಲ್ಲಿ 38.8 ಅಂಕ ಪಡೆದಿದ್ದ ಭಾರತವು, 2012–2021ನೆಯ ಅವಧಿಯಲ್ಲಿ 28.8–27.5 ಅಂಕ ಪಡೆದಿದೆ.

ಅಪೌಷ್ಟಿಕತೆ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ತೂಕ ಕಡಿಮೆ ಇರುವುದು, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಎತ್ತರ ಕಡಿಮೆ ಇರುವುದು ಹಾಗೂ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮರಣ ಪ್ರಮಾಣವನ್ನು ಪರಿಗಣಿಸಿ ಜಿಎಚ್‌ಐ ಅಂಕವನ್ನು ನೀಡಲಾಗುತ್ತದೆ.


‘ಕೋವಿಡ್ ಸಾಂಕ್ರಾಮಿಕ ಹಾಗೂ ಅದಕ್ಕೆ ಸಂಬಂಧಿಸಿದ ನಿರ್ಬಂಧಗಳು ಜನರ ಮೇಲೆ ತೀವ್ರ ಪರಿಣಾಮ ಉಂಟುಮಾಡಿವೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ತೂಕ ಕಡಿಮೆ ಇರುವುದು ಭಾರತದಲ್ಲಿ ಅತಿಹೆಚ್ಚು’ ಎಂದು ವರದಿಯಲ್ಲಿ ಹೇಳಲಾಗಿದೆ. ನೇಪಾಳ (76ನೇ ಸ್ಥಾನ), ಬಾಂಗ್ಲಾದೇಶ (76), ಪಾಕಿಸ್ತಾನ (92) ಮತ್ತು ಮ್ಯಾನ್ಮಾರ್ (71) ಭಾರತ ಪಡೆದಿರುವುದಕ್ಕಿಂತ ಮೇಲಿನ ಸ್ಥಾನಗಳನ್ನು ಪಡೆದುಕೊಂಡಿದ್ದರೂ ಈ ದೇಶಗಳಲ್ಲಿನ ಪರಿಸ್ಥಿತಿಯೂ ‘ಆತಂಕಕಾರಿ’ ಆಗಿದೆ.

ಮಕ್ಕಳ ಮರಣ ಪ್ರಮಾಣ ತಗ್ಗಿಸುವಲ್ಲಿ, ಎತ್ತರ ಕಡಿಮೆ ಇರುವ ವಿಚಾರದಲ್ಲಿ, ಅಪೌಷ್ಟಿಕತೆ ವಿಚಾರದಲ್ಲಿ ಭಾರತವು ಸುಧಾರಣೆ ತೋರಿಸಿದೆ ಎಂದು ವರದಿಯು ಉಲ್ಲೇಖಿಸಿದೆ.



ಕೋವಿಡ್ 29.82 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 470 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.82 ಲಕ್ಷ ದಾಟಿದೆ.



ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಇಂದು

ನವದೆಹಲಿ: ಕೊರೊನಾ ಕಾರಣದಿಂದ ನಡೆಯದಿದ್ದ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ (ಸಿಡಬ್ಲ್ಯುಸಿ) ಸಭೆ ಒಂದೂವರೆ ವರ್ಷದ ಬಳಿಕ ಶನಿವಾರ ನಡೆಯಲಿದೆ.

ಪಕ್ಷದ ಅಧ್ಯಕ್ಷ ಸ್ಥಾನವೂ ಒಳಗೊಂಡಂತೆ ಎಲ್ಲ ಪದಾಧಿಕಾರಿಗಳ ಹುದ್ದೆಯ ಆಯ್ಕೆಗೆ ಸಾಂಸ್ಥಿಕ ಚುನಾವಣೆ ನಡೆಸುವಂತೆ ಆಸಕ್ತ ಹಿರಿಯ ಮುಖಂಡರು ಸಲ್ಲಿಸಿರುವ ಬೇಡಿಕೆ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ.

ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವಾ ಹಾಗೂ ಮಣಿಪುರ ವಿಧಾನಸಭೆಗಳಿಗೆ ಮುಂದಿನ ವರ್ಷದ ಆರಂಭಕ್ಕೆ ಮೊದಲೇ ನಾಯಕತ್ವದ ನಿರ್ಧಾರ ಆಗಬೇಕಿದೆ. ಈ ಐದು ರಾಜ್ಯಗಳಲ್ಲಿ ಪಕ್ಷವು ಸುಧಾರಣೆ ಕಾಣಬೇಕಿದ್ದಲ್ಲಿ ನಾಯಕತ್ವದ ಅಂಶದ ಕುರಿತು ವರಿಷ್ಠರು ಗಮನ ಹರಿಸುವುದು ಸೂಕ್ತ ಎಂಬ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಬಹುದು ಎಂದು ಮೂಲಗಳು ಹೇಳಿವೆ.

ಸಾಂಸ್ಥಿಕ ಚುನಾವಣೆ ನಡೆಸುವ ಕುರಿತು ಸ್ಪಷ್ಟತೆ ಇಲ್ಲ, ಮುಖಂಡರಾದ ಕಮಲನಾಥ್ ಅಥವಾ ಸಚಿನ್ ಪೈಲಟ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಿ ನೇಮಿಸಬಹುದು ಎಂಬ ಮಾತುಗಳು ಕೇಳಿಬಂದಿದ್ದವು. ಸಾಂಸ್ಥಿಕ ಚುನಾವಣೆ ನಡೆಸುವವರೆಗೂ ಸೋನಿಯಾ ಗಾಂಧಿ ಅವರೇ ಹಂಗಾಮಿ ಅಧ್ಯಕ್ಷರಾಗಿ ಮುಂದುವರಿಯಬೇಕು ಎಂಬ ಬೇಡಿಕೆಯನ್ನು ಸಭೆಯಲ್ಲಿ ಮತ್ತೊಂದು ವರ್ಗ ಸಲ್ಲಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಪ್ರಸ್ತುತ ರಾಜಕೀಯ ಬೆಳವಣಿಗೆ, ವಿವಿಧ ರಾಜ್ಯಗಳಲ್ಲಿನ ಪಕ್ಷದ ಸ್ಥಿತಿಗತಿ, ವಿಧಾನಸಭೆ ಚುನಾವಣೆಗಳ ಕುರಿತು ಪ್ರಮುಖವಾಗಿ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ.

ನಿವೃತ್ತ ಮುಖ್ಯ ಎಂಜಿನಿಯರ್ ವಿಚಾರಣೆಗೆ ತಡೆ

ನವದೆಹಲಿ: ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ನಿವೃತ್ತ ಮುಖ್ಯ ಎಂಜಿನಿಯರ್ ಒಬ್ಬರ ವಿರುದ್ಧ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಹೇಮಾವತಿ ಯೋಜನೆಯಲ್ಲಿ 2008ರಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಮುಖ್ಯ ಎಂಜಿನಿಯರ್ ಎಸ್.ಹಿ. ಜಯಚಂದ್ರ ವಿರುದ್ಧ ಸಮನ್ಸ್ ಜಾರಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆಯೂ ನ್ಯಾಯಮೂರ್ತಿಗಳಾದ ಆರ್.ಸುಭಾಷ್ ರೆಡ್ಡಿ ಹಾಗೂ ಹೃಷಿಕೇಶ ರಾಯ್ ಅವರಿದ್ದ ಪೀಠ ಕರ್ನಾಟಕ ಲೋಕಾಯುಕ್ತಕ್ಕೆ ನೋಟಿಸ್ ನೀಡಿದೆ.

ಅರ್ಜಿದಾರರ ಪರ ವಕೀಲರಾದ ದೇವದತ್ತ ಕಾಮತ್ ಹಾಗೂ ನಿಶಾಂತ್ ಪಾಟೀಲ ವಾದ ಮಂಡಿಸಿದರು.

ಡೆಂಗಿ: ರಾಜ್ಯದಲ್ಲಿ ಮತ್ತಷ್ಟು ಹೆಚ್ಚಳ

ಬೆಂಗಳೂರು: ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಕಳೆದ 15 ದಿನಗಳಲ್ಲಿ 776 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. 16 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಮೂರಂಕಿಯಲ್ಲಿದೆ. ಈ ವರ್ಷ ಮೊದಲ ಆರು ತಿಂಗಳ ಅವಧಿಯಲ್ಲಿ ಡೆಂಗಿ ನಿಯಂತ್ರಣದಲ್ಲಿತ್ತು. ಮಳೆ ಹೆಚ್ಚಳವಾದ ಬಳಿಕ ಈ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಈ ವರ್ಷ ರಾಜ್ಯದಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣ ವರದಿಯಾಗಿಲ್ಲ. ಆದರೆ, ಈ ಜ್ವರ ಎದುರಿಸಿದವರ ಸಂಖ್ಯೆ 4,287ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು.

ಈ ವರ್ಷ ಬೆಂಗಳೂರಿನಲ್ಲಿ ಅತೀ ಹೆಚ್ಚು ಪ್ರಕರಣಗಳು ದೃಢಪಟ್ಟಿದ್ದು, 756 ಮಂದಿ ಡೆಂಗಿ ಜ್ವರ ಎದುರಿಸಿದ್ದಾರೆ. ಕಲಬುರಗಿಯಲ್ಲಿ 338, ಉಡುಪಿಯಲ್ಲಿ 312, ಶಿವಮೊಗ್ಗದಲ್ಲಿ 305, ಕೊಪ್ಪಳದಲ್ಲಿ 220, ದಕ್ಷಿಣ ಕನ್ನಡದಲ್ಲಿ 206, ದಾವಣಗೆರೆಯಲ್ಲಿ 209, ಬಳ್ಳಾರಿಯಲ್ಲಿ 200, ವಿಜಯಪುರದಲ್ಲಿ 190, ಹಾವೇರಿಯಲ್ಲಿ 169, ಮಂಡ್ಯದಲ್ಲಿ 161, ಗದಗದಲ್ಲಿ 127, ಯಾದಗಿರಿಯಲ್ಲಿ 122, ಬೀದರ್‌ನಲ್ಲಿ 120, ತುಮಕೂರಿನಲ್ಲಿ 117 ಹಾಗೂ ಚಿತ್ರದುರ್ಗದಲ್ಲಿ 113 ಮಂದಿ ಡೆಂಗಿ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ.

ರಾಜ್ಯದ 27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿವೆ. ಈವರೆಗೆ ಈ ಮಾದರಿಯ ಜ್ವರಕ್ಕೆ ಒಳಗಾದವರ ಸಂಖ್ಯೆ 1,415ಕ್ಕೆ ಏರಿಕೆಯಾಗಿದೆ. ಉತ್ತರ ಕನ್ನಡ, ರಾಯಚೂರು ಹಾಗೂ ದಕ್ಷಿಣ ಕನ್ನಡ ಬಿಟ್ಟು ಉಳಿದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಕರಣಗಳು ಖಚಿತಪಟ್ಟಿವೆ. ಕಲಬುರಗಿ (185), ಶಿವಮೊಗ್ಗ (169), ಕೋಲಾರ (108), ತುಮಕೂರು (104) ಹಾಗೂ ಯಾದಗಿರಿ (103), ಬೆಂಗಳೂರು ನಗರ (100) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ.

ಸವಾರನ ಮೇಲೆ ಗುಂಡು: ಕಾರು ಮಾಲೀಕ ಬಂಧನ

ಬೆಂಗಳೂರು: ನಡುರಸ್ತೆಯಲ್ಲೇ ಬೈಕ್ ಸವಾರ ಅನಿಲ್ ಎಂಬುವರ ಮೇಲೆ ಎರಡು ಸುತ್ತು ಗುಂಡು ಹಾರಿಸಿ ಪರಾರಿಯಾಗಿದ್ದ ಆರೋಪಿ ರವೀಶ್ ಗೌಡ (44) ಎಂಬಾತನನ್ನು ಯಶವಂತಪುರ ಪೊಲೀಸರು ಬಂಧಿಸಿದ್ದಾರೆ.

‘ಮಹಾಲಕ್ಷ್ಮಿ ಬಡಾವಣೆಯಲ್ಲಿ ಹೋಟೆಲ್ ನಡೆಸುತ್ತಿರುವ ರವೀಶ್ ಗೌಡ, ಅ. 13ರಂದು ರಾತ್ರಿ 9.25ರ ಸುಮಾರಿಗೆ ಕೃತ್ಯ ಎಸಗಿದ್ದ. ಕೊಲೆ ಯತ್ನ, ಹಲ್ಲೆ ಆರೋಪದಡಿ ಹಾಗೂ ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಆತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪರಾರಿಯಾಗಿದ್ದ ಆರೋಪಿಯನ್ನು ಪತ್ತೆ ಮಾಡಲು ವಿಶೇಷ ತಂಡ ರಚಿಸಲಾಗಿತ್ತು. ಸೂಕ್ತ ಪುರಾವೆ ಸಂಗ್ರಹಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಆತನ ಬಂದೂಕು ಜಪ್ತಿ ಮಾಡಲಾಗಿದೆ. ಆತ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದೂ ತಿಳಿಸಿದರು.

ಗಲಾಟೆ: ‘ಎಂ.ಎಸ್. ರಾಮಯ್ಯ ಆಸ್ಪತ್ರೆ ಹಿಂಬದಿಯ ಪ್ರವೇಶ ದ್ವಾರದ ವೃತ್ತದಲ್ಲಿ ಆರೋಪಿ ರವೀಶ್ ಗೌಡ, ತನ್ನ ಬಿಎಂಡಬ್ಲ್ಯು ಕಾರಿನಲ್ಲಿ ಹೊರಟಿದ್ದ. ಇದೇ ಸಂದರ್ಭದಲ್ಲಿ ಅನಿಲ್, ಬೈಕ್ ಚಲಾಯಿಸಿಕೊಂಡು ಅದೇ ಮಾರ್ಗದಲ್ಲಿ ಬರುತ್ತಿದ್ದರು. ದಟ್ಟಣೆಯಲ್ಲಿ ಕಾರಿಗೆ ಬೈಕ್ ಸ್ವಲ್ಪ ತಾಗಿತ್ತು. ಅದೇ ವಿಚಾರವಾಗಿ ಮಾತಿನ ಚಕಮಕಿ ಶುರುವಾಗಿತ್ತು. ಸವಾರ ಅನಿಲ್ ಕ್ಷಮೆಯಾಚಿಸಿದ್ದರು. ಅಷ್ಟಕ್ಕೆ ಸುಮ್ಮನಾಗದ ಆರೋಪಿ, ಕಾರಿನಲ್ಲಿದ್ದ ಬಂದೂಕಿನಿಂದ ಸವಾರನತ್ತ ಎರಡು ಸುತ್ತು ಗುಂಡು ಹಾರಿಸಿದ್ದ. ಸ್ಥಳದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿತ್ತು. ‘ಅದೃಷ್ಟವಶಾತ್ ಸವಾರನಿಗೆ ಗುಂಡು ತಗುಲಿರಲಿಲ್ಲ’ ಎಂದೂ ಮೂಲಗಳು ತಿಳಿಸಿವೆ.

‘ಆರೋಪಿ ಅಪರಾಧಗಳ ಬಗ್ಗೆ ಮಾಹಿತಿ’

‘ತನಗೆ ಹಲವರಿಂದ ಜೀವಭಯವಿರುವುದಾಗಿ ಹೇಳಿ ಆರೋಪಿ ರವೀಶ್ ಗೌಡ ಪರವಾನಗಿ ಪಡೆದು ಬಂದೂಕು ಇಟ್ಟುಕೊಂಡಿದ್ದ. ಅದನ್ನು ನಿಯಮಬಾಹಿರವಾಗಿ ಹಲವು ಬಾರಿ ಬಳಸಿ ಅಪರಾಧ ಎಸಗಿರುವ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಸಾರ್ವಜನಿಕರ ಹಿತಕ್ಕಾಗಿ ಪರವಾನಗಿ ನೀಡಲಾಗಿದ್ದ ಬಂದೂಕನ್ನು ದುರ್ಬಳಕೆ ಮಾಡಿದ್ದಾನೆ. ಆದರೆ, ದಟ್ಟಣೆ ಇರುವ ಸ್ಥಳದಲ್ಲಿ ಆರೋಪಿ ಬಂದೂಕು ಬಳಸಿದ್ದಾನೆ. ಆಕಸ್ಮಾತ್, ಸವಾರ ಅನಿಲ್ ಅವರಿಗೆ ಗುಂಡು ತಗುಲಿದ್ದರೆ ಪ್ರಾಣ ಹೋಗುತ್ತಿತ್ತು. ರವೀಶ್, ಮತ್ತಷ್ಟು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಮಾಹಿತಿಯೂ ಇದೆ’ ಎಂದೂ ತಿಳಿಸಿದರು.





ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರರು– ಪಿಟಿಐ ಚಿತ್ರ

ಕೋಲ್ಕತ್ತ ನೈಟ್ ರೈಡರ್ಸ್‌ಗೆ ಸೋಲು: ಡುಪ್ಲೆಸಿ ಅಬ್ಬರ; ಮಿಂಚಿದ ಮೋಯಿನ್ ಅಲಿ, ಕನ್ನಡಿಗ ಉತ್ತಪ್ಪ

ಚೆನ್ನೈ ಸೂಪರ್ 'ಕಿಂಗ್ಸ್'ಗೆ ಕಿರೀಟ

ದುಬೈ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮಣಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು. ಮಹೇಂದ್ರ ಸಿಂಗ್ ಧೋನಿ ನಾಯಕತ್ವಕ್ಕೆ ನಾಲ್ಕನೇ ಐಪಿಎಲ್ ಪ್ರಶಸ್ತಿ ಒಲಿಯಿತು.

ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಅಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ಬಳಗ ಏಯಾನ್ ಮಾರ್ಗನ್ ನಾಯಕತ್ವದ ಕೋಲ್ಕತ್ತವನ್ನು 27 ರನ್‌ಗಳಿಂದ ಮಣಿಸಿತು. ಬೌಲರ್‌ಗಳು ನಿಖರ ಲೆಕ್ಕಾಚಾರದಿಂದ ನಡೆಸಿದ ದಾಳಿಗೆ ಚುರುಕಿನ ಫೀಲ್ಡಿಂಗ್ ಮತ್ತು ಮೋಹಕ ಕ್ಯಾಚ್‌ಗಳು ಬಲ ತುಂಬಿದವು. ಹೀಗಾಗಿ ಚೆನ್ನೈ ತಂಡದ ಗೆಲುವಿನ ಹಾದಿ ಸುಲಭವಾಯಿತು.

ಆರಂಭಿಕ ಬ್ಯಾಟರ್ ಫಫ್ ಡು ಪ್ಲೆಸಿ ಒಳಗೊಂಡಂತೆ ಅಗ್ರ ಕ್ರಮಾಂಕದ ನಾಲ್ವರ ಅಮೋಘ ಬ್ಯಾಟಿಂಗ್ ನೆರವಿನಿಂದ ಎದುರಾಳಿ ತಂಡಕ್ಕೆ 193 ರನ್‌ಗಳ ಕಠಿಣ ಗೆಲುವಿನ ಗುರಿ ನೀಡುವಲ್ಲಿ ಚೆನ್ನೈ ಯಶಸ್ವಿಯಾಯಿತು. ಈ ಸವಾಲನ್ನು ಮೀರಲು ಕೋಲ್ಕತ್ತ ನೈಟ್ ರೈಡರ್ಸ್ ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾದವು.

ಆರಂಭಿಕ ಬ್ಯಾಟರ್‌ಗಳಾದ ಶುಭಮನ್ ಗಿಲ್ (51; 43 ಎಸೆತ, 6 ಬೌಂಡರಿ) ಮತ್ತು ವೆಂಕಟೇಶ್ ಅಯ್ಯರ್ (50; 32 ಎ, 5 ಬೌಂ, 3 ಸಿ) ನಿಧಾನಗತಿಯಲ್ಲಿ ಇನಿಂಗ್ಸ್ ಆರಂಭಿಸಿ ನಂತರ ಅಬ್ಬರಿಸಿದರು. ಆದರೂ 64 ಎಸೆತಗಳಲ್ಲಿ 91 ರನ್ ಗಳಿಸಲಷ್ಟೇ ಇವರಿಗೆ ಸಾಧ್ಯವಾಯಿತು.ಈ ಜೊತೆಯಾಟ ಮುರಿದು ಬಿದ್ದ ನಂತರ ಕೋಲ್ಕತ್ತದ ಯಾವ ಬ್ಯಾಟರ್‌ಗೂ ಕ್ರೀಸ್‌ನಲ್ಲಿ ನೆಲೆಯೂರಲು ಆಗಲಿಲ್ಲ. ಆರು ಮಂದಿ ಎರಡಂಕಿ ದಾಟಲಾರದೆ ವಾಪಸಾದರೆ, ಕೊನೆಯ ಓವರ್‌ಗಳಲ್ಲಿ ಲಾಕಿ ಫರ್ಗ್ಯುಸನ್ ಮತ್ತು ಶಿವಂ ಮಾವಿ ಬೌಂಡರಿ–ಸಿಕ್ಸರ್‌ಗಳನ್ನು ಸಿಡಿಸಿ ರಂಜಿಸಿದರು; ತಂಡದ ಸೋಲಿನ ಅಂತರವನ್ನೂ ಕಡಿಮೆ ಮಾಡಿದರು. 200ನೇ ಪಂದ್ಯ ಆಡಿದ ರವೀಂದ್ರ ಜಡೇಜ ಎರಡು ವಿಕೆಟ್‌ಗಳನ್ನು ಉರುಳಿಸಿ, ಎರಡು ಕ್ಯಾಚ್ ಪಡೆದು ಮಿಂಚಿದರು.

ಬಹುಮಾನ ಮೊತ್ತ

ಚಾಂಪಿಯನ್	ರನ್ನರ್ ಅಪ್
₹20 ಕೋಟಿ	₹12.5 ಕೋಟಿ

ಚೆನ್ನೈ ಪ್ರಶಸ್ತಿ ಗೆದ್ದ ವರ್ಷಗಳು
2010, 2011, 2018, 2021



ರಾಬಿನ್ ಉತ್ತಪ್ಪ

ಡುಪ್ಲೆಸಿ ಅಬ್ಬರ: ಬೌಲರ್‌ಗಳ ಪರದಾಟ:ಟಾಸ್ ಗೆದ್ದ ಕೋಲ್ಕತ್ತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಏಯಾನ್ ಮಾರ್ಗನ್ ಮಾಡಿದ ನಿರ್ಧಾರ ತಪ್ಪು ಎಂದು ಫಫ್ ಡುಪ್ಲೆಸಿ (86;59ಎ, 7ಬೌಂಡರಿ, 3ಸಿಕ್ಸರ್) ಹಾಗೂ ಋತುರಾಜ್ ಗಾಯಕವಾಡ್ (32; 27ಎ,3ಬೌಂ, 1ಸಿ) ತೋರಿಸಿಕೊಟ್ಟರು. ಇವರಿಬ್ಬರ ಆಟಕ್ಕೆ ಮೊದಲ ಪವರ್‌ಪ್ಲೇನಲ್ಲಿ 50 ರನ್‌ಗಳು ಹರಿದುಬಂದವು. ಇವರಿಬ್ಬರು ಹಾಕಿದ ಬುನಾದಿಯ ಮೇಲೆ ಮಹೇಂದ್ರಸಿಂಗ್ ಧೋನಿ ಬಳಗ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 192 ರನ್ ಗಳಿಸಿತು.

ಎರಡನೇ ಕ್ವಾಲಿಫೈಯರ್‌ನಲ್ಲಿ ಕೋಲ್ಕತ್ತ ತಂಡದ ಗೆಲುವಿನ ರೂವಾರಿಯಾಗಿದ್ದ ಸುನೀಲ್ ನಾರಾಯಣ್ ಈ ಪಂದ್ಯದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದರು. ಒಂಬತ್ತನೇ ಓವರ್‌ನಲ್ಲಿ ಋತುರಾಜ್ ವಿಕೆಟ್ ಗಳಿಸಿದ ಅವರು ಮೊದಲ ವಿಕೆಟ್ ಜೊತೆಯಾಟವನ್ನು ಮುರಿದರು.

ಆಗ ಫಫ್ ಜೊತೆಗೂಡಿದ ಕನ್ನಡಿಗ ರಾಬಿನ್ ಉತ್ತಪ್ಪ (31; 15ಎ, 3ಸಿ) ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದರು. 12ನೇ ಓವರ್‌ನಲ್ಲಿ ಅವರಿಗೆ ಒಂದು ಜೀವದಾನವೂ ಲಭಿಸಿದ್ದು ಕೋಲ್ಕತ್ತಕ್ಕೆ ದುಬಾರಿಯಾಯಿತು. ಎರಡನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು.

ಸುನೀಲ್ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಉತ್ತಪ್ಪ ಬಿದ್ದರು. ಆದರೆ ಇನ್ನೊಂದು ಬದಿಯಲ್ಲಿದ್ದ ಫಫ್ ಬ್ಯಾಟ್‌ನಿಂದ ರನ್‌ಗಳು ಸರಾಗವಾಗಿ ಹರಿದುಬಂದವು. ಕೇವಲ 35 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದ ಫಫ್ ನಂತರವೂ ಅಬ್ಬರ ಮುಂದುವರಿಸಿದರು. ಮೋಯಿನ್ ಅಲಿ (ಔಟಾಗದೆ 37, 20ಎ, 2ಬೌಂ, 3ಸಿ) ಕೂಡ ಮಿಂಚಿದರು. ಇವರಿಬ್ಬರ ಅಬ್ಬರಕ್ಕೆ ಬೌಲರ್‌ಗಳು ಬಸವಳಿದರು. ಇಡೀ ಟೂರ್ನಿಯಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿರುವ ಲಾಕಿ ಫರ್ಗ್ಯುಸನ್ ಇಲ್ಲಿ ದುಬಾರಿಯಾದರು. ನಾಲ್ಕು ಓವರ್‌ಗಳಲ್ಲಿ 56 ರನ್‌ಗಳನ್ನು ಕೊಟ್ಟರು. ಸ್ಪಿನ್ನರ್ ಶಕೀಬ್ ಅಲ್ ಹಸನ್ ಮೂರು ಓವರ್‌ಗಳಲ್ಲಿ 33 ರನ್ ಬಿಟ್ಟುಕೊಟ್ಟರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 3ಕ್ಕೆ 192 (20 ಓವರ್)

ಋತುರಾಜ್ ಸಿ ಶಿವಂ ಬಿ ನಾರಾಯಣ್ 32 (27 ಎ, 4x3, 6x1), ಡುಪ್ಲೆಸಿ ಸಿ ವೆಂಕಟೇಶ್ ಬಿ ಶಿವಂ 86 (59 ಎ, 4x7, 6x3), ಉತ್ತಪ್ಪ ಎಲ್‌ಬಿಡಬ್ಲ್ಯು ನಾರಾಯಣ್ 31 (15 ಎ, 6x3), ಮೋಯಿನ್ ಔಟಾಗದೆ 37 (20 ಎ, 4x2, 6x3)

ಇತರೆ: (ಬೈ 1, ಲೆಗ್ ಬೈ 1, ನೋ ಬಾಲ್ 1, ವೈಡ್ 3) 6

ವಿಕೆಟ್ ಪತನ: 1-61 (ಋತುರಾಜ್ ಗಾಯಕವಾಡ್, 8.1), 2-124 (ರಾಬಿನ್ ಉತ್ತಪ್ಪ, 13.3), 3-192 (ಫಫ್ ಡು ಪ್ಲೆಸಿ, 19.6)

ಬೌಲಿಂಗ್: ಶಕೀಬ್ ಅಲ್ ಹಸನ್ 3-0-33-0, ಶಿವಂ ಮಾವಿ 4-0-32-1, ಲೋಕಿ ಫರ್ಗ್ಯುಸನ್ 4-0-56-0, ವರುಣ್ ಚಕ್ರವರ್ತಿ 4-0-38-0, ಸುನಿಲ್ ನಾರಾಯಣ್ 4-0-26-2, ವೆಂಕಟೇಶ್ ಅಯ್ಯರ್ 1-0-5-0

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ 165 (20 ಓವರ್)

ಗಿಲ್ ಎಲ್‌ಬಿಡಬ್ಲ್ಯು ಚಾಹರ್ 51 (43ಎ, 4x6), ವೆಂಕಟೇಶ್ ಸಿ ಜಡೇಜ ಬಿ ಠಾಕೂರ್ 50 (32ಎ, 4X5, 6X3), ರಾಣಾ ಸಿ ಡುಪ್ಲೆಸಿ ಬಿ ಠಾಕೂರ್ 0 (1ಎ), ನಾರಾಯಣ್ ಸಿ ಜಡೇಜ ಬಿ ಹ್ಯಾಜಲ್‌ವುಡ್ 2 (2ಎ), ಮಾರ್ಗನ್ ಸಿ ಚಾಹರ್ ಬಿ ಹ್ಯಾಜಲ್‌ವುಡ್ 4 (8ಎ), ಕಾರ್ತಿಕ್ ಸಿ ರಾಯುಡು ಬಿ ಜಡೇಜ 9 (7ಎ, 6X1), ಶಕೀಬ್ ಎಲ್‌ಬಿಡಬ್ಲ್ಯು ಜಡೇಜ 0 (1ಎ), ತ್ರಿಪಾಠಿ ಸಿ ಮೋಯಿನ್ ಬಿ ಠಾಕೂರ್ 2 (3ಎ), ಫರ್ಗ್ಯುಸನ್ ಔಟಾಗದೆ 18 (11ಎ, 4X1, 6X1), ಮಾವಿ ಸಿ ಚಾಹರ್ ಬಿ ಬ್ರಾವೊ 20 (13ಎ, 4X1, 6X2), ವರುಣ್ ಔಟಾಗದೆ 0

ಇತರೆ: (ನೋಬಾಲ್ 1 , ವೈಡ್ 8) 9

ವಿಕೆಟ್ ಪತನ: 1-91 (ವೆಂಕಟೇಶ್ ಅಯ್ಯರ್, 10.4), 2-93 (ನಿತೀಶ್ ರಾಣಾ 10.6), 3-97 (ಸುನಿಲ್ ನಾರಾಯಣ್, 11.3), 4-108 (ಶುಭಮನ್ ಗಿಲ್, 13.2), 5-119 (ದಿನೇಶ್ ಕಾರ್ತಿಕ್, 14.5), 6-120 (ಶಕೀಬ್ ಅಲ್ ಹಸನ್, 14.6), 7-123 (ರಾಹುಲ್ ತ್ರಿಪಾಠಿ, 15.4), 8-125 (ಏಯಾನ್ ಮಾರ್ಗನ್, 16.3), 9-164 (ಶಿವಂ ಮಾವಿ, 19.5)

ಬೌಲಿಂಗ್: ದೀಪಕ್ ಚಾಹರ್ 4-0-32-1, ಜೋಶ್ ಹ್ಯಾಜಲ್‌ವುಡ್ 4-0-29-2, ಶಾರ್ದೂಲ್ ಠಾಕೂರ್ 4-0-38-3, ಡ್ವೇನ್ ಬ್ರಾವೊ 4-0-29-1, ರವೀಂದ್ರ ಜಡೇಜ 4-0-37-2

ಫಲಿತಾಂಶ: ಚೆನ್ನೈಸೂಪರ್ ಕಿಂಗ್ಸ್‌ಗೆ 27 ರನ್‌ಗಳ ಜಯ ಮತ್ತು ಪ್ರಶಸ್ತಿ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಆರ್‌ಸಿಬಿ	32
ಆವೇಶ್ ಖಾನ್	ಡೆಲ್ಲಿ	24
ಬೂಮ್ರಾ	ಮುಂಬೈ	21

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	635
ಡುಪ್ಲೆಸಿ	ಚೆನ್ನೈ	633
ಕೆ.ಎಲ್.ರಾಹುಲ್	ಪಂಜಾಬ್	626

ಟಿ20 ಕ್ರಿಕೆಟ್: ಧೋನಿ 'ತ್ರಿಶತಕ'



ಮಹೇಂದ್ರಸಿಂಗ್ ಧೋನಿ– ಪಿಟಿಐ ಚಿತ್ರ

ದುಬೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಶುಕ್ರವಾರ ವಿಶ್ವದಾಖಲೆ ಮಾಡಿದರು.

ಟಿ20 ಕ್ರಿಕೆಟ್‌ನಲ್ಲಿ 300 ಪಂದ್ಯಗಳಿಗೆ ನಾಯಕತ್ವ ವಹಿಸಿದ ಮೊದಲ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ನಾಯಕನಾಗಿ ಕಣಕ್ಕಿಳಿಯುವ ಮೂಲಕ ಈ ಸಾಧನೆ ಮಾಡಿದರು. 40 ವರ್ಷದ ಧೋನಿಗೆ ಐಪಿಎಲ್‌ನಲ್ಲಿ ಇದು ಒಟ್ಟು 10ನೇ ಫೈನಲ್ ಪಂದ್ಯವಾಗಿದೆ.

ಚೆನ್ನೈ ಸೂಪರ್ ಕಿಂಗ್ಸ್ ಪರವಾಗಿ ಒಂಬತ್ತನೇ ಫೈನಲ್ ಆಡುತ್ತಿದ್ದಾರೆ. ಅವರು ಚೆನ್ನೈ ತಂಡವನ್ನು 12 ಆವೃತ್ತಿಗಳಲ್ಲಿ ನಾಯಕರಾಗಿ ಮುನ್ನಡೆಸಿದ್ದಾರೆ. ತಂಡದ ಪರ 214 ಪಂದ್ಯಗಳನ್ನು ಆಡಿದ್ದಾರೆ ಇನ್ನುಳಿದ ಎರಡು ಆವೃತ್ತಿಗಳಲ್ಲಿ ಅವರು ಪುಣೆ ಸೂಪರ್ ಜೈಂಟ್ಸ್ ತಂಡದಲ್ಲಿ ಆಡಿದ್ದರು. ಆ ತಂಡಕ್ಕೆ ಒಂದು ವರ್ಷ ನಾಯಕರಾಗಿದ್ದರು.

ಧೋನಿ ಆರು ಟ್ವೆಂಟಿ–20 ವಿಶ್ವಕಪ್ ಟೂರ್ನಿಗಳಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ್ದರು. 2007ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲಿ ಅವರ ನಾಯಕತ್ವದ ಭಾರತ ತಂಡವು ಚಾಂಪಿಯನ್ ಆಗಿತ್ತು.

'2005-06ರಲ್ಲಿ ನಾವು ಟಿ20 ಆಡಲು ಆರಂಭಿಸಿದ್ದೆವು. ತದನಂತರದ ವರ್ಷಗಳಲ್ಲಿ ಫ್ರ್ಯಾಂಚೈಸಿ ಕ್ರಿಕೆಟ್ ಲೀಗ್‌ಗಳಲ್ಲಿ ಹೆಚ್ಚು ಚುಟುಕು ಪಂದ್ಯಗಳು ನಡೆದವು. ಆದರೆ, ಕಳೆದ ಐದು ವರ್ಷಗಳಲ್ಲಿ ಅಂತರರಾಷ್ಟ್ರೀಯ ಟಿ20 ಪಂದ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿವೆ' ಎಂದು ಪಂದ್ಯದ ಟಾಸ್ ಸಂದರ್ಭದಲ್ಲಿ ಧೋನಿ ಹೇಳಿದರು.

ವೆಸ್ಟ್ ಇಂಡೀಸ್‌ನ ಆಟಗಾರ ಡ್ಯಾರೆನ್ ಸಾಮಿ 208 ಟಿ20 ಪಂದ್ಯಗಳಲ್ಲಿ ನಾಯಕತ್ವ ವಹಿಸಿ ಎರಡನೇ ಸ್ಥಾನದಲ್ಲಿದ್ದಾರೆ.

ಪಿವಿಆರ್ ಸಿನೆಮಾದಲ್ಲಿ ಐಸಿಸಿ ವಿಶ್ವಕಪ್ ಪ್ರಸಾರ

ಮುಂಬೈ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಪಂದ್ಯಗಳು ಪಿವಿಆರ್ ಸಿನಿಮಾ ಮಲ್ಟಿಪ್ಲೆಕ್ಸ್‌ನಲ್ಲಿ ಪ್ರಸಾರವಾಗಲಿವೆ.

ಇದೇ 17ರಿಂದ ನವೆಂಬರ್ 14ರವರೆಗೆ ಯುಎಇ ಮತ್ತು ಒಮನ್‌ನಲ್ಲಿ ಟೂರ್ನಿಯು ನಡೆಯಲಿದೆ.

'ಸೆಮಿಫೈನಲ್ ಮತ್ತು ಫೈನಲ್ ಸೇರಿದಂತೆ ಪಂದ್ಯಗಳನ್ನು ಲೈವ್ ಸ್ಕ್ರೀನಿಂಗ್ ಮಾಡಲು ಹಕ್ಕುಗಳನ್ನು ಪಡೆದುಕೊಂಡಿದ್ದೇವೆ' ಎಂದು ಪಿವಿಆರ್ ಪ್ರಕಟಣೆಯಲ್ಲಿ ತಿಳಿಸಿದೆ.

ನವದೆಹಲಿ, ಮುಂಬೈ, ಪುಣೆ ಮತ್ತು ಅಹಮದಾಬಾದ್ ಸೇರಿದಂತೆ 35ಕ್ಕೂ ಹೆಚ್ಚು ನಗರಗಳ 75 ಮಲ್ಟಿಪ್ಲೆಕ್ಸ್‌ಗಳಲ್ಲಿ ಪಂದ್ಯಗಳು ಪ್ರಸಾರವಾಗಲಿವೆ.

'ದೊಡ್ಡ ಪರದೆಯಲ್ಲಿ ಕ್ರಿಕೆಟ್ ಪಂದ್ಯಗಳನ್ನು ನೋಡುವುದು ಬಹಳ ವಿಶೇಷವಾದ ಅನುಭವ. ಕ್ರೀಡಾಂಗಣಗಳಲ್ಲಿ ಕುಳಿತು ನೋಡುವಂತಹ ಭಾವನೆ ಪ್ರೇಕ್ಷಕರದ್ದಾಗುತ್ತದೆ' ಎಂದು ಪಿವಿಆರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೌತಮ್ ದತ್ತಾ ಹೇಳಿದ್ದಾರೆ.

ಬ್ಯಾಡ್ಮಿಂಟನ್: ಭಾರತಕ್ಕೆ ಸೋಲು

ಆಹಸ್, ಡೆನ್ಮಾರ್ಕ್ (ಪಿಟಿಐ): ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ಮಹಿಳಾ ತಂಡದ ಸವಾಲು ಅಂತ್ಯಗೊಂಡಿದೆ. ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜಪಾನ್ 3–0ಯಿಂದ ಭಾರತದ ಎದುರು ಗೆದ್ದಿತು.

ಜಪಾನ್ ಎದುರು ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಮಾಳವಿಕಾ ಬಾನ್ಸೋದ್ ಅವರು 12-21, 17-21ರಿಂದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿರುವ ಅಕಾನೆ ಯಮಗುಚಿ ಎದುರು ಎಡವಿದರು. ಕೇವಲ 24 ನಿಮಿಷಗಳಲ್ಲಿ ಈ ಹಣಾಹಣಿ ಅಂತ್ಯವಾಯಿತು.

ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ–ಋತುಪರ್ಣಾ ಪಂಡಾ ಜೋಡಿಯು 8–21, 10–21ರಿಂದ ಯೂಕಿ ಫುಕುಶಿಮಾ ಮತ್ತು ಮಯು ಮತ್ಸುಮೊಟೊ ಎದುರು ನಿರಾಸೆ ಅನುಭವಿಸಿದರು. ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಅದಿತಿ ಭಟ್ ಕೂಡ ಮುಗ್ಗರಿಸಿದರು. ಕೇವಲ 29 ನಿಮಿಷಗಳಲ್ಲಿ ಮುಕ್ತಾಯವಾದ ಸೆಣಸಾಟದಲ್ಲಿ ಅವರು 6-21 7-21ರಿಂದ ಸಯಕಾ ತಕಹಶಿ ಎದುರು ಸೋತರು. 'ಬೆಸ್ಟ್ ಆಫ್ ಫೈವ್' ಮಾದರಿಯ ಈ ಪಂದ್ಯದಲ್ಲಿ ಮೂರು ಸುತ್ತು ತನ್ನದಾಗಿಸಿಕೊಂಡಿತು.

ಸ್ಯಾಫ್ ಫೈನಲ್: ಚೆಟ್ರಿ ಬಳಗಕ್ಕೆ 8ನೇ ಪ್ರಶಸ್ತಿ ಮೇಲೆ ಕಣ್ಣು

ಭಾರತಕ್ಕೆ ನೇಪಾಳ ಸವಾಲು

ಮಾಲಿ (ಪಿಟಿಐ): ಆರಂಭದಲ್ಲಿ ನೀರಸ ಆಟವಾಡಿದರೂ ನಂತರ ಚೇತರಿಸಿಕೊಂಡು ಗೆಲುವಿನ ಹಾದಿಯಲ್ಲಿ ಹೆಜ್ಜೆ ಹಾಕಿರುವ ಭಾರತ ಫುಟ್‌ಬಾಲ್ ತಂಡ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿದೆ.

ಮಾಲ್ಡಿವ್ಸ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಭಾರತ ತಂಡ ನೇಪಾಳವನ್ನು ಎದುರಿಸಲಿದೆ. ಎಂಟನೇ ಪ್ರಶಸ್ತಿಯ ಮೇಲೆ ಭಾರತ ಕಣ್ಣಿಟ್ಟಿದ್ದರೆ ಮೊದಲ ಬಾರಿ ಫೈನಲ್ ಪ್ರವೇಶಿಸಿರುವ ನೇಪಾಳ ಯಶಸ್ಸಿನ ನಿರೀಕ್ಷೆಯೊಂದಿಗೆ ಕಣಕ್ಕೆ ಇಳಿಯಲಿದೆ.

ಇದು ಸ್ಯಾಫ್ ಚಾಂಪಿಯನ್‌ಷಿಪ್‌ನ 13ನೇ ಆವೃತ್ತಿ. ಭಾರತ ಈ ವರೆಗೆ ಎಲ್ಲ ಟೂರ್ನಿಗಳಲ್ಲೂ ಆಧಿಪತ್ಯ ಸ್ಥಾಪಿಸಿದೆ. ತಂಡಕ್ಕೆ ಇದು 12ನೇ ಫೈನಲ್. 2003ರಲ್ಲಿ ಮೂರನೇ ಸ್ಥಾನ ಗಳಿಸಿದ್ದು ತಂಡದ ಈ ವರೆಗಿನ ಅತ್ಯಂಕ ಕಳಪೆ ಪ್ರದರ್ಶನವಾಗಿದೆ. ನೇಪಾಳ ವಿರುದ್ಧ ತಂಡ ಗೆದ್ದರೆ ಇಗರ್ ಸ್ಟಿಮ್ಯಾಚ್ ಅವರ ಮಾರ್ಗದರ್ಶನದಲ್ಲಿ ತಂಡದ ಮೊದಲ ಪ್ರಶಸ್ತಿ ಸಾಧನೆ ಆಗಲಿದೆ.

ಸ್ಟಿಮ್ಯಾಚ್ 2019ರಿಂದ ಕೋಚ್ ಆಗಿದ್ದಾರೆ. ತಂಡಕ್ಕೆ ಗೆಲುವು ತಂದುಕೊಟ್ಟರೆ ಈ ಸ್ಯಾಫ್ ಚಾಂಪಿಯನ್‌ಷಿಪ್ ಗೆದ್ದುಕೊಟ್ಟ ಆರನೇ ಕೋಚ್ ಮತ್ತು ಮೂರನೇ ವಿದೇಶಿ ಕೋಚ್ ಅಗಲಿದ್ದಾರೆ ಅವರು. 1993ರಲ್ಲಿ ಜಿರಿ ಪೆಸೆಕ್ ಮತ್ತು 2015ರಲ್ಲಿ ಸ್ಟೀಫನ್ ಕಾನ್‌ಸ್ಟಂಟೈನ್ ಈ ಸಾಧನೆ ಮಾಡಿದ್ದಾರೆ. ಮೊದಲ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಳ್ಳಲು ಮಾತ್ರ ಭಾರತಕ್ಕೆ ಸಾಧ್ಯವಾಗಿತ್ತು. ಈ ಸಂದರ್ಭದಲ್ಲಿ ಸುನಿಲ್ ಚೆಟ್ರಿ ಬಳಗ ಫೈನಲ್ ಪ್ರವೇಶಿಸುವುದು ಕಷ್ಟ ಸಾಧ್ಯ ಎಂದೆನಿಸಿತ್ತು. ಆದರೆ ನೇಪಾಳ ಎದುರಿನ ಜಯ ತಂಡದಲ್ಲಿ ಭರವಸೆ ಮೂಡಿಸಿತ್ತು. ಕೊನೆಯ ಮತ್ತು ನಿರ್ಣಾಯಕ ಪಂದ್ಯದಲ್ಲಿ ಮಾಲ್ಡಿವ್ಸ್ ವಿರುದ್ಧ ಭರ್ಜರಿ ಜಯ ಗಳಿಸಿ ಫೈನಲ್ ಪ್ರವೇಶ ಖಾತರಿಪಡಿಸಿಕೊಂಡಿತ್ತು. ಈ ಜಯ ತಂಡದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಈ ಹಿಂದಿನ ಪಂದ್ಯಗಳಲ್ಲಿ ನೇಪಾಳ ವಿರುದ್ಧ ಭಾರತ ಪಾರಮ್ಯ ಮೆರೆದಿದೆ. ಹೀಗಾಗಿ ಫೈನಲ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡ ಎಂದೆನಿಸಿಕೊಂಡಿದೆ. ಈ ವರ್ಷ ಉಭಯ ತಂಡಗಳು ಮೂರು ಪಂದ್ಯಗಳನ್ನು ಆಡಿದ್ದು ಭಾರತ ಎರಡರಲ್ಲಿ ಗೆದ್ದು ಒಂದನ್ನು ಡ್ರಾ ಮಾಡಿಕೊಂಡಿದೆ. ಸ್ಯಾಫ್ ಚಾಂಪಿಯನ್‌ಷಿಪ್‌ಗಿಂತ ಮೊದಲು ಕಠ್ಮಂಡುವಿನಲ್ಲಿ ಎರಡು ಸ್ನೇಹಪರ ಪಂದ್ಯಗಳು ನಡೆದಿದ್ದವು. ಒಂದರಲ್ಲಿ ಭಾರತ 1–1ರ ಡ್ರಾ ಸಾಧಿಸಿದ್ದು ಮತ್ತೊಂದರಲ್ಲಿ 2–1ರ ಜಯ ಗಳಿಸಿತ್ತು.



ತಂಡದ ಆಟಗಾರರ ಜೊತೆ ಇಗರ್ ಸ್ಟಿಮ್ಯಾಚ್ –ಎಐಎಫ್‌ಎಫ್ ಚಿತ್ರ

ಉಭಯ ತಂಡಗಳ ಬಲಾಬಲ

ಭಾರತ		ನೇಪಾಳ
2	ಕ್ಲೀನ್ ಶೀಟ್	1
5	ಗೋಲುಗಳು	5
42	ಶಾಟ್ಸ್	35
15	ಗುರಿಯತ್ತ ಶಾಟ್	13

ಹೆಚ್ಚು ಗೋಲು ಗಳಿಸಿದ ಐವರು

ಆಟಗಾರ	ದೇಶ	ಗೋಲು
ಸುನಿಲ್ ಚೆಟ್ರಿ	ಭಾರತ	4
ಅಂಜನ್ ಬಿಸ್ಟ	ನೇಪಾಳ	2
ಮನೀಷ್ ಡಾಂಗಿ	ನೇಪಾಳ	1
ಆಯುಷ್ ಘಲನ್	ನೇಪಾಳ	1
ಸುಮನ್ ಲಾಮ	ನೇಪಾಳ	1

ಆರಂಭ: ರಾತ್ರಿ 8.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಯೂರೊ ಸ್ಪೋರ್ಟ್

ಫುಟ್‌ಬಾಲ್ ಆಟಗಾರರ ಕುಟುಂಬ ಸ್ಥಳಾಂತರ

ಲಾಸೇನ್ (ಪಿಟಿಐ): ಮಹಿಳೆಯರು ಸೇರಿದಂತೆ ನೂರರಷ್ಟು ಫುಟ್‌ಬಾಲ್ ಪಟುಗಳ ಕುಟುಂಬಗಳನ್ನು ಅಫ್ಗಾನಿಸ್ತಾನದಿಂದ ಸ್ಥಳಾಂತರಿಸಲಾಗಿದೆ ಎಂದು ಫಿಫಾ ತಿಳಿಸಿದೆ. ಸಂಕೀರ್ಣ ಸಂಧಾನದ ಮೂಲಕ ಕತಾರ್‌ನ ಸಹಕಾರದೊಂದಿಗೆ ಕುಟುಂಬಗಳನ್ನು ಸುರಕ್ಷಿತ ತಾಣಗಳಿಗೆ ತಲುಪಿಸಲಾಗಿದೆ ಎಂದು ಅದು ವಿವರಿಸಿದೆ.

'ಆಗಸ್ಟ್‌ನಲ್ಲಿ ಉಂಟಾದ ಕ್ಷಿಪ್ರ ಬೆಳವಣಿಗೆಯ ನಂತರ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಪಡೆ ಆಡಳಿತದ ಚುಕ್ಕಾಣಿ ಹಿಡಿದಿತ್ತು. ಈ ಹಿನ್ನೆಲೆಯಲ್ಲಿ ಫುಟ್‌ಬಾಲ್ ಪಟುಗಳ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಸ್ಥಳಾಂತರ ಅನಿವಾರ್ಯವಾಗಿತ್ತು. ಇದು ಅತ್ಯಂತ ಎಚ್ಚರಿಕೆಯಿಂದ ನಡೆಸಿದ ಕಾರ್ಯಾಚರಣೆಯಾಗಿದೆ. ಇದಕ್ಕೆ ನೆರವು ನೀಡಿದ ಕತಾರ್ ಕಾರ್ಯ ಶ್ಲಾಘನೀಯ' ಎಂದು ಫಿಫಾ ಹೇಳಿದೆ.

ಕತಾರ್ ಏರ್‌ವೇಸ್‌ನ ವಿಶೇಷ ವಿಮಾನದಲ್ಲಿ ಫುಟ್‌ಬಾಲ್ ಪಟುಗಳು, ಕುಟುಂಬದವರನ್ನು ಕಾಬೂಲ್‌ನಿಂದ ದೋಹಾಕ್ಕೆ ಕರೆ ತರಲಾಗಿತ್ತು.



ರಿಷಿ ರೆಡ್ಡಿ ಆಟದ ವೈಖರಿ– ಪ್ರಜಾವಾಣಿ ಚಿತ್ರ /ಎಸ್‌.ಕೆ.ದಿನೇಶ್

ಫೈನಲ್‌ಗೆ ರಿಷಿ, ವಂಶಿತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಿಷಿ ರೆಡ್ಡಿ ಹಾಗೂ ವಂಶಿತಾ ಪತಂಜ ಅವರು ಕೆಎಸ್‌ಎಲ್‌ಟಿಎ–ಎಐಟಿಎ ಪ್ರೊ ಸರ್ಕ್ಯೂಟ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಫೈನಲ್‌ಗೆ ಕಾಲಿಟ್ಟಿದ್ದಾರೆ.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ರಿಷಿ 6-1, 6-2ರಿಂದ ತಮಿಳುನಾಡಿನ ಭೂಪತಿ ಶಕ್ತಿವೇಲು ಎದುರು ಜಯ ಸಾಧಿಸಿದರು.

ಫೈನಲ್‌ನಲ್ಲಿ ಅವರು ಪಶ್ಚಿಮ ಬಂಗಾಳದ ಇಶಾಕ್ ಇಕ್ಬಾಲ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಇಶಾಕ್ 2-6, 6-1, 6-0ರಿಂದ ತಮಿಳುನಾಡಿನ ಓಜಸ್ ತೆಯಿಜೊ ಸವಾಲು ಮೀರಿದರು.

ಮಹಿಳಾ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ ವಂಶಿತಾ 6-4, 6-2ರಿಂದ ಕೇರಳದ ಗಾಯತ್ರಿ ಮೆನನ್ ಅವರನ್ನು ಸೋಲಿಸಿದರು. ಪ್ರಶಸ್ತಿ ಸುತ್ತಿನಲ್ಲಿ ಅವರು ತಮಿಳುನಾಡಿನ ಆವಿಷ್ಕಾ ಗುಪ್ತಾ ಅವರಿಗೆ ಮುಖಾಮುಖಿಯಾಗಲಿದ್ದಾರೆ.

ಕೋಲ್ಕತ್ತ ರೇಸ್

ಕೆವಾಲೊ ವೆಲೋಸ್ ಗೆಲ್ಲುವ ನಿರೀಕ್ಷೆ

ಸ್ಟೀವರ್ಡ್ಸ್ ಕಪ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೆವಾಲೊ ವೆಲೋಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೆಜೆಂಡರಿ ಸ್ಟ್ರೈಕರ್ 2, ಮ್ಯಾಂಡೊಲಿನ್ 3, ಲೈಟ್‌ಇನ್‌ದಿಸ್ಕೈ 4
2ನೇ ರೇಸ್: ಶೀರ್ ಫೋರ್ಸ್ 1, ಕ್ಲಿಫ್ ಆಫ್ ಕೇಪ್ರಿ 9, ಲೆ ಮಾರ್ಕ್ 8
3ನೇ ರೇಸ್: ಶಿವಾಲಿಕ್ ಗೋಲ್ಡ್ 3, ನಂದಿನೀಸ್ ಪೆಟ್ 2, ಕಮ್ಯೂನಿಕ್ 1
4ನೇ ರೇಸ್: ಕೆವಾಲೊ ವೆಲೋಸ್ 1, ಕಾನ್‌ಸಿಗ್ಲಿಯೋರಿ 2, ಸೈಕಿಕ್ ಫೋರ್ಸ್ 3
5ನೇ ರೇಸ್: ರೀಡೌಟಬಲ್ 3, ಜಸ್ಟಿಫೈಡ್ 2, ಆಫ್ಟರ್ ಶಾಕ್ 6
6ನೇ ರೇಸ್: ಕ್ರೈಟೀರಿಯಾ 4, ಆನೀಸ್ ಬಾಯ್ 1, ಮರಾಜೊ 2

ಉತ್ತಮ ಬೆಟ್: ಲೆಜೆಂಡರಿ ಸ್ಟ್ರೈಕರ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಟೆನಿಸ್: ಸೆಮಿಗೆ ಕ್ಯಾಮರಾನ್



ಕ್ಯಾಮರಾನ್ ನೋರಿ –ಎಎಫ್‌ಪಿ ಚಿತ್ರ

ಇಂಡಿಯನ್ ವೆಲ್ಸ್ (ಎಪಿ/ಪಿಟಿಐ): ಅರ್ಜೆಂಟೀನಾದ ಡೀಗೊ ಸ್ವಾಟ್ಸ್‌ಮನ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಬ್ರಿಟನ್‌ನ ಕ್ಯಾಮರಾನ್ ನೋರಿ ಅವರು ಬಿಎನ್‌ಪಿ ಪರಿಬಾಸ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಇಂಡಿಯನ್ ವೆಲ್ಸ್ ಟೆನಿಸ್ ಗಾರ್ಡನ್‌ನಲ್ಲಿ ಗುರುವಾರ ರಾತ್ರಿ ನಡೆದ ಎಂಟರ ಘಟ್ಟದ ಹಣಾಹಣಿಯಲ್ಲಿ ನೋರಿ 11ನೇ ಶ್ರೇಯಾಂಕದ ಎದುರಾಳಿಯನ್ನು 6-0, 6-2ರಲ್ಲಿ ಮಣಿಸಿದರು. 73 ನಿಮಿಷಗಳಲ್ಲಿ ನೋರಿ ಜಯ ಗಳಿಸಿದರು. ಎರಡನೇ ಸೆಟ್‌ನಲ್ಲಿ ಮಾತ್ರ ಸ್ವಾಟ್ಸ್‌ಮನ್ ಸ್ವಲ್ಪ ಪ್ರತಿರೋಧ ಒಡ್ಡಿದರು.

ಮಹಿಳೆಯರ ವಿಭಾಗದಲ್ಲಿ ಟುನೀಷಿಯಾದ 12ನೇ ಶ್ರೇಯಾಂಕಿತೆ ಒನ್ಸ್ ಜಬೆವು ೯7-5, 6-3ರಲ್ಲಿ ಎಸ್ಟೋನಿಯಾದ ಅನೆಟ್ ಕೊಂಟಾವೇಟ್ ವಿರುದ್ಧ ಜಯ ಗಳಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು. ಈ ಫಲಿತಾಂಶದೊಂದಿಗೆ ಜಬೆವುರ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೊದಲ ಬಾರಿ ಅಗ್ರ 10ರ ಒಳಗೆ ಸ್ಥಾನ ಗಳಿಸುವತ್ತ ಹೆಜ್ಜೆ ಹಾಕಿದ್ದಾರೆ. ಟೂರ್ನಿಯಲ್ಲಿ ಚಾಂಪಿಯನ್ ಆದರೆ ರ್‍ಯಾಂಕಿಂಗ್‌ನಲ್ಲಿ ಐದನೇ ಸ್ಥಾನ ಗಳಿಸುವ ಸಾಧ್ಯತೆ ಇದೆ.

ಈಚೆಗೆ ನಡೆದ ಚಿಕಾಗೊ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದ ಜಬೆವುರ್ ಅವರಿಗೆ ಈ ವರ್ಷ ಡಬ್ಲ್ಯುಟಿಎ ಟೂರ್‌ನಲ್ಲಿ ಇದು 48ನೇ ಜಯವಾಗಿದೆ. ಜಬೆವುರ್ ಮತ್ತು ಕೊಂಟಾವೇಟ್ ನಾಲ್ಕು ಬಾರಿ ಮುಖಾಮುಖಿಯಾಗಿದ್ದು ಮೂರು ಬಾರಿ ಜಬೆವುರ್ ಜಯ ಗಳಿಸಿದ್ದಾರೆ. ಆಗಸ್ಟ್‌ನಲ್ಲಿ ನಡೆದ ಸಿನ್ಸಿನಾಟಿ ಟೂರ್ನಿಯಲ್ಲಿ ಜಬೆವುರ್ ವಿರುದ್ಧ ಸೋಲುವ ಮುನ್ನ ಕೊಂಟಾವೇಟ್ ಆಡಿದ 17 ಪಂದ್ಯಗಳ ಪೈಕಿ 16ರಲ್ಲಿ ಗೆದ್ದಿದ್ದರು. ಎರಡು ಪ್ರಶಸ್ತಿ ಕೂಡ ಗೆದ್ದುಕೊಂಡಿದ್ದರು. 14 ಪಂದ್ಯಗಳಲ್ಲಿ ನೇರ ಸೆಟ್‌ಗಳ ಜಯ ಸಾಧಿಸಿದ್ದರು.

ಮಹಿಳೆಯರ ವಿಭಾಗದ ಮತ್ತೊಂದು ಪಂದ್ಯದಲ್ಲಿ ಜರ್ಮನಿಯ ಏಂಜೆಲಿಕ್ ಕರ್ಬರ್ ಅವರನ್ನು ಸ್ಪೇನ್‌ನ ಪೌಲಾ ಬಡೋಸ 6-4, 7-5ರಲ್ಲಿ ಮಣಿಸಿದರು. 2019ರ ರನ್ನರ್ ಅಪ್ ಕರ್ಬರ್ 10ನೇ ಶ್ರೇಯಾಂಕದ ಆಟಗಾರ್ತಿಗೆ ಕಠಿಣ ಪೈಪೋಟಿ ಒಡ್ಡಿದರೂ ಗೆಲುವು ಸಾಧಿಸಲು ಆಗಲಿಲ್ಲ.

ಬೋಪಣ್ಣ ಜೋಡಿಗೆ ಸೋಲು

ಭಾರತದ ರೋಹನ್ ಬೋಪಣ್ಣ ಮತ್ತು ಕೆನಡಾದ ಡೆನಿಸ್ ಶಪೊವಲೊವ್ ಜೋಡಿ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು. ಒಂದು ತಾಸು ಮತ್ತು ಆರು ನಿಮಿಷ ನಡೆದ ಜಿದ್ದಾಜಿದ್ದಿಯ ಹಣಾಹಣಿಯಲ್ಲಿ ಬೋಪಣ್ಣ–ಶಪೊವಲೊವ್ ಅವರನ್ನು ರಷ್ಯಾದ ಆ್ಯಂಡ್ರೆ ರುಬ್ಲೆವ್ ಮತ್ತು ಅಸ್ಲಾನ್ ಕರತ್ಸೆವ್ ಜೋಡಿ 4-6, 4-6ರಲ್ಲಿ ಸೋಲಿಸಿತು.

ಗಾಲ್ಫ್: ಖಾಲಿನ್ ಜೋಶಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಖಾಲಿನ್ ಜೋಶಿ ಅವರು ಜೈಪುರ ಗಾಲ್ಫ್ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಪ್ರಶಸ್ತಿ ಜಯಿಸಿದ್ದಾರೆ.

ಜೈಪುರದ ರಾಮ್‌ಭಾಗ್ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಟೂರ್ನಿಯಲ್ಲಿ ಖಾಲಿನ್ ಅವರು ಬೆಂಗಳೂರಿನವರೇ ಆದ ಎಂ. ಧರ್ಮ ಅವರನ್ನು ಹಿಂದಿಕ್ಕಿದರು. ಧರ್ಮ ರನ್ನರ್ ಅಪ್ ಸ್ಥಾನ ತಮ್ಮದಾಗಿಸಿಕೊಂಡರು. ಕೋಲ್ಕತ್ತದ ಸುನಿತ್ ಚೌರಾಸಿಯಾ ಮತ್ತು ಚಂಡೀಗಡದ ಹರೇಂದ್ರ ಗುಪ್ತಾ ಜಂಟಿ ಮೂರನೇ ಸ್ಥಾನ ಗಳಿಸಿದರು. ಖಾಲಿನ್, ಕಳೆದ ವಾರ ದೆಹಲಿಯಲ್ಲಿ ನಡೆದ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.

ಚೆಸ್: ಆನಂದ್ ವೀಕ್ಷಕ ವಿವರಣೆಕಾರ

ಚೆನ್ನೈ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ಅವರು ಫಿಡೆ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪಂದ್ಯಕ್ಕೆ ವೀಕ್ಷಕ ವಿವರಣೆ ನೀಡಲಿದ್ದಾರೆ. ದುಬೈನಲ್ಲಿ ನವೆಂಬರ್ 24ರಂದು ಈ ಪಂದ್ಯವು ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ರಷ್ಯಾದ ಇಯಾನ್ ನೆಪೊಮ್ನಿಯಾಚಿ ನಡುವೆ ನಡೆಯಲಿದೆ.

'ವೀಕ್ಷಕ ವಿವರಣೆ ನೀಡಲು ದುಬೈಗೆ ತೆರಳಲು ಉತ್ಸುಕನಾಗಿದ್ದೇನೆ' ಎಂದು ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್ ಹೇಳಿದ್ದಾರೆ.


ವಿಶ್ವ ಚಾಂಪಿಯನ್‌ಷಿಪ್ ಪಂದ್ಯವು 'ಬೆಸ್ಟ್ ಆಫ್ 14' ಮಾದರಿಯದ್ದಾಗಿದೆ. ಟೈಬ್ರೇಕ್ ಕೂಡ ಇರಲಿದೆ.

'ಫಿಡೆ ಚೆಸ್ಸೆಬಲ್ ಅಕಾಡೆಮಿಯಿಂದ ದುಬೈನಲ್ಲಿ ನಡೆಯುತ್ತಿರುವ ತರಬೇತಿ ಶಿಬಿರದಲ್ಲಿ ಆನಂದ್ ಅವರು ಉಪನ್ಯಾಸ ಕೂಡ ನೀಡಲಿದ್ದಾರೆ' ಎಂದು ವಿಶ್ವ ಚೆಸ್ ಫೆಡರೇಷನ್ ತಿಳಿಸಿದೆ.

ಅಥ್ಲೀಟ್ ಆ್ಯಗ್ನೆಸ್ ಪತಿ ಪೊಲೀಸ್ ಕಸ್ಟಡಿಯಲ್ಲಿ

ನೈರೋಬಿ (ಎಎಫ್‌ಪಿ): ಕೆನ್ಯಾದ ದೂರ ಅಂತರದ ಓಟಗಾರ್ತಿ ಆ್ಯಗ್ನೆಸ್ ತಿರೊಪ್ ಅವರ ಕೊಲೆಗೆ ಸಂಬಂಧಿಸಿ ಬಂಧನಕ್ಕೆ ಒಳಗಾಗಿರುವ ಪತಿ ಇಮ್ಯಾನ್ಯುಯೆಲ್ ರಾಟಿಚ್ ಅವರನ್ನು ಪೊಲೀಸ್ ಕಸ್ಟಡಿಯಲ್ಲಿ ಇರಿಸಲಾಗಿದೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಪದಕ ಗೆದ್ದಿರುವ 25 ವರ್ಷದ ತಿರೊಪ್ ಅವರನ್ನು ಪಶ್ಚಿಮ ಕೆನ್ಯಾದ ಇಟನ್‌ನಲ್ಲಿರುವ ಮನೆಯಲ್ಲಿ ಕತ್ತುಕೊಯ್ದು ಕೊಲೆ ಮಾಡಲಾಗಿತ್ತು. ಇದು ಕೆನ್ಯಾವನ್ನು ಮತ್ತು ಅಥ್ಲೆಟಿಕ್ಸ್ ಜಗತ್ತನ್ನು ಬೆಚ್ಚಿಬೀಳುವಂತೆ ಮಾಡಿತ್ತು.



ಆ್ಯಗ್ನೆಸ್ ತಿರೊಪ್ –ಎಎಫ್‌ಪಿ ಚಿತ್ರ

ಮೊಂಬಾಸ ನಗರದಲ್ಲಿ ಗುರುವಾರ ತಡರಾತ್ರಿ ಬಂಧಿಸಿರುವ ರಾಟಿಚ್ ಅವರನ್ನು ಶುಕ್ರವಾರ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ. ಪ್ರಕರಣದಲ್ಲಿ ಅವರು ಪ್ರಮುಖ ಶಂಕಿತ ವ್ಯಕ್ತಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತಿರೊಪ್ ಅವರಿಗೆ ಎಲ್ಲೆಡೆಯಿಂದ ಶ್ರದ್ಧಾಂಜಲಿ ಹರಿದು ಬರುತ್ತಿದೆ.



ಕಡಿಮೆಯಾದ 'ಬಾಡಿ ಶೇಮಿಂಗ್' ಝೀರೋದಿಂದ ಪ್ಲಸ್ ಸೈಝ್‌ವರೆಗೆ..



ಕೀರ್ತಿ ಟಿ.ಎಸ್.

> ದಪ್ಪ ಎಂದರೆ ಅವಮಾನ, ಟೀಕೆ ಸಹಿಸಿಕೊಳ್ಳಬೇಕು ಎಂಬ ಕಾಲ ಈಗಿಲ್ಲ. ಅಂಥವರಿಗೆ ಪ್ಲಸ್ ಸೈಝ್ ಉಡುಪುಗಳೂ ಮಾರುಕಟ್ಟೆಯಲ್ಲಿ ಧಾರಾಳವಾಗಿ ಸಿಗುತ್ತಿವೆ. ಇದು 'ಬಾಡಿ ಶೇಮಿಂಗ್' ಅನ್ನು ಕಡಿಮೆ ಮಾಡಲೂ ಕೊಡುಗೆ ನೀಡುತ್ತಿದೆ ಎನ್ನಬಹುದು.

ಸಣ್ಣ ಪಟ್ಟಣದಿಂದ ಉದ್ಯೋಗದ ಸಲುವಾಗಿ ಬೆಂಗಳೂರಿಗೆ ಬಂದ ನಿವೇದಿತಾಗೆ ತನ್ನ ಸೈಝ್‌ನ ಸಿದ್ಧ ಉಡುಪು ಸಿಕ್ಕಾಗ ಆದ ಖುಷಿ ಅಷ್ಟಿಷ್ಟಲ್ಲ. 'ಬುಟಿಕ್‌ಗೆ ಹೋದಾಗ ಗ್ರಾಹಕರ ಸೈಜ್‌ನ ಉಡುಪು ಸಿಕ್ಕಿಬಿಟ್ಟರೆ ಯಾರಿಗೆ ಖುಷಿಯಾಗಲ್ಲ ಹೇಳಿ' ಎನ್ನುವ ನಿವೇದಿತಾ ಮಾತಿನ ಹಿಂದೆ ಕಾರಣಗಳೂ ಇಲ್ಲದಿಲ್ಲ.

ತೀರಾ ದಪ್ಪ ಇರುವ 26ರ ಹರೆಯದ ನಿವೇದಿತಾಗೆ ಹೊಸ ಫ್ಯಾಷನ್‌ನ ಉಡುಪು ಧರಿಸುವ ಆಸೆ ಸಹಜವಾಗಿದ್ದರೂ, ತನ್ನ ಊರಿನಲ್ಲಿ 'ಪ್ಲಸ್ ಸೈಜ್' ಉಡುಪು ಸಿಗದೇ ನಿರಾಶೆ ಅನುಭವಿಸಬೇಕಾಗಿತ್ತು. ಟೈಲರ್‌ಗೋ ಈಗ ಟ್ರೆಂಡ್ ಇರುವ ಹೊಸ ಫ್ಯಾಷನ್‌ನ ಉಡುಪುಗಳನ್ನು ಸಿದ್ಧಪಡಿಸುವಷ್ಟು ಪರಿಣತಿ ಇಲ್ಲ. ಹಾರ್ಮೋನ್ ಸಮಸ್ಯೆ ಇರುವ ಆಕೆಗೆ ತೂಕ ಇಳಿಸಿಕೊಳ್ಳುವುದು ಸುಲಭದ ಮಾತಲ್ಲ. ಅಂಗಡಿಗೆ ಹೋದರೆ ಸಾಕು, ಕೌಂಟರ್‌ನಲ್ಲಿರುವ ಹುಡುಗಿಯರು 'ನಿಮ್ಮ ಸೈಝ್ ಡ್ರೆಸ್ ಸಿಗುವುದಿಲ್ಲ ಬಿಡಿ' ಎಂದು ಕೊಂಕು ನಗೆಯೊಂದಿಗೆ ಹೇಳುವ ಮಾತಿನಿಂದ ಅವಮಾನವಾಗುತ್ತಿತ್ತು.

ಜಾಹೀರಾತಿನಲ್ಲೂ ಅಷ್ಟೆ, ತೆಳ್ಳಗಿರುವ ರೂಪದರ್ಶಿಗಳನ್ನು ಹಾಕಿಕೊಂಡು 'ಝೀರೋ ಸೈಜ್' ಅನ್ನು ಜನಪ್ರಿಯ ಮಾಡಲು ಹೊರಟಿದ್ದವು ಜಾಹೀರಾತು ಕಂಪನಿಗಳು. ಭಾರತದಲ್ಲಿ ಪ್ಲಸ್ ಸೈಝ್‌ನವರ ಸಂಖ್ಯೆ ಜಾಸ್ತಿ. ಇಂಥವರಿಗೆ ತಮಗೆ ಬೇಕಾದ ಉಡುಪುಗಳನ್ನು ಹುಡುಕುವುದೆಂದರೆ ಕಷ್ಟದಾಯಕವೇ. ಹೆಚ್ಚಿನ ಮಳಿಗೆಗಳಲ್ಲಿ ಎಕ್ಸ್‌ಎಲ್ ಸೈಜ್‌ನ ಉಡುಪಿಗೂ ಹುಡುಕಾಡಬೇಕು, ಇನ್ನು ಡಬಲ್ ಎಕ್ಸ್‌ಎಲ್, ತ್ರಿಬಲ್ ಎಕ್ಸ್‌ಎಲ್... ಎಲ್ಲಿ ಸಿಗಬೇಕು ಹೇಳಿ.

ಪ್ಲಸ್ ಸೈಝ್ ಆಂದೋಲನ

ಆದರೆ ಕಳೆದ ಒಂದೆರಡು ವರ್ಷಗಳಿಂದ 'ನಿಮ್ಮ ದೇಹವನ್ನು ನೀವು ಪ್ರೀತಿಸಿ', 'ದಪ್ಪ ಇದ್ದರೂ ಚೆಂದವೇ', 'ಬಾಡಿ ಪಾಸಿಟಿವಿಟಿ' ಮೊದಲಾದ ಆಂದೋಲನಗಳು ಸಾಮಾಜಿಕ ಜಾಲತಾಣಗಳಲ್ಲೂ ಹೆಚ್ಚಾಗಿ ನಡೆಯುತ್ತಿವೆ. ಇದು ಮುಖ್ಯ ವಾಹಿನಿಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದ್ದಂತೂ ನಿಜ.

'ಸೆಲೆಬ್ರಿಟಿಗಳು ಮತ್ತು ಫ್ಯಾಷನ್ ವಲಯ ದಲ್ಲಿ ಪ್ಲಸ್ ಸೈಜ್ ರೂಪದರ್ಶಿಗಳಿಗೆ ಒತ್ತು ನೀಡುತ್ತಿದ್ದು, ಮಾರಾಟ ಪ್ರಚಾರವೂ ದಪ್ಪ ಇರುವವರ ಮೇಲೆ ಕೇಂದ್ರೀಕೃತವಾಗಿದೆ' ಎನ್ನುತ್ತಾರೆ ಬೆಂಗಳೂರಿನ ಫ್ಯಾಷನ್ ಡಿಸೈನರ್ ರೂಪಾ ಕಾರ್ನಿಕ್.

ನಮ್ಮ ದೇಹದ ಬಗ್ಗೆ ಸಕಾರಾತ್ಮಕ ನಿಲುವು ತಾಳುವುದಕ್ಕೆ ಪ್ರೋತ್ಸಾಹ ನೀಡುವುದರಿಂದ ಪ್ಲಸ್ ಸೈಜ್ ಇರುವ ಮಹಿಳೆಯರು ಮಾತ್ರವಲ್ಲ, ಪುರುಷರೂ ಕೂಡ ತಮ್ಮ ದೇಹದ ಬಗ್ಗೆ ಹೆಚ್ಚು ಕಾಳಜಿ ವಹಿಸುವುದು ಆರಂಭವಾಗಿದೆ ಎಂಬುದರ ಅವರ ಅಭಿಪ್ರಾಯ.

ಇದರಿಂದಾದ ಪರಿಣಾಮವೆಂದರೆ ದೇಶೀಯ ಫ್ಯಾಷನ್ ಬ್ರ್ಯಾಂಡ್‌ಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ ಪ್ಲಸ್ ಸೈಜ್ ಸೇರಿಸಿಕೊಂಡು ಮಾರುಕಟ್ಟೆಗೆ ಬಿಡುತ್ತಿವೆ. ಆನ್‌ಲೈನ್‌ನಲ್ಲೂ ಅಷ್ಟೇ, 4ಎಲ್, 5ಎಲ್ ಸೈಜ್‌ಗಳೂ ಲಭ್ಯ. ಒಂದು ವರದಿಯ ಪ್ರಕಾರ ಭಾರತದಲ್ಲಿ ಫ್ಯಾಷನ್ ಉದ್ಯಮದಲ್ಲಿ ಈ ಶಾಖೆ ಅತ್ಯಂತ ವೇಗವಾಗಿ ಬೆಳವಣಿಗೆ ಸಾಧಿಸುತ್ತಿದೆ. ಈ ಕೋವಿಡ್ ಸಂದರ್ಭದಲ್ಲಿ ಕೂಡ ಪ್ಲಸ್ ಸೈಝ್ ಉಡುಪುಗಳ ಮಾರುಕಟ್ಟೆ ಒಂದೇ ಸಮನೆ ಬೆಳೆಯುತ್ತಿದೆ ಎನ್ನುತ್ತದೆ ವರದಿ.

ಇದರ ಪರಿಣಾಮವೆಂದರೆ ಕೇವಲ 'ಸ್ಟ್ರೇಟ್ ಸೈಝ್' ಅಥವಾ 'ನ್ಯಾರೊ ಫಿಟ್' ಉಡುಪುಗಳನ್ನು ಮಾರುವ ರಿಟೇಲ್ ಮಳಿಗೆಗಳು ಕೂಡ ಪ್ಲಸ್ ಸೈಝ್ ಉಡುಪುಗಳ ಮಾರಾಟ ಆರಂಭಿಸಿವೆ. ಮಹಿಳೆಯರ ಎಥ್ನಿಕ್ ಸಿದ್ಧ ಉಡುಪುಗಳನ್ನು ಮಾರುವ 'ಡಬ್ಲ್ಯು'ನಂತಹ ಬ್ರ್ಯಾಂಡ್ ಪ್ಲಸ್ ಸೈಝ್ ಮಳಿಗೆಗಳನ್ನು ಪ್ರತ್ಯೇಕವಾಗಿ ತೆರೆದಿದೆ.

ಎಲ್ಲಾ ಸೈಝ್‌ನ ಉಡುಪುಗಳು ಲಭ್ಯ ಎಂದರೆ ಫ್ಯಾಷನ್‌ನಲ್ಲಿ ಎಲ್ಲಾ ಬಗೆಯ ದೇಹವುಳ್ಳವರನ್ನು ಸೇರಿಸಿಕೊಂಡಂತೆಯೇ. ಆದರೆ ಕೆಲವು ಬ್ರ್ಯಾಂಡ್‌ಗಳು ಸೈಝ್ ಜಾಸ್ತಿಯಾದಂತೆ ದರವನ್ನೂ ಹೆಚ್ಚು ನಿಗದಿಪಡಿಸುತ್ತಿದ್ದು, ಇದು ಹಲವರಲ್ಲಿ ಅಸಮಾಧಾನ ಮೂಡಿಸಿದೆ.

ಏನೇ ಆಗಲಿ, ಕನಿಷ್ಠ 'ಬಾಡಿ ಶೇಮಿಂಗ್' ಅಥವಾ ದಪ್ಪ, ಗಿಡ್ಡ, ಕಪ್ಪು ಎಂದೆಲ್ಲ ಟೀಕಿಸುವವರನ್ನು ಈ ಪ್ಲಸ್ ಸೈಝ್ ಆಂದೋಲನ ಬಾಯಿ ಮುಚ್ಚಿಸುವಂತಿದೆ. ದಪ್ಪ ಇರುವವರಿಗೂ ಧರಿಸಲು ಉಡುಪು ಬೇಕಲ್ಲವೇ! ❖

ಮುಟ್ಟಾಗುವ ಮೊದಲು ಮೈಗ್ರೇನ್: ಪರಿಹಾರ ಇಲ್ಲವೇ?



ಸ್ಪಂದನ

ಡಾ. ವೀಣಾ ಎಸ್. ಭಟ್

• ನನ್ನ ಮಗಳಿಗೆ ಪ್ರತಿ ತಿಂಗಳು ಮುಟ್ಟಾಗುವ ಮೊದಲು ಮೈಗ್ರೇನ್ ತಲೆನೋವು ಬರುತ್ತದೆ. ಇದು ನಾಲ್ಕು ದಿನ ಮೊದಲು ಬರಬಹುದು, ಇಲ್ಲವೇ ಮುಟ್ಟಿನ ಸಂದರ್ಭದಲ್ಲಿ ಬರುತ್ತದೆ. ಅದು ತುಂಬಾ ತೀವ್ರತರವಾಗಿರಬಹುದು ಮತ್ತು ಅದು ಕೆಲವು ಮಾತ್ರೆಗೂ ಕೂಡಾ ಬಗ್ಗುವುದಿಲ್ಲ ಹೇಗೆ ಈ ಸಮಸ್ಯೆಯನ್ನು ಬಗೆಹರಿಸುವುದು? ಅವಳಿಗೆ 26 ವರ್ಷ. ಮುಟ್ಟಿನ ಮೊದಲು 2 ಕೆ.ಜಿ ತೂಕ ಹೆಚ್ಚಾಗುತ್ತದೆ ಮತ್ತು ಆಹಾರ ವ್ಯಾಯಾಮಗಳಿಂದ ಹೋಗುವುದೇ ಇಲ್ಲ.

ಹೆಸರು, ಊರು ತಿಳಿಸಿಲ್ಲ

ನಿಮ್ಮ ಮಗಳಿಗಿರುವುದು ಹೆಚ್ಚಿನ ಮಹಿಳೆಯರಲ್ಲಿ 20-40 ವರ್ಷಗಳ ಒಳಗೆ ಕಂಡುಬರುವ ಅದರಲ್ಲೂ ಉದ್ಯೋಗಸ್ಥ ಹಾಗೂ ವಿದ್ಯಾವಂತ ಮಹಿಳೆಯರನ್ನು ಕಾಡುವ ಮುಟ್ಟಿನ ಮುನ್ನ ಬರುವ ಬವಣೆಯ ಲಕ್ಷಣಗಳು (ಪಿ.ಎಂ.ಎಸ್). ಈ ಸಮಸ್ಯೆ ಬಹಳಷ್ಟು ಮಹಿಳೆಯರಲ್ಲಿ ಮತ್ತು ಹೆಚ್ಚಿನ ಜನಸಾಮಾನ್ಯರಲ್ಲಿ ಇದ್ದರೂ ಕೂಡ ಹೆಚ್ಚಿನವರಿಗೆ ಈ ಬಗ್ಗೆ ಗೊತ್ತಿಲ್ಲ. ಈ ಸಮಸ್ಯೆಯಿಂದ ಬಳಲುತ್ತಿದ್ದರೂ ಈ ಬಗ್ಗೆ ಸರಿಯಾದ ಮಾಹಿತಿ ಮತ್ತು ಅರಿವು ಇರುವುದಿಲ್ಲ. ಮುಟ್ಟಿನ ಮುನ್ನ ಬರುವ ಬವಣೆಯ ಬಗ್ಗೆ ಮಾಹಿತಿ ಇರುವುದೇ ಚಿಕಿತ್ಸೆಯ ಮೊದಲ ಹೆಜ್ಜೆ. ಮುಟ್ಟಿನ ಮುನ್ನಬರುವ ಬವಣೆ ಅಂಡೋತ್ಪತ್ತಿಯ ನಂತರ ಆರಂಭವಾಗಿ (7-14 ದಿನ) ಮುಟ್ಟುಬರಲು ನಾಲ್ಕೈದು ದಿನ ಇರುವಾಗ ಅತಿರೇಕಕ್ಕೆ ಹೋಗಿ ಮುಟ್ಟಾಗಿ ಎರಡು ಮೂರು ದಿನದೊಳಗೆ ನಿಂತು ಹೋಗಿ ಬಿಡುತ್ತದೆ. ನಂತರ ಅಂಡೋತ್ಪತ್ತಿ ಆಗುವವರೆಗೂ ಯಾವುದೇ ರೀತಿಯ ರೋಗಲಕ್ಷಣಗಳು ಇರುವುದಿಲ್ಲ. ಪಿ.ಎಂ.ಎಸ್.ನಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ, ನಡವಳಿಕೆಯಲ್ಲಿ ಹಾಗೂ ಸ್ವನಿಯಂತ್ರಿತ ನರಮಂಡಲದಲ್ಲಿ ಬದಲಾವಣೆಗಳಾಗಬಹುದು. ಶಾರೀರಿಕವಾಗಿ ಮೈ ಭಾರ , ಹೊಟ್ಟೆ ಊದಿದ ಅನುಭವ, ತೂಕ ಏರುವಿಕೆ, ಮಾಂಸಖಂಡಗಳ ಸ್ನಾಯುಸೆಳೆತ, ಕೀಲುನೋವು, ಸುಸ್ತು, ತಲೆನೋವು, ಹೆಚ್ಚುವ ಮಲಬದ್ಧತೆ, ಕೆಲವೊಮ್ಮೆ ಬೇಧಿ, ಕಿಬ್ಬೊಟ್ಟೆ ನೋವು ಇತ್ಯಾದಿ ಉಂಟಾಗಬಹುದು.

ಮಾನಸಿಕವಾಗಿ ಸಿಡುಕು, ಉದ್ವೇಗ, ಮುಂಗೋಪ, ಖಿನ್ನತೆ, ಮರೆಗುಳಿತನ, ಏಕಾಗ್ರತೆ ಹೊಂದಲು ಸಾಧ್ಯವಾಗದೇ ಇರುವುದು, ಅತಿಯಾಗಿ ತಿನ್ನುವ ಕಡುಬಯಕೆ, ಅದರಲ್ಲೂ ಉಪ್ಪು, ಉಪ್ಪಿನಾಂಶ, ಸಿಹಿ, ಖಾರಗಳ ಬಗ್ಗೆ ಅಗಾಧ ಬಯಕೆ, ಯಾವುದೇ ನಿರ್ಣಯ ತೆಗೆದುಕೊಳ್ಳಲು ಅಸಾಮರ್ಥ್ಯ, ಲೈಂಗಿಕತೆಯಲ್ಲಿ ವ್ಯತ್ಯಾಸ ಇತ್ಯಾದಿಗಳು ಉಂಟಾಗಬಹುದು. ಸ್ವನಿಯಂತ್ರಿತ ನರಮಂಡಲದಲ್ಲಾಗುವ ಬದಲಾವಣೆಯಿಂದ ತಲೆತಿರುಗುವಿಕೆ, ನಿತ್ರಾಣ, ವಾಕರಿಕೆ, ವಾಂತಿ ಇತ್ಯಾದಿ ಉಂಟಾಗಬಹುದು. ಪಿ.ಎಂ.ಎಸ್ ನಿರ್ದಿಷ್ಟ ಕಾರಣಗಳು ಸರಿಯಾಗಿ ತಿಳಿದಿಲ್ಲವಾದರೂ ಶರ್ಕರಪಿಷ್ಠಾದಿ ಆಹಾರಗಳಿಗೆ ಅಸಹಿಷ್ಣುತೆ ಆಗುವುದು, ಪಿರಿಡಾಕ್ಸಿನ್ ಎಂಬ ವಿಟಮಿನ್ ಕೊರತೆಯಿಂದ, ಈಸ್ಟ್ರೋಜನ್, ಅಥವಾ ಪ್ರೊಜೆಸ್ಟ್ರಾನ್ ಹಾರ್ಮೋನ್ ಕೊರತೆ ಅಥವಾ ನರವಾಹಕಮಟ್ಟದಲ್ಲಿ ವ್ಯತ್ಯಾಸವಾಗುವುದು ಇತ್ಯಾದಿ ಕಾರಣ ಕೊಡಬಹುದು. ಇದೊಂದು ಸಹಜ ಹಾರ್ಮೋನು ಮಟ್ಟದ ಏರಿಳಿತಕ್ಕೆ ತೋರಲ್ಪಡುವ ಅಸಹಜ ಶಾರೀರಿಕ ಪ್ರತಿಕ್ರಿಯೆ. ಅತಿಯಾಗಿ ಕಾಫಿ, ಟೀ ಅಥವಾ ಜಂಕ್‌ಫುಡ್ ಸೇವನೆ, ಹೆಚ್ಚು ಉಪ್ಪಿನಾಂಶವಿರುವ ಪದಾರ್ಥಗಳ ಸೇವನೆ, ಧೂಮಪಾನ, ಮದ್ಯಪಾನ ಇವೆಲ್ಲ ಪ್ರಚೋದನೆ ಅಂಶಗಳಾಗಿರುತ್ತವೆ. ರೋಗ ಪತ್ತೆಹಚ್ಚಲು ಯಾವುದೇ ಲ್ಯಾಬ್ ಪರೀಕ್ಷೆಗಳಿಲ್ಲ. ಕನಿಷ್ಠ ಎರಡು-ಮೂರು ಋತುಚಕ್ರದ ಅವಧಿಯಲ್ಲಿ ರೋಗಸೂಚಕ ಲಕ್ಷಣಗಳನ್ನು ಡೈರಿಯಲ್ಲಿ ಬರೆದಿಡುವುದರಿಂದ ಮತ್ತು ಇಂತಹದ್ದೆ ಲಕ್ಷಣಗಳುಳ್ಳ ರಕ್ತಹೀನತೆ, ಹೈಪೋಥೈರಾಡಿಸಮ್ ಮತ್ತು ಖಿನ್ನತೆ ರೋಗಗಳು ಇಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡು ಪಿ.ಎಂ.ಎಸ್ ಪತ್ತೆಹಚ್ಚಬಹುದು. ಕಡಿಮೆ ಉಪ್ಪು ಹಾಗೂ ಕೆಫೈನ್ ಸೇವನೆ, ಸಕ್ಕರೆ, ಮೈದಾ, ಕರಿದ ಪದಾರ್ಥಗಳನ್ನು ಕಡಿಮೆ ಮಾಡಿ ಹೆಚ್ಚು ಹಣ್ಣುಗಳು, ಹಸಿರು ಸೊಪ್ಪು ತರಕಾರಿ, ಇಡೀ ಧಾನ್ಯಗಳು, ಒಣಹಣ್ಣು ಇತ್ಯಾದಿ ಹೆಚ್ಚು ಸೇವಿಸಬೇಕು. ಪಿರಿಡಾಕ್ಸಿನ್ ಮಾತ್ರೆ (ವಿಟಮಿನ್ ಬಿ6) ವೈದ್ಯರ ಸಲಹೆ ಮೇರೆಗೆ ಸೇವಿಸಿ. ಸಾಕಷ್ಟು ನಿದ್ರೆ ಹಾಗೂ ವಿಶ್ರಾಂತಿ ಕನಿಷ್ಠ 30 ನಿಮಿಷ ನಿತ್ಯ ವ್ಯಾಯಾಮ, ಯೋಗ, ಪ್ರಾಣಾಯಾಮ ಇವೆಲ್ಲವುದರಿಂದ ಪಿ.ಎಂ.ಎಸ್ ನಿರ್ವಹಣೆ ಮಾಡಬಹುದು. ನೀವು ವೈದ್ಯರನ್ನು ಸಂಪರ್ಕಿಸಿ.

• ಸಿಸೇರಿಯನ್ ಹೆರಿಗೆ ಆಗಿ 6 ತಿಂಗಳಾಗಿದೆ. ಎಷ್ಟು ತಿಂಗಳಿಗೆ ಸೇರಬಹುದು. 6 ತಿಂಗಳಿಂದ ನಾನು ಮುಟ್ಟು ಕೂಡಾ ಆಗಿಲ್ಲ. ಏನಾದರೂ ತೊಂದರೆ ಆಗಬಹುದೇ?

ಹೆಸರು, ಊರು ತಿಳಿಸಿಲ್ಲ

ನೀವು ಎದೆಹಾಲು ಕುಡಿಸುತ್ತಿರುವುದರಿಂದ ತಿಂಗಳು ತಿಂಗಳು ಮುಟ್ಟಾಗದೇ ಇರಬಹುದು. ಇನ್ನೂ ನಿಮಗೆ ಮುಟ್ಟು ಆರಂಭವಾಗದೇ ಇದ್ದರೂ ಅಂಡಾಶಯದಿಂದ ಅಂಡೋತ್ಪತ್ತಿ ಆಗುವ ಸಂಭವವಿದೆ. ಆದ್ದರಿಂದ ನೀವಾಗಲಿ ಅಥವಾ ಯಾರೇ ಹೆರಿಗೆ ಆದವರು ಅದು ಸಿಸೇರಿಯನ್ ಅಥವಾ ಸಹಜ ಹೆರಿಗೆ ಆದವರು ಇರಬಹುದು, ಕನಿಷ್ಠ ಆರು ವಾರಗಳ ಅಂತರವಿಟ್ಟು ಲೈಂಗಿಕ ಸಂಪರ್ಕ ಮಾಡಬಹುದು. ಆದರೆ ಎರಡು ವರ್ಷಗಳೊಳಗೆ ಇನ್ನೊಮ್ಮೆ ಗರ್ಭಧಾರಣೆಯಾಗದ ಹಾಗೆ ಮುಂಜಾಗ್ರತೆ ವಹಿಸಿ. ಅಂದರೆ ಕಾಂಡೋಮ್ ಬಳಸಬಹುದು, ಇಲ್ಲವಾದರೆ ಕಾಪರ್ಟಿ ಅಳವಡಿಸಿಕೊಳ್ಳಲಿ. ಮುಂಜಾಗ್ರತೆ ವಹಿಸುವುದು ಒಳ್ಳೆಯದು. ಯಾವುದಕ್ಕೂ ವೈದ್ಯರ ಸಲಹೆ ಪಡೆಯಿರಿ.

• ಮೇಡಂ, ನನಗೆ 24 ವರ್ಷ. ಇತ್ತೀಚಿಗೆ ಮದುವೆ ಆಗಿದೆ. ನಾನು ಹಾಗೂ ನನ್ನಗಂಡ ಲೈಂಗಿಕ ಸಂಪರ್ಕ ಮಾಡಿದ ನಂತರ ನಮಗೆ ಮುಂದೆ ಮಕ್ಕಳಾಗುತ್ತೋ ಇಲ್ಲವೋ ಎನ್ನುವ ಆತಂಕ. ನಾವು ಈ ಪ್ರಕ್ರಿಯೆಯಲ್ಲಿ ಸರಿಯಾಗಿ ತೊಡಗಿಸಿಕೊಂಡಿದ್ದೇವೋ ಇಲ್ಲವೋ ಎನ್ನುವ ಬಗೆಯೂ ಬಹಳಷ್ಟು ಸಂದೇಹಗಳಿವೆ. ನಾವಿಬ್ಬರು ತೆಳ್ಳಗಿರುವುದರಿಂದ ನನಗೆ ಇನ್ನಷ್ಟು ಸಂದೇಹವಾಗುತ್ತಿದೆ. ದಯವಿಟ್ಟು ನಮಗೆ ಸಲಹೆ ಕೊಡುತ್ತೀರಾ?

ಹೆಸರು, ಊರು ತಿಳಿಸಿಲ್ಲ

ನೀವು ಗಂಡ ಹೆಂಡತಿ ಇಬ್ಬರೂ ಯಾವುದೇ ಆತಂಕ ಹಾಗೂ ಸಂದೇಹಗಳಿಲ್ಲದೇ ಪರಸ್ಪರ ಲೈಂಗಿಕ ಸಂಪರ್ಕದಲ್ಲಿ ಇರಿ. ಈ ಬಗ್ಗೆ ಏನಾದರೂ ಸಂದೇಹ ಬಂದಲ್ಲಿ ನಿಮ್ಮ ಕುಟುಂಬ ವೈದ್ಯರನ್ನ ಇಲ್ಲವೇ ಲೈಂಗಿಕ ತಜ್ಞರನ್ನ ಸಂಪರ್ಕಿಸಿ. ನಿರಂತರ ನೀವಿಬ್ಬರು ಒಟ್ಟಿಗೆ ಇದ್ದು ಪರಸ್ಪರ ಲೈಂಗಿಕ ಸಂಪರ್ಕ ಮುಂದುವರೆಸಿದರೆ ನಿಮಗೆ ಒಂದು ವರ್ಷಗಳೊಳಾಗಾಗಿ ಮಕ್ಕಳಾಗಲೇ ಬೇಕು. ಇಲ್ಲದಿದ್ದರೆ ಅದನ್ನು ಬಂಜೆತನವೆಂದು ಪರಿಗಣಿಸಿ ನಿಮ್ಮಿಬ್ಬರಿಗೂ ಸೂಕ್ತ ತಪಾಸಣೆ ಹಾಗೂ ತಜ್ಞವೈದ್ಯರ ಸಲಹೆ- ಸೂಚನೆ ಅಗತ್ಯವಾಗಿರುತ್ತದೆ. 24 ವರ್ಷವೆಂದರೆ ಹೆಚ್ಚಿನ ಆತಂಕ ಬೇಡ. ಹಾಗೇಯೇ ನಿರ್ಲಕ್ಷ್ಯವೂ ಬೇಡ.

> ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಚಳಿಗಾಲಕ್ಕೂ ಸೈ ಕ್ರೋಶಾ ಟಾಪ್, ಮಫ್ಲರ್

ರೇಷ್ಮಾ

ಸುಂದರವಾದ ಬಣ್ಣ ಬಣ್ಣದ ಟೋಪಿ, ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರಿಸುವ ಮಫ್ಲರ್, ಶ್ರಗ್ ಇವೆಲ್ಲಾ ಕ್ರೋಶಾ ಕಡ್ಡಿಯಿಂದ ಹೆಣೆದರೆ ಎಷ್ಟು ಚೆಂದ ಅಲ್ವಾ? ಈ ಕ್ರೋಶಾ ಕಡ್ಡಿಯ ಸಹಾಯದಿಂದ ನೂಲಿನಿಂದ ಹೆಣೆದು ಮಾಡಿರುವ ಉಡುಪುಗಳನ್ನು ಈಗ ಹೆಂಗಳೆಯರು ಹೆಚ್ಚು ಇಷ್ಟಪಡುತ್ತಿದ್ದಾರೆ. ಇವು ಎಲ್ಲಾ ಕಾಲದಲ್ಲೂ ಧರಿಸಲು ಸೂಕ್ತ ಎನ್ನಿಸಿದರೂ ಚಳಿಗಾಲದಲ್ಲಿ ಮೈಯನ್ನು ಬೆಚ್ಚಗಿಸಿರುವ ಜೊತೆಗೆ ಅಂದವನ್ನೂ ಹೆಚ್ಚಿಸುತ್ತವೆ. ಈ ಕ್ರೋಶಾ ಕಡ್ಡಿಯಿಂದ ಹೆಣೆದ ಕೆಲವು ಉಡುಪುಗಳು ಈಗ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ.

ಟೋಪಿಗಳು



ಹಿಂದೆಲ್ಲಾ ಚಿಕ್ಕ ಮಕ್ಕಳಿಗೆ ತೊಡಿಸಲು ತಾಯಂದಿರು ಟೋಪಿ, ಕೈಗವಸುಗಳನ್ನು ಹೆಣೆಯುತ್ತಿದ್ದರು. ಮಕ್ಕಳಿಗೆ ಲಾಲಿ ಹಾಡುತ್ತಾ ಕ್ರೋಶಾ ಕಡ್ಡಿಯಿಂದ ಸುಂದರವಾದ ನೇಯ್ಗೆಯ ಟೋಪಿ, ಅಂಗಿ ಹೆಣೆಯುತ್ತಾ ನಿದ್ದೆ ಮಾಡಿಸುತ್ತಿದ್ದರು. ಈಗ ಇದೇ ಕ್ರೋಶಾ ಕಡ್ಡಿಯಿಂದ ಹೆಣೆದ ಟೋಪಿಯನ್ನು ಹೆಣ್ಣುಮಕ್ಕಳು ಚಳಿಗಾಲದಲ್ಲಿ ಧರಿಸಲು ಇಷ್ಟ ಪಡುತ್ತಿದ್ದಾರೆ. ಬಣ್ಣ ಬಣ್ಣದ ಟೋಪಿಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಇವು ಚಳಿಯಿಂದ ರಕ್ಷಿಸುವ ಜೊತೆಗೆ ಅಂದವನ್ನೂ ಹೆಚ್ಚಿಸುತ್ತವೆ.

ಮಫ್ಲರ್ (ಮುಫ್ಲರ್)



ಚಳಿಗಾಲದಲ್ಲಿ ಮಫ್ಲರ್‌ಗಳು ಹುಡುಗಿಯರ ಕತ್ತನ್ನು ಅಲಂಕರಿಸಿರುತ್ತವೆ. ಇವುಗಳನ್ನು ಕುರ್ತಾ ಟಾಪ್, ಜೀನ್ಸ್ ಟಾಪ್, ಸೀರೆ ಹೀಗೆ ಎಲ್ಲದರ ಜೊತೆಗೂ ಧರಿಸಬಹುದು. ವಿವಿಧ ವಿನ್ಯಾಸ ಹಾಗೂ ಬಣ್ಣದಲ್ಲೂ ಮಫ್ಲರ್‌ಗಳು ಸಿಗುತ್ತವೆ. ಟೋಪಿಯೊಂದಿಗೆ ಸೇರಿ ಬರುವ ಮಫ್ಲರ್ ಸದ್ಯದ ಟ್ರೆಂಡ್. ಚಳಿಗಾಲದ ಸಮಯದಲ್ಲಿ ಪ್ರಯಾಣಕ್ಕೆ ಇವು ಹೆಚ್ಚು ಹೊಂದುತ್ತವೆ. ಇದನ್ನು ಸ್ಕರ್ಟ್-ಬ್ಲೌಸ್ ಜೊತೆಗೂ ಧರಿಸಬಹುದು. ಆ ಮೂಲಕ ಅಂದ ಹೆಚ್ಚುವುದರೊಂದಿಗೆ ಚಳಿಯಿಂದ ದೇಹವನ್ನು ರಕ್ಷಿಸಿಕೊಳ್ಳಬಹುದು.

ಶ್ರಗ್

ಕ್ರೋಶಾ ಕಡ್ಡಿಯಿಂದ ಹೆಣೆದ ಶ್ರಗ್ ಅಥವಾ ಓವರ್‌ಕೋಟ್‌ಗಳು ಹಿಂದೆಲ್ಲಾ ವಸ್ತು ಪ್ರದರ್ಶನಗಳಲ್ಲಿ ಹೆಚ್ಚು ಕಾಣ ಸಿಗುತ್ತಿದ್ದವು. ಉತ್ತರ ಭಾರತದ ಕಡೆಯವರು ಹೆಚ್ಚು ಧರಿಸುತ್ತಿದ್ದ ಈ ಶ್ರಗ್‌ಗಳನ್ನು ಈಗ ದಕ್ಷಿಣ ಮಂದಿಯೂ ಮೆಚ್ಚಿ ಧರಿಸುತ್ತಿದ್ದಾರೆ. ಇದನ್ನು ಕುರ್ತಾ ಟಾಪ್, ಸೀರೆ, ಜೀನ್ಸ್ ಟಾಪ್ ಎಲ್ಲದರ ಮೇಲೂ ಧರಿಸಬಹುದು. ಮೊದಲೆಲ್ಲಾ ಬಿಳಿ, ಕ್ರೀಮ್ ಬಣ್ಣದ ಶ್ರಗ್‌ಗಳೇ ಹೆಚ್ಚು ಸದ್ದು ಮಾಡುತ್ತಿದ್ದವು. ಆದರೆ ಈಗೀಗ ಎಲ್ಲಾ ಬಣ್ಣದ ಡೈಡ್ (ಟೈ ಅಂಡ್ ಡೈ) ಶ್ರಗ್ ಕೂಡ ಹೆಣ್ಣುಮಕ್ಕಳ ಅಂದವನ್ನು ಹೆಚ್ಚಿಸುತ್ತಿವೆ.

ಬ್ಯಾಗ್‌ಗಳು



ಕ್ರೋಶಾ ಕಡ್ಡಿಯಿಂದ ಹೆಣೆಯುವ ವಿವಿಧ ವಿನ್ಯಾಸ ಹಾಗೂ ಆಕಾರದ ಬ್ಯಾಗ್‌ಗಳು ಕೂಡ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಈ ಬ್ಯಾಗ್‌ಗಳನ್ನು ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ಹೀಗೆ ಎಲ್ಲಾ ಥರದ ಉಡುಪುಗಳೊಂದಿಗೂ ಧರಿಸಬಹುದು. ಉಡುಪಿಗೆ ಹೊಂದುವ ಬಣ್ಣದ ಬ್ಯಾಗ್‌ಗಳನ್ನೂ ಕೂಡ ಧರಿಸಬಹುದು.

ಕೈಗವಸು



ಚಳಿಗಾಲದಲ್ಲಿ ಬೆಚ್ಚಗಿರಿಸುವ ಕೈಗವಸು ಹಾಗೂ ಶೂಗಳು ಈಗ ಹೆಚ್ಚು ಚಾಲ್ತಿಯಲ್ಲಿವೆ. ಒಂದೇ ಬಣ್ಣದ್ದು, ಬಣ್ಣ ಬಣ್ಣದ ನೂಲಿನಿಂದ ನೇಯ್ಗೆ ಮಾಡಿದ್ದು.. ಹೀಗೆ ಚೆಂದದ ಶೂ, ಕೈಗವಸು ಅಂದ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.

ಟಾಪ್‌ಗಳು



ಕ್ರೋಶಾ ಟೀ ಶರ್ಟ್, ಟಾಪ್‌ಗಳು ಈಗ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಗಮನ ಸೆಳೆಯುತ್ತಿವೆ. ಇವು ಸಡಿಲವಾಗಿದ್ದು ಧರಿಸಲು ಆರಾಮದಾಯಕ ಎನ್ನಿಸುತ್ತವೆ. ಇದರೊಂದಿಗೆ ಕ್ರೋಶಾ ಕಿವಿಯೋಲೆಗಳನ್ನು ಧರಿಸಬಹುದು. ಉದ್ದನೆಯ ಸಿಂಗಲ್ ಟಾಪ್, ಜೀನ್ಸ್ ಟಾಪ್, ಕುರ್ತಾ ಟಾಪ್‌ಗಳು ಈಗ ಹೆಣ್ಣಮಕ್ಕಳ ಸೌಂದರ್ಯಕ್ಕೆ ಇನ್ನಷ್ಟು ರಂಗು ತರುತ್ತಿವೆ. ❖

ಚಿಕನ್ ಗ್ರೇವಿ, ಚೆಟ್ಟಿನಾಡ್ ಚಿಕನ್ ಮಸಾಲ



ನಳಪಾಕ


ಹೇಮಲತಾ ಆರ್.ಕೆ.

ರೆಸ್ಟೋರೆಂಟ್ ಸ್ಟೈಲ್ ಚಿಕನ್ ಗ್ರೇವಿ

ಬೇಕಾಗುವ ಸಾಮಗ್ರಿಗಳು: ಚಿಕನ್ - ಅರ್ಧ ಕೆಜಿ, ಕೆಂಪು ಮೆಣಸಿನಕಾಯಿ - 8, ಈರುಳ್ಳಿ - 2, ಟೊಮೆಟೊ – 2, ಗೋಡಂಬಿ - 2 ಟೇಬಲ್ ಚಮಚ, ಅರಿಸಿನ – ಕಾಲು ಚಮಚ, ಎಣ್ಣೆ – 2 ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಕೊತ್ತಂಬರಿ ಪುಡಿ – 1 ಚಮಚ, ಗರಂಮಸಾಲ – 1 ಚಮಚ, ಕಸೂರಿ ಮೇಥಿ – 1 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ – ಸ್ವಲ್ಪ

ತಯಾರಿಸುವ ವಿಧಾನ: ಮಸಾಲೆ ಮಾಡಲು ನೆನೆಸಿದ ಒಣಮೆಣಸಿನಕಾಯಿಮ ಟೊಮೆಟೊ ಮತ್ತು ಗೋಡಂಬಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ಬಾಣಲೆಯನ್ನು ಬಿಸಿಗೆ ಇಟ್ಟು 2 ಟೇಬಲ್ ಚಮಚ ಎಣ್ಣೆ ಹಾಕಿ ಈರುಳ್ಳಿಯನ್ನು ಬಾಡಿಸಿಕೊಳ್ಳಿ. ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಒಂದು ನಿಮಿಷ ಬಾಡಿಸಿಕೊಳ್ಳಿ. ನಂತರ ತೊಳೆದಿಟ್ಟ ಚಿಕನ್ ಸೇರಿಸಿ ಅದಕ್ಕೆ ಅರಿಸಿನ, ಉಪ್ಪು, ಕೆಂಪು ಮೆಣಸಿನ ಪುಡಿ, ಕೊತ್ತಂಬರಿ ಪುಡಿ ಹಾಕಿ. ಚಿಕನ್ ಅರ್ಧ ಬೇಯುವವರೆಗೂ ಎಣ್ಣೆಯಲ್ಲಿ ಫ್ರೈ ಮಾಡಿ. ಈಗ ರುಬ್ಬಿದ ಮಸಾಲೆಯನ್ನು ಸೇರಿಸಿ ಎಣ್ಣೆ ಬಿಡುವವರೆಗೂ ಬೇಯಿಸಿ. ಕೊನೆಯಲ್ಲಿ ಗರಂಮಸಾಲೆ, ಕಸೂರಿ ಮೇಥಿ, ಕೊತ್ತಂಬರಿ ಸೊಪ್ಪು ಹಾಗೂ ಅರ್ಧ ಲೋಟ ನೀರು ಸೇರಿಸಿ. ಐದು ನಿಮಿಷ ಕುದಿಸಿಕೊಂಡರೆ ರೆಸ್ಟೋರೆಂಟ್ ಸ್ಟೈಲ್ ಚಿಕನ್ ಗ್ರೇವಿ ಚಪಾತಿಯೊಂದಿಗೆ ಸವಿಯಲು ಸಿದ್ಧ.

ಪ್ರಜಾವಾಣಿ ನೋಡಿಯೊ — ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಚೆಟ್ಟಿನಾಡ್ ಚಿಕನ್ ಮಸಾಲ

ಬೇಕಾಗುವ ಸಾಮಗ್ರಿಗಳು: ಮಸಾಲೆ ಪೌಡರ್‌ಗೆ- ಒಂದು ಇಂಚು ಚಕ್ಕೆ, ಲವಂಗ – 5, ಏಲಕ್ಕಿ – 3, ಅನಾನಸ್ ಹೂವು – 1, ಪಲಾವ್ ಎಲೆ – 2, ಒಣಮೆಣಸಿನಕಾಯಿ ಕಾಯಿ – 3, ಕಾಳುಮೆಣಸು – 1 ಚಮಚ, ಜೀರಿಗೆ – 1 ಚಮಚ, ಸೋಂಪು – 1 ಚಮಚ, ಕೊತ್ತಂಬರಿ – 1 ಚಮಚ, ಒಣ ಕೊಬ್ಬರಿ – ಸ್ವಲ್ಪ. (ಈ ಎಲ್ಲಾ ಸಾಮಗ್ರಿಗಳನ್ನು ಹುರಿದು ಪುಡಿ ಮಾಡಿಕೊಳ್ಳಿ)

ತಯಾರಿಸುವ ವಿಧಾನ: ಒಂದು ಕುಕರ್ ಬಿಸಿಗಿಟ್ಟು ಅದಕ್ಕೆ 2 ಟೇಬಲ್ ಚಮಚ ಎಣ್ಣೆ ಹಾಕಿ ಕರಿಬೇವು, ಎರಡು ಒಣಮೆಣಸಿನಕಾಯಿ ಹಾಕಿ ಒಗ್ಗರಣೆ ಮಾಡಿಕೊಳ್ಳಿ. ಇದಕ್ಕೆ ಚಿಕನ್, ಸ್ವಲ್ಪ ಅರಿಸಿನ, ರುಚಿಗೆ ತಕ್ಕಷ್ಟು ಉಪ್ಪು, 1 ಚಮಚ ಅಚ್ಚ ಖಾರದ ಪುಡಿ ಹಾಕಿ ಹುರಿದುಕೊಳ್ಳಿ. ನಂತರ ಎರಡೂ ಟೊಮೆಟೊ ಹಣ್ಣನ್ನು ರುಬ್ಬಿ ಸೇರಿಸಿ. ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಹಸಿವಾಸನೆ ಹೋಗುವವರೆಗೂ ಹುರಿದುಕೊಳ್ಳಿ. ತಯಾರಿಸಿದ ಚೆಟ್ಟಿನಾಡು ಮಸಾಲಾ ಪೌಡರ್ ಸೇರಿಸಿ, ನೀರು ಹಾಕಿ ಒಂದು ಕೂಗು ಕೂಗಿಸಿಕೊಂಡರೆ ಚೆಟ್ಟಿನಾಡ್ ಚಿಕನ್ ಮಸಾಲ ಚಪಾತಿಯೊಂದಿಗೆ ಸವಿಯಲು ಸಿದ್ಧ.

(ಲೇಖಕಿ: ಹೇಮಾಸ್ ಕುಕಿಂಗ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಎಂ.ಎಫ್: ಹೂಡಿಕೆ ಮೌಲ್ಯ ಹೆಚ್ಚಳ

• ವಿಜಯ್ ಜೋಷಿ



ಬೆಂಗಳೂರು: 2020ರ ಆಗಸ್ಟ್‌ನಿಂದ ಈ ವರ್ಷದ ಆಗಸ್ಟ್‌ವರೆಗಿನ ಅವಧಿಯಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು ಸರಿಸುಮಾರು ಶೇಕಡ 47ರಷ್ಟು ಏರಿಕೆ ಕಂಡಿದೆ. ಇದೇ ಅವಧಿಯಲ್ಲಿ ದೇಶದಲ್ಲಿನ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿರುವ ಹೂಡಿಕೆಗಳ ಮೌಲ್ಯವು ಶೇ 29.92ರಷ್ಟು ಹೆಚ್ಚಳ ಕಂಡಿದೆ.

ವೈಯಕ್ತಿಕ ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡಿರುವ ಹೂಡಿಕೆ ಮೊತ್ತವು ಈ ವರ್ಷದ ಆಗಸ್ಟ್‌ಗೆ ₹ 19.40 ಲಕ್ಷ ಕೋಟಿಗೆ ತಲುಪಿದೆ. ಇದು, ಹಿಂದಿನ ವರ್ಷದ ಆಗಸ್ಟ್‌ನಲ್ಲಿದ್ದ ಹೂಡಿಕೆ ಮೌಲ್ಯಕ್ಕೆ ಹೋಲಿಸಿದರೆ ಶೇಕಡ 35.48ರಷ್ಟು ಜಾಸ್ತಿ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಮಾಹಿತಿ ನೀಡಿದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಆಗುವ ಹೂಡಿಕೆಗೆ ಅತಿಹೆಚ್ಚಿನ ಕೊಡುಗೆ ನೀಡುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೂರನೆಯ ಸ್ಥಾನದಲ್ಲಿ ಇದೆ. ಮುಂಬೈ ಮತ್ತು ದೆಹಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿ ಇವೆ ಎಂದು ಒಕ್ಕೂಟ ತಿಳಿಸಿದೆ.

'ಸಣ್ಣ ಹೂಡಿಕೆದಾರರು ನಿಶ್ಚಿತ ಠೇವಣಿ ಹಾಗೂ ಚಿನ್ನ ಹೊರತುಪಡಿಸಿ ಇತರ ಹೂಡಿಕೆಗಳ ಮೇಲೆ ಬಹಳ ಆಸಕ್ತಿ ತೋರಿಸುತ್ತಿದ್ದಾರೆ. ಇದರಿಂದಾಗಿ ಮ್ಯೂಚುವಲ್ ಫಂಡ್ ಹೂಡಿಕೆ ಜಾಸ್ತಿಯಾಗಿದೆ. ಹಣಕಾಸು ತಂತ್ರಜ್ಞಾನ ಕಂಪನಿಗಳು ಹೂಡಿಕೆಯನ್ನು ಸುಲಭವಾಗಿಸಿವೆ. ಈಕ್ವಿಟಿ, ಸಾಲಪತ್ರ ಆಧಾರಿತ ಫಂಡ್ ಮಾತ್ರವಲ್ಲದೆ, ಅಂತ-ರರಾಷ್ಟ್ರೀಯ ಫಂಡ್‌ಗಳಲ್ಲಿ ಹೂಡಿಕೆಗೆ ಅವಕಾಶ ಲಭ್ಯವಾಗಿರುವುದು ಕೂಡ ಒಂದು ಮುಖ್ಯ ಕಾರಣ' ಎಂದು ಮೋತಿಲಾಲ್ ಓಸ್ವಾಲ್ ಮ್ಯೂಚುವಲ್ ಫಂಡ್ ಕಂಪನಿಯ ಸಹಾಯಕ ನಿರ್ದೇಶಕ ಅಖಿಲ್ ಚತುರ್ವೇದಿ 'ಪ್ರಜಾವಾಣಿ' ಜೊತೆ ಅನಿಸಿಕೆ ಹಂಚಿಕೊಂಡರು.

ಕೋವಿಡ್ ಮೊದಲ ಅಲೆಯ ನಂತರದಲ್ಲಿ ದೇಶದ ಈಕ್ವಿಟಿ ಮಾರು-ಕಟ್ಟೆಗಳಲ್ಲಿನ ಹೂಡಿಕೆಯ ಮೌಲ್ಯವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಇದೇ ಅವಧಿಯಲ್ಲಿ, ವೈಯಕ್ತಿಕ ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳ ಮೂಲಕ ಮಾಡಿರುವ ಹೂಡಿಕೆಗಳ ಮೌಲ್ಯ ಕೂಡ ಶೇಕಡ 35.48ರಷ್ಟು ಹೆಚ್ಚಳ ಕಂಡಿದೆ. ವೈಯಕ್ತಿಕ ಹೂಡಿಕೆದಾರರ ಹೂಡಿಕೆ ಮೌಲ್ಯವು 2020ರ ಆಗಸ್ಟ್‌ನಲ್ಲಿ 14.32 ಲಕ್ಷ ಕೋಟಿ ಆಗಿತ್ತು. ಇದು ಈ ವರ್ಷದ ಆಗಸ್ಟ್‌ನಲ್ಲಿ 19.40 ಲಕ್ಷ ಕೋಟಿಗೆ ಏರಿದೆ. ಈ ಅವಧಿಯಲ್ಲಿ ಸಾಂಸ್ಥಿಕ ಹೂಡಿಕೆದಾರರ ಹೂಡಿಕೆ ಮೌಲ್ಯವು ಶೇ 24.02ರಷ್ಟು ಮಾತ್ರ ಏರಿಕೆ ಆಗಿದೆ.

'ಸಾಂಕ್ರಾಮಿಕದ ಅವಧಿಯಲ್ಲಿ ಜನರು ಅಗತ್ಯ ಹಾಗೂ ಅಗತ್ಯವಲ್ಲದ ವೆಚ್ಚಗಳ ಬಗ್ಗೆ ಅರಿತರು. ಇದರಿಂದಾಗಿ ಉಳಿತಾಯ ಪ್ರಮಾಣ ಹೆಚ್ಚಾಯಿತು. ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಕಡಿಮೆ ಇರುವುದು ಕೂಡ ಮ್ಯೂಚುವಲ್ ಫಂಡ್‌ಗಳ ಮೂಲಕ ಜನ ಈಕ್ವಿಟಿ ಮಾರುಕಟ್ಟೆಗಳಲ್ಲಿ ಭಾಗವ-ಹಿಸುವುದನ್ನು ಜಾಸ್ತಿ ಮಾಡಿದೆ' ಎಂದು ಎಡೆಲ್ವೈಸ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ದೀಪಕ್ ಜೈನ್ ತಿಳಿಸಿದರು.

ಅಂಕಿ-ಅಂಶಗಳು

₹27.78 ಲಕ್ಷ ಕೋಟಿ
2020ರ ಆಗಸ್ಟ್‌ನಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆ ಮೌಲ್ಯ

₹36.09 ಲಕ್ಷ ಕೋಟಿ
ಈ ವರ್ಷದ ಆಗಸ್ಟ್‌ನಲ್ಲಿನ ಹೂಡಿಕೆ ಮೌಲ್ಯ

ಸುರಕ್ಷತೆಯಲ್ಲಿ 'ಪಂಚ್'ಗೆ 5–ಸ್ಟಾರ್ ಶ್ರೇಯಾಂಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಟಾಟಾ ಮೋಟರ್ಸ್ ಅನಾವರಣ ಮಾಡಿರುವ 'ಪಂಚ್' ಕಾರು ವಯಸ್ಕ ಪ್ರಯಾಣಿಕರ ಸುರಕ್ಷತೆಯ ಮಾನದಂಡಗಳಲ್ಲಿ 5–ಸ್ಟಾರ್ ಶ್ರೇಯಾಂಕ ಪಡೆದಿದೆ ಎಂದು ಕಂಪನಿ ಹೇಳಿದೆ.

ಕಾರಿನಲ್ಲಿ ಮಕ್ಕಳು ಕುಳಿತಿದ್ದರೆ, ಅವರ ಸುರಕ್ಷತೆಗೆ ಗ್ಲೋಬಲ್ ಎನ್‌ಸಿಎಪಿ 4–ಸ್ಟಾರ್ ಶ್ರೇಯಾಂಕ ನೀಡಿದೆ. ಆಲ್ಟ್ರೋಜ್ ಮತ್ತು ನೆಕ್ಸಾನ್ ನಂತರ ಈ ಶ್ರೇಯಾಂಕ ಪಡೆದಿರುವ, ಟಾಟಾ ಮೋಟರ್ಸ್‌ನ ಮೂರನೆಯ ಮಾದರಿ ಇದು.

ಪಂಚ್ ಕಾರು ಸಬ್–ಕಾಂಪ್ಯಾಕ್ಟ್ ಎಸ್‌ಯುವಿ ಎಂದು ಕಂಪನಿಯು ಹೇಳಿಕೊಂಡಿದೆ. 'ಭಾರತದಲ್ಲಿನ ಅತ್ಯಂತ ಸುರಕ್ಷಿತ ವಾಹನಗಳಲ್ಲಿ ಒಂದು ಎಂದು ಕರೆಸಿಕೊಳ್ಳುವ ಪಂಚ್ ವಿನ್ಯಾಸವು ನಮ್ಮಲ್ಲಿ ಹೆಮ್ಮೆ ಮೂಡಿಸಿದೆ' ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನಗಳ ವಿಭಾಗದ ಅಧ್ಯಕ್ಷ ಶೈಲೇಶ್ ಚಂದ್ರ ಹೇಳಿದ್ದಾರೆ.

ಪಂಚ್ ಕಾರಿನ ಬುಕಿಂಗ್ ಈಗಾಗಲೇ ಆರಂಭ ಆಗಿದೆ. ಈ ಕಾರಿನ ಬೆಲೆಯನ್ನು ಕಂಪನಿಯು ಸೋಮವಾರ ಪ್ರಕಟಿಸುವ ನಿರೀಕ್ಷೆ ಇದೆ.

ಕರೂರ್ ವೈಶ್ಯ ಬ್ಯಾಂಕ್: ನೇರ ತೆರಿಗೆ ಪಾವತಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರೂರ್ ವೈಶ್ಯ ಬ್ಯಾಂಕ್‌ಗೆ ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಪರವಾಗಿ ನೇರ ತೆರಿಗೆಗಳನ್ನು ಸಂಗ್ರಹಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ.

ಅನುಮತಿ ದೊರೆತ ನಂತರ ಬ್ಯಾಂಕ್, ಸಿಬಿಡಿಟಿ ಜೊತೆ ಕೆಲವು ಪ್ರಕ್ರಿಯೆಗಳನ್ನು ಆರಂಭಿಸಿದ್ದು, ಅವು ಪೂರ್ಣಗೊಂಡ ನಂತರದಲ್ಲಿ ಗ್ರಾಹಕರು ನೇರ ತೆರಿಗೆ ಮೊತ್ತವನ್ನು ಬ್ಯಾಂಕ್‌ನ ಯಾವುದೇ ಶಾಖೆಯ ಮೂಲಕ ಪಾವತಿ ಮಾಡಬಹುದು. ಇಂಟರ್ನೆಟ್ ಬ್ಯಾಂಕಿಂಗ್ ಅಥವಾ ಮೊಬೈಲ್ ಆ್ಯಪ್ ಮೂಲಕವೂ ನೇರ ತೆರಿಗೆ ಮೊತ್ತ ಪಾವತಿ ಮಾಡಬಹುದು ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

'ನೇರ ತೆರಿಗೆಗಳನ್ನು ಪಾವತಿಸಲು ಅವಕಾಶ ಕಲ್ಪಿಸ ಬೇಕು ಎಂಬ ಬೇಡಿಕೆಯು ನಮ್ಮ ಗ್ರಾಹಕರಿಂದ ಬಹಳ ಕಾಲ ದಿಂದಲೂ ಇತ್ತು' ಎಂದು ಕರೂರ್ ವೈಶ್ಯ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಬಿ. ರಮೇಶ್ ಬಾಬು ಹೇಳಿದ್ದಾರೆ.

ಸವದತ್ತಿ: ಹತ್ತಿಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ಸವದತ್ತಿ: ಎಪಿಎಂಸಿ ಪ್ರಾಂಗಣದಲ್ಲಿ ವಿಜಯದಶಮಿ ಪ್ರಯುಕ್ತ ಶುಕ್ರವಾರ ಹತ್ತಿ ಟೆಂಡರ್ ಪ್ರಕ್ರಿಯೆ ಆರಂಭಗೊಂಡಿದ್ದು, ಮೊದಲ ದಿನವೇ ಪ್ರತಿ ಕ್ವಿಂಟಲ್ ಹತ್ತಿಗೆ ₹ 9,019 ದರ ಸಿಕ್ಕಿದೆ. ಇದು ಈ ವರ್ಷದ ದಾಖಲೆ ಬೆಲೆ.

2019-20ರಲ್ಲಿ ಹತ್ತಿ ಬೆಲೆಯು ₹ 6,000 ದಾಟಿರಲಿಲ್ಲ. ಅತಿವೃಷ್ಟಿಯಿಂದ ಹತ್ತಿ ಬೆಳೆ ರೋಗಕ್ಕೆ ತುತ್ತಾಗಿತ್ತು. ಕಾರಣ ತಾಲ್ಲೂಕಿನಾದ್ಯಂತ ಹತ್ತಿಯನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯಲಾಗಿದೆ. ಮಾರುಕಟ್ಟೆಯಲ್ಲಿ ಹತ್ತಿ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಶುಕ್ರವಾರ ಲೀಟರಿಗೆ 35 ಪೈಸೆ ಹೆಚ್ಚಳ ಮಾಡಿವೆ.ಮುಂಬೈನಲ್ಲಿ ಪೆಟ್ರೋಲ್ ಬೆಲೆಯು ಲೀಟರಿಗೆ ₹111.09 ಆಗಿದೆ. ಡೀಸೆಲ್ ಬೆಲೆಯು ಲೀಟರಿಗೆ ₹101.78 ಆಗಿದೆ. ಸೆಪ್ಟೆಂಬರ್ ಕೊನೆಯ ವಾರದ ನಂತರದ ಪೆಟ್ರೋಲ್ ಬೆಲೆಯನ್ನು 14 ಬಾರಿ, ಡೀಸೆಲ್ ಬೆಲೆಯನ್ನು 17 ಬಾರಿ ಏರಿಕೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 108.80 ಹಾಗೂ ಡೀಸೆಲ್ ಬೆಲೆಯು ₹ 99.63 ಆಗಿದೆ.

ಬೀದರ್, ಕೊಪ್ಪಳ: ₹100 ದಾಟಿದ ಡೀಸೆಲ್ ದರ

ಕಲಬುರಗಿ: ಕಲ್ಯಾಣ ಕರ್ನಾಟಕದ ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಶುಕ್ರವಾರ ಪ್ರತಿ ಲೀಟರ್‌ನ ಡೀಸೆಲ್ ದರವು ₹ 100ರ ಗಡಿ ದಾಟಿದೆ. ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಡೀಸೆಲ್ ದರವು ₹ 99ಕ್ಕೆ ತಲುಪಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಮುಂಬೈ ಧಾರಣೆ

ಶೇಂಗಾ

15-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (-)
ಒಂದು ವಾರದ ಡೆಲಿವರಿ	1445 (-)
ಸೋಯಾ ಕಚ್ಚಾ	1230 (-)
ಪಾಮ್ ವಾರದ ಡೆಲಿವರಿ	1203(-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,550 (-)
ಬೆಳ್ಳಿ ಕೆ.ಜಿ
63,350 (-)

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1440 (-)
ಸೋಯಾ (ರಿಫೈನ್ಡ್)	₹1290(-)
ಸೂರ್ಯಕಾಂತಿ (ರಿಫೈನ್ಡ್)	₹1325 (-)
ಪಾಮೋಲಿನ್	₹1205 (-)

ಭಾರತ ಸ್ಥಾನ ಕುಸಿತ ಆಘಾತಕಾರಿ: ಕೇಂದ್ರ

ನವದೆಹಲಿ (ಪಿಟಿಐ): 'ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಶ್ರೇಣಿಯನ್ನು ಕಡಿಮೆ ಮಾಡಿರುವುದು ಆಘಾತಕಾರಿ, ಇದಕ್ಕೆ ಬಳಸಿರುವ ವಿಧಾನವು ಅವೈಜ್ಞಾನಿಕ' ಎಂದು ಶುಕ್ರವಾರ ಕೇಂದ್ರ ಸರ್ಕಾರವು ಹೇಳಿದೆ.

ಜಾಗತಿಕ ಹಸಿವಿನ ವರದಿ 2021ಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿ-ಸಿರುವ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು, 'ಅಪೌಷ್ಟಿಕತೆಯಿಂದ ಬಳಲುತ್ತಿರುವ ಜನಸಂಖ್ಯೆಯ ಅನುಪಾತದ ಮೇಲೆ ಆಹಾರ ಮತ್ತು ಕೃಷಿ ಸಂಸ್ಥೆಯ (ಎಫ್‌ಎಒ) ಅಂದಾಜಿನ ಮೇರೆಗೆ ಭಾರತದ ಶ್ರೇಣಿಯನ್ನು ಕಡಿಮೆಗೊ-ಳಿಸಿದ್ದು ಆಘಾತಕಾರಿ. ವರದಿಯು ವಾಸ್ತವ ಸತ್ಯಾಂಶ ಮತ್ತು ಗಂಭೀರ ಅಧ್ಯಯನದ ಕೊರತೆಯಿಂದ ಬಳಲುತ್ತಿದೆ' ಎಂದು ತಿಳಿಸಿದೆ.

'ಎಫ್‌ಎಒ ಬಳಸಿರುವ ವಿಧಾನವು ಅವೈಜ್ಞಾನಿಕವಾಗಿದೆ. ಜನಸಂಖ್ಯೆಯ-ನ್ನು ಆಧರಿಸಿ 'ಗ್ಯಾಲ್‌ಅಪ್' ಮೂಲಕ ನಾಲ್ಕು ಪ್ರಶ್ನೆಗಳನ್ನಿಟ್ಟುಕೊಂಡು ದೂರವಾಣಿ ಮೂಲಕ ಸಂಗ್ರಹಿಸಿದ ಅಭಿಪ್ರಾಯಗಳ ಫಲಿತಾಂಶವನ್ನು ವರದಿಯು ಆಧರಿಸಿದೆ. ಅಪೌಷ್ಟಿಕತೆಯ ಪ್ರಮಾಣವನ್ನು ಎತ್ತರ ಮತ್ತು ತೂಕದ ಮೂಲಕ ಅಳೆಯ-ಲಾಗುತ್ತದೆ. ಆದರೆ ಗ್ಯಾಲ್ ಅಪ್ ಈ ವಿಧಾನವನ್ನು ಅನುಸರಿಸಿಲ್ಲ' ಎಂದು ಸಚಿವಾಲಯವು ಹೇಳಿದೆ.

ಅಭಿನಂದನೆಗಳು ಮೋದಿಜಿ: ಸಿಬಲ್

ನವದೆಹಲಿ: ಜಾಗತಿಕ ಹಸಿವು ಸೂಚ್ಯಂಕ 2021ರ ಪಟ್ಟಿಯಲ್ಲಿ ಭಾರತ 101ನೇ ಸ್ಥಾನಕ್ಕೆ ಕುಸಿದಿರುವ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ವ್ಯಂಗ್ಯವಾಗಿ 'ಅಭಿನಂದನೆ' ಸಲ್ಲಿಸಿದ್ದಾರೆ.

'ರಾಷ್ಟ್ರದ ಬಡತನ ಮತ್ತು ಹಸಿವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿದ್ದಕ್ಕೆ ಮೋದಿ ಅವರಿಗೆ ಅಭಿನಂದನೆಗಳು' ಎಂದು ವ್ಯಂಗ್ಯವಾಗಿ ಟ್ವೀಟ್ ಮಾಡಿರುವ ಕಪಿಲ್ ಸಿಬಲ್, ಜಾಗತಿಕ ಹಸಿವು ಸೂಚ್ಯಂಕ ಪಟ್ಟಿಯಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ನೇಪಾಳ ರಾಷ್ಟ್ರಗಳಿಗಿಂತ ಭಾರತ ಹಿಂದಿರುವುದನ್ನು ಒತ್ತಿ ಹೇಳಿದ್ದಾರೆ.

'ಅಭಿನಂದನೆಗಳು ಮೋದಿ ಜೀ: ಬಡತನ, ಹಸಿವು, ಭಾರತವನ್ನು ಜಾಗತಿಕ ಶಕ್ತಿಯಾಗಿ ನಿರ್ಮಿಸುವಲ್ಲಿ, ನಮ್ಮ ಡಿಜಿಟಲ್ ಆರ್ಥಿಕತೆಯನ್ನು ತೊಡೆದು ಹಾಕಿದ್ದಕ್ಕೆ ಅಂಭಿನಂದನೆ ಎಂದು ವ್ಯಂಗ್ಯವಾಡಿದ್ದಾರೆ.

ಅತ್ಯುತ್ತಮ ಉದ್ಯೋಗದಾತರ ಪಟ್ಟಿಯಲ್ಲಿ ರಿಲಯನ್ಸ್


ನವದೆಹಲಿ (ಪಿಟಿಐ): ಆದಾಯ, ಲಾಭ ಮತ್ತು ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ದೇಶದ ಅತಿದೊಡ್ಡ ಕಂಪನಿಯಾಗಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, 'ವಿಶ್ವದ ಅತ್ಯುತ್ತಮ ಉದ್ಯೋಗದಾತ'ರ ಪಟ್ಟಿಯಲ್ಲಿ 52ನೆಯ ಸ್ಥಾನ ಪಡೆದಿದೆ. ಭಾರತ ಮೂಲದ ಕಂಪನಿಯೊಂದು ಈ ಪಟ್ಟಿಯಲ್ಲಿ ಪಡೆದಿರುವ ಅತ್ಯುತ್ತಮ ಸ್ಥಾನ ಇದು.

ಫೋರ್ಬ್ಸ್ ಪತ್ರಿಕೆಯು ಈ ಪಟ್ಟಿಯನ್ನು ಸಿದ್ಧಪಡಿಸಿದೆ. ಜಾಗತಿಕವಾಗಿ 750 ಕಂಪನಿಗಳಲ್ಲಿನ ಸ್ಥಿತಿಗತಿ ಪರಿಶೀಲಿಸಿ ಈ ಪಟ್ಟಿ ಸಿದ್ಧವಾಗಿದೆ. ಮೊದಲ ನೂರು ಕಂಪನಿಗಳ ಸಾಲಿನಲ್ಲಿ ಭಾರತದ ಐಸಿಐಸಿಐ ಬ್ಯಾಂಕ್ (65ನೇ ಸ್ಥಾನ), ಎಚ್‌ಡಿಎಫ್‌ಸಿ ಬ್ಯಾಂಕ್ (77), ಎಚ್‌ಸಿಎಲ್ ಟೆಕ್ನಾಲಜೀಸ್ (90) ಸ್ಥಾನ ಪಡೆದಿವೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (119), ಎಲ್‌ಆ್ಯಂಡ್‌ಟಿ (127), ಎಲ್‌ಐಸಿ (504), ಇನ್ಫೊಸಿಸ್ (588), ಟಾಟಾ ಸಮೂಹ (746) ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಇತರ ಕೆಲವು ಕಂಪನಿಗಳು. ಉದ್ಯೋಗಿಗಳು ನೀಡಿದ ಮಾಹಿತಿ ಆಧರಿಸಿ ಈ ಪಟ್ಟಿ ಸಿದ್ಧಪಡಿಸಿರುವುದಾಗಿ ಫೋರ್ಬ್ಸ್ ಹೇಳಿದೆ.

ದಕ್ಷಿಣ ಕೊರಿಯಾ ಮೂಲದ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಅಮೆರಿಕದ ಐಬಿಎಂ, ಮೈಕ್ರೊಸಾಫ್ಟ್, ಅಮೆಜಾನ್, ಆ್ಯಪಲ್, ಆಲ್ಫಾಬೆಟ್ ಮತ್ತು ಡೆಲ್ ಟೆಕ್ನಾಲಜೀಸ್ ಇವೆ. ಚೀನಾದ ಹುಆವೆ 8ನೆಯ ಸ್ಥಾನದಲ್ಲಿದೆ.

ಕರ್ಣಾಟಕ ಬ್ಯಾಂಕ್ ಅಧ್ಯಕ್ಷರಾಗಿ ಪ್ರದೀಪ್ ಕುಮಾರ ಪಂಜ



ಮಂಗಳೂರು: ಕರ್ಣಾಟಕ ಬ್ಯಾಂಕಿನ ಸ್ವತಂತ್ರ ನಿರ್ದೇಶಕ ಪ್ರದೀಪ್ ಕುಮಾರ್ ಪಂಜ ಅವರನ್ನು ಬ್ಯಾಂಕಿನ ಅರೆಕಾಲಿಕ ಅಧ್ಯಕ್ಷರನ್ನಾಗಿ ನವೆಂಬರ್ 14ರಿಂದ ಅನ್ವಯ-ವಾಗುವಂತೆ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದ್ದು, ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದೆ.

ಬ್ಯಾಂಕಿನ ಈಗಿನ ಅಧ್ಯಕ್ಷ ಪಿ. ಜಯರಾಮ ಭಟ್ ಅವರ ಅಧಿಕಾರ ಅವಧಿ ನವೆಂಬರ್ 13ಕ್ಕೆ ಮುಗಿಯಲಿದೆ. ಪ್ರದೀಪ್ ಕುಮಾರ್ ದಕ್ಷಿಣ ಕನ್ನಡ ಜಿಲ್ಲೆಯ ಪಂಜದವರಾಗಿ-ದ್ದು, 2020ರ ಆಗಸ್ಟ್ 19ರಿಂದ ಕರ್ಣಾಟಕ ಬ್ಯಾಂಕ್ ನಿರ್ದೇಶಕರಾ-ಗಿದ್ದಾರೆ.

ಮನಮೋಹನ್ ಜೊತೆ ಫೋಟೊ ಸಚಿವ ಮಾಂಡವೀಯ ವಿವಾದ

ಪ್ರಜಾವಾಣಿ ವಾರ್ತೆ


ಮನಸುಖ್ ಮಾಂಡವೀಯ

ನವದೆಹಲಿ: ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಜತೆ ಫೋಟೊ ತೆಗೆಸಿಕೊಂಡು ಅದನ್ನು ಬಿಡುಗಡೆ ಮಾಡಿದ ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಅವರ ನಡೆಯ ಬಗ್ಗೆ ಟೀಕೆ ವ್ಯಕ್ತವಾಗಿದೆ. ಸಿಂಗ್ ಆರೋಗ್ಯ ವಿಚಾರಿಸಲು ಮಾಂಡವೀಯ ಅವರು ಏಮ್ಸ್‌ಗೆ ತೆರಳಿದ್ದರು. ಜತೆಗೆ ಛಾಯಾಗ್ರಾಹಕರನ್ನೂ ಕರೆದೊಯ್ದಿ-ದ್ದರು. ಸಿಂಗ್ ಕುಟುಂಬದ ಸದಸ್ಯರ ಆಕ್ಷೇಪದ ನಡುವೆಯೂ ಫೋಟೊ ತೆಗೆಯಲಾಗಿದೆ.

ಮಾಂಡವೀಯ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಏಮ್ಸ್ ಆಸ್ಪತ್ರೆಗೆ ತೆರಳಿ ಮನಮೋಹನ್ ಸಿಂಗ್ ಅವರ ಆರೋಗ್ಯ ವಿಚಾರಿಸಿದರು. ಸಿಂಗ್ ಅವರ ಕುಟುಂಬ ಮತ್ತು ವೈದ್ಯರ ಜೊತೆ ರಾಹುಲ್ ಗಾಂಧಿ ಅವರು ಮಾತುಕತೆ ನಡೆಸಿದ ಫೋಟೊಗಳು ಬಿಡುಗಡೆ ಆದವು. ಅದೇವೇಳೆ, ಹಾಸಿಗೆ ಮೇಲೆ ಮಲಗಿರುವ ಮನಮೋಹನ್ ಸಿಂಗ್ ಅವರ ಜೊತೆ ಮಾಂಡವೀಯ ಅವರು ಇದ್ದ ಫೋಟೊಗಳೂ ಬಿಡುಗಡೆ ಆದವು. ಮಾಂಡವೀಯ ಅವರು ಆಸ್ಪತ್ರೆಗೆ ಛಾಯಾಗ್ರಾಹಕರ ಜೊತೆ ತೆರಳಿದ್ದಕ್ಕೂ ಆಕ್ಷೇಪ ವ್ಯಕ್ತವಾಗಿದೆ.

ಈ ವಿವಾದಗಳ ಕುರಿತು ಏಮ್ಸ್ ಅಧ್ಯಕ್ಷರೂ ಆಗಿರುವ ಮಾಂಡವೀಯ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಮಾಂಡವೀಯ ಅವರ ನಡೆಯಿಂದ ಸಿಂಗ್ ಅವರ ಕುಟುಂಬಕ್ಕೆ ನೋವುಂಟಾಗಿದೆ. 'ಛಾಯಾಗ್ರಾ-ಹಕರನ್ನು ಕರೆದುಕೊಂಡು ಹೋಗಿ ಫೋಟೊ ತೆಗೆಸಿಕೊಳ್ಳುವುದಕ್ಕೆ ನಮ್ಮ ತಾಯಿ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಅವರ ಆಕ್ಷೇಪವನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು. ಇದರಿಂದ ನಮ್ಮ ತಾಯಿಗೆ ಬೇಸರವಾಗಿದೆ. ನನ್ನ ಪೋಷಕರು ಕಷ್ಟಕರ ಪರಿಸ್ಥಿತಿಯಿಂದ ಹೊರಬರಲು ಶ್ರಮಿಸುತ್ತಿದ್ದಾರೆ. ಅವರು ವಯಸ್ಸಾದವರು, ಮೃಗಾಲಯದ-ಲ್ಲಿರುವ ಪ್ರಾಣಿಗಳಲ್ಲ' ಎಂದು ಸಿಂಗ್ ಅವರ ಮಗಳು ದಮನ್‌ದೀಪ್ ಸಿಂಗ್ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಎಐಸಿಸಿ ಕಾರ್ಯದರ್ಶಿ ಪ್ರಣವ್ ಝಾ, 'ಡಾ. ಮನಮೋಹನ್ ಸಿಂಗ್ ಅವರು ಚೇತರಿಸಿಕೊಳ್ಳುತ್ತಿದ್ದಾ-ರೆ. ನಿನ್ನೆಗಿಂತ (ಗುರುವಾರ) ಇವತ್ತು ಉತ್ತಮ ಆರೋಗ್ಯದಿಂದ ಇದ್ದಾರೆ. ಅವರು ಬೇಗ ಗುಣಮುಖರಾಗು-ವಂತೆ ನಾವು ಪ್ರಾರ್ಥಿಸೋಣ. ಅವರ ಆರೋಗ್ಯದ ಕುರಿತು ಯಾವುದೇ ರೀತಿಯ ಊಹಾಪೋಹಗಳು ಅನಗತ್ಯ ಮತ್ತು ಕೀಳು ಅಭಿರುಚಿ-ಯದ್ದಾಗಿರುತ್ತದೆ. ಮಾಜಿ ಪ್ರಧಾನಿಯ ಖಾಸಗಿತನವನ್ನು ಗೌರವಿಸಬೇಕು ಎಂದು ಎಲ್ಲರನ್ನೂ ಕೋರುತ್ತೇವೆ' ಎಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್ ನಾಯಕ ಮಣಿಕ್ಕಮ್ ಟಾಗೋರ್, 'ಆರೋಗ್ಯ ಸಚಿವರು ಕ್ಯಾಮೆರಾ ಜೊತೆ ಆಸ್ಪತ್ರೆಗೆ ಹೋಗಿದ್ದು ಏಕೆ. ಇದು ಖಾಸಗೀತನದ ಗಂಭೀರ ಉಲ್ಲಂಘನೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕೂಡಾ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ-ರು. ನಾವು ಎಂದಾದರೂ ಅವರ ಫೋಟೊ ತರಿಸಿಕೊಂಡೆವೇ? ಇದಕ್ಕೆ ಏಮ್ಸ್ ಉತ್ತರಿಸಬೇಕು. ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸಂಪುಟ ಸದಸ್ಯರಿಗೆ ಈ ರೀತಿಯ ಕ್ಷುಲ್ಲಕ ಕೆಲಸಗಳಿಂದ ದೂರ ಇರಲು ಹೇಳುವಂತೆ ಕೋರಿ ನಾನು ರಾಷ್ಟ್ರಪತಿಗೆ ಪತ್ರ ಬರೆಯುತ್ತೇನೆ' ಎಂದಿದ್ದಾರೆ.

ಮುಖ್ಯಾಂಶಗಳು

- ಆಸ್ಪತ್ರೆಗೆ ಛಾಯಾಗ್ರಾಹಕರ ಜೊತೆ ತೆರಳಿದ್ದಕ್ಕೂ ಆಕ್ಷೇಪ
- ಇದು ಖಾಸಗೀತನದ ಗಂಭೀರ ಉಲ್ಲಂಘನೆ ಎಂದ ಮಣಿಕ್ಕಮ್ ಟಾಗೋರ್

ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಶನಿವಾರ, 16 ಅಕ್ಟೋಬರ್ 2021

ಅರ್ಥಪೂರ್ಣ ದಿನಕ್ಕಿರಲಿ ಆರೋಗ್ಯಕರ ಹವ್ಯಾಸ..





ಸುಕೃತ ಎಸ್.

ದಿನ ದೂಡುವುದು ಎನ್ನುವ ಮಾತೊಂದಿದೆ. ಸುಮ್ಮನೆ ಕುಳಿತು ದಿನ ದೂಡಬಹುದು. ಇದು ನಮ್ಮ ಸುಂದರ ಬದುಕಿನ ವ್ಯರ್ಥ ಕ್ಷಣಗಳೇ ಸರಿ. ಪ್ರತಿ ಕ್ಷಣವನ್ನು ಪ್ರತಿ ದಿನವನ್ನು ನಾವು ಜೀವಿಸಬೇಕು, ಅರ್ಥಪೂರ್ಣವಾಗಿ. ಪ್ರತಿ ದಿನವೂ ನಮ್ಮ ಜೀವನದ ಮತ್ತೊಂದು ಕ್ರಿಯಾಶೀಲ ದಿನವಾಗಿರಬೇಕು. ನಮ್ಮ ಉನ್ನತಿಗೆ ಪ್ರತಿ ದಿನವೂ ಪೂರಕವಾಗಿರಬೇಕು.


ಕ್ರಿಯಾಶೀಲವಾಗಿ, ಚಟುವಟಿಕೆಯಿಂದ ಹೇಗೆ ದಿನವನ್ನು ಅರ್ಥಪೂರ್ಣವಾಗಿ ಅನುಭವಿಸಬಹುದು? ಅದು ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಆಸಕ್ತಿ ಹೀಗೆ ನಾನಾ ಕಾರಣಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ನಮ್ಮ ಕಚೇರಿ ಕೆಲಸಗಳ ಮಧ್ಯೆಯೂ ನಾವು ಅರ್ಥಪೂರ್ಣವಾಗಿ ನಮ್ಮ ಉಳಿದ ಸಮಯವನ್ನು ಜೀವಿಸಬಹುದು. ರಜಾ ದಿನಗಳನ್ನಂತೂ ಕೇವಲ ಮಲಗುವುದು, ಟಿ.ವಿ ನೋಡುವುದು, ಸುತ್ತಾಡುವುದರಲ್ಲೇ ಕಳೆಯಬೇಕಾಗಿಲ್ಲ. ಮನೆಯಲ್ಲೇ ಇದ್ದು ಅರ್ಥಪೂರ್ಣವಾಗಿ ದಿನವನ್ನು ಅನುಭವಿಸಬಹುದು.

- ಅರ್ಥಪೂರ್ಣ ದಿನಕ್ಕೆ ಬೆಳಿಗ್ಗೆಯ ನಮ್ಮ ಚಟುವಟಿಕೆಗಳೇ ನಾಂದಿ. ಬೆಳಿಗ್ಗೆ ಬೇಗನೆ ಎದ್ದು ಉದಯಿಸಿದ ಸೂರ್ಯನನ್ನು ನೋಡಿ, ಎಳೆ ಕಿರಣಗಳನ್ನು ಅನುಭವಿಸುವುದೇ ಒಂದು ಸುಖಕರ ಅನುಭವ. ಇದಕ್ಕಿಂದ ಒಳ್ಳೆಯ ಪ್ರಾರಂಭ ಬಹುಶಃ ಇಲ್ಲ. ನಿತ್ಯಕರ್ಮಗಳನ್ನು ಮುಗಿಸಿ, ಕೆಲವು ನಿಮಿಷಗಳನ್ನು ನಾವು ನಮಗಾಗಿ ಕಳೆಯಬೇಕು. ಕೆಲವು ನಿಮಿಷಗಳ ವ್ಯಾಯಾಮ, ಧ್ಯಾನ, ನಡಿಗೆ.. ಇದು ದಿನದ ಉತ್ತಮ ಆರಂಭ.
- ಇವೆಲ್ಲ ಆದ ಬಳಿಕ, ಈ ದಿನದ ನಮ್ಮ ಕೆಲಸ ಕಾರ್ಯಗಳನ್ನು ಒಮ್ಮೆ ಯೋಚಿಸಿ, ಮನಸ್ಸಿನಲ್ಲೇ ಯೋಜನೆ ರೂಪಿಸುವುದು. ಅಗತ್ಯವಾಗಿ, ತಕ್ಷಣದಲ್ಲಿ ಆಗಬೇಕಾದ ಕೆಲಸ ಏನು, ಹೇಗೆ ಮಾಡುವುದು ಇತ್ಯಾದಿ. ಆದ್ಯತೆಯ ಮೇರೆಗೆ ನಮ್ಮ ಕೆಲಸ ಕಾರ್ಯಗಳನ್ನು ರೂಪಿಸಿಕೊಂಡು ಮುಂದೆ ಸಾಗಬೇಕು.
- ಕನಿಷ್ಠ ರಜಾ ದಿನಗಳಲ್ಲಾದರೂ ಆಹಾರವನ್ನು ಕೇವಲ ಇಂಧನದಂತೆ ಸೇವಿಸದೇ ನಿಧಾನವಾಗಿ ಸ್ವಾದವನ್ನು ಸವಿಯುತ್ತಾ ತಿನ್ನುವುದು ಉತ್ತಮ. ತಿನ್ನುವಾಗ ಟಿ.ವಿ ನೋಡುವುದು, ಮೊಬೈಲ್ ನೋಡುವುದು ಅಥವಾ ಏನನ್ನೋ ಓದುವುದನ್ನು ನಿಲ್ಲಿಸಿದರೆ ಆರೋಗ್ಯಕ್ಕೂ ಒಳ್ಳೆಯದು. ಜೊತೆಗೆ ಆಹಾರವನ್ನು ಆಸ್ವಾದಿಸಬಹುದು. ಅಡುಗೆ ಮಾಡಿದವರಿಗೆ ಒಂದು ಧನ್ಯವಾದವನ್ನೂ ಹೇಳಬಹುದು!
- ಪುಸ್ತಕ ಓದುವುದು ಮನುಷ್ಯನ ಬೌದ್ಧಿಕ ಬೆಳವಣಿಗೆಗೆ ಬಹಳ ಸಹಕಾರಿ. ಓದು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುತ್ತದೆ. ಅದು ಯಾವುದೇ ಪುಸ್ತಕವಾಗಿರಬಹುದು. ಅದು ಅವರವರ ಅಭಿರುಚಿಗೆ ಬಿಟ್ಟದ್ದು.
- ಸಂಜೆ ವೇಳೆ ಮನೆಯಿಂದ ಹೊರಬಿದ್ದು, ವಾಯುವಿಹಾರ ಮಾಡಬಹುದು. ಮನೆಗೆ ಹತ್ತಿರದ ಉದ್ಯಾನವನ್ನು ಒಮ್ಮೆ ಸುತ್ತಿಬಂದು ಮನಸ್ಸನ್ನು ಇನ್ನಷ್ಟು ಚೈತನ್ಯಪೂರ್ಣವನ್ನಾಗಿಸಿಕೊಳ್ಳಬಹುದು. ಸಮುದ್ರ ತಟದವರಾಗಿದ್ದರೆ, ಸಮುದ್ರಕ್ಕೆ ಮುಖ ಮಾಡಿ ಕೂತು, ಅಲೆಗಳಿಗೆ ಕಿವಿಯಾಗಿ, ಕಣ್ಣಾಗಿ ಮನಸ್ಸಿನ ಆಯಾಸವನ್ನು ತಣಿಸಿಕೊಳ್ಳಬಹುದು.
- ಇಷ್ಟದ ಸಿನಿಮಾ ನೋಡಬಹುದು. ಮನೆಯವರೆಲ್ಲಾ ಕೂತು ಒಂದು ಸಿನಿಮಾ ನೋಡುವುದು, ನೋಡಿದ ನಂತರ ಸಿನಿಮಾ ಕುರಿತು ಸಣ್ಣ ಚರ್ಚೆ ಮಾಡುವುದು ಮನೆಯ ವಾತಾವರಣವನ್ನು ಆತ್ಮೀಯವಾಗಿಸುತ್ತದೆ. ಮನೆಯ ಸದಸ್ಯರ ನಡುವಿನ ಸಂಬಂಧವನ್ನು ಬಿಗಿಯಾಗಿಸುತ್ತದೆ. ಸಿನಿಮಾ ಚರ್ಚೆ ಅಂತಲ್ಲಾ, ಯಾವುದಾದರೂ ವಿಷಯದ ಕುರಿತು ಮನೆಮಂದಿಯಲ್ಲಾ ದಿನಕ್ಕೆ ಒಂದು ಬಾರಿಯಾದರೂ ಒಟ್ಟಿಗೆ ಕೂತು ಚರ್ಚಿಸುವ, ಹರಟುವ ಅಭ್ಯಾಸ ಬೆಳೆಸಿಕೊಳ್ಳುವುದು ಉತ್ತಮ ನಡವಳಿಕೆ.
- ಏನೋ ಒಂದು ಯೋಜನೆ ಹಾಕಿಕೊಂಡಿರಬಹುದು. ಅದರ ಪ್ರಾರಂಭಕ್ಕೆ ಉತ್ತಮ ಘಳಿಗೆ ದಿನಕ್ಕಾಗಿ ಕಾಯುವ ಬದಲು, ಇಂದೇ ಪ್ರಾರಂಭಿಸಿ. ಒಳ್ಳೆಯ ಯೋಚನೆ ಕೆಲಸಗಳಿಗೆ ದಿನ ದೂಡದೇ ಇಂದೇ ನಾಂದಿ ಆಡಬಹುದು.

ದಿನವನ್ನು ಹೀಗೆ ಕಳೆಯಬೇಕು, ಇದೇ ಅರ್ಥಪೂರ್ಣ ಮಾರ್ಗ ಎನ್ನುವ ಮಾರ್ಗಸೂಚಿ ಎಲ್ಲೂ ಇಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಆದರೆ, ಇಂಥ ಕೆಲವು ಅಭ್ಯಾಸಗಳು ನಮ್ಮ ದಿನವನ್ನು ಅರ್ಥಪೂರ್ಣವಾಗಿಸುತ್ತವೆ; ನಮ್ಮ ಬದುಕನ್ನೂ ಕೂಡ!

ಋತುಬಂಧದ ಚರ್ಮದ ಸಮಸ್ಯೆಯೇ? ಹಾರ್ಮೋನ್ ಕಾರಣ ಇರಬಹುದು...

ಆರೋಗ್ಯ



'ಯಾಕೋ ಇತ್ತೀಚೆಗೆ ನನ್ನ ಚರ್ಮದ ಆರೋಗ್ಯ ಕೆಡುತ್ತಿದೆ. ಸದಾ ಕಾಂತಿಯಿಂದ ಹೊಳೆಯುತ್ತಿದ್ದ ಚರ್ಮ ಇತ್ತೀಚೆಗೆ ಕಳೆಗುಂದುತ್ತಿದೆ. ವಯಸ್ಸಿನಲ್ಲೇ ಮೂಡದ ಮೊಡವೆಗಳು ಈಗ ಮುಖದಲ್ಲಿ ಕಾಣಿಸುತ್ತಿವೆ. ದಿನಕ್ಕೆ 6 ಲೀಟರ್‌ನಷ್ಟು ನೀರು ಕುಡಿಯುತ್ತೇನೆ, ಆದರೂ ಚರ್ಮದಲ್ಲಿ ನೆರಿಗೆ ಮೂಡುತ್ತಿದೆ. ತರಕಾರಿ, ಹಣ್ಣು-ಹಂಪಲು ಸೇವನೆಯಿಂದಲೂ ಚರ್ಮದ ಆರೋಗ್ಯ ಸುಧಾರಿಸುತ್ತಿಲ್ಲ. ತ್ವಚೆಯ ಅಂದ ಹೆಚ್ಚಿಸಿಕೊಳ್ಳುವ ಸಲುವಾಗಿ ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ಉತ್ಪನ್ನಗಳನ್ನು ಬಳಸಿ ನೋಡಿದ್ದೇನೆ. ಆದರೂ ಸರಿಯಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ 43 ವರ್ಷದ ಮಾಯಾ ಭಾರದ್ವಜ್.

ಇದು ಕೇವಲ ಮಾಯಾರೊಬ್ಬರ ಸಮಸ್ಯೆ ಇಲ್ಲ. ಬಹುತೇಕ ಋತುಬಂಧದ ಸಮೀಪವಿರುವ ಹೆಂಗಸರ ನೋವಿದು. ತ್ವಚೆಯ ಆರೋಗ್ಯದ ಬಗ್ಗೆ ಅಪಾರ ಕಾಳಜಿ ವಹಿಸಿದರೂ ಕೂಡ ಸಮಸ್ಯೆಗಳು ಕಾಡುತ್ತವೆ. ಅದರ ನಿವಾರಣೆಗೆ ವೈದ್ಯರು, ಹಲವು ಸೌಂದರ್ಯವರ್ಧಕಗಳ ಮೊರೆ ಹೋಗುತ್ತಾರೆ. ಆದರೂ ಸಮಸ್ಯೆ ನೀಗುವುದಿಲ್ಲ. ಋತುಬಂಧ ಸಮಯದಲ್ಲಿನ ಚರ್ಮದ ಸಮಸ್ಯೆಗೆ ಬೇರೆ ಬೇರೆ ದೈಹಿಕ ಅಂಶಗಳು ಕಾರಣವಿರಬಹುದು. ಆ ಕಾರಣಕ್ಕೆ 'ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ' ಉತ್ತಮ ವಿಧಾನ. ಇದರಿಂದ ಕೇವಲ ಋತುಬಂಧದ ಸಮಯದಲ್ಲಿ ಕಾಣಿಸುವ ಚರ್ಮದ ಸಮಸ್ಯೆ ಮಾತ್ರವಲ್ಲ ಇನ್ನಿತರ ಅನೇಕ ದೈಹಿಕ ಸಮಸ್ಯೆಗಳ ನಿವಾರಣೆಗೂ ಇದು ಸಹಕಾರಿ.

ಹಾರ್ಮೋನ್‌ಗಳಲ್ಲಿನ ವ್ಯತ್ಯಾಸ

'ಮಹಿಳೆಯರಲ್ಲಿ ಋತುಬಂಧ ಸಮೀಪಿಸಿದಾಗ ಹಾರ್ಮೋನ್ ಏರಿಳಿತವಾಗುವ ಕಾರಣ ಹದಿಹರೆಯದವರಲ್ಲಿ ಕಾಣಿಸುವಂತೆ ಮೊಡವೆಗಳು ಕಾಣಿಸಬಹುದು. ಅಲ್ಲದೇ ಈಸ್ಟ್ರೋಜನ್ ಅಂಶ ಕಡಿಮೆಯಾಗುವುದರಿಂದ ದೇಹದಲ್ಲಿ ತೇವಾಂಶ ಕಡಿಮೆಯಾಗಿ ಚರ್ಮ ಒಣಗಿದಂತೆ ಕಾಣಬಹುದು. ಇದರಿಂದ ತುರಿಕೆಯೂ ಉಂಟಾಗಬಹುದು. ಇದರ ನಿವಾರಣೆಗೆ ಮಾಯಿಶ್ಚರೈಸರ್ ಹಾಗೂ ಸೀರಮ್‌ಗಳನ್ನು ಬಳಸಬಹುದು. ಇದಕ್ಕೆ ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ ಉತ್ತಮ ಎನ್ನುತ್ತದೆ ಅಧ್ಯಯನವೊಂದರ ವರದಿ. ಆ ಮೂಲಕ ಹಾರ್ಮೋನ್ ಅಸಮತೋಲನವನ್ನು ನಿಭಾಯಿಸಬಹುದು ಎಂಬುದು ಆ ಅಧ್ಯಯನದ ಪ್ರಮುಖ ಅಂಶ. ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿಯಿಂದ ಆಸ್ಟಿಯೊಪೊರೋಸಿಸ್‌ನಂತಹ ಅಪಾಯವನ್ನೂ ಕೂಡ ಕಡಿಮೆ ಮಾಡಬಹುದು' ಎನ್ನುತ್ತಾರೆ ವೈದ್ಯೆ ಡಾ. ಆರ್. ಮೋಹಿನಿ ಗೋವಿಂದನ್.

ಕೊಲೊಜೆನ್ ಮಟ್ಟ ಕಡಿಮೆಯಾಗುವುದು

ಋತುಬಂಧದ ಸಮಯದಲ್ಲಿ ಈಸ್ಟ್ರೋಜನ್ ಮಟ್ಟ ಕಡಿಮೆಯಾದಾಗ ಕೊಲೊಜೆನ್ ಉತ್ಪಾದನೆಯೂ ಕಡಿಮೆಯಾಗುತ್ತದೆ. ಕೊಲೊಜೆನ್ ದೇಹದಲ್ಲಿನ ಗಾಯಗಳನ್ನು ಗುಣಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆದ್ದರಿಂದ ಇದು ಚರ್ಮದ ಸೌಂದರ್ಯದೊಂದಿಗೆ ಚರ್ಮದ ಆರೋಗ್ಯ ಕಾಪಾಡಿಕೊಳ್ಳುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಈಸ್ಟ್ರೋಜನ್ ಹೃದಯ, ಮೆದುಳಿನ ಆರೋಗ್ಯ ಕಾಪಾಡುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ ಈಸ್ಟ್ರೋಜನ್ ಮಟ್ಟ ಹೆಚ್ಚಿಸಿ ಕೊಲೊಜೆನ್ ಮಟ್ಟ ಕಡಿಮೆಯಾಗುವುದನ್ನು ತಡೆಯಲು ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ ಮಾಡಿಸಿಕೊಳ್ಳಬಹುದು.

ಒಣ ಚರ್ಮ ನಿವಾರಣೆ

ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿಯಿಂದಾಗಿ ಒಣ ಚರ್ಮದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಒಣ ಚರ್ಮದ ನಿವಾರಣೆಗೆ ಈಸ್ಟ್ರೋಜನ್ ಮಟ್ಟದಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಮುಖ್ಯ. ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿಯಿಂದ ಋತುಬಂಧದ ಸಮಯದಲ್ಲಿನ ಒಣ ಚರ್ಮ ನಿವಾರಣೆಯಾಗುವುದಲ್ಲದೇ ಚರ್ಮವು ಮಗುವಿನ ಚರ್ಮದಂತೆ ಮೃದುವಾಗಿರುತ್ತದೆ. ಇದರಿಂದ ಚರ್ಮಕ್ಕೆ ಸಂಬಂಧಿಸಿದ ಇನ್ನಿತರ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಹುದು.



ಜೀರ್ಣಕ್ರಿಯೆ ಹೆಚ್ಚಿಸಿ ತೂಕ ಇಳಿಸಿ...

ಟಿಪ್ಸ್

ಮನಸ್ವಿ

ಚಯಾಪಚಯ ಕ್ರಿಯೆ ಮನುಷ್ಯನ ದೇಹಕ್ಕೆ ಬಹಳ ಮುಖ್ಯ. ಸೇವಿಸಿದ ಆಹಾರ ಹಾಗೂ ನೀರು ಸಮ ಪ್ರಮಾಣದಲ್ಲಿ ಜೀರ್ಣವಾದರೆ ದೈಹಿಕವಾಗಿ ಮನುಷ್ಯ ಆರೋಗ್ಯವಂತನಾಗಿರುತ್ತಾನೆ. ಚಯಾಪಚಯ ಕ್ರಿಯೆಯು ಮನುಷ್ಯ ಸೇವಿಸುವ ನೀರು ಹಾಗೂ ಆಹಾರವನ್ನು ಶಕ್ತಿಯನ್ನಾಗಿ ಪರಿವರ್ತಿಸುತ್ತದೆ. ಇದು ನಮ್ಮ ದೇಹದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯೂ ಹೌದು. ಚಯಾಪಚಯ ದರವು ನಮ್ಮ ದೇಹವು ಸುಡುವ ಕ್ಯಾಲೊರಿಗಳ ಸಂಖ್ಯೆಯನ್ನು ನಿರ್ಧರಿಸುತ್ತದೆ. ಇದು ರಕ್ತದಲ್ಲಿನ ಸಕ್ಕರೆ, ಕೊಲೆಸ್ಟ್ರಾಲ್, ಟ್ರೈಗ್ಲಿಸರೈಡ್‌ಗಳು ಮತ್ತು ರಕ್ತದೊತ್ತಡ ಮುಂತಾದ ಎಲ್ಲವನ್ನೂ ಸಮತೋಲನದಲ್ಲಿರಿಸುತ್ತದೆ. ಚಯಾಪಚಯ ದರ ಹೆಚ್ಚಿದ್ದಷ್ಟೂ ದೇಹದಲ್ಲಿ ಕ್ಯಾಲೊರಿ ಸಂಗ್ರಹ ಕಡಿಮೆಯಾಗುತ್ತದೆ. ದೇಹದಲ್ಲಿ ಚಯಾಪಚಯ ವೇಗ ಹೆಚ್ಚಿಸಲು ಈ ಕೆಳಗಿನ 5 ಮಾರ್ಗಗಳನ್ನು ಅನುಸರಿಸಬಹುದು. ಆ ಮೂಲಕ ತೂಕ ಇಳಿಸಲು ಸಾಧ್ಯ.

ಹೆಚ್ಚು ಹೆಚ್ಚು ಪ್ರೊಟೀನ್ ಹಾಗೂ ನಾರಿನಾಂಶ ಸೇವಿಸಿ: ಪ್ರೊಟೀನ್ ಸ್ನಾಯುಗಳಿಗೆ ಬಲ ನೀಡುತ್ತದೆ. ನಾರಿನಾಂಶ ಹೆಚ್ಚು ಸೇವಿಸಿದಷ್ಟೂ ಹಸಿವು ಕಡಿಮೆಯಾಗುತ್ತದೆ. ದೈನಂದಿನ ಆಹಾರಕ್ರಮದಲ್ಲಿ ಈ ಎರಡು ಅಂಶಗಳನ್ನು ಹೆಚ್ಚು ಸೇರಿಸಿಕೊಳ್ಳುವುದರಿಂದ ಚಯಾಪಚಯ ಕ್ರಿಯೆ ಹೆಚ್ಚುವಂತೆ ಮಾಡಿ ವೇಗವಾಗಿ ತೂಕ ಇಳಿಸಬಹುದು.

ನೀರು ಕುಡಿಯುವುದು: ನಿಮಗೆ ತೂಕ ಇಳಿಸುವ ಮನಸ್ಸಾಗಿದ್ದರೆ ದಿನದಲ್ಲಿ ಕನಿಷ್ಠ 8 ಗ್ಲಾಸ್ ನೀರು ಕುಡಿಯಬೇಕು. ನೀರು ಹೆಚ್ಚು ಹೆಚ್ಚು ಕುಡಿದಷ್ಟೂ ದೇಹದಲ್ಲಿ ತೇವಾಂಶ ಹೆಚ್ಚುತ್ತದೆ. ನೀರಿಲ್ಲದೆ ದೇಹದ ಭಾಗಗಳು ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ. ನೀರಿನೊಂದಿಗೆ ತರಕಾರಿ ರಸ, ನಿಂಬೆರಸ, ಇತರ ಹಣ್ಣಿನ ರಸ ಹಾಗೂ ಎಳನೀರಿನ ಸೇವನೆ ಉತ್ತಮ. ದೇಹಕ್ಕೆ ಸರಿಯಾದ ಪ್ರಮಾಣದಲ್ಲಿ ನೀರು ಸೇರದಿದ್ದರೆ ಚಯಾಪಚಯ ಕ್ರಿಯೆಗೂ ತೊಂದರೆಯಾಗುತ್ತದೆ.


ದೈಹಿಕ ಚಟುವಟಿಕೆ: ಲಾಕ್‌ಡೌನ್ ಹಾಗೂ ಮನೆಯಿಂದಲೇ ಕಚೇರಿ ಕೆಲಸದ ಕಾರಣದಿಂದ ನಾವು ಗಂಟೆಗಟ್ಟಲೆ ಕಂಪ್ಯೂಟರ್ ಮುಂದೆ ಕುಳಿತಿರುತ್ತೇವೆ. ಈ ನಮ್ಮ ಚಟುವಟಿಕೆಯಲ್ಲಿ ಆದ ಬದಲಾವಣೆಯೂ ದೇಹಾರೋಗ್ಯದ ಮೇಲೆ ಹಲವು ರೀತಿಯಲ್ಲಿ ಪರಿಣಾಮ ಬೀರುವಂತೆ ಮಾಡಿದೆ. ಹಾಗಾಗಿ ದೈಹಿಕ ಚಟುವಟಿಕೆ ಅವಶ್ಯ. ದೈಹಿಕ ಚಟುವಟಿಕೆಯು ಚಯಾಪಚಯ ಕ್ರಿಯೆಗೂ ಉತ್ತಮ. ಇದು ಹೃದ್ರೋಗ, ಅಧಿಕ ತೂಕ ಹಾಗೂ ಬೊಜ್ಜು ಸಮಸ್ಯೆ ಇರುವವರಿಗೂ ಉತ್ತಮ.

ಉತ್ತಮ ನಿದ್ದೆ: ಆರೋಗ್ಯಕ್ಕೆ ಉತ್ತಮ ನಿದ್ದೆ ಬಹಳ ಮುಖ್ಯ. ದಿನದಲ್ಲಿ ಕನಿಷ್ಠ 7 ಗಂಟೆಗಳ ಕಾಲ ನಿದ್ದೆ ಮಾಡಬೇಕು. ಇದರಿಂದ ಅನೇಕ ದೈಹಿಕ ಸಮಸ್ಯೆಗಳನ್ನು ತಡೆಗಟ್ಟಬಹುದು. ಹಾರ್ಟ್ ಅಟ್ಯಾಕ್, ಮಧುಮೇಹ ಹಾಗೂ ಖಿನ್ನತೆಯ ನಿವಾರಣೆಗೂ ನಿದ್ದೆ ಸಹಕಾರಿ.



ಗರುಡ ಗಮನ ವೃಷಭ ವಾಹನ ಟ್ರೇಲರ್: ಭಿನ್ನ ಲುಕ್‌ನಲ್ಲಿ ರಾಜ್ ಶೆಟ್ಟಿ

ಸಿನಿಮಾ



ಗರುಡ ಗಮನ ವೃಷಭ ವಾಹನ ಚಿತ್ರದ ಪೋಸ್ಟರ್



ರಾಜ್ ಬಿ. ಶೆಟ್ಟಿ

'ಒಂದು ಮೊಟ್ಟೆಯ ಕಥೆ' ಖ್ಯಾತಿಯ ರಾಜ್ ಬಿ. ಶೆಟ್ಟಿ ಕಥೆ-ನಿರ್ದೇಶನದ ಗರುಡ ಗಮನ ವೃಷಭ ವಾಹನ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ನವೆಂಬರ್ 19ರಂದು 'ಗರುಡ ಗಮನ ವೃಷಭ ವಾಹನ' ಸಿನಿಮಾ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ.

ರಕ್ಷಿತ್ ಶೆಟ್ಟಿಯವರ ಪರಂವಃ ಸ್ಟುಡಿಯೋಸ್ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದು, ಕಾರ್ತಿಕ್ ಗೌಡ ಅವರ ಕೆಆರ್‌ಜಿ ಸ್ಟುಡಿಯೋಸ್ ಮೂಲಕ ಹಂಚಿಕೆ ಮಾಡಲಾಗುತ್ತದೆ.

ರಾಜ್ ಬಿ. ಶೆಟ್ಟಿ ಅವರ ಜತೆ ರಿಷಬ್ ಶೆಟ್ಟಿ ಹಾಗೂ ಗೋಪಾಲಕೃಷ್ಣ ದೇಶಪಾಂಡೆ ನಟಿಸಿದ್ದಾರೆ.

ಮಿಥುನ್ ಮುಕುಂದನ್ ಅವರ ಸಂಗೀತವಿದ್ದು, ರಕ್ಷಿತ್ ಶೆಟ್ಟಿ ಅವರು ಕೂಡ ಚಿತ್ರಕ್ಕೆ ಶುಭಹಾರೈಸಿ ಟ್ವೀಟ್ ಮಾಡಿದ್ದಾರೆ.

ರಾಜ್ ಬಿ. ಶೆಟ್ಟಿ ಅವರು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಆಧುನಿಕ ಮಂಗಳೂರಿನ ಸಾಂಸ್ಕೃತಿಕ ಹಾಗೂ ಕರಾವಳಿ ಹಿನ್ನೆಲೆಯಲ್ಲಿ ನಡೆಯುವ ಚಿತ್ರದ ಕಥೆಯಲ್ಲಿ ಹರಿ ಮತ್ತು ಶಿವ ಎಂಬ ಎರಡು ಪಾತ್ರಗಳ ಜೀವನ ಕಥೆಯಿದೆ. ರಾವಳಿಯ ಹುಲಿವೇಷ ಟ್ರೇಲರ್‌ನುದ್ದಕ್ಕೂ ಕಥೆಯೊಂದಿಗೇ ಸಾಗುತ್ತದೆ.

ಶಿವನ ಪಾತ್ರದಲ್ಲಿ ರಾಜ್ ಬಿ. ಶೆಟ್ಟಿ ಹಾಗೂ ಹರಿಯ ಪಾತ್ರದಲ್ಲಿ ರಿಷಬ್ ಶೆಟ್ಟಿ ನಟಿಸಿದ್ದಾರೆ. ಚಿತ್ರದಲ್ಲಿ ರಿಷಬ್ ಎರಡು ವಿಭಿನ್ನ ಛಾಯೆಯಲ್ಲಿ ಕಾಣಿಸಿಕೊಂಡಿದ್ದು, ಟ್ರೇಲರ್ ಮೂಲಕವೇ ಚಿತ್ರಕಥೆಯು ಸಾಕಷ್ಟು ಕುತೂಹಲ ಕೆರಳಿಸಿದೆ.

ಶನಿವಾರ, 16 ಅಕ್ಟೋಬರ್ 2021
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಚಿನ್ನದ ಸರ ಖರೀದಿಗೆ ಮುನ್ನ....

ರೇಷ್ಮಾ

ಚಿನ್ನದ ಆಭರಣಗಳು ಎಂದರೆ ಪ್ರೀತಿ ಇಲ್ಲದವರು ಕಡಿಮೆ. ಬಹುತೇಕ ಭಾರತೀಯರು ಹುಟ್ಟಿದಾಗಿನಿಂದ ಸಾಯುವವರೆಗೂ ವಿವಿಧ ಬಗೆಯ ಒಡವೆಗಳನ್ನು ಧರಿಸುತ್ತಾರೆ. ಚಿನ್ನದ ಒಡವೆ ಎಂದಾಕ್ಷಣ ನೆನಪಾಗುವುದು ಸರಗಳು. ಸರವನ್ನು ಪುರುಷರು, ಮಹಿಳೆಯರು, ಮಕ್ಕಳು, ವಯಸ್ಸಾದವರು ಹೀಗೆ ಎಲ್ಲರೂ ಧರಿಸಬಹುದು. ವಯೋಮಾನಕ್ಕೆ ತಕ್ಕಂತಹ ವಿವಿಧ ವಿನ್ಯಾಸದ ಚಿನ್ನದ ಸರಗಳು ಕತ್ತನ್ನು ಅಲಂಕರಿಸುತ್ತವೆ. ಈ ಚಿನ್ನದ ಸರವನ್ನು ಯಾವುದೇ ಉಡುಪಿನೊಂದಿಗೆ ಧರಿಸಿದರೂ ಅಂದವಾಗಿ ಕಾಣುತ್ತದೆ. ಇದು ನಮಗೆ ಭಿನ್ನ ನೋಟ ಸಿಗುವಂತೆ ಮಾಡುವುದರಲ್ಲಿ ಅನುಮಾನವಿಲ್ಲ. ಆ ಕಾರಣಕ್ಕೆ ವಿಶ್ವದಾದ್ಯಂತ ವಿವಿಧ ರಂಗದ ಸೆಲೆಬ್ರೆಟಿಗಳು ಚಿನ್ನದ ಸರವನ್ನು ಮೆಚ್ಚಿ ಧರಿಸುತ್ತಿದ್ದಾರೆ. ವಿವಿಧ ವಿನ್ಯಾಸದ ಉಡುಪಿನೊಂದಿಗೆ, ಬೇರೆ ಬೇರೆ ವಿನ್ಯಾಸದ ಚಿನ್ನದ ಸರಗಳನ್ನು ಧರಿಸಬಹುದು. ಬೇರೆ ಬೇರೆ ಸಂದರ್ಭಕ್ಕೆ, ವಿವಿಧ ರೀತಿಯ ವಿನ್ಯಾಸದ ಸರಗಳು ಹೊಂದುತ್ತವೆ.

ನಿಮ್ಮ ವ್ಯಕ್ತಿತ್ವವನ್ನು ಗುರುತಿಸಿ

ನೀವು ಚಿನ್ನದ ಸರ ಖರೀದಿಗೆ ಹೋಗುವ ಮುನ್ನ ನಿಮಗೇನು ಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಿ. ಕಚೇರಿ ಅಥವಾ ಹೊರಗಡೆ ತಿರುಗಾಡಲು ಹೋಗುವಾಗ ಧರಿಸಲು ಖರೀದಿಸುತ್ತಿದ್ದೀರಾ, ಪಾರ್ಟಿಗೆ ಹೋಗಲು ಬೇಕೇ ಅಥವಾ ಸಮಾರಂಭಗಳಿಗೆ ಹೋಗಲು ಬೇಕೆ ಎಂಬುದನ್ನು ಮೊದಲೇ ನಿರ್ಧರಿಸಿ.

ಒಂದೇ ಗಾತ್ರದ ಸರ ಎಲ್ಲದಕ್ಕೂ ಹೊಂದುವುದಿಲ್ಲ. ನೀವು ಸರವನ್ನು ಆಯ್ಕೆ ಮಾಡುವ ಮುನ್ನ ನಿಮಗೆ ಹೊಂದುವುದನ್ನೇ ಖರೀದಿಸಿ. ಪುರುಷರು ದಪ್ಪ ಹಾಗೂ ಅಗಲವಾಗಿ ಕಾಣಿಸುವ ಚಿನ್ನದ ಸರ ಖರೀದಿಸಬಹುದು. ಇದು ಅವರಿಗೆ ಹೆಚ್ಚು ಹೊಂದುತ್ತದೆ. ಫ್ರಾಂಕೊ ಸರಗಳು ಗಂಡಸರ ಅಂದವನ್ನು ಹೆಚ್ಚಿಸುತ್ತವೆ. ಇವು ಎಳೆಗಳ ರೂಪದಲ್ಲೂ ಸಿಗುತ್ತವೆ. ಪುರುಷ, ಮಹಿಳೆ ಇಬ್ಬರಿಗೂ ಹೊಂದುವ ರೆಟ್ರೊ ವಿನ್ಯಾಸದ ಸರವನ್ನು ಧರಿಸಬಹುದು. ರೆಟ್ರೊ ಶೈಲಿಯನ್ನು ಆಯ್ಕೆ ಮಾಡುವುದಾದರೆ ಎಲ್ಲಾ ಬಗೆಯ ಉಡುಪಿಗೂ ಹೊಂದುವಂತಹ ಒಂದೇ ಎಳೆಯ ಸರವನ್ನು ಧರಿಸಬಹುದು.





ಹೇಗೆ ಧರಿಸಲು ಬಯಸುತ್ತೀರಿ..

ಒಂದೇ ಎಳೆ, ಎರಡೆಳೆ ಹಾಗೂ ಮೂರು ಎಳೆ ಹೀಗೆ ಎಷ್ಟು ಬೇಕು ಎಂಬುದನ್ನು ನೀವೇ ನಿರ್ಧರಿಸಬಹುದು. ನಿಮ್ಮ ನೋಟವನ್ನು ಸುಂದರವಾಗಿಸುವ ಸರದ ಆಯ್ಕೆ ಮಾಡುವುದು ನಿಮ್ಮ ಕೈಯಲ್ಲೇ ಇದೆ. ಅಗಲವಾದ ಮುಖ ಹೊಂದಿರುವವರು ಹೆಚ್ಚು ಎಳೆಯ ಸರ ಧರಿಸಿದರೆ ಸುಂದರವಾಗಿ ಕಾಣಬಹುದು. 'ಕೇಬಲ್ ಚೈನ್' ವಿನ್ಯಾಸದ ಸರಗಳು ಹೆಚ್ಚು ಪ್ರಚಲಿತದಲ್ಲಿವೆ. ಇದು ನಾವು ಧರಿಸಿದ ಉಡುಪಿನೊಂದಿಗೆ ಹೆಚ್ಚು ಅಂದವಾಗಿ ಕಾಣುತ್ತದೆ.

ದೇಹಕ್ಕೆ ಹೊಂದುವಂಥದ್ದು

ನಾವು ಉಡುಪುಗಳನ್ನು ಖರೀದಿ ಮಾಡುವಾಗ ಹೊಂದುವ ಬಣ್ಣದ ಹಾಗೂ ಇನ್ನಿತರ ಪರಿಕರಗಳನ್ನು ತೆಗೆದುಕೊಳ್ಳುತ್ತೇವೆ. ಹಾಗೆಯೇ ಚಿನ್ನದ ಸರ ಖರೀದಿಸುವಾಗಲೂ ನಮ್ಮ ದೇಹಕ್ಕೆ ಹೊಂದುವ, ನಮ್ಮ ಅಂದವನ್ನು ಹೆಚ್ಚಿಸುವುದನ್ನು ಖರೀದಿಸಬೇಕು. ನೀವು ದಪ್ಪಗಿದ್ದು ಕೋಲು ಮುಖದವರಾದರೆ ವಿ ಆಕಾರದ ಗಿಡ್ಡನೆಯ ಚೈನ್ ಹೆಚ್ಚು ಹೊಂದುತ್ತದೆ. ನೀವು ದುಂಡು ಮುಖ ಹೊಂದಿದ್ದರೆ ದಪ್ಪದ ರೋಪ್ ಚೈನ್ ಹೊಂದುತ್ತದೆ. ದುಂಡನೆಯ ಮುಖ ಹೊಂದಿರುವವರು ಉದ್ದನೆಯ ಚೈನ್ ಧರಿಸಿದರೆ ಅಭಾಸವಾಗಿ ಕಾಣಬಹುದು.

ವಜ್ರದೊಂದಿಗೆ ಚಿನ್ನ

ಸಮಯ ಅಥವಾ ಸಂದರ್ಭಕ್ಕೆ ಅನುಗುಣವಾಗಿ ಚಿನ್ನದ ಸರದೊಂದಿಗೆ ವಜ್ರದ ಆಭರಣವನ್ನು ತೊಡಬಹುದು. ಎಲ್ಲಾ ಸಂದರ್ಭದಲ್ಲೂ ಚಿನ್ನದೊಂದಿಗೆ ವಜ್ರದ ಆಭರಣಗಳನ್ನು ಧರಿಸುವುದು ಸೂಕ್ತವಲ್ಲ.

ಬಟ್ಟೆಗಳೊಂದಿಗೆ ಚೈನ್ ಧರಿಸುವುದು

ರೋಪ್ ಚೈನ್ ಅಥವಾ ಕೇಬಲ್ ಚೈನ್ ಅನ್ನು ಕಪ್ಪು ಅಥವಾ ಬಿಳಿ ಟೀ ಶರ್ಟ್‌ನೊಂದಿಗೆ ಧರಿಸುವುದರಿಂದ ಅಂದ ಹೆಚ್ಚಿಸಿಕೊಳ್ಳಬಹುದು. ಇದರೊಂದಿಗೆ ಡೆನಿಮ್ ಜಾಕೆಟ್ ಹಾಗೂ ಜೀನ್ಸ್ ಅನ್ನು ಮ್ಯಾಚ್ ಮಾಡಿಕೊಳ್ಳಬಹುದು. ಈ ಸರಗಳು ಸಾಮಾನ್ಯವಾಗಿ ಸ್ವಲ್ಪ ಉದ್ದವಾಗಿದ್ದು ನೀವು ಪಂಕ್ ಅಥವಾ ರೆಟ್ರೊ ನೋಟ ಬಯಸಿದರೆ ಈ ಎಲ್ಲವನ್ನೂ ಧರಿಸಬಹುದು.

ಲಿಂಕ್ ಚೈನ್

ನಿಮ್ಮ ಬಳಿ ಲಿಂಕ್ ಚೈನ್ ಇದ್ದರೆ ಅವುಗಳನ್ನು ಚಳಿಗಾಲದ ಉಡುಪಿನೊಂದಿಗೆ ಮ್ಯಾಚಿಂಗ್ ಮಾಡಿಕೊಳ್ಳಬಹುದು. ಇದರೊಂದಿಗೆ ಟೋಪಿ ಧರಿಸುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಚಳಿಗಾಲದಲ್ಲಿ ಬ್ಯಾಗಿ ಶರ್ಟ್ ಹಾಗೂ ಟೀ ಶರ್ಟ್‌ಗಳನ್ನು ಧರಿಸಿದರೆ ಆಧುನಿಕ ವಿನ್ಯಾಸದ ಸರ ಧರಿಸಬಹುದು.

ಸರ ಖರೀದಿಗೂ ಮುನ್ನ...

ಚಿನ್ನದ ಸರ ಖರೀದಿಗೆ ಮೊದಲು ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳಿ. ಚಿನ್ನದ ಬಗ್ಗೆ ಸ್ಥಳದಲ್ಲೇ ಖಾತರಿ ಹಾಗೂ ವಿನಿಮಯ ನೀತಿ ಇದೆಯೇ ನೋಡಿಕೊಳ್ಳಿ. ಹಾಗಿದ್ದಾಗ ಒಂದು ವೇಳೆ ಸರವು ನಿಮಗೆ ಅನುಗುಣವಾಗಿಲ್ಲದಿದ್ದರೆ, ಬೇರೆ ಯಾವುದೇ ಕಾರಣದಿಂದ ಹಾನಿಗೊಳಗಾಗಿದ್ದರೆ ಅದನ್ನು ಬದಲಿಸುವ ಆಯ್ಕೆ ಇರುತ್ತದೆ. ನೀವು ಖರೀದಿಸುವ ಒಡವೆಗೆ ಗ್ರಾಹಕರ ವಿಮರ್ಶೆ ಹೇಗಿದೆ ಎಂಬುದನ್ನು ತಿಳಿದುಕೊಳ್ಳಿ.

ಚಿನ್ನದ ಸರ ಖರೀದಿಗೂ ಯೋಚಿಸುತ್ತಲೇ ಇರಬೇಡಿ. ಚಿನ್ನಕ್ಕೆ ಎಂದಿಗೂ ಬೆಲೆ ಕಡಿಮೆಯಾಗುವುದಿಲ್ಲ. ಖರೀದಿಗೂ ಮುನ್ನ ನಿಮ್ಮ ನೆಚ್ಚಿನ ಹಾಗೂ ನಿಮಗೆ ವಿಶ್ವಾಸ ಎನ್ನಿಸುವ ಮಳಿಗೆಯಲ್ಲೇ ಖರೀದಿಸಿ. 916 ಹಾಲ್‌ಮಾರ್ಕ್ ಇರುವ ಚಿನ್ನವನ್ನೇ ಖರೀದಿಸುವುದು ಉತ್ತಮ.

'ಕ್ರಾಂತಿ'ಯಲ್ಲಿ ಮತ್ತೆ ಒಂದಾದ 'ಬುಲ್‌ಬುಲ್' ಜೋಡಿ



'ಕ್ರಾಂತಿ' ಚಿತ್ರಕ್ಕೆ ಸುಮಲತಾ ಅಂಬರೀಷ್ ಕ್ಲ್ಯಾಪ್

ಸಿನಿಮಾ

ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟನೆಯ ಬಹುನಿರೀಕ್ಷಿತ 55ನೇ ಸಿನಿಮಾ 'ಕ್ರಾಂತಿ'ಯಲ್ಲಿ 'ಬುಲ್‌ಬುಲ್' ಜೋಡಿ ಮತ್ತೆ ಒಂದಾಗುತ್ತಿದೆ. 'ಕ್ರಾಂತಿ' ಚಿತ್ರದಲ್ಲಿ ನಾಯಕಿಯಾಗಿ ರಚಿತಾ ರಾಮ್ ನಟಿಸಲಿದ್ದು, ವಿಜಯದಶಮಿಯ ಶುಭಸಂದರ್ಭದಲ್ಲಿ ಚಿತ್ರದ ಮುಹೂರ್ತ ನಡೆಯಿತು.


ನಟಿ, ಸಂಸದೆ ಸುಮಲತಾ ಅಂಬರೀಷ್ ಕ್ಲ್ಯಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ನಟರಾದ ರವಿಚಂದ್ರನ್, ಅಭಿಷೇಕ್ ಅಂಬರೀಷ್ ಉಪಸ್ಥಿತರಿದ್ದರು. ಕ್ರಾಂತಿ ಚಿತ್ರವು ಕನ್ನಡದ ಜೊತೆಗೆ ತೆಲುಗು, ತಮಿಳು, ಹಿಂದಿ, ಮಲಯಾಳಂನಲ್ಲೂ ತೆರೆಕಾಣಲಿದೆ. 2019ರಲ್ಲಿ ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಿದ್ದ 'ಯಜಮಾನ' ಚಿತ್ರತಂಡವು 'ಕ್ರಾಂತಿ' ಸಿನಿಮಾದ ಮೂಲಕ ಇದೀಗ ಮತ್ತೆ ಒಂದಾಗುತ್ತಿದೆ. ಸಿನಿಮಾವನ್ನು ಶೈಲಜಾ ನಾಗ್ ಹಾಗೂ ಬಿ.ಸುರೇಶ್ ನಿರ್ಮಾಣ ಮಾಡುತ್ತಿದ್ದು, ವಿ.ಹರಿಕೃಷ್ಣ ನಿರ್ದೇಶಿಸಲಿದ್ದಾರೆ. ಮೀಡಿಯಾ ಹೌಸ್ ಸ್ಟುಡಿಯೊ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ.

ಚಿತ್ರಕಥೆ, ನಿರ್ದೇಶನ ಹಾಗೂ ದರ್ಶನ್ ಅವರ ಭರ್ಜರಿ ಡೈಲಾಗ್‌ಗಳು ಹಾಗೂ ಸಾಹಸ ದೃಶ್ಯಗಳಿಂದ 'ಯಜಮಾನ' ಚಿತ್ರ ಯಶಸ್ಸು ಕಂಡಿತ್ತು. ನಿರ್ದೇಶನದ ಜೊತೆಗೆ ವಿ. ಹರಿಕೃಷ್ಣಅವರ ಸಂಗೀತ ಸಂಯೋಜನೆಯಿದ್ದ ಈ ಚಿತ್ರದ ಎಲ್ಲಾ ಹಾಡುಗಳು ಹಿಟ್ ಆಗಿದ್ದವು. ಇತ್ತೀಚೆಗೆ ನಡೆದ ಸೈಮಾದಲ್ಲಿ 8 ಪ್ರಶಸ್ತಿಗಳನ್ನು 'ಯಜಮಾನ' ಚಿತ್ರವು ಪಡೆದಿತ್ತು. ದರ್ಶನ್ ಈ ಚಿತ್ರಕ್ಕಾಗಿ ಅತ್ಯುತ್ತಮ ನಾಯಕ ನಟ ಪ್ರಶಸ್ತಿ ಪಡೆದಿದ್ದರು. 2019ರಲ್ಲಿ ದರ್ಶನ್ ಅಭಿನಯದ 'ಯಜಮಾನ', 'ಕುರುಕ್ಷೇತ್ರ' ಮತ್ತು 'ಒಡೆಯ' ಸಿನಿಮಾಗಳು ತೆರೆಕಂಡಿದ್ದವು. 2021ರ ಮಾರ್ಚ್‌ನಲ್ಲಿ ತೆರೆಕಂಡ 'ರಾಬರ್ಟ್' ದರ್ಶನ್ ನಟನೆಯ 53ನೇ ಸಿನಿಮಾ. ಪ್ರಸ್ತುತ ದರ್ಶನ್, ಎಸ್.ವಿ. ರಾಜೇಂದ್ರಸಿಂಗ್ ಬಾಬು ನಿರ್ದೇಶಿಸಿರುವ 'ರಾಜವೀರ ಮದಕರಿ ನಾಯಕ' ಚಿತ್ರದಲ್ಲಿ ನಟಿಸುತ್ತಿದ್ದಾರೆ.



ಕ್ರಾಂತಿ ಚಿತ್ರದ ಪೋಸ್ಟರ್

ಸುಲಭವಾಗಿ ತಯಾರಿಸಬಹುದು ಕೋಕೊವಾ ಬ್ರೌನಿ



ರೆಸಿಪಿ

ಬ್ರೌನಿ... ಈ ಹೆಸರು ಕೇಳದವರು, ಇದರ ರುಚಿ ನೋಡದವರು ಬಹುಶಃ ಕಡಿಮೆ ಎನ್ನಬಹುದು. ಬ್ರೌನಿ ಎಂದಾಕ್ಷಣ ನಾಲಿಗೆಯಲ್ಲಿ ನೀರೂರದೇ ಇರದು. ಬಾಯಿಯ ಚಪಲ ಉಂಟಾದಾಗೆಲ್ಲಾ ಇದನ್ನು ತಿನ್ನುವ ಮೂಲಕ ಚಪಲ ತೀರಿಸಿಕೊಳ್ಳಬಹುದು. ಬ್ರೌನಿ ಬೇಕು ಎನ್ನಿಸಿದಾಗ ಬೇಕರಿಗೋ, ಪಾರ್ಲರ್‌ಗೋ ಹೋಗುವುದಕ್ಕಿಂತ ಮನೆಯಲ್ಲೇ ಸಿಗುವ ಕೆಲ ಉತ್ಪನ್ನಗಳಿಂದ ತಯಾರಿಸಿ ತಿನ್ನಬಹುದು. ಕೋಕೊವಾ ಪುಡಿ, ಹಿಟ್ಟು, ಸಕ್ಕರೆ ಹಾಗೂ ಒಂದೆರಡು ಮೊಟ್ಟೆ ಇದ್ದರೆ ರುಚಿಕರವಾಗ ಬ್ರೌನಿ ತಯಾರಿಸಬಹುದು. ಇದು ತಿನ್ನಲೂ ಬಹಳ ರುಚಿಯಾಗಿರುತ್ತದೆ.

ಬ್ರೌನಿಯನ್ನು ತಯಾರಿಸುವುದು ಕೂಡ ಒಂದು ಕಲೆ. ಇದರ ಹದವು ನಾವು ಖರೀದಿಸಿದ ಕೋಕೊವಾ ಪೌಡರ್ ಅನ್ನು ಅವಲಂಬಿಸಿದೆ. ಮೊದಲು ಕೋಕೊವಾ ಪುಡಿಯನ್ನು ಸ್ವಲ್ಪ ಬಿಸಿನೀರಿಗೆ ಹಾಕಿ ಗಂಟಿಲ್ಲದಂತೆ ಚೆನ್ನಾಗಿ ಕಲೆಸಬೇಕು. ನಂತರ ಕೆಲ ನಿಮಿಷಗಳ ಕಾಲ ಹಾಗೇ ಬಿಡಬೇಕು. ಆಗ ಅದು ಪರಿಮಳ ಹೊರ ಸೂಸಲು ಆರಂಭಿಸುತ್ತದೆ. ಕೋಕೊವಾ ಪೌಡರ್ ನಿಧಾನಕ್ಕೆ ಕರಗಿ ದಪ್ಪವಾಗುತ್ತದೆ. ನಂತರ ಇದನ್ನು ಯಾವುದೇ ಮಿಶ್ರಣದೊಂದಿಗೆ ಸೇರಿಸಿದರೂ ಇದರ ಪರಿಮಳ ಬೇಯಿಸಿದ ಮೇಲೂ ಹಾಗೇ ಇರುತ್ತದೆ. ಕೆಲವರು ಕೋಕೊವಾ ಪುಡಿಯನ್ನು ಎಣ್ಣೆಯಲ್ಲಿ ಮಿಶ್ರಣ ಮಾಡುತ್ತಾರೆ. ಎಣ್ಣೆಯನ್ನು ಬಿಸಿ ಮಾಡಿ ಅದರಲ್ಲಿ ಕೋಕೊವಾ ಪುಡಿ ಸೇರಿಸಿ ಮಿಶ್ರಣ ಮಾಡುತ್ತಾರೆ.



ಕೈಯಲ್ಲಿ ತಿರುಗಿಸುವ ಮಿಕ್ಸರ್

ಬ್ರೌನಿ ತಯಾರಿಸುವಾಗ ಸರಳವಾಗಿರುವ ಕೈಯಿಂದಲೇ ತಿರುಗಿಸುವ ಮಿಕ್ಸರ್ ಬಳಕೆ ಉತ್ತಮ. ಇದರಲ್ಲಿ ವೇಗವಾಗಿ ಹಾಗೂ ಸರಳವಾಗಿ ತಿರುಗಿಸಬಹುದು. ಕೈಯಲ್ಲಿ ತಿರುಗಿಸುವ ಮಿಕ್ಸರ್ ಬಹಳ ಸಮಯ ತೆಗೆದುಕೊಳ್ಳುತ್ತದೆ. ಆದರೂ ಇದರ ಬಳಕೆ ಉತ್ತಮ. ಕೃತಕ ಚಾಕೊಲೇಟ್ ಮಿಶ್ರಣವನ್ನು ನೊರೆ ಬರುವಂತೆ ಮಾಡಬೇಕಾಗುತ್ತದೆ. ಒಮ್ಮೆ ಎಲ್ಲವೂ ಚೆನ್ನಾಗಿ ಬೆರೆತ ನಂತರ ಇದು ಮೃದುವಾಗುತ್ತದೆ. ನಂತರ ಇದಕ್ಕೆ ಮೊಟ್ಟೆ ಹಾಗೂ ಸಕ್ಕರೆಯನ್ನು ಹಾಕಿ ಮಿಶ್ರಣ ಮಾಡಬೇಕು. ಇದನ್ನು ಚೆನ್ನಾಗಿ ಮಿಶ್ರಣ ಮಾಡಡಿದ್ದರೆ ಮೇಲ್ಭಾಗ ಬಿರುಕು ಬಿಡುವ ಸಾಧ್ಯತೆ ಇದೆ.

ಬ್ರೌನಿ ತಯಾರಿಸುವ ಮೊದಲು ಮಿಶ್ರಣ ಮಾಡಿ ಹದಕೊಳಿಸುವ ರೀತಿ ಬಹಳ ಮುಖ್ಯ. ಮಿಶ್ರಣದಲ್ಲಿ ಕೊಂಚ ವ್ಯತ್ಯಾಸವಾದರೂ ಬ್ರೌನಿ ಹದಗೆಡುತ್ತದೆ. ಹಿಟ್ಟು ಹಾಗೂ ಅಡುಗೆ ಸೋಡಾ ಸೇರಿಸುವ ಮೊದಲೇ ಉಳಿದೆಲ್ಲಾ ಸಾಮಗ್ರಿಗಳಿಂದ ಚೆನ್ನಾಗಿ ಮಿಶ್ರಣವನ್ನು ತಯಾರಿಸಿಕೊಂಡಿರಬೇಕು.

ಕೋಕಾ ಬ್ರೌನಿ ತಯಾರಿಸುವುದು

ಬೇಕಾಗುವ ಸಾಮಗ್ರಿಗಳು: ಕೆನೊಲಾ ಅಥವಾ ನಿಮಗೆ ಹಿಡಿಸುವ ಎಣ್ಣೆ – ಮುಕ್ಕಾಲು ಕಪ್, ಕೋಕೊವಾ ಪುಡಿ – ಮುಕ್ಕಾಲು ಕಪ್, ಹಿಟ್ಟು – ಅರ್ಧ ಕಪ್, ಅಡುಗೆ ಸೋಡಾ– ಕಾಲು ಚಮಚ, ಉಪ್ಪು – ಅರ್ಧ ಚಮಚ, ಮೊಟ್ಟೆ – 3, ಸಕ್ಕರೆ – ಒಂದು ಕಾಲು ಕಪ್, ಕಂದು ಸಕ್ಕರೆ – ಮುಕ್ಕಾಲು ಕಪ್, ವೆನಿಲಾ – 1 ಚಮಚ.

ತಯಾರಿಸವ ವಿಧಾನ: ಓವೆನ್‌ನಲ್ಲಿ ಪಾತ್ರೆಯನ್ನು ಇರಿಸಿ 325 ಡಿಗ್ರಿ ಸೆಲ್ಸಿಯಸ್‌ನಲ್ಲಿ ಬಿಸಿಮಾಡಿಕೊಳ್ಳಿ. ಅಗಲದ ಪಾತ್ರೆಗೆ ಸುತ್ತಲೂ ಬೆಣ್ಣೆ ಅಥವಾ ತುಪ್ಪ ಸವರಿ ಅದಕ್ಕೆ ಅದರ ತೆಳ್ಳಗೆ ಹಿಟ್ಟನ್ನು ಉದುರಿಸಿ. ನಂತರ ಎಣ್ಣೆಯನ್ನು ಸ್ವಲ್ಪ ಬಿಸಿ ಮಾಡಿಕೊಳ್ಳಿ. ಅದಕ್ಕೆ ಕೋಕೊವಾ ಪುಡಿ ಸೇರಿಸಿ ಆ ಮಿಶ್ರಣ ಚೆನ್ನಾಗಿ ಸೇರಿಕೊಂಡು ಮೃದುವಾಗುವವರೆಗೂ ಕಲೆಸಿ. ಇದನ್ನು 5 ನಿಮಿಷ ಹಾಗೇ ಬಿಡಿ. ಒಂದು ಕಪ್‌ನಲ್ಲಿ ಹಿಟ್ಟು, ಅಡುಗೆ ಸೋಡಾ ಹಾಗೂ ಉಪ್ಪು ಸೇರಿಸಿ ಕಲೆಸಿ ಒಂದೆಡೆ ಇಡಿ.

ನಂತರ ಮೊಟ್ಟೆ, ಪುಡಿ ಮಾಡಿಟ್ಟುಕೊಂಡ ಸಕ್ಕರೆಯನ್ನು ಒಂದು ದೊಡ್ಡ ಬೌಲ್‌ನಲ್ಲಿ ಹಾಕಿ ಇದನ್ನು ಎಲೆಕ್ಟ್ರಿಕ್ ಮಿಕ್ಸರ್‌ನಲ್ಲಿ ಮಧ್ಯಮ ವೇಗದಲ್ಲಿ ಕಲೆಸಿ. ಅದಕ್ಕೆ ವೆನಿಲ್ಲಾ ಸೇರಿಸಿ.

ಅರ್ಧದಷ್ಟು ಕೋಕೊವಾ ಮಿಶ್ರಣವನ್ನು ಮೊಟ್ಟೆಯ ಮಿಶ್ರಣಕ್ಕೆ ಸೇರಿಸಿ. ಅದನ್ನು ಮಧ್ಯಮ ವೇಗದಲ್ಲಿ 5 ನಿಮಿಷಗಳ ಕಾಲ ಕಲೆಸಿ. ನಂತರ ಉಳಿದ ಕೋಕಾ ಮಿಶ್ರಣ ಸೇರಿಸಿ ಮಧ್ಯಮ ವೇಗದಲ್ಲಿ ತಿರುಗಿಸಿ. ಇದನ್ನು ಬೇಕಿಂಗ್ ಪ್ಯಾನ್ ಮೇಲೆ ಹರಡಿ. ಇದನ್ನು 25 ನಿಮಿಷಗಳ ಕಾಲ ಬೇಯಿಸಿ. ಬ್ರೌನಿ ಚೆನ್ನಾಗಿ ಬೆಂದ ಮೇಲೆ ಮೇಲಿಂದ ಉಬ್ಬಿರುವುದು ಕಾಣಿಸುತ್ತದೆ. ಬ್ರೌನಿ ರೆಡಿಯಾದ ಮೇಲೆ ಎರಡು ದಿನಗಳ ಕಾಲ ಸಾಮಾನ್ಯ ಕೋಣೆಯ ಉಷ್ಣಾಂಶದಲ್ಲಿ ಕೆಡದಂತೆ ಇಡಬಹುದು.

ಕ್ರೀಡೆ

ಸುನಿಲ್.. ಬತ್ತದ ಛಲ; ಸಾಧನೆಯ ಬಲ


ಸುನಿಲ್ ಚೆಟ್ರಿ

ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಹೆಚ್ಚು ಗೋಲು ಗಳಿಸಿದವರು			
ಆಟಗಾರ	ದೇಶ	ಗೋಲು	ಪಂದ್ಯ
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	115	182
ಅಲಿ ದಯಿ	ಇರಾನ್	109	149
ಮುಖ್ತಾರ್ ದಹಾರಿ	ಮಲೇಷ್ಯಾ	89	142
ಫೆರೆನ್ಸ್ ಪುಸ್ಕಾಸ್	ಹಂಗರಿ	84	85
ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	80	156
ಗಾಡ್‌ಫ್ರೆ ಚಿತಾಲು	ಜಾಂಬಿಯಾ	79	111
ಸುನಿಲ್ ಚೆಟ್ರಿ	ಭಾರತ	79	124

ಬಸವರಾಜ ದಳವಾಯಿ

ಸುನಿಲ್ ಚೆಟ್ರಿ ಬಳಿಕ ಯಾರು? ತಂಡವು ಅವರನ್ನೇ ಎಷ್ಟು ದಿನ ಅವಲಂಬಿಸಲಿದೆ? ಎಂಬ ಮಾತುಗಳು ಇತ್ತೀಚೆಗೆ ಭಾರತದ ಫುಟ್‌ಬಾಲ್ ಅಂಗಳದಲ್ಲಿ ಕೇಳಿಬರುತ್ತಿರುವುದು ಸುಳ್ಳಲ್ಲ. ಅವರ ಸ್ಥಾನ ತುಂಬಬಲ್ಲ ಮತ್ತೊಬ್ಬ ಆಟಗಾರ ಬರಬಹುದು. ಆದರೆ 37ರ ಹರೆಯದಲ್ಲೂ ಉತ್ಸಾಹದ ಚಿಲುಮೆಯಾಗಿರುವ ಈ ಸೊಗಸುಗಾರ ತಂಡಕ್ಕೆ ನೀಡಿದ, ನೀಡುತ್ತಿರುವ ಕೊಡುಗೆ ಅಷ್ಟು ಬೇಗ ಮರೆಯುವಂತದ್ದಲ್ಲ.

ಸದ್ಯ ಮಾಲ್ಡೀವ್ಸ್‌ನಲ್ಲಿ ನಡೆಯುತ್ತಿರುವ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಫುಟ್‌ಬಾಲ್ ದಿಗ್ಗಜ, ಬ್ರೆಜಿಲ್‌ನ ಪೆಲೆ ಅವರ ಸಾಧನೆಯನ್ನು ಹಿಂದಿಕ್ಕಿದ್ದಾರೆ ಭಾರತ ತಂಡದ ನಾಯಕ. ಆತಿಥೇಯ ಮಾಲ್ಡೀವ್ಸ್ ಎದುರಿನ ಪಂದ್ಯದಲ್ಲಿ ಎರಡು ಗೋಲು ದಾಖಲಿಸುವ ಮೂಲಕ ತಂಡವನ್ನು ಫೈನಲ್‌ಗೆ ಕೊಂಡೊಯ್ದಿದ್ದಾರೆ. ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಪೆಲೆ ಅವರು 77 ಗೋಲು ದಾಖಲಿಸಿದ್ದರೆ, ಈಗ ಚೆಟ್ರಿ ಗಳಿಸಿದ ಗೋಲುಗಳ ಸಂಖ್ಯೆ 79.

2005ರಲ್ಲಿ ಕ್ವೆಟ್ಟಾದಲ್ಲಿ ಪಾಕಿಸ್ತಾನ ವಿರುದ್ಧದ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪದಾರ್ಪಣೆ ಮಾಡಿದ್ದರು ಸುನಿಲ್. 16 ವರ್ಷಗಳ ವೃತ್ತಿಜೀವನದಲ್ಲಿ, ಭಾರತದ ಫುಟ್‌ಬಾಲ್‌ನಲ್ಲಿ ಸಾಧ್ಯವಿರುವ ಎಲ್ಲ ದಾಖಲೆಗಳನ್ನು ಅವರು ಮೀರುತ್ತ ಸಾಗಿದ್ದಾರೆ. 2011ರಲ್ಲಿ ಬೈಚುಂಗ್ ಭುಟಿಯಾ ನಿವೃತ್ತರಾದ ಬಳಿಕ ದೇಶದ ಫುಟ್‌ಬಾಲ್‌ನ ಪ್ರಮುಖ ಆಟಗಾರನಾಗಿ ಬೆಳೆದಿದ್ದಾರೆ.

ಸುನಿಲ್ ಭಾರತ ತಂಡದ ಪರ ಆಡಿರುವ ಪಂದ್ಯಗಳ ಸಂಖ್ಯೆ 124. ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಜಾಂಬಿಯಾದ ಗಾಡ್‌ಫ್ರೆ ಚಿತಾಲು ಜೊತೆ ಚೆಟ್ರಿ ಆರನೇ ಸ್ಥಾನದಲ್ಲಿದ್ದಾರೆ. ಈ ವಿಭಾಗದಲ್ಲಿ ಅಗ್ರಸ್ಥಾನದಲ್ಲಿವರು ಪೋರ್ಚುಗಲ್ ದಿಗ್ಗಜ ಕ್ರಿಸ್ಟಿಯಾನೊ ರೊನಾಲ್ಡೊ. 182 ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಅವರು 115 ಬಾರಿ ಕಾಲ್ಚಳಕ ತೋರಿದ್ದಾರೆ.

ಈಗ ಅಂತರರಾಷ್ಟ್ರೀಯ ಫುಟ್‌ಬಾಲ್ ಆಡುತ್ತಿರುವವರ ಪೈಕಿ ಗೋಲು ಗಳಿಕೆಯಲ್ಲಿ ಸುನಿಲ್ ಮೂರನೇ ಸ್ಥಾನದಲ್ಲಿದ್ದಾರೆ. ಅವರಿಗಿಂತ ಮುಂದಿರುವವರು. ರೊನಾಲ್ಡೊ ಮತ್ತು ಅರ್ಜೆಂಟೀನಾ ದಿಗ್ಗಜ ಲಯೊನೆಲ್ ಮೆಸ್ಸಿ (80) ಮಾತ್ರ.


ಬ್ರೆಜಿಲ್‌ನ ಪೆಲೆ

'ಫುಟ್‌ಬಾಲ್ ಬಲ್ಲ ಎಲ್ಲರಿಗೂ ಗೊತ್ತು; ದಿಗ್ಗಜ ಪೆಲೆ ಅವರ ಜೊತೆಗೆ ನನ್ನ ಸಾಧನೆ ಹೋಲಿಕೆ ಮಾಡುವುದು ಸಮಂಜಸ ಅಲ್ಲವೆಂದು. ಅವರು ಆಡುತ್ತಿದ್ದ ಸಂದರ್ಭದಲ್ಲಿ ಆಟ ಭಿನ್ನವಾಗಿತ್ತು; ಕಠಿಣವೂ ಆಗಿತ್ತು. ಅವರು ಯಾವತ್ತಿಗೂ ಮಹಾನ್ ಆಟಗಾರ' ಎಂದು ಇತ್ತೀಚೆಗೆ ಸುದ್ದಿಸಂಸ್ಥೆಯೊಂದಕ್ಕೆ ಚೆಟ್ರಿ ಹೇಳಿದ್ದರು. ಅದು ಅವರ ಸರಳತೆ.

ಹೆಚ್ಚು ಪ್ರೋತ್ಸಾಹ ಇರದ ಫುಟ್‌ಬಾಲ್‌ನಲ್ಲಿ, ಸಿಗುವ ಸೀಮಿತ ಸೌಲಭ್ಯಗಳನ್ನೇ ಬಳಸಿಕೊಂಡು ಇಂತಹ ಮಹತ್ವದ ಸಾಧನೆ ಮಾಡಿದ್ದಾರೆ ಚೆಟ್ರಿ.

'ದೇಶಕ್ಕಾಗಿ ಆಡಿ ಗೋಲು ಗಳಿಸುವುದಕ್ಕಿಂತ ಬೇರೆ ಖುಷಿ ಮತ್ತೇನಿದೆ. ಇನ್ನೂ ಕೆಲವೇ ದಿನಗಳಲ್ಲಿ ನಾನು ವಿದಾಯ ಹೇಳಬಹುದು. ಆದರೆ ಈ ಕೆಲವೇ ದಿನಗಳು ಒಂದು ವರ್ಷಕ್ಕಿಂತ ಕಡಿಮೆ ಇರಲಾರವು' ಎಂದು ದೇಶಕ್ಕಾಗಿ ಆಡುಬಯಸುವ ತಮ್ಮ ಹಂಬಲ ಬತ್ತಿಲ್ಲ ಎಂಬುದನ್ನು ಸುನಿಲ್ ಸೂಚ್ಯವಾಗಿ ಹೇಳುತ್ತಾರೆ.

ರಾಧೆ ಶ್ಯಾಮ್‌ನಲ್ಲಿ ಪೂಜಾ ಹೆಗ್ಡೆ ಪಾತ್ರ ರಿವೀಲ್



ಟಾಲಿವುಡ್‌ನ ಖ್ಯಾತ ನಟಿ, ಕರಾವಳಿ ಕುವರಿ ಪೂಜಾ ಹೆಗ್ಡೆ ಇತ್ತೀಚೆಗಷ್ಟೇ ತಮ್ಮ 31ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ಕಾಲಿವುಡ್ ಮೂಲಕ ಸಿನಿರಂಗ ಪ್ರವೇಶಿಸಿದ್ದ ಈಕೆಗೆ ಹೆಚ್ಚು ಹೆಸರು ತಂದುಕೊಟ್ಟಿದ್ದು ಟಾಲಿವುಡ್. ತೆಲುಗಿನ ಎಲ್ಲಾ ಸ್ಟಾರ್ ನಟರ ಜೊತೆ ತೆರೆ ಹಂಚಿಕೊಂಡಿರುವ ಪೂಜಾ ಟಾಲಿವುಡ್ ಸಿನಿ ಪ್ರವೇಶಕರ ಮನ ಗೆದಿದ್ದು ಸುಳ್ಳಲ್ಲ. ತೆಲುಗಿನ ಸೂಪರ್‌ಹಿಟ್ ಅಲಾವೈಕುಂಠಪುರಂ ಸಿನಿಮಾ ನಂತರ ಅವರಿಗೆ ಸಾಲು ಸಾಲು ಸಿನಿಮಾಗಳು ಅರಸಿ ಬರುತ್ತಿವೆ.

ಸದ್ಯ ಜನವರಿ 14 ಕ್ಕೆ ಪ್ರಭಾಸ್ ಹಾಗೂ ಪೂಜಾ ಹೆಗ್ಡೆ ಅಭಿನಯದ ರಾಧೆ ಶ್ಯಾಮ್ ಬಿಡುಗಡೆಯಾಗಲಿದ್ದು, ಈ ಚಿತ್ರದಲ್ಲಿ ಪೂಜಾ ಹೆಗ್ಡೆ ಪಾತ್ರ ಇಂದು ರಿವೀಲ್ ಆಗಿದೆ.

ಬಹುನಿರಿಕ್ಷೀತ ವಿಭಿನ್ನ ಪ್ರೇಮ ಕಥಾ ಹಂದರವುಳ್ಳ ರಾಧೆ ಶ್ಯಾಮ್‌ನಲ್ಲಿ ಪೂಜಾ ಹೆಗ್ಡೆ ಪ್ರೇರಣಾ ಆಗಿ ಅಭಿನಯಿಸಿದ್ದಾರೆ. ಚಿತ್ರ ನಿರ್ಮಾಣ ಸಂಸ್ಥೆ ಯುವಿ ಕ್ರಿಯೇಷನ್ಸ್ ಇಂದು ಟ್ವಿಟರ್‌ನಲ್ಲಿ ಪೂಜಾ ಹೆಗ್ಡೆಗೆ ಜನ್ಮದಿನದ ಶುಭಾಶಯ ಕೋರಿ, ಅವರ ಆಕರ್ಷಕ ಪೋಸ್ಟರ್ ಬಿಡುಗಡೆ ಮಾಡಿದೆ.

ಉಡುಪಿ ಮೂಲದ ಪೂಜಾ ಹೆಗ್ಡೆ 1990 ಅಕ್ಟೋಬರ್ 13 ರಂದು ಮುಂಬೈನಲ್ಲಿ ಜನಿಸಿದ್ದು, 2012 ರಲ್ಲಿ ಮುಗಮುದಿ ತಮಿಳು ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದರು. ಬಾಲಿವುಡ್‌ನಲ್ಲಿ ಹೃತಿಕ್ ರೋಷನ್ ಜೊತೆಗೆ ಮೆಹಂಜೊದಾರೋ ಸಿನಿಮಾದಲ್ಲಿ ಅಭಿನಯಿಸಿ ಗಮನ ಸೆಳೆದರು.

ಇಲ್ಲಿವರೆಗೆ 12 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಉಳಿದಂತೆ ತೆಲುಗಿನ 'ಮೋಸ್ಟ್ ಎಲಿಜಿಬಲ್ ಬ್ಯಾಚಲರ್", 'ಆಚಾರ್ಯ್', 'ಸರ್ಕಸ್" ಹಾಗೂ 'ಬೀಸ್ಟ್' ಸಿನಿಮಾಗಳಲ್ಲಿ ಸದ್ಯಕ್ಕೆ ಪೂಜಾ ತೊಡಗಿಸಿಕೊಂಡಿದ್ದಾರೆ.

ಶಾರುಖ್ ನಿರ್ಮಾಣದ ಕ್ರೈಂ ಥ್ರಿಲ್ಲರ್‌ನಲ್ಲಿ ಭೂಮಿ ಫೆಡ್ನೇಕರ್

ಸಿನಿ ಹನಿ



ನಟ ಶಾರುಖ್ ಖಾನ್ ಅವರು ತಮ್ಮ ಮಗ ಡ್ರಗ್ಸ್ ಕೇಸ್‌ನಲ್ಲಿ ಸಿಲುಕಿಕೊಂಡಿರುವುದರಿಂದ ಚಿಂತಾಕ್ರಾಂತರಾಗಿದ್ದಾರೆ ಎಂಬ ವರದಿಗಳು ಬಂದಿದ್ದು, ಏತನ್ಮಧ್ಯೆ ಅವರು ತಮ್ಮ ಮುಂದಿನ ಸಿನಿಮಾ ನಿರ್ಮಾಣದ ವಿಷಯದಲ್ಲಿಯೂ ಗಮನ ಹರಿಸಿದ್ದಾರೆ.

ಶಾರುಖ್ ಒಡೆತನದ ರೆಡ್ ಚಿಲ್ಲೀಸ್ ಎಂಟರ್ಟೈನ್ಮೆಂಟ್ ಕಂಪನಿ ನಿರ್ಮಿಸುತ್ತಿರುವ ಕ್ರೈಂ ಥ್ರಿಲ್ಲರ್ ಸಿನಿಮಾ ಭಕ್ಸಕ್ ಸೆಟ್ಟೇರಲು ಸಜ್ಜಾಗಿದೆ. ನಾಯಕಿ ಪ್ರಧಾನ ಕಥೆ ಹೊಂದಿರುವ ಭಕ್ಸಕ್‌ನಲ್ಲಿ ಬಾಲಿವುಡ್ ನಟಿ ಭೂಮಿ ಫೆಡ್ನೇಕರ್ ನಾಯಕಿ ಪಾತ್ರಕ್ಕೆ ಸಹಿ ಹಾಕಿದ್ದಾರೆ ಎಂದು ತಿಳಿದು ಬಂದಿದೆ.

ಈ ಚಿತ್ರದಲ್ಲಿ ಭೂಮಿ ಫೆಡ್ನೇಕರ್ ತನಿಖಾ ವರದಿ ಮಾಡುವ ಪತ್ರಕರ್ತೆ ಪಾತ್ರ ನಿಭಾಯಿಸಲಿದ್ದಾರೆ ಎಂದಿವೆ ಚಿತ್ರತಂಡ ಮೂಲಗಳು. ಈ ಸಿನಿಮಾವನ್ನು 'ಬೋಸ್: ಡೆಡ್ ಆರ್ ಅಲೈವ್' ನಿರ್ದೇಶಿಸಿದ್ದ ಪುಲ್ಕಿತ್ ಅವರು ನಿರ್ದೇಶಿಸಲಿದ್ದಾರೆ.

ಭಕ್ಸಕ್ 2022 ರಿಂದ ಚಿತ್ರೀಕರಣ ಆರಂಭಿಸಲಿದ್ದು, ನಟ ಅರ್ಜುನ್ ಕಪೂರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಲಿದ್ದಾರೆ. ಬಿಹಾರದಲ್ಲಿ ಬಾಲಕಿಯರನ್ನು ಅಪಹರಿಸಿ ಅವರನ್ನು ವೇಶ್ಯಾವೃತ್ತಿಗೆ ತಳ್ಳುವ ಕಥೆಯನ್ನು ಈ ಚಿತ್ರ ಹೊಂದಿದೆ.

ಇನ್ನು ಭೂಮಿ ಫೆಡ್ನೇಕರ್ ಹಾಗೂ ಅವರ ತಂಗಿ ನಟಿ ಸಮೀಕ್ಷಾ ಫೆಡ್ನೇಕರ್ ಇತ್ತೀಚೆಗೆ ಸ್ಪೇನ್‌ನಲ್ಲಿ ನಡೆಸಿದ ಹಾಟ್ ಫೋಟೊ ಶೂಟ್ ವೈರಲ್ ಆಗಿತ್ತು.

ಅಲ್ಲಮಪ್ರಭು ಚಿತ್ರೀಕರಣ ಮುಕ್ತಾಯ


ಅಲ್ಲಮಪ್ರಭು ಚಿತ್ರದಲ್ಲಿ ಡಾ.ಸಂಜಯ್ ಮತ್ತು ಅಂಕಿತಾ

ಅನುಭಾವಿ ಶಿವಶರಣರ ಕಥೆ ಒಳಗೊಂಡ 'ಅಲ್ಲಮಪ್ರಭು' ಚಿತ್ರದ ಚಿತ್ರೀಕರಣ ಇತ್ತೀಚೆಗೆ ಮುಕ್ತಾಯವಾಗಿದೆ.

ಡಾ.ಸಂಜಯ್ ಮತ್ತು ಅಂಕಿತಾ ಶಿವ-ಪಾರ್ವತಿಯಾಗಿ ಅಭಿನಯಿಸಿದ ಹಾಡಿನ ಚಿತ್ರೀಕರಣದ ಮೂಲಕ ಮುಕ್ತಾಯವಾಯಿತು.

ಈ ಚಿತ್ರ ಕನ್ನಡ, ಹಿಂದಿ, ಮರಾಠಿ, ಮಲಯಾಳಂ ಭಾಷೆಯಲ್ಲಿ ಮೂಡಿಬರಲಿದೆ ಎಂದು ನಿರ್ಮಾಪಕ, ಚಿತ್ರಕಥೆಗಾರ ಮಾಧವಾನಂದ ವೈ. ತಿಳಿಸಿದ್ದಾರೆ. ಮಹಾವೀರಪ್ರಭು ಈ ಚಿತ್ರದ ಸಹನಿರ್ಮಾಪಕರು. ಶರಣ್ ಗದ್ವಾಲ್ ನಿರ್ದೇಶನ ಮಾಡಿದ್ದಾರೆ. ಆರ್.ಗಿರಿ ಛಾಯಾಗ್ರಾಹಕರು, ಕುಮಾರ್ ಈಶ್ವರ್ ಸಂಗೀತ, ಬಿ.ಎಸ್.ಕೆಂಪರಾಜ್ ಸಂಕಲನ, ರಮೇಶ್ ಬಾಬು ವರ್ಣಾಲಂಕಾರ, ಬೆಳ್ಳಿ ಚುಕ್ಕಿ ವೀರೇಂದ್ರ ವಸ್ತ್ರಾಲಂಕಾರ ಚಿತ್ರಕ್ಕಿದೆ.